ಭಾನುವಾರ, ಅಕ್ಟೋಬರ್ 27, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 298 | ಪುಟ 24
• www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ವೈವಿಧ್ಯಮಯ ದೀಪಾವಳಿ
ಮಲೆನಾಡಿನ ಕೆಲವು ಭಾಗಗಳಲ್ಲಿ ದೀಪಾವಳಿ ದೊಡ್ಡ ಹಬ್ಬವಾದರೆ, ಉತ್ತರ ಕರ್ನಾಟಕದಲ್ಲಿ ಫಳಾರದ ಹಬ್ಬ...



ಒಳನೋಟ — ಹೆಜ್ಜೆ ಹೆಜ್ಜೆಗೂ ಎಸ್ಐಟಿ ತನಿಖೆ 8
ಶಿಗ್ಗಾವಿ: 'ಕೈ' ಅಭ್ಯರ್ಥಿ ಗೆಲ್ಲಿಸಲು ಪಣ 7
ಯೋಗಿ ಮಾತಿನ ಆಶಯಕ್ಕೆ ಆರ್‌ಎಸ್‌ಎಸ್ ಸಹಮತ 14
ನೆರೆ ಪೀಡಿತ ಪ್ರದೇಶಗಳ ಭೇಟಿಗೆ ಸಿ.ಎಂ ಕಟ್ಟಪ್ಪಣೆ 6
'ಆರ್ಥಿಕ ಸ್ಥಿರತೆಗೆ ಕ್ರಿಪ್ಟೊ ಕಂಟಕ' 14

ಬೇಲೆಕೇರಿ ಅದಿರು ಕಳ್ಳತನ–ರಫ್ತು ಪ್ರಕರಣ: ಏಳೂ ಜನ ಅಪರಾಧಿಗಳಿಗೆ ಸೇರಿ ₹44 ಕೋಟಿ ದಂಡ

ಶಾಸಕ ಸೈಲ್‌ಗೆ 7 ವರ್ಷ ಜೈಲು

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ಕಬ್ಬಿಣದ ಅದಿರು ಕದ್ದು, ರಫ್ತು ಮಾಡಿದ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಸತೀಶ್ ಸೈಲ್‌ಗೆ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಏಳು ವರ್ಷ ಕಠಿಣ ಜೈಲು ಶಿಕ್ಷೆ ಮತ್ತು ಇದೇ ಪ್ರಕರಣದಲ್ಲಿನ ಎಲ್ಲ ಏಳು ಅಪರಾಧಿಗಳಿಗೆ ಒಟ್ಟು ₹44 ಕೋಟಿಗೂ ಹೆಚ್ಚು ದಂಡ ವಿಧಿಸಿದೆ.



ಸತೀಶ್ ಸೈಲ್

ಉತ್ತರ ಕನ್ನಡ ಜಿಲ್ಲೆಯ ಬೇಲೆಕೇರಿ ಬಂದರಿನಲ್ಲಿ ಸಂಗ್ರಹಿಸಿಡಲಾಗಿದ್ದ ಸಾವಿರಾರು ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಕಳ್ಳತನ ಮಾಡಿ, ಒಳಸಂಚು ರೂಪಿಸಿ, ವಿದೇಶಗಳಿಗೆ ಅಕ್ರಮವಾಗಿ ಸಾಗಣೆ ಮಾಡುವ ಮೂಲಕ ರಾಜ್ಯದ ಖಜಾನೆಗೆ ₹200 ಕೋಟಿಗೂ ಹೆಚ್ಚಿನ ಮೊತ್ತದ ನಷ್ಟ ಉಂಟು ಮಾಡಿದ ಆರು ಕ್ರಿಮಿನಲ್ ಪ್ರಕರಣಗಳಲ್ಲಿ ಈ ತೀರ್ಪು ಪ್ರಕಟಿಸಲಾಗಿದೆ.

ಪ್ರಕರಣದ ಆರೋಪಿಗಳಾಗಿದ್ದ ನಿವೃತ್ತ ಬಂದರು ಅಧಿಕಾರಿ ಮಹೇಶ್ ಜೆ.ಬಿಳಿಯೆ, ಕಾರವಾರ–ಅಂಕೋಲಾ ಶಾಸಕರೂ ಆದ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈ. ಲಿ. ಕಂಪನಿ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಸೈಲ್, ಲಕ್ಷ್ಮಿ ವೆಂಕಟೇಶ್ವರ ಟ್ರೇಡರ್ಸ್ ಮಾಲೀಕ ಖಾರದಪುಡಿ ಮಹೇಶ್, ಸ್ವಸ್ತಿಕ್ ಕಂಪನಿ ಮಾಲೀಕರಾದ ಕೆ.ವಿ.ನಾಗರಾಜ್ (ಸ್ವಸ್ತಿಕ್) ಮತ್ತು ಕೆ.ವಿ.ಎನ್.ಗೋವಿಂದರಾಜ್, ಆಶಾಪುರ ಮೈನಿಂಗ್ ಕಂಪನಿ ಮಾಲೀಕ ಚೇತನ್ ಷಾ ಮತ್ತು ಲಾಲ್ ಮಹಲ್ ಕಂಪನಿ ಮಾಲೀಕ ಪ್ರೇಮಚಂದ್ ಗರಗ್ ಅವರನ್ನು ಅಪರಾಧಿಗಳು ಎಂದು ಸಿಸಿಎಚ್–82ನೇ ಸೆಷನ್ಸ್ ನ್ಯಾಯಾಲಯ 24ರಂದು ತೀರ್ಮಾನಿಸಿತ್ತು.

6ನೇ ಪುಟ ನೋಡಿ
ಇನ್ನೊಂದು ಸುದ್ದಿ 6



ಮಹಾಭಾರತದಲ್ಲಿ ಹೇಳಿರುವಂತೆ, ಧರ್ಮೋ ರಕ್ಷತಿ ರಕ್ಷಿತಃ ಎಂಬ ಸಂದೇಶವನ್ನು ಸ್ಮರಿಸುತ್ತಾ ಕಾನೂನು ಮತ್ತು ನೈತಿಕತೆಯ ರಕ್ಷಣೆಯಿಂದ ಮಾತ್ರವೇ ಈ ವಿಶ್ವವನ್ನು ರಕ್ಷಿಸಲು ಸಾಧ್ಯ ಎಂಬ ನಂಬಿಕೆಯಡಿ ತೀರ್ಪು ನೀಡಿದ್ದೇನೆ

ಸಂತೋಷ ಗಜಾನನ ಭಟ್, ಸೆಷನ್ಸ್ ನ್ಯಾಯಾಧೀಶ

ಆರು ಪ್ರಕರಣ; ದಂಡ ಎಷ್ಟು?

1 ಮಹೇಶ್ ಜೆ.ಬಿಳಿಯೆ, ಮೆಸರ್ಸ್ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಸೈಲ್‌ಗೆ ₹6 ಕೋಟಿ ದಂಡ.

2 ಮಹೇಶ್ ಜೆ.ಬಿಳಿಯೆ, ಮೆಸರ್ಸ್ ಆಶಾಪುರ ಮಿನೆಚೆಮ್ ಲಿಮಿಟೆಡ್ ಹಾಗೂ ಅದರ ಮಾಲೀಕ ಚೇತನ್ ಶಾ ಮತ್ತು ಮೆಸರ್ಸ್ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಸೈಲ್‌ಗೆ ₹9.60 ಕೋಟಿ ದಂಡ.

3 ಮಹೇಶ್ ಜೆ. ಬಿಳಿಯೆ, ಮೆಸರ್ಸ್ ಐಎಲ್‌ಸಿ ಇಂಡಸ್ಟ್ರೀಸ್ ಲಿಮಿಟೆಡ್, ಮೆಸರ್ಸ್ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಸೈಲ್‌ಗೆ ₹9.36 ಕೋಟಿ ದಂಡ.

6ನೇ ಪುಟ ನೋಡಿ

'ನ್ಯಾಯಾಂಗದ ಮೇಲೆ ವಿಶ್ವಾಸ ಮೂಡುತ್ತದೆ'



ಅದಿರು ಕದ್ದು ಸಾಗಿಸಿದ ಪ್ರಕರಣದಲ್ಲಿ ಶಿಕ್ಷೆಯಾಗಿರುವುದು ಉತ್ತಮ ಬೆಳವಣಿಗೆ. ದೊಡ್ಡ–ದೊಡ್ಡ ರಾಜಕಾರಣಿಗಳ ವಿರುದ್ಧ ತನಿಖೆ ನಡೆಸುವಾಗ ಹಲವು ಅಡೆತಡೆಗಳು ಎದುರಾಗುತ್ತಿದ್ದವು. ಈಗ ಶಿಕ್ಷೆ ಆಗಿರುವುದರಿಂದ ನ್ಯಾಯಾಂಗದ ಮೇಲೆ ಗೌರವ ಹೆಚ್ಚುತ್ತದೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗೇ ಆಗುತ್ತದೆ.

ಈ ಬೆಳವಣಿಗೆಯಿಂದ ಸಾಮಾನ್ಯ ಜನರಿಗೂ ನ್ಯಾಯಾಂಗ ವ್ಯವಸ್ಥೆಯ ಮೇಲೆ ವಿಶ್ವಾಸ ಮೂಡುತ್ತದೆ. ಈ ಅಕ್ರಮದಲ್ಲಿ ಇನ್ನೂ ಹಲವರು ಭಾಗಿಯಾಗಿದ್ದಾರೆ. ಅವರಿಗೂ ಶಿಕ್ಷೆಯಾಗಬೇಕು.

ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ
ನಿವೃತ್ತ ಲೋಕಾಯುಕ್ತ

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಬೃಹತ್ ಗಾತ್ರದ ಲ್ಯಾಂಡರ್ ಅಭಿವೃದ್ಧಿಗೆ ಇಸ್ರೊ ಸಿದ್ಧತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಮಾನವ ಸಹಿತ ಚಂದ್ರಯಾನ ಯೋಜನೆಗೆ ಅಗತ್ಯವಿರುವ ತಂತ್ರಜ್ಞಾನವನ್ನು ಪ್ರದರ್ಶಿಸುವ ನಿಟ್ಟಿನಲ್ಲಿ 350 ಕೆ.ಜಿ ತೂಕದ ರೋವರ್ ಅನ್ನು ಹೊತ್ತೊಯ್ಯಬಲ್ಲ ಬೃಹತ್ ಗಾತ್ರದ ಲ್ಯಾಂಡರ್ ಮಾಡ್ಯೂಲ್ ಅಭಿವೃದ್ಧಿಪಡಿಸಲು ಸಿದ್ಧತೆ ನಡೆಸಿದೆ.

ಮುಂಬರುವ ಇಂಡೋ-ಜಪಾನ್ ಲೂನಾರ್ ಪೋಲಾರ್ ಎಕ್ಸ್‌ಪ್ಲೊರೇಷನ್ (ಚಂದ್ರಯಾನ–5) ಮಿಷನ್‌ಗಾಗಿ ಈ ಲ್ಯಾಂಡರ್ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಶನಿವಾರ ತಿಳಿಸಿದರು.

'ರೋವರ್‌ನ ತೂಕ 350 ಕೆ.ಜಿ ಇರುತ್ತದೆ. ಅದನ್ನು ಚಂದ್ರನ ಮೇಲ್ಮೈನಲ್ಲಿ ಇಡುವ ಕೆಲಸ ಯಶಸ್ವಿಯಾಗಲು ಹೆಚ್ಚಿನ ಸಾಮರ್ಥ್ಯದ ಲ್ಯಾಂಡರ್ ಅಭಿವೃದ್ಧಿಪಡಿಸಬೇಕಾಗಿದೆ' ಎಂದರು.

14ನೇ ಪುಟ ನೋಡಿ

ಉಪಚುನಾವಣೆ: ಗೆಲುವಿನ ಕಾರ್ಯತಂತ್ರದ ಕಡೆಗೆ ಹೆಜ್ಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ಕ್ಷೇತ್ರಗಳ ವಿಧಾನ ಸಭಾ ಉಪಚುನಾವಣೆಗೆ ನಾಮಪತ್ರ ಸಲ್ಲಿಕೆ ಪೂರ್ಣಗೊಂಡ ಬೆನ್ನಲ್ಲೇ ಆಡಳಿತಾರೂಢ ಕಾಂಗ್ರೆಸ್ ಹಾಗೂ ಬಿಜೆಪಿ–ಜೆಡಿಎಸ್ ಮಿತ್ರಕೂಟ ತಮ್ಮ ಅಭ್ಯರ್ಥಿಗಳ ಗೆಲುವಿಗೆ ಕಾರ್ಯತಂತ್ರ ರೂಪಿಸುವತ್ತ ಚಿತ್ತ ಹರಿಸಿವೆ.

ಬಿಜೆಪಿ ತೊರೆದು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕೆ ಇಳಿದ ಸಿ.ಪಿ. ಯೋಗೇಶ್ವರ್ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ತಿರುಗೇಟು ನೀಡಲು ಮುಂದಾಗಿರುವ ಮೈತ್ರಿ ನಾಯಕರು ಶನಿವಾರ ಸಭೆ ನಡೆಸಿ, ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರ ಗೆಲುವಿಗೆ ಶ್ರಮಿಸುವ ಶಪಥ ಮಾಡಿದ್ದಾರೆ. ಅತ್ತ ಶಿಗ್ಗಾವಿ ಕ್ಷೇತ್ರದಲ್ಲಿನ ಬಂಡಾಯ ಶಮನಕ್ಕೆ ಕಾಂಗ್ರೆಸ್ ನಾಯಕರು ದಿನವಿಡೀ ಕಸರತ್ತು ನಡೆಸಿದರು.

ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಸೈಯದ್ ಅಜ್ಜಂಪೀರ್ ಖಾದ್ರಿ ಅವರನ್ನು ಶುಕ್ರವಾರ ರಾತ್ರಿಯೇ ಸ್ವತಃ ಬೆಂಗಳೂರಿಗೆ ಕರೆ ತಂದಿದ್ದ ಸಚಿವ ಜಮೀರ್ ಅಹಮದ್ ಖಾನ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿಸಿದರು.

7ನೇ ಪುಟ ನೋಡಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER
ಕ್ಲಾಸಿಫೈಡ್ಸ್



Own Your Plot Near Nandi Hills!
- Ready-to-Build Plots
- 5-Star Clubhouse & Amenities
- Kids' Play Area & Walking Path
- Scenic Nandi Hills View
- Prime Location on State Highway

Limited Offer: ~~4000/-~~ ₹3,500/sq. ft. – Call Now!
SVV 78350 09616
www.shrivasaventures.com

SENIOR HOUSING
Long Stay Studio Units
Furnished with all amenities. Security, Housekeeping, Power Backup, Internet Connection in Electronic City, Bengaluru
Mail: surenkupanda_313@hotmail.com
Ph: 9341286903

Commercial Property FOR SALE & RENT



North East Corner Commercial Property located in the heart of MALLESHWARAM In the Densely Populated Market Area
11th cross, Sampige road, Malleshwaram.
Property is spread on 3600 sqft area offers around 18 SHOPS on the ground & basement,
it has 4 levels
Basement, Ground, 1st and 2nd floor.
interested parties please contact:
97408 00003 / 84472 99780
OPENING A GATEWAY TO VARIOUS BUSINESS OPPORTUNITIES
YIELD HIGH RENTAL INCOME



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

DC CONVERSION
E KHATA
SITES FOR SALE
ಯಲಹಂಕ
ಬಾಗಲೂರು Circle to Budigere Road
DC COVERSION LAYOUT · E KHATA
- REVA University
- Delhi Public School
- Country Club
- Attached SEZ

~~₹3,800~~ ₹3,600 per sqft
ದೀಪಾವಳಿಯ ವಿಶೇಷ ಕೊಡುಗೆ
ಯಲಹಂಕ ಬಾಗಲೂರು
SEZ Road, Vidya Nagar Cross, Venkateswara Engg. College
UPCOMING BBMP LIMITS
~~₹4,200~~ ₹4,000 per sqft
ನಿರ್ಮಾಣಕ್ಕೆ ಸಿದ್ಧವಾಗಿದೆ ಬ್ಯಾಂಕ್ ಸಾಲ @ LIC HFL ICICI Bank
9880 149 159 | 9900 698 748

REAL ESTATE SELLING

Sites

Anjanapura

WANTED BDA & BBMP SITES, Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

BDA E-AUCTION East-South Corner Site No 902`for Sale`at Further Extension`of Anjanapura 11th`Block Bannerghatta`Rd 2645sqft Rs.14500/- Call:9448138640 9731125533

ANJANAPURA 10TH Block 30×40 South Facing BDA Site for Sale. Contact: 9845298419

ANJANAPURA 2ND Block, BDA Site 30x40,West Facing,Price 10300/- Negotiable Genuine Buyers Contact: 9844216344

Banashankari

BANASHANKRI VI Stage 50x80 commercial site, East-facing on sixty feet road 12500/sft, sale 8088593281 9739875631

KANAKAPURA ROAD, Banashankari 6th Stage, 50x80 Site, And Concorde Napa Vally Villa For Sale: 9916817739

"AVAILABLE"BDA SITE Banashankari 6th Stage, 2nd Block, 30x40, South Facing Fully Developed Location: 9900097239

"AVAILABLE"BDA SITE Banashankari 6th Stage, 10th Block,30x40, North Facing Owner Meeting Contact: 9663393533

Bannerghatta Road

BANNERAGTTA ROAD, Nobel Residency A Katha site 40x60 North facing, Near SNN Apartment 2,10,00,000/- 9731775536

BANNERGHATTA ROAD Hulimavu, Kempamma Layout 40x40 North, A Katha site, Near Hulimavu Metro- 1,76,00,000/- 9731775536

Hoskote

SITE FOR Sale Hoskote Vagata Village 40x60, Adjacent Sites 60x60, 60x69 Approved Layout Contact: 9845098164

J P Nagar

JP-NAGAR 2ND PHASE 40X60 SOUTH FACING RS. 28000/- NEGOTIABLE BROCKERS EXCUSE: 9449655947

Kengeri

AVAILABLE 30X60 CORNER SITE 60FT ROAD BLUEJAY ARDLEY PHASE-2 [DODDABELE] NEAR MYSORE ROAD CHALLEGATTA METRO STATION: 8050908920/ 9986866661

Kempegowda Layout

***NADAPRABHU* KEMPEGOWDA** Layout 1st Block K Sector30x40 W/F 84 Lakhs,7th Block F Sector 50x80 W/F behind 100ft-Road-on 50ft-road,Nayara Petrol-bunk backside.Contact: 9686469799

Multiple Locations

NELAMANGALA RTO Opposite EK-Layout 30X40 East Facing Site No.749, and MYSORE MUDA Approved KSRTC Layout SarigeNagara 3rd Stage Sriramapura Village Site No.387, 40X60 South Facing Site For Sale. 9880812364.

Mysore Road

EEGOLTON GOLF RESORT Before BIDADI GATED COMMUNITY, Mysore Road 50x55 Site For sale. Contact: 9945079777

Nagarabhavi

SALE: 30X50 SITE RHCS Layout,near Annapoorneshwari Nagar,Banashankari 40 feet-road,good location.Contact: 9844040154/ 9844533371

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

Rajajinagar

SALE 15X35, West facing, Rajajinagar 2nd stage A block, Good location, Near Orion mall. 9845527196.

Rajarajeshwari Nagar

FOR SALE 30x45,40x60, Sites 30x45,House BEML Layout,Ideal Homes Rajarajeshwarinagar Contact :9448508410,9844216344

Sadashiva Nagar

SADASHIVANAGAR 42X60/ Vyalikaval 45x90/Dollars Colony 50x90/ Kumarapark 40x70/ Cunningham Road 50x80 Jayamahal 40x60 R.T.Nagar 40x60 Sanjaynagar 46x60 Indiranagar 40x66 koramangala 40x60 For-Details Buyers/Sellers Call:9900001973

Vishweshwariah Layout

SITE FOR sale 40*60 WF BDA with 40 feet road, very good location Rs 10500 negotiable. Vishweshwaraiah Layout 3rd Block. Contact :9916826976

"30X40 SF PRIME RESIDENCIAL BDA 1st BLOCK VISHESHWARAIAH LAYOUT [OWNER SITE SALE] "Akshaya Properties"- 9845143579"

AVAILABLE 30X40 Vishweswariah Layout 5th Block BDA Site 12500/- Slightly Negotiable Genuine Buyers Contact: 9481703468

AVAILABLE VISHWESHWARIAH Layout 4th Block 30X40 East Face Near Nammoora Thindi Good Location: 9901156708

AVAILABLE VISHWESHWARIAH Layout 30X40 BDA Site 1st Block East 8500/- Good Investment Genuine Buyers: 9844603127

DIRECT OWNER 20x30, 30x40, 20x40 Site/House. near BDA Complex, D'Group, Vishweswaraiah Layout, 8thBlock, 8971851966/ 9880781399

Mysore

DOCTORS LAYOUT 2nd Stage, Vajamangala, Mysore 40X60 West Facing, Clear Titles, for Sale Call 9886332364

Doddaballapur Road

GOWRIBHIDHANUR AGRICULTURE LAND 42 ACERS FULLY DEVELOPED 45 LAKHS PER ACER NEGOTIABLE BROKERS EXCUSE: 9449655947

Airport Road

"BEFORE INTERNATIONAL Airport close`to KIADB Hardware Park`& NCA Cricket Ground, BIAPPA approved 30x40`Corner E-Katha ₹65 Lakhs. 9845286505"

Jayanagar

SITE FOR SALE 2800 sft. S/F at 1st Block East, Jayanagar, Rs.23,000/-sft. Negotiable. Contact: 9880299011.

Padmanabha Nagar

40X60 NORTH Facing Fully Developed, Clear Documents, Agent Excuse, Direct Buyers Contact owner. 9449611876, 9481028358

House

Bannerghatta Road

BANNERGHATTA ROAD, Hommadevanahalli Spurthi Layout 30x50 North, 4 Floors Building for Sale, Rental Income 1,00,000/- -9535205608

BANNERAGTTA ROAD N.S.Palya Dollars Colony behind Vega City mall, 50x80, 5 BHK house suitable Commercial 12,00,00,000/- 9731775536.

Flat

Anekal

ANEKAL TALUK Bidaragere village, Indya Estates. The Greens apartment 2 BHK 890 sqft 32 Lakhs. Contact:- 9916425362.

J P Nagar

INVEST 60 Lakhs On Flat Near JP Nagar Metro. Income 30000 Monthly. Cash Parties Call 9663676464.

Uttarahalli

3/4 BHK New Luxurious Flat Sale, A khatha, Ready-move, 75L/ 1cr, Carparking, Cauvery, Vaasthu, 9844394444, 9019110623.

Agricultural Land

Magadi Road

SALE TAVAREKERE Hobli Banglore South Taluk 4 Acres Farm House on 40feet Road Ct: 9844134068 9066399102

Multiple Locations

8LAKHS PER-ACRES Chitradurga Total 48acres 12acrs 9Lakhs, 3&4acres Kanakapura, 52&7acres Ramanagara, 3&9acres Nelamangala, 6&14acres Hunsur, 39&18acres teak Shivamoga, 12&6acres Channapatna, 2&16acres Farm house Near Banglore Richdaddy Properties 8951240669

Mysore Road

MYSORE ROAD Between Channapatna & Maddur 60 Acres Tar Road Connectivity Water & Electricity: 9945928994

Commerical

Basavanagudi

COMMERCIAL LEASE (65 years). Corner 8000 sft. Built 18000 sft. RENT POTENTIAL Rs 3 CR YEARLY. Whatsapp (message ONLY): 99029-15651. Brokers excuse. Price Rs 15 cr.

Kumarapark

FOR-SALE FAIR Field Layout Behind Chalukya Hotel 3650sft Ground Floor Flat Suitable for Office, Residence, Clinics Heart of-Bangalore 7829203369

Seshadripuram

SALE OFFICE Premises Fully Furnished 640 Sqft. No.33, 2 Floor, Swiss Complex, Race Course Road: 9845081411

Commercial Land

Mysore Road

FOR SALE



COMMERCIAL LAND
Warehouse Converted Land, Main Road attach @ 7 kms from Kengeri & 27 kms from Majestic, 22000 sqft. Available. Rs. 2500 /sqft (FIXED) **M: 9900040218/16**

General

LANDS AVAILABLE 250-1500 acres for Solar project with-good radiation for lease/ sale-in Karnataka. 8088593281 9739875631

J P Nagar

3150SFT JP.NAGAR 3rd 60ft1Road13floor suitable1for Software Company 8.60cr Nego. jaynagar`9th 30x40 East`&.South 3,35cr: -9945310899.

Industrial & Factory

Kanakapura Road

SALE 1.30 Acres Industrial Conversion Land Kaggalahalli Behind Maiyas Food Factory Contact: 9844134068 9066399102

Mysore

"LAND FOR-SALE" KIADB,Belawadi Industrial Estate, Mysore- Mangaluru Highway, 21,800+500 SFT @Rs.3000/P.sft, kushwantha.1693@gmail.com

Farm House/ Land/ Resorts

Outskirts

LAND SALE SHIDLUGHATTA to CHINTAMANI Highway Road: 22 ACRES AGRICULTURE LAND Suitable for Farm Land, Road Facing 200ft. PODI has been done. Contact: 8310093665

Villas/Bunglows

Electronic City

CHANDAPURA ELECTRONIC City BMRDA Approved 3/4 Bedroom Villa & 2-3 Bedroom Flat Genuine Buyers: 9916763727

REAL ESTATE BUYING

Sites

Vishweshwariah Layout

WANTED BDA SITE 30x40,40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED/ AVAILABLE 50x80, 40x60, 30x40, 20x30, BDA Sites Vishveswaraiah Layout, Kempegowda Layout. Contact: 9886634578/ 9742681666

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

DH Classifieds · More value, more impact · ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-*
FOR 15 WORDS



www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164
*Conditions apply



ನಾಗವಾರ: ತಡೆಗೋಡೆ ತೆರವಿಗೆ ಆಗ್ರಹ

ಬೆಂಗಳೂರು: ನಾಗವಾರ ಪ್ರದೇಶದ ಹೊಲವೊಂದರ ಖರಾಬು ಸ್ಥಳದಲ್ಲಿ ಮಳೆನೀರಿನ ಚರಂಡಿಗೆ ತಡೆಗೋಡೆ ನಿರ್ಮಿಸಿದ್ದರಿಂದ ಸುತ್ತಮುತ್ತಲಿನ ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ. ಕೂಡಲೇ ತಡೆಗೋಡೆಯನ್ನು ತೆರವುಗೊಳಿಸಬೇಕು ಎಂದು ನಾಗವಾರದ ಸ್ಥಳೀಯ ನಿವಾಸಿಗಳು ಆಗ್ರಹಿಸಿದರು.

ಈಚೆಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸ್ಥಳೀಯ ಮುಖಂಡ ರಾಜಗೋಪಾಲ್, 'ಕಾರ್ಲೆ ಇನ್ಫ್ರಾ ಟೆಕ್ ಸಂಸ್ಥೆಯು ರಾಜಕಾಲುವೆ ಬಳಿ ಸರ್ವೆ ನಂಬರ್ 91/3 ರಲ್ಲಿ 9 ಗುಂಟೆ ಖರಾಬು ಸ್ಥಳವನ್ನು ಅತಿಕ್ರಮಿಸಿ 33 ಅಡಿ ಅಗಲದ ತಡೆಗೋಡೆ ನಿರ್ಮಿಸಿದೆ. ಸರಾಗವಾಗಿ ಹರಿಯಬೇಕಿದ್ದ ನೀರಿಗೆ ತಡೆ ಉಂಟಾಗಿದ್ದರಿಂದ ಮಳೆ ನೀರು, ಅಕ್ಕಪಕ್ಕದ ಮನೆಗಳಿಗೆ ನುಗ್ಗುತ್ತಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಹಾಗೂ ಕಂದಾಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನ ಆಗಿಲ್ಲ ಎಂದು ದೂರಿದರು.

ಜನರಿಗೆ ಸಂಕಷ್ಟ ಉಂಟಾಗುವುದರ ಜೊತೆಗೆ ಹೆಬ್ಬಾಳದಿಂದ ಹೊರಮಾವು ವರೆಗಿನ ಕಚ್ಚಾ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೂ ತೊಂದರೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಜಾಗದ ಪರಿಶೀಲನೆ ನಡೆಸಿ, ತಡೆಗೋಡೆ ತೆರವಿಗೆ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರಾದ ಮುನಿಯಪ್ಪ, ಸುದರ್ಶನ್ ಒತ್ತಾಯಿಸಿದರು.



ಬರಗೂರು ರಾಮಚಂದ್ರಪ್ಪ ಬೇಸರ ● ಕಾ.ತ.ಚಿಕ್ಕಣ್ಣ ಅವರ ಕೃತಿ ಬಿಡುಗಡೆ

'ಸಣ್ಣ ಕಥೆಗಳು ನ್ಯಾನೊ ಕಥೆಗಳಾಗುತ್ತಿವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಣ್ಣ ಘಟನೆಯೂ ಇಲ್ಲದಂತೆ ಕೆಲವು ಸಾಲುಗಳನ್ನು ರಚನೆ ಮಾಡಿದರೆ ಅದನ್ನು ಕಥೆಯೆಂದು ಕರೆಯುವ ಪ್ರವೃತ್ತಿ ಹೆಚ್ಚುತ್ತಿದೆ. ಸಣ್ಣ ಕಥೆಗಳು ಮತ್ತಷ್ಟು ಸಣ್ಣದಾಗಿ, ನ್ಯಾನೊ ಕಥೆಗಳಾಗುತ್ತಿವೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಬೇಸರ ವ್ಯಕ್ತಪಡಿಸಿದರು.

ಬಿ.ವಿ. ಕಾರಂತ ಇಂಡಿಯನ್ ಆ್ಯಕ್ಟಿಂಗ್ ಅಕಾಡೆಮಿ ಟ್ರಸ್ಟ್, ಜನಮನ ಪ್ರತಿಷ್ಠಾನ ಹಾಗೂ ಸಿರವರ ಕಲ್ಚರಲ್ ಅಕಾಡೆಮಿ ನಗರದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಕಾ.ತ. ಚಿಕ್ಕಣ್ಣ ಅವರ 'ಸಮಗ್ರ ಸಾಹಿತ್ಯ ಸಂಪುಟಗಳ' ಬಿಡುಗಡೆ ಕಾರ್ಯಕ್ರಮದಲ್ಲಿ ಕಥಾ ಸಂಪುಟ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನ್ಯಾನೊ ಎಂಬ ಕಾರು ಮರೆಯಾಗುತ್ತಿರುವಾಗ ನ್ಯಾನೊ ಕಥೆಗಳು ಬರುತ್ತಿವೆ. ಹಿಂದೆ ದಿನಪತ್ರಿಕೆಗಳಲ್ಲಿ ಕಥೆ, ಕವನಗಳು ಪ್ರಕಟವಾದಾಗ ಆ ಬಗ್ಗೆ ಚರ್ಚೆ, ಚಿಂತನೆ ಮಾಡುತ್ತಿದ್ದೆವು. ಈಗ ದಿನಪತ್ರಿಕೆಗಳು ಕಥೆ ಪ್ರಕಟಿಸುವುದನ್ನು ನಿಲ್ಲಿಸಿವೆ. ಚಿಕ್ಕದಾಗಿ ಬರೆಯುವ ಮೂಲಕ ಸಣ್ಣ ಕಥೆಯ ಸ್ವರೂಪ ಮತ್ತು ಪರಿಕಲ್ಪನೆಗೆ ಧಕ್ಕೆ ತರುವ ಕೆಲಸವೂ ಆಗುತ್ತಿದೆ. ಸಣ್ಣ ಕಥೆಗೆ ಅದರದೇ ಆದ ಅನನ್ಯತೆ, ಪರಿಕಲ್ಪನೆ ಹಾಗೂ ಸ್ವರೂಪವಿದೆ. ಕಥೆ ಕನಿಷ್ಠ ಒಂದು ಪುಟವಾದರೂ ಒಳಗೊಂಡಿರಬೇಕು. ಸಣ್ಣ ಕಥೆಗಳು ಹೇಗೆ ಇರಬಹುದು ಮತ್ತು ಹೇಗೆ ಇರಬೇಕು ಎನ್ನುವುದಕ್ಕೆ ಚಿಕ್ಕಣ್ಣ ಅವರ ಕಥೆಗಳು ಮಾದರಿ' ಎಂದರು.


'ಸಮಗ್ರ ಸಾಹಿತ್ಯ ಸಂಪುಟಗಳ' ಬಿಡುಗಡೆ ಕಾರ್ಯಕ್ರಮದಲ್ಲಿ ಬಂಜಗೆರೆ ಜಯಪ್ರಕಾಶ್ ಹಾಗೂ ಬರಗೂರು ರಾಮಚಂದ್ರಪ್ಪ ಸಮಾಲೋಚನೆ ನಡೆಸಿದರು. ಬರಹಗಾರ ಕಾ.ತ.ಚಿಕ್ಕಣ್ಣ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಹಾಗೂ ಸಾಹಿತಿ ಹಂ.ಪ.ನಾಗರಾಜಯ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಸಮಾಜದ ಬದಲಾವಣೆಗಳಿಗೆ ಸಾಹಿತಿ ಅಥವಾ ಕಲಾವಿದ ಸ್ಪಂದಿಸುತ್ತಾ ಹೋದಾಗ ಅವರು ಸೃಷ್ಟಿಸುವ ಕಲೆಗಳಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತವೆ. ಆದ್ದರಿಂದಲೇ ಕನ್ನಡ ಸಾಹಿತ್ಯಕ್ಕೂ ಮತ್ತು ಸಮಾಜದಲ್ಲಿ ಆದ ಬದಲಾವಣೆಗಳಿಗೂ ನಿಕಟ ಸಂಬಂಧವಿದೆ' ಎಂದರು.

ಕಾದಂಬರಿ ಸಂಪುಟ ಬಿಡುಗಡೆ ಮಾಡಿದ ಸಾಹಿತಿ ಹಂ.ಪ. ನಾಗರಾಜಯ್ಯ, 'ಸೃಜನಶೀಲ ಕಥೆಗಾರಿಕೆ ಶಕ್ತಿಯನ್ನು ಚಿಕ್ಕಣ್ಣ ಹೊಂದಿದ್ದಾರೆ. ಗ್ರಾಮೀಣ ಭಾಷೆಯ ಸೊಗಡು ಅವರ ಕಾದಂಬರಿಗಳಲ್ಲಿವೆ' ಎಂದರು.

ಪ್ರಬಂಧಗಳ ಸಂಪುಟ ಬಿಡುಗಡೆ ಮಾಡಿದ ವಿಮರ್ಶಕ ಬಂಜಗೆರೆ ಜಯಪ್ರಕಾಶ್, 'ಚಿಕ್ಕಣ್ಣ ಅವರ ಲೇಖನಗಳು ಸಂಸ್ಕೃತಿ ನಿರ್ಮಾಣಕ್ಕೆ ಸಂಬಂಧಿಸಿವೆ. ಕನಕನ ಬಗ್ಗೆ ಉತ್ತಮ ಕೆಲಸ ಮಾಡಿದ್ದಾರೆ' ಎಂದರು.



ನಿತ್ಯಾನಂದ ನಗರ ನಿವಾಸಿಗಳಿಗೆ ಹಕ್ಕುಪತ್ರ

ಬಡವರಿಗೆ ಉಚಿತ ನಿವೇಶನಗಳನ್ನು ನೀಡಲು ಸಿದ್ಧತೆ: ಎಸ್‌.ಟಿ.ಸೋಮಶೇಖರ್



ಕೆ.ಗೊಲ್ಲಹಳ್ಳಿ ಪಂಚಾಯಿತಿ ವ್ಯಾಪ್ತಿಯ ನಿತ್ಯಾನಂದ ನಗರದ ನಿವಾಸಿಗಳಿಗೆ ಶಾಸಕ ಎಸ್‌.ಟಿ.ಸೋಮಶೇಖರ್ ಅವರು ಹಕ್ಕು ಪತ್ರಗಳನ್ನು ವಿತರಿಸಿದರು. ಪಂಚಾಯಿತಿ ಸದಸ್ಯೆ ಕಲಾವತಿ ಮಂಜುನಾಥ್, ಮಾಜಿ ಅಧ್ಯಕ್ಷ ಕೆ.ಮಹೇಶ್ ಇದ್ದಾರೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಕೆ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿತ್ಯಾನಂದ ನಗರ ನಿವಾಸಿಗಳಿಗೆ ಶಾಸಕ ಎಸ್‌.ಟಿ.ಸೋಮಶೇಖರ್ ಅವರು ಹಕ್ಕುಪತ್ರಗಳನ್ನು ವಿತರಿಸಿದರು.

ಮಾಗಡಿ ರಸ್ತೆಯ ಬಿ.ಇ.ಎಲ್ ಬಡಾವಣೆಯ ಶಾಸಕರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಿ ಮಾತನಾಡಿದ ಅವರು, 'ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸಿಸುವ ಎಲ್ಲರಿಗೂ 94 ಸಿಸಿ ಅಡಿಯಲ್ಲಿ ಹಕ್ಕುಪತ್ರ ನೀಡಲು ಕಾನೂನು ಜಾರಿಗೆ ತಂದ ಪರಿಣಾಮ ಯಶವಂತಪುರ ಕ್ಷೇತ್ರದ ಸಾವಿರಾರು ಕುಟುಂಬಗಳಿಗೆ ಹಕ್ಕುಪತ್ರ ಮತ್ತು ಸ್ವಾಧೀನ ಪತ್ರಗಳನ್ನು ನೀಡಲಾಗಿದೆ. ಕೆಲವೆಡೆ ಕಾನೂನು ತೊಡಕಿನಿಂದ ವಿಳಂಬವಾಗಿತ್ತು. ಅವರಿಗೂ ಹಕ್ಕುಪತ್ರಗಳನ್ನು ನೀಡಲು ಕ್ರಮಕೈಗೊಳ್ಳಲಾಗುವುದು' ಎಂದು ಹೇಳಿದರು.

'ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆ ಇಲ್ಲದ ಕಡುಬಡವರಿಗೆ ಉಚಿತ ನಿವೇಶನ ಗಳನ್ನು ನೀಡಲು ಸಿದ್ಧತೆ ಮಾಡಿಕೊಳ್ಳ ಲಾಗಿದೆ. ಮನೆಗಳನ್ನು(ವಸತಿ) ಸಹ ನೀಡಲಾಗುವುದು. ಮಂಚನಬೆಲೆ ಜಲಾಶಯದಿಂದ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿದೆ. ನನಗೆ ಕ್ಷೇತ್ರದ ಅಭಿವೃದ್ಧಿ ಮುಖ್ಯವೇ ಹೊರತು ರಾಜಕೀಯ ಅಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮನವೊಲಿಸಿ, ಅನುದಾನ ತರುತ್ತೇನೆ' ಎಂದರು.

ಪಂಚಾಯಿತಿ ಸದಸ್ಯೆ ಕಲಾವತಿ ಮಂಜುನಾಥ್, ಮಾಜಿ ಅಧ್ಯಕ್ಷ ಕೆ.ಮಹೇಶ್ ಇದ್ದರು.

ನಾಲ್ಕು ಹೊಸ ತಳಿಗಳ ಬಿಡುಗಡೆ, ತಂತ್ರಜ್ಞಾನಗಳ ಅನಾವರಣ

ನ.14ರಿಂದ 4 ದಿನ ಕೃಷಿ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಆಶ್ರಯದಲ್ಲಿ ನವೆಂಬರ್ 14ರಿಂದ 17ರವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ಹವಾಮಾನ ಚತುರ ಡಿಜಿಟಲ್ ಕೃಷಿ' ಎಂಬ ಘೋಷವಾಕ್ಯದಡಿ ಕೃಷಿ ಮೇಳ ಆಯೋಜಿಸಲಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

ಶನಿವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಬಾರಿಯ ಮೇಳದಲ್ಲಿ ವಿಶ್ವವಿದ್ಯಾಲಯದ ಸಂಶೋಧಕರು ಅಭಿವೃದ್ಧಿಪಡಿಸಿರುವ, ನಾಲ್ಕು ಹೊಸ ತಳಿಗಳಾದ ಮುಸುಕಿನಜೋಳ ಸಂಕರಣ (ಎಂಎಎಚ್ 15–85), ಅಲಸಂದೆ (ಕೆಬಿಸಿ–12), ಸೂರ್ಯಕಾಂತಿ ಸಂಕರಣ (ಕೆಬಿಎಸ್‌ಎಚ್–90), ಬಾಜ್ರ ನೇಪಿಯರ್ ಸಂಕರಣ (ಪಿಬಿಎನ್–342) ಎಂಬ ತಳಿಗಳು ಬಿಡುಗಡೆಯಾಗ ಲಿವೆ' ಎಂದು ಮಾಹಿತಿ ನೀಡಿದರು.

'ಸೆನ್ಸಾರ್ ಆಧಾರಿತ ಡ್ರೋನ್, ಬೆಳೆಗಳಿಗೆ ಟ್ರ್ಯಾಕ್ಟರ್ ಮೂಲಕ ಔಷಧಿ ಸಿಂಪಡಿಸುವ ಸೆನ್ಸಾರ್ ಆಧಾರಿತ



ಯಂತ್ರಗಳು ಹಾಗೂ ನೂತನ ತಂತ್ರಜ್ಞಾನಗಳು ಕೃಷಿ ಮೇಳದಲ್ಲಿ ರೈತರ ಗಮನ ಸೆಳೆಯಲಿವೆ. ಒಂದು ಎಕರೆ ಪ್ರದೇಶದಲ್ಲಿ ಡಿಜಿಟಲ್ ಕೃಷಿಗೆ ಸಂಬಂಧಿಸಿದ ಯಂತ್ರಗಳು ಅನಾವರಣ ಗೊಳ್ಳಲಿವೆ' ಎಂದರು.

ಕೃಷಿ ಮೇಳದಲ್ಲಿ 700ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲು ಅವಕಾಶ ನೀಡಲಾಗಿದೆ. ಸಿರಿಧಾನ್ಯ ಪೂರಕ ಆಹಾರಕ್ಕೆ ಸಂಬಂಧಿಸಿದಂತೆ ವಿಶೇಷ ಮಳಿಗೆಗಳು ಇರಲಿವೆ. ಮೇಳಕ್ಕೆ ಆಗಮಿಸುವ ರೈತರಿಗೆ ಹಾಗೂ ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆ ಮಾಡಲಾಗುವುದು. ಇದರ ಜೊತೆಗೆ ತಿಂಡಿ ಮಾರಾಟದ ಮಳಿಗೆಗಳು ಇರಲಿವೆ ಎಂದು ಹೇಳಿದರು.

'ಮೇಳಕ್ಕೆ ಬರುವವರಿಗೆ ಪ್ರವೇಶ ಉಚಿತವಿದೆ. ಜಿಕೆವಿಕೆ ಗೇಟ್‌ನಿಂದ ಒಳಗಡೆ ಕರೆದೊಯ್ಯಲು ಸಂಸ್ಥೆಯ ಬಸ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ. ಕಾರು, ಬೈಕ್ ಹಾಗೂ ಇತರೆ ವಾಹನಗಳಲ್ಲಿ ಬರುವವರಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು' ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಸಚಿವ ಕೆ.ಸಿ. ನಾರಾಯಣಸ್ವಾಮಿ, ತರಬೇತಿ ಸಂಯೋಜಕ ಕೆ. ಶಿವರಾಮು ಸುದ್ದಿಗೋಷ್ಠಿಯಲ್ಲಿದ್ದರು.

ಆರು ರೈತರಿಗೆ ರಾಜ್ಯಮಟ್ಟದ ಕೃಷಿ ಪ್ರಶಸ್ತಿ

ಉತ್ತಮ ಸಾಧನೆ ಮಾಡಿದ ಆರು ಜನ ರೈತರಿಗೆ ರಾಜ್ಯಮಟ್ಟದ 'ಕೃಷಿ ಪ್ರಶಸ್ತಿ' ಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಪ್ರಕಟಿಸಿದೆ.

'ಎಚ್.ಡಿ.ದೇವೇಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕುರಟಹಳ್ಳಿಯ ಸಿ.ಆರ್. ರಾಧಾಕೃಷ್ಣ, 'ಎಂ.ಎಚ್.ಮರೀಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ'ಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಹಾಡೋನಹಳ್ಳಿಯ ರೂಪಾ ಎಚ್.ಪಿ. ಆಯ್ಕೆಯಾಗಿದ್ದಾರೆ' ಎಂದು ಎಸ್.ವಿ. ಸುರೇಶ ತಿಳಿಸಿದರು.

'ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ವಗರಹಳ್ಳಿಯ ಪ್ರವೀಣ್ ವಿ.ಎಸ್., 'ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ'ಗೆ ರಾಮನಗರ ಜಿಲ್ಲೆಯ ಕಗ್ಗಲಹಳ್ಳಿಯ ಶಾಂತಮ್ಮ ವೈ.ಸಿ., 'ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಉಣ್ಣೇನಹಳ್ಳಿಯ ನಾಗವರ್ಮ ಯು.ಎಂ., ಹಾಗೂ 'ಆರ್.ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತೆ ಪ್ರಶಸ್ತಿ'ಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಎಂ. ಶಾಲಿನಿ ಆಯ್ಕೆಯಾಗಿದ್ದಾರೆ' ಎಂದರು.

ವಿದೇಶಾಂಗ ಸಚಿವಾಲಯ ಸಲಹಾ ಸಮಿತಿಗೆ ಸಂಸದ ಸುಧಾಕರ್ ನೇಮಕ



ಚಿಕ್ಕಬಳ್ಳಾಪುರ: ಸಂಸದ ಡಾ.ಕೆ.ಸುಧಾಕರ್ ಅವರು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಲಹಾ ಸಮಿತಿಗೆ ಸದಸ್ಯರಾಗಿ ನೇಮಕಗೊಂಡಿದ್ದಾರೆ.

ಕೇಂದ್ರ ವಿದೇಶಾಂಗ ಸಚಿವರಾದ ಎಸ್.ಜೈಶಂಕರ್ ಹಾಗೂ ವಿದೇಶಾಂಗ ಖಾತೆ ರಾಜ್ಯ ಸಚಿವರಾದ ಕೀರ್ತಿವರ್ಧನ್ ಸಿಂಗ್, ಪವಿತ್ರಾ ಮಾರ್ಗರಿಟಾ ಅವರ ನೇತೃತ್ವದ ಈ ಸಲಹಾ ಸಮಿತಿಯಲ್ಲಿ ಲೋಕಸಭೆಯ 10 ಹಾಗೂ ರಾಜ್ಯಸಭೆಯ 9 ಸದಸ್ಯರು, ರಾಜ್ಯಸಭೆಯಿಂದ ಒಬ್ಬರು ವಿಶೇಷ ಆಹ್ವಾನಿತ ಸದಸ್ಯರು ಮತ್ತು ಇಬ್ಬರು ಮಾಜಿ ಅಧಿಕಾರಿಗಳು ಸದಸ್ಯರಾಗಿದ್ದಾರೆ. ಈ ಸಲಹಾ ಸಮಿತಿಯು ಸರ್ಕಾರದ ವಿದೇಶಾಂಗ ನೀತಿ, ವಿವಿಧ ಯೋಜನೆ, ಕಾರ್ಯಕ್ರಮ ಅನುಷ್ಠಾನದ ವಿಧಾನ ಹಾಗೂ ದೇಶದ ವಿದೇಶಾಂಗಕ್ಕೆ ಸಂಬಂಧಿಸಿದ ವಿಚಾರ ಕುರಿತು ಪರಾಮರ್ಶೆ ನಡೆಸಲಿದ್ದು, ಸೂಕ್ತ ಸಲಹೆ, ಸೂಚನೆ ನೀಡಲಿದೆ.

ಕವಿಗಳ ಹೆಸರಿನ ಫಲಕ ಅಳವಡಿಕೆಗೆ ಅಡ್ಡಿ



ಆನೇಕಲ್ ತಾಲ್ಲೂಕಿನ ಬೆಂಡಗಾನಹಳ್ಳಿಯ ಬ್ರಿಕ್ ಫೀಲ್ಡ್ ಶೆಲ್ಟರ್ಸ್ ನಿವಾಸಿಗಳು ಕನ್ನಡ ಕವಿಗಳ ಹೆಸರಿನ ರಸ್ತೆ ನಾಮಫಲಕಗಳನ್ನು ಹಾಕಲು ಅಡ್ಡಿಪಡಿಸಿದ್ದ ಹಿನ್ನೆಲೆಯಲ್ಲಿ ಕನ್ನಡ ಪರ ಸಂಘಟನೆಗಳು ಮತ್ತು ನಿವಾಸಿಗಳ ನಡುವೆ ಮಾತಿನ ಚಕಮಕಿ ನಡೆಯಿತು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ನೆರಳೂರು ಗ್ರಾ.ಪಂ. ವ್ಯಾಪ್ತಿಯ ಬೆಂಡಗಾನಹಳ್ಳಿಯಲ್ಲಿ ಗುರುವಾರ ಬ್ರಿಕ್ ಫೀಲ್ಡ್ ಶೆಲ್ಟರ್ಸ್ ನಿವಾಸಿಗಳು ಕನ್ನಡ ಕವಿಗಳ ಹೆಸರಿನ ರಸ್ತೆ ನಾಮಫಲಕ ಅಳವಡಿಸಲು ಅನ್ಯ ಭಾಷಿಕರು ಅಡ್ಡಿಪಡಿಸಿದ್ದರಿಂದ ಕನ್ನಡ ಪರ ಸಂಘಟನೆಗಳು ಮತ್ತು ಅನ್ಯಭಾಷಿಕ ವಾಸಿಗಳ ನಡುವೆ ಚಕಮಕಿ ನಡೆಯಿತು.

ಸ್ಥಳೀಯ ಕೆಆರ್‌ಎಸ್ ಪಕ್ಷದ ಮುಖಂಡ ಮಹೇಶ್ ನೇತೃತ್ವದಲ್ಲಿ ಬಡಾವಣೆಯ ರಸ್ತೆಗಳಲ್ಲಿ ಕವಿ, ಸಾಹಿತಿ ಹಾಗೂ ಕನ್ನಡ ಹೋರಾಟಗಾರರ ಹೆಸರಿನ ನಾಮಫಲಕ ಅಳವಡಿಸಲು ಗ್ರಾ.ಪಂ.ನಿಂದ ಅನುಮತಿ ಪಡೆದು ಫಲಕ ಅಳವಡಿಸಲು ಮುಂದಾಗಿದ್ದರು. ಈ ವೇಳೆ ಬ್ರಿಕ್ ಫೀಲ್ಡ್ ಶೆಲ್ಟರ್ಸ್ ಬಡಾವಣೆಯ ಕೆಲವು ನಿವಾಸಿಗಳು ವಿರೋಧಿಸಿದ್ದು, ಇವುಗಳನ್ನು ಕಿತ್ತುಹಾಕಲು ಮುಂದಾದ ಕಾರಣ ಮಾತಿನ ಚಕಮಕಿ ನಡೆದಿತ್ತು.

ಪೊಲೀಸರು, ಗ್ರಾ.ಪಂ.ಅಧಿಕಾರಿಗಳು ಮತ್ತು ಸ್ಥಳೀಯರ ನಡುವೆ ವಾಗ್ವಾದ ನಡೆಯಿತು. ಗ್ರಾ.ಪಂ. ವತಿಯಿಂದ ನಾಮಫಲಕ ಅಳವಡಿಸಲಾಗುವುದು ಎಂದು ತೀರ್ಮಾನಿಸಿದ ನಂತರ ಪರಿಸ್ಥಿತಿ ಶಮನವಾಯಿತು. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸ್ಥಳಕ್ಕೆ ಕನ್ನಡ ಪರ ಸಂಘಟನೆಯ ರೂಪೇಶ್ ರಾಜಣ್ಣ ಭೇಟಿ ನೀಡಿದರು. 'ಗ್ರಾಪಂನಿಂದ ನಾಮಫಲಕ ಗಳನ್ನು ಶೀಘ್ರವೇ ಅಳವಡಿಸಲಾಗು ವುದು' ನೆರಳೂರು ಪಿಡಿಒ ಗಂಗಾಧರ್ ತಿಳಿಸಿದರು.

ಭ್ರಷ್ಟ ಅಧಿಕಾರಿಗಳ ಅಮಾನತಿಗೆ ಎಎಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನೂರಾರು ಅಮಾಯಕ ವ್ಯಾಪಾರಸ್ಥರ ಬಳಿ ಅಕ್ರಮವಾಗಿ ಹಣ ವಸೂಲು ಮಾಡಲು ಮುಂದಾಗಿರುವ ಬಿಬಿಎಂಪಿಯ ಆರೋಗ್ಯ ವಿಭಾಗದ ಅಧಿಕಾರಿಗಳನ್ನು ಅಮಾನತು ಮಾಡಬೇಕು ಎಂದು ಆಮ್ ಆದ್ಮಿ ಪಾರ್ಟಿ ಆಗ್ರಹಿಸಿದೆ.

ಹಣ ವಸೂಲಿಗಾಗಿ ಶಾಂತಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವ್ಯಾಪಾರಸ್ಥರಿಗೆ ಪದೇ ಪದೇ ಧಮಕಿ ಹಾಕುತ್ತಿದ್ದ ಅಧಿಕಾರಿಗಳ ವಿರುದ್ಧ ಬಿಬಿಎಂಪಿ ವಲಯ ಆಯುಕ್ತೆ ಸ್ನೇಹಲ್ ರಾಯಮನೆ ಅವರಿಗೆ ದೂರು ನೀಡಲಾಯಿತು ಎಂದು ಎಎಪಿ ಬೆಂಗಳೂರು ನಗರ ಮಾಧ್ಯಮ ಉಸ್ತುವಾರಿ ಅನಿಲ್ ನಾಚಪ್ಪ ಅವರು ತಿಳಿಸಿದ್ದಾರೆ.

'ಅಧಿಕಾರಿಗಳು ಹಣಕ್ಕಾಗಿ ಇತ್ತೀಚೆಗೆ ನಿರಂತರವಾಗಿ ಪೀಡಿಸುತ್ತಿದ್ದಾರೆ. ವ್ಯಾಪಾರಿಗಳಿಂದ ಲಕ್ಷಾಂತರ ರೂಪಾಯಿ ವಸೂಲಿ ಮಾಡಿದ್ದಾರೆ. ತೆರಿಗೆ ಕಟ್ಟಿ ವ್ಯಾಪಾರ ಮಾಡುತ್ತಿರುವವರಿಗೆ ನೆರವು ನೀಡುವ ಬದಲು ಹಫ್ತಾ ವಸೂಲಿಗೆ ಇಳಿದಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ಯಾವುದೇ ರಾಜಕೀಯ ಒತ್ತಡಗಳಿಗೆ ಮಣಿಯಬಾರದು' ಎಂದು ಒತ್ತಾಯಿಸಿದ್ದಾರೆ.

ವ್ಯಾಪಾರಸ್ಥರ ನಿಯೋಗದಲ್ಲಿ ಎಎಪಿ ಶಾಂತಿನಗರ ವಿಧಾನಸಭಾ ಕ್ಷೇತ್ರದ ಮುಖಂಡ ಶಿವಕುಮಾರ್ ಉಪಸ್ಥಿತರಿದ್ದರು.

ಮಯೂರ, ಸುಧಾ ಓದಿರಿ


FINANCE BONANZA
Upto ₹10,000 ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000 ಕ್ಯಾಶ್ ಬ್ಯಾಕ್*
BIGGEST Deepavali SALE
UPTO 70% OFF
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
ಉಚಿತ* FIRE-BOLTT SMART CALLING WATCH WORTH ₹20000
EXCHANGE DHAMAKA
Upto ₹65,000
ಮಳಿಗೆಗಳು 10.30AM – 10PM ವರೆಗು ತೆರೆದಿರುತ್ತದೆ (27ನೇ ಅಕ್ಟೋಬರ್ – 3ನೇ ನವೆಂಬರ್ 2024)
FINANCE POWERED BY Groww 0% EMI Upto 3,500 Cash Back* MIN PRODUCT VALUE ₹10,000
1 ಇ.ಎಮ್.ಐ ಉಚಿತ*
HDFC BANK 10% INSTANT DISCOUNT ON CC & DC EMI* MIN SWIPE ₹17,500 MAX CASH BACK UPTO ₹3,000
IDFC FIRST Bank 5% INSTANT CASHBACK ON CC EMI* MIN SWIPE ₹5000 MAX CASH BACK UPTO ₹10000
YES BANK 5% INSTANT CASHBACK ON CC EMI* MIN SWIPE ₹20000 MAX CASH BACK UPTO ₹2000
DBS BANK 5% INSTANT CASHBACK ON CC EMI* MIN SWIPE ₹15000 MAX CASH BACK UPTO ₹2500
ASSURED BUYBACK UPTO 70% On New Purchase*
realme 13 Pro 5G 8/256 EFFECTIVE PRICE ₹25,090* EMI STARTS FROM ₹1,739 ಉಚಿತ: EARBUDS BUDS WORTH ₹4999*
vivo V40E 5G 8+128 EFFECTIVE PRICE ₹23,690* EMI STARTS FROM ₹2,189 ಉಚಿತ: EARBUDS BUDS WORTH ₹4999*
OPPO RENO 12 5G 8/256 EFFECTIVE PRICE ₹29,490* EMI STARTS FROM ₹2,696 ಉಚಿತ: TWS EARBUDS WORTH ₹4990*
iPhone 16 EFFECTIVE PRICE ₹74,900* EXCHANGE BONUS UPTO ₹6000 EMI STARTS FROM ₹2,825 ಉಚಿತ: ANC EARBUDS OR WIRELESS MAGSAFE POWER BANK WORTH ₹6499*
SAMSUNG Galaxy S24 Series own now at ₹2625/- month* EFFECTIVE PRICE ₹59,990* GET: ANC EARBUDS @ ₹199*
DELL INS 15 3535 OFFER PRICE ₹31,490 ಇ.ಎಮ್.ಐ ₹2,624 MRP ₹49,395 ಉಚಿತ: 32GB PENDRIVE + W/L MOUSE WORTH ₹1299*
Lenovo SLIM 3 OFFER PRICE ₹43,990 ಇ.ಎಮ್.ಐ ₹3,666 MRP ₹69,890 ಉಚಿತ: 32GB PENDRIVE AND W/L MOUSE WORTH ₹1,299*
MacBook EMI STARTS FROM ₹3,031 UPTO ₹10000 CASHBACK ಉಚಿತ: 1 YEAR EXTENDED WARRANTY WORTH ₹9999*
DELL INS 15 3520 OFFER PRICE ₹49,990 ಇ.ಎಮ್.ಐ ₹4,166 MRP ₹78,753 ಉಚಿತ: SMART WATCH WORTH ₹7,999*
hp VICTUS OFFER PRICE ₹53,990 ಇ.ಎಮ್.ಐ ₹4,499 MRP ₹67,264 ಉಚಿತ: SMART WATCH WORTH ₹7,999*
LG 77 ಓಎಲ್ಇಡಿ EVO AI C4 4K SMART TV OLED77C46LA ಇ.ಎಮ್.ಐ ₹2,999 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 65 ಓಎಲ್ಇಡಿ 4K SMART TV 65S90D ಇ.ಎಮ್.ಐ ₹3,990 ಉಚಿತ: ₹45900 ಮೌಲ್ಯದ SAMSUNG 43 CRYSTAL 4K UHD SMART TV
SONY 65 OLED 4K ULTRA HD HIGH DYNAMIC RANGE (HDR) SMART TV (GOOGLE TV) K-65XR80 ಇ.ಎಮ್.ಐ ₹6,500
Panasonic 55 4K ULTRA HD SMART ಎಲ್ಇಡಿ GOOGLE TV ಇ.ಎಮ್.ಐ ₹2,455 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
NVY LOWEST PRICE CHALLENGE QLED 52% OFF
Model | Price | EMI
55 QLED | ₹35,590 | ₹2,966
65 QLED | ₹56,890 | ₹4,741
LG 650 Ltrs CONVERTIBLE SIDE BY SIDE REFRIGERATOR WITH PREMIUM GLASS DOOR, SMART INVERTER COMPRESSOR, HYGIENE FRESH+™ GL-B257DBM3 ಇ.ಎಮ್.ಐ ₹3,999
Haier 630 Ltrs DOUBLE DOOR SIDE BY SIDE REFRIGERATOR APPLIANCES, EXPERT INVERTER TECHNOLOGY ಇ.ಎಮ್.ಐ ₹2,994
Whirlpool 411L 2 Star Convertible Frost Free Double-Door Refrigerator ಇ.ಎಮ್.ಐ ₹3,733
Godrej 9 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,208
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,274
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
OFFER VALID TILL STOCK LAST | OFFER VALID TILL STOCK LAST
LG 28 LTRS CONVECTION MICROWAVE OVEN 286UFW ಇ.ಎಮ್.ಐ ₹2,142
DAIKIN 1.0 TON 3 STAR INVERTER SPLIT AC ಇ.ಎಮ್.ಐ ₹3,249 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Prestige SVACH 3 BURNER GAS STOVE OFFER PRICE ₹8,990 ಉಚಿತ: PRESTIGE 3LTR SS PRESSURE COOKER WORTH ₹2390
EUREKA FORBES AQUAGUARD WATER PURIFIER ENHANCE NXT 2X LIFE RO+UV+TA FREE 2 YEAR MAINTENANCE OFFER PRICE ₹17,500 ಉಚಿತ: 3 JAR MIXER GRINDER WORTH ₹2499
KENSTAR 3 LTR INSTANT GEYSER FREE INSTALLATION & PIPE OFFER PRICE ₹3,499 ಉಚಿತ: DRY IRON WORTH ₹880
BUY ANY CHIMNEY & HOBS GET EUREKA FORBES VACCUM CLEANER WORTH ₹16990/- @ ₹6,990
SONY AUDIO SOUND BAR HT-S20 - 5.1CH, 400W, DOLBY DIGITAL. OFFER PRICE ₹13,990 ಇ.ಎಮ್.ಐ ₹1,166 MRP ₹23,990
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಉತ್ತರಹಳ್ಳಿ 90362 89563 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಭಾರ್ತಿಯಾ ಮಾಲ್ 70900 00981 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಬಿಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಆಯ್ಕೆಮಾಡಿದ ಮೊಬೈಲ್‌ಗಳಲ್ಲಿ 70% ವರೆಗೆ ಖಚಿತವಾದ ಮರುಖರೀದಿಯು ಮಾನ್ಯವಾಗಿರುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ವಿನಿಮಯ ಕೊಡುಗೆ. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ.
STORE LOCATOR
165 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA

ಪರಿಶಿಷ್ಟ ಜಾತಿ ಬಲಗೈ ಒಳ ಮೀಸಲಾತಿ ಅನುಷ್ಠಾನ ಜಾಗೃತಿ ಸಮಿತಿಯಿಂದ ಸಂವಾದ

ಎಸ್‌ಸಿ ಸಮೀಕ್ಷೆಗೆ 'ಬಲಗೈ' ಒಕ್ಕೊರಲ ಧ್ವನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದಂತೆ ಹೊಸದಾಗಿ ಸಮೀಕ್ಷೆ ನಡೆಸಿದ ನಂತರವೇ ಒಳ ಮೀಸಲಾತಿ ಅನುಷ್ಠಾನ ಗೊಳಿಸಬೇಕು. ಈ ಬೇಡಿಕೆಗೆ ಬಲ ನೀಡಲು ಎಲ್ಲ ಬಲಗೈ ಸಮುದಾಯಗಳು ಸಂಘಟಿತರಾಗಿ ಒಕ್ಕೊರಲಿನಿಂದ ಧ್ವನಿ ಎತ್ತಬೇಕು' ಎಂದು ರಾಜ್ಯ ಪರಿಶಿಷ್ಟ ಜಾತಿ ಬಲಗೈ ಸಮುದಾಯದ ಮುಖಂಡರು ಕರೆ ನೀಡಿದ್ದಾರೆ.

ನಗರದ ಅಂಬೇಡ್ಕರ್ ಭವನದಲ್ಲಿ ರಾಜ್ಯ ಪರಿಶಿಷ್ಟ ಜಾತಿ ಬಲಗೈ ಒಳ ಮೀಸಲಾತಿ ಅನುಷ್ಠಾನ ಜಾಗೃತಿ ಸಮಿತಿ ಶನಿವಾರ 'ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಒಳ ಮೀಸಲಾತಿ' ಸಂವಾದ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಎಲ್ಲ ನಾಯಕರು, 'ಒಳ ಮೀಸಲಾತಿಗೆ ನಮ್ಮ ವಿರೋಧ ಇಲ್ಲ. ಆದರೆ, ಎಲ್ಲ ಗೊಂದಲಗಳಿಗೆ ಹೊಸದಾಗಿ ಜಾತಿಗಳ ಸಮೀಕ್ಷೆ ನಡೆಸುವುದೇ ನಿಜವಾದ ಪರಿಹಾರ' ಎಂದು ಪ್ರತಿಪಾದಿಸಿದರು.



ರಾಜ್ಯ ಪರಿಶಿಷ್ಟ ಜಾತಿ ಬಲಗೈ ಒಳ ಮೀಸಲಾತಿ ಅನುಷ್ಠಾನ ಜಾಗೃತಿ ಸಮಿತಿ ಹಮ್ಮಿಕೊಂಡಿದ್ದ ಸಂವಾದದಲ್ಲಿ ನಿವೃತ್ತ ಕೆಎಎಸ್ ಅಧಿಕಾರಿ ದಾಸಯ್ಯ ಮಾತನಾಡಿದರು. ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಭಾಗವಹಿಸಿದ್ದರು

ಕಾರ್ಯಕ್ರಮದಲ್ಲಿ ಮಾತನಾಡಿದ ಕೆಪಿಎಸ್‌ಸಿ ಮಾಜಿ ಸದಸ್ಯರೂ ಆಗಿರುವ ನಿವೃತ್ತ ಕೆಎಎಸ್ ಅಧಿಕಾರಿ ದಾಸಯ್ಯ, 'ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ನಡೆಸಿದ್ದ ಸಮೀಕ್ಷೆಯ ವರದಿಯು ಅವೈಜ್ಞಾನಿಕವಾಗಿದೆ. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜ ಅವರು ನಡೆಸಿರುವುದು ಮಾದರಿ ಸಮೀಕ್ಷೆಯಷ್ಟೆ. ಅದನ್ನು ಒಪ್ಪಲು ಸಾಧ್ಯ ಇಲ್ಲ. ಹೀಗಾಗಿ ಹೊಸದಾಗಿ ಸಮೀಕ್ಷೆ ನಡೆಸಿ, ಪರಿಶೀಲನಾರ್ಹ ದತ್ತಾಂಶ ಸಂಗ್ರಹಿಸಿದ ಬಳಿಕ ಒಳ ಮೀಸಲಾತಿ ಜಾರಿಗೊಳಿಸಬೇಕು' ಎಂದರು.

'ಕೇಂದ್ರ ಸರ್ಕಾರ ಶೀಘ್ರದಲ್ಲಿ 2021ರ ಜನಗಣತಿ ನಡೆಸುವ ಸಾಧ್ಯತೆ ಇದೆ. ಅದರಲ್ಲಿ ಪರಿಶಿಷ್ಟ ಜಾತಿಗಳ ಜನಸಂಖ್ಯೆ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಸಮೀಕ್ಷೆ ನಡೆಸುವ ಮೂಲಕ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ನೀಡಿರುವ ಮಾನದಂಡ ಗಳನ್ನು ಪಾಲಿಸಲು ಸಾಧ್ಯ ಆಗಬಹುದು. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಮನವಿ ಸಲ್ಲಿಸಬೇಕು' ಎಂದು ಹೇಳಿದರು.

ಸಮಿತಿಯ ಸಂಚಾಲಕ ಡಾ. ನವೀನ್ ಮನಿಯ, ವಕೀಲ ಎಚ್‌.ಡಿ. ಅಮರ ನಾಥನ್, ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಂಘದ ಅಧ್ಯಕ್ಷ ಡಿ. ಶಿವಶಂಕರ ಉಪಸ್ಥಿತರಿದ್ದರು.

'ನಿಖರ ದತ್ತಾಂಶ– ವೈಜ್ಞಾನಿಕವಾಗಿ ಜಾರಿ'

'ಪರಿಶಿಷ್ಟ ಜಾತಿಯಲ್ಲಿನ ಉಪ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯ ವಾಸ್ತಾವಿಕ ಅಂಶಗಳ ನಿಖರವಾದ ದತ್ತಾಂಶ ಸಂಗ್ರಹಿಸಿ, ಉಪ ಜಾತಿಗಳ ವರ್ಗೀಕರಣವನ್ನು ಖಚಿತಪಡಿಸಿಕೊಂಡ ಬಳಿಕ ಮಾತ್ರ ಒಳ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಬಲಗೈ ಸಮುದಾಯಗಳು ಸಂಘಟಿತಗೊಳ್ಳಬೇಕು' ಎಂದು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಹೇಳಿದರು.

2011ರ ಜನಗಣತಿಯ ಆಧಾರದಲ್ಲಿ ಒಳ ಮೀಸಲಾತಿ ಪ್ರಮಾಣವನ್ನು ಹಂಚಿಕೆ ಮಾಡಿ ಅಂಕಿಅಂಶಗಳ ಸಹಿತ ವಿವರಿಸಿದ ಅವರು, 'ಪ್ರತಿ ಜಿಲ್ಲೆಯಲ್ಲಿ ಸಮುದಾಯಗಳ ಐವರು ಮುಖಂಡರು ಚರ್ಚಿಸಿ ಎಡಗೈ ಮತ್ತು ಬಲಗೈ ಸಮುದಾಯಕ್ಕೆ ಬರುವ ಜಾತಿಗಳ ವಿವರ ಪಡೆದು, ಎಡ ಮತ್ತು ಬಲ ಜಾತಿಗಳೆಂದು ವರ್ಗೀಕರಿಸಬೇಕು. ನಂತರ ವೈಜ್ಞಾನಿಕವಾಗಿ ಒಳ ಮೀಸಲಾತಿಯನ್ನು ಜಾರಿಗೊಳಿಸಬೇಕು' ಎಂದು ಅವರು ಆಗ್ರಹಿಸಿದರು.

ಸುದ್ದಿ 2 ನಿಮಿಷ

ಜಾತಿಗಣತಿ ವರದಿ ಬಹಿರಂಗಕ್ಕೆ ಮೋಹನ್‌ಕುಮಾರ್ ಕೊಂಡಜ್ಜಿ ಆಗ್ರಹ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯನ್ನು (ಜಾತಿ ಜನಗಣತಿ) ಒಪ್ಪುವುದು ಬೇಡ. ಆದರೆ, ವರದಿ ಬಹಿರಂಗಪಡಿಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ವಿಧಾನಪರಿಷತ್ ಮಾಜಿ ಸದಸ್ಯ ಮೋಹನ್‌ಕುಮಾರ್ ಕೊಂಡಜ್ಜಿ ಒತ್ತಾಯಿಸಿದ್ದಾರೆ.

'ಜಾತಿ ಗಣತಿ ಬಹಿರಂಗ ಪಡಿಸೋಣ. ನಂತರ ಚರ್ಚಿಸಿ ಮುಂದಿನ ನಿರ್ಧಾರ ತೆಗೆದುಕೊಳ್ಳೋಣ ಎಂದು ಮುಖ್ಯಮಂತ್ರಿ ಹೇಳಿಕೆ ಸ್ವಾಗತಿಸುವೆ. ಈ ಕುರಿತು ಹಿಂದಿನ ಬಿಜೆಪಿ ಸರ್ಕಾರದ ಜತೆಗೂ ಸದನದಲ್ಲೇ ಚರ್ಚಿಸಿದ್ದೆ. ಅಂದಿನ ಕಾನೂನು ಸಚಿವ ಮಾಧುಸ್ವಾಮಿ ಅವರು ಜಾತಿಗಣತಿ ವರದಿಯ ಪ್ರತಿಗಳೇ ನಾಪತ್ತೆಯಾಗಿವೆ ಎಂದು ಹೇಳಿದ್ದರು. ಇದು ನಮ್ಮ ಸರ್ಕಾರಗಳ ಆಡಳಿತ ವೈಖರಿಗೆ ಸಾಕ್ಷಿ' ಎಂದಿದ್ದಾರೆ.

'ಹಿಂದೆ 1931ರಲ್ಲಿ ಬ್ರಿಟಿಷ್ ಸರ್ಕಾರ ಭಾರತದಲ್ಲಿ ಜಾತಿಗಣತಿ ಮಾಡಿತ್ತು. ನಂತರ ಯಾವುದೇ ಸರ್ಕಾರಗಳು ಜಾತಿಗಣತಿಯನ್ನು ಕೈಗೆತ್ತಿಕೊಳ್ಳಲಿಲ್ಲ. ರಾಮ ಮನೋಹರ ಲೋಹಿಯಾ ಈ ಬಗ್ಗೆ ಪ್ರಸ್ತಾಪಿಸಿದ್ದರು. ಆದರೆ, ಅವರ ಒತ್ತಾಯಕ್ಕೆ ಯಾರೂ ಓಗೊಡಲಿಲ್ಲ' ಎಂದು ನೆನಪಿಸಿಕೊಂಡಿದ್ದಾರೆ.



'ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಮುಖ್ಯಸ್ಥರು ಸಹ ಜಾತಿಗಣತಿ ಆಗಬೇಕು ಎಂದು ಈಗ ಹೇಳಿದ್ದಾರೆ. ಕಾಂತರಾಜು ವರದಿ ಎಂದು ಬಿಂಬಿಸುತ್ತಿರುವ ಮತ್ತು ₹180 ಕೋಟಿ ವ್ಯಯ ಮಾಡಿರುವ ವರದಿಯನ್ನು ಬಿಡುಗಡೆ ಮಾಡಲು ಏನು ಅಡ್ಡಿ? ಬಿಡುಗಡೆಯೇ ಮಾಡದಿದ್ದರೆ ವರದಿಗೆ ಅನ್ಯಾಯ ಮಾಡಿದಂತೆ' ಎಂದು ಹೇಳಿದ್ದಾರೆ.

'ಯುಪಿಎಸ್‌ಸಿ ಪರೀಕ್ಷೆ ಪ್ರಾದೇಶಿಕ ಭಾಷೆಗೆ ಆದ್ಯತೆ ನೀಡಿ'

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ಮಾನ್ಯತೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರಿಗೆ ಪತ್ರ ಬರೆದಿದ್ದಾರೆ.

'ಆಯೋಗದ ಪರೀಕ್ಷೆಗಳಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಿಗೆ ಮಾತ್ರ ಪ್ರಾತಿನಿಧ್ಯ ನೀಡುವ ಮೂಲಕ ಹಿಂದಿಯೇತರ ಅಭ್ಯರ್ಥಿಗಳ ಮೂಲಭೂತ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಇರುವುದರಿಂದ ಈ ಭಾಷೆಗಳ ಮೇಲೆ ಪ್ರಭುತ್ವ ಹೊಂದದೆ ಇರುವವರಿಗೆ ಅನ್ಯಾಯವಾಗುತ್ತಿದೆ' ಎಂದು ತಿಳಿಸಿದ್ದಾರೆ.

'ದೇಶದ ಪ್ರತಿಯೊಬ್ಬ ನಾಗರಿಕನಿಗೆ ಸಮಾನ ಹಕ್ಕನ್ನು ನೀಡುವುದು ಸಂವಿಧಾನಾತ್ಮಕ ಆಶಯವಾಗಿದೆ. ಆದ್ದರಿಂದ ಕೂಡಲೇ ಈ ಬಗ್ಗೆ ಕ್ರಮ ವಹಿಸಿ, ಹಿಂದಿಯೇತರ ಅಭ್ಯರ್ಥಿಗಳಿಗೆ ಯುಪಿಎಸ್‌ಸಿ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಸಮಾನ ಅವಕಾಶ ಕಲ್ಪಿಸಬೇಕು' ಎಂದು ಆಗ್ರಹಿಸಿದ್ದಾರೆ.

ಎಲೆಮರೆ ಕಾಯಿಯಂತೆ ಇರುವ ಸಾಧಕರ ಗುರುತಿಸಿ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಧಕರನ್ನು ಗುರುತಿಸುವುದರ ಮೂಲಕ ಅವರನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಸಾಧನೆ ಮಾಡಿಯೂ ಎಲೆಮರೆ ಕಾಯಿಯಂತೆ ಪ್ರಚಾರದಿಂದ ದೂರ ಇರುವವರನ್ನು ಗುರುತಿಸಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕಬ್ಬನ್ ಪಾರ್ಕ್ ವಾಕರ್ಸ್ ಅಸೋಸಿಯೇಷನ್ ಮತ್ತು ಕಬ್ಬನ್ ಪಾರ್ಕ್ ವಾಕರ್ಸ್ ಫೋರಂ ಶನಿವಾರ ಆಯೋಜಿಸಿದ್ದ ಇಂಟರ್‌ನ್ಯಾಷನಲ್ ವುಮೆನ್ಸ್ ಅಚೀವರ್ಸ್ ಅವಾರ್ಡ್ಸ್, ಯಂಗ್ ಅಚೀವರ್ಸ್ ಅವಾರ್ಡ್ಸ್ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ದೇಶದಲ್ಲಿ ಮಾತ್ರವಲ್ಲದೇ ವಿದೇಶ ಗಳಲ್ಲಿರುವ ಸಾಧನೆ ಮಾಡಿರುವ ಇಲ್ಲಿನ ಮಹಿಳೆಯರನ್ನು ಗುರುತಿಸುವ ಕೆಲಸವನ್ನು ಈ ಸಂಘಟನೆಗಳು ಕಳೆದ ನಾಲ್ಕು ವರ್ಷಗಳಿಂದ ಮಾಡುತ್ತಾ ಬಂದಿರುವುದು ಶ್ಲಾಘನೀಯ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಬ್ಬನ್ ಪಾರ್ಕ್ ವಾಕರ್ಸ್ ಅಸೋಸಿಯೇಷನ್ ಅಧ್ಯಕ್ಷ ಉಮೇಶ್ ಕಾರ್ಯಕ್ರಮದ ವಿವರ ನೀಡಿದರು.



ಗೌರಿ, ಡಾ ಸುಧಾ ಮತ್ತು ದೀಪ್ತಿ ತೋಳ್ಪಾಡಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಬ್ಬನ್ ಪಾರ್ಕ್ ವಾಕರ್ಸ್ ಅಸೋಸಿಯೇಷನ್ ಅಧ್ಯಕ್ಷ ಉಮೇಶ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ವಕೀಲ ಧರ್ಮರಾಜ್ ಎಸ್.ಗೌಡರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕೃಷ್ಣಭಾಗ್ಯ ಜಲನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ಮೋಹನ್ ರಾಜ್, ಮಹಿಳಾ ಸಾಧಕರಾದ ಡಾ. ಆರತಿ ಕೃಷ್ಣ, ಅಂಜು ಬಾಬಿ ಜಾರ್ಜ್, ರೆಬೆಕಾ ಮರಿಸ್ಸಾ ಟೇಲರ್, ಸೌಮ್ಯಾ ರೆಡ್ಡಿ, ಪ್ರೇಮಾ, ಕಸ್ತೂರಿ ಶಂಕರ್, ಆರತಿ, ಗೌರಿ, ಪ್ರಿಯಾ ಕೆರ್ವಾಶೆ, ಡಾ. ಸುಧಾ, ದೀಪ್ತಿ ತೋಳ್ಪಾಡಿ, ಪೃಥ್ವಿ ವಕುಡ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ನೀರು ಪೂರೈಕೆದಾರರ ಹಿತರಕ್ಷಣೆ'

ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರು ಪೂರೈಸಲು ಹಗಲಿರುಳು ಶ್ರಮಿಸುವ ಜಲಮಂಡಳಿ ಸಿಬ್ಬಂದಿಯ ಹಿತವನ್ನು ಕಾಪಾಡಲಾಗು ವುದು. ಅವರ ಕುಟುಂಬಕ್ಕೆ ಸುರಕ್ಷತೆ ಒದಗಿಸಲಾಗುವುದು ಎಂದು ಜಲ ಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸ್ವಚ್ಛತಾ ಕಾರ್ಮಿಕರ ಯೂನಿಯನ್ ಹಮ್ಮಿ ಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 133ನೇ, ಬಾಬು ಜಗಜೀವನ್ ರಾಂ ಅವರ 118ನೇ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

'ನಗರದಲ್ಲಿ ಎದುರಾಗಿದ್ದ ನೀರಿನ ಸಮಸ್ಯೆಯನ್ನು ಸಮರ್ಪಕವಾಗಿ ನಿಭಾಯಿಸುವಲ್ಲಿ ಬೆಂಗಳೂರು ಜಲ ಮಂಡಳಿಯ ಎಲ್ಲ ಹಂತದ ಸಿಬ್ಬಂದಿ ಕಾರ್ಯನಿರ್ವಹಿಸಿದ್ದಾರೆ. ಅದರಲ್ಲೂ ನಗರದ ಸ್ವಚ್ಛತೆ ಕಾಪಾಡಿ, ಸೌಂದರ್ಯ ಹೆಚ್ಚಿಸುವಲ್ಲಿ ಒಳಚರಂಡಿ ವಿಭಾಗದ ಸಿಬ್ಬಂದಿಯ ಕಾರ್ಯ ಪ್ರಮುಖವಾಗಿದೆ. ತಮ್ಮ ಆರೋಗ್ಯವನ್ನು ಪಣಕ್ಕಿಟ್ಟು ನಗರದ ಸ್ವಚ್ಛತೆಯನ್ನು ಕಾಪಾಡುತ್ತಿದ್ದಾರೆ' ಎಂದು ಶ್ಲಾಘಿಸಿದರು.



ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸ್ವಚ್ಛತಾ ಕಾರ್ಮಿಕರ ಯೂನಿಯನ್ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ, ಬಾಬು ಜಗಜೀವನ್ ರಾಂ ಅವರ 118ನೇ ಜಯಂತ್ಯುತ್ಸವದಲ್ಲಿ ಸ್ವಚ್ಛತಾ ಸಿಬ್ಬಂದಿಯನ್ನು ಗೌರವಿಸಲಾಯಿತು

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್. ಸಂಪತ್‌ರಾಜ್ ಮಾತನಾಡಿ, 'ನೀರಿಗಾಗಿ ಕೊಳೆಗೇರಿ ಜನ ಪರಿತಪಿಸುತ್ತಿದ್ದಾರೆ. ಕಲುಷಿತ ನೀರಿನ ಸಮಸ್ಯೆ ತೀವ್ರಗೊಂಡಿದೆ. ಸಗಾಯಪುರ, ಡಿ.ಜೆ. ಹಳ್ಳಿ ಮತ್ತಿತರೆ ಭಾಗಗಳಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸಬೇಕು. ಪ್ರತ್ಯೇಕ ಘಟಕ ತೆರೆದರೆ ತಕ್ಷಣವೇ ಪರಿಹಾರ ಕಂಡುಕೊಳ್ಳಲು ಸಾಧ್ಯ' ಎಂದು ಅಭಿಪ್ರಾಯಪಟ್ಟರು.

ಜಲಮಂಡಳಿಯ ಪ್ರಧಾನ ಮುಖ್ಯ ಎಂಜಿನಿಯರ್ ಬಿ. ಸುರೇಶ್, ಮುಖ್ಯ ಆಡಳಿತಾಧಿಕಾರಿ ಸಿ. ಮದನಮೋಹನ್, ಆರ್ಥಿಕ ಸಲಹೆಗಾರ ಜಿ.ಎಸ್. ಸುಬ್ಬ ರಾಮಯ್ಯ, ಬೆಂಗಳೂರು ಜಲಮಂಡಳಿ ನೌಕರರ ಸಂಘದ ಅಧ್ಯಕ್ಷ ಬಿ.ಕೆ. ಮರಿಯಪ್ಪ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸದಾಶಿವ ಕಾಂಬಳೆ, ಯೂನಿಯನ್ ಅಧ್ಯಕ್ಷ ಸಿದ್ದಪ್ಪ, ಉಪಾಧ್ಯಕ್ಷ ಓಬಳೇಶ್, ಪ್ರಧಾನ ಕಾರ್ಯದರ್ಶಿ ನರಸಿಂಹಮೂರ್ತಿ ಉಪಸ್ಥಿತರಿದ್ದರು.

ಅನುವಾದಕ ಡಿ.ಎ.ಶಂಕರ್, ಬರಹಗಾರ ಶಂಕರ್ ಸಿಹಿಮೊಗ್ಗೆಗೆ ಗೌರವ

ಶಾ.ಬಾಲುರಾವ್ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅನುವಾದಕ ಡಿ.ಎ. ಶಂಕರ್ ಅವರಿಗೆ 'ಶಾ. ಬಾಲುರಾವ್ ಅನುವಾದ ಪ್ರಶಸ್ತಿ' ಹಾಗೂ ಬರಹಗಾರ ಶಂಕರ್ ಸಿಹಿಮೊಗ್ಗೆ ಅವರಿಗೆ 'ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಡಿ.ಎ. ಶಂಕರ್ ಅವರ 'ಡಾಕ್ಟರ್ ಫಾಸ್ಟರ್ಸ್' ನಾಟಕ ಹಾಗೂ ಶಂಕರ್ ಸಿಹಿಮೊಗ್ಗೆ ಅವರ 'ಇರುವೆ ಮತ್ತು ಗೋಡೆ' ಕವನ ಸಂಕಲನ ಪ್ರಶಸ್ತಿಗೆ ಆಯ್ಕೆಯಾಗಿದ್ದವು. ಪ್ರಶಸ್ತಿಗಳು ತಲಾ ₹25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿವೆ.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ, 'ಸಾಹಿತ್ಯ ಅಕಾಡೆಮಿಯ ಉದ್ಯೋಗಿಯಾಗಿದ್ದ ಶಾ.ಬಾಲುರಾವ್ ಅವರು, ಅಕಾಡೆಮಿಯನ್ನು ಸಾಹಿತ್ಯಿಕವಾಗಿ ಕಟ್ಟಿದ್ದರು. ಅಕಾಡೆಮಿಯಿಂದ ಇಂಗ್ಲಿಷ್‌ನಲ್ಲಿ ಪ್ರಕಟವಾಗುತ್ತಿದ್ದ 'ಇಂಡಿಯನ್ ಲಿಟರೇಚರ್'ನ ಸಂಪಾದಕರಾಗಿದ್ದರು. ಅನುವಾದ ಮತ್ತು ಸೃಜನಶೀಲತೆಗೆ ಈ ಮ್ಯಾಗಜಿನ್ ಸಹಕಾರಿಯಾಗಿತ್ತು. ಕಳೆದ ಏಳೆಂಟು ವರ್ಷಗಳಿಂದ ಅನುವಾದ ಪ್ರಕ್ರಿಯೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ವೇಗ ಪಡೆದಿದೆ' ಎಂದು ಹೇಳಿದರು.

ಪ್ರಶಸ್ತಿ ಪುರಸ್ಕೃತ ಡಿ.ಎ. ಶಂಕರ್, 'ಅನುವಾದ ಮಾಡುವುದು ಅಂದರೇ, ನಮ್ಮದಲ್ಲದನ್ನು ನಾವು ಕಬ್ಜ ಮಾಡಿಕೊಳ್ಳುವುದಾಗಿದೆ. ವಿಷಯ, ಭಾಷೆ, ಪಾತ್ರ ಯಾವುದೂ ನಮ್ಮದಾಗಿರುವುದಿಲ್ಲ. ಇನ್ನೊಂದು ರಾಜ್ಯವನ್ನು ಗೆದ್ದರೀತಿ' ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಡಿ.ಎ.ಶಂಕರ್ ಅವರಿಗೆ 'ಶಾ.ಬಾಲುರಾವ್ ಅನುವಾದ ಪ್ರಶಸ್ತಿ' ಮತ್ತು ಶಂಕರ್ ಸಿಹಿಮೊಗ್ಗೆ ಅವರಿಗೆ 'ಶಾ.ಬಾಲುರಾವ್ ಯುವ ಬರಹಗಾರ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು. ಸಾಹಿತಿ ಹಂ.ಪ.ನಾಗರಾಜಯ್ಯ, ಅಗ್ರಹಾರ ಕೃಷ್ಣಮೂರ್ತಿ, ಕಮಲಿನಿ ಶಾ.ಬಾಲುರಾವ್ ಮತ್ತು ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಹಕ್ಕುಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು: ಫಣೀಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕರಿಗೆ ತಮ್ಮ ಹಕ್ಕುಗಳ ಬಗ್ಗೆ ಅರಿವು ಇಲ್ಲದ ಕಾರಣ ಕುಂದು ಕೊರತೆ ಸಭೆಗಳನ್ನು ನಡೆಸಬೇಕಾಗಿದೆ. ಹಕ್ಕುಗಳು ಮತ್ತು ಅವುಗಳನ್ನು ಪಡೆದುಕೊಳ್ಳುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಿದೆ' ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಹೇಳಿದರು.

ಯಲಹಂಕದ ಅಂಬೇಡ್ಕರ್ ಭವನದಲ್ಲಿ 'ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮ'ವನ್ನು ಈಚೆಗೆ ಉದ್ಘಾಟಿಸಿ ಅವರು ಮಾತನಾಡಿದರು. 'ಜನರ ಕುಂದುಕೊರತೆಗಳನ್ನು ಬಗೆಹರಿಸುವುದು, ಭ್ರಷ್ಟಾಚಾರ ನಿರ್ಮೂಲನೆ ಮತ್ತು ನಿಗ್ರಹ ಲೋಕಾಯುಕ್ತ ಸಂಸ್ಥೆಯ ಕಾರ್ಯೋದ್ದೇಶ' ಎಂದರು.

'ಸರ್ಕಾರದ ಸವಲತ್ತುಗಳು ಜನರಿಗೆ ತಲುಪುತ್ತಿದೆಯೇ? ಎಲ್ಲಿ ಕೆಲಸ ಆಗುತ್ತಿಲ್ಲ? ಯಾವ ಕೆಲಸ ವಿಳಂಬವಾಗುತ್ತಿದೆ ಎಂಬುದನ್ನು ಪರಿಶೀಲಿಸಿ, ಸಂಬಂಧಿಸಿದ ಅಧಿಕಾರಿಗಳ ಮೂಲಕ ಸೌಲಭ್ಯ ಗಳನ್ನು ಕಲ್ಪಿಸುವ ಕೆಲಸವನ್ನು ಸಂಸ್ಥೆ ಮಾಡುತ್ತದೆ. ಅಧಿಕಾರಿಗಳು ಕರ್ತವ್ಯಲೋಪ ಎಸಗಿದರೆ, ದುರ್ನಡತೆ ಪ್ರದರ್ಶಿಸಿದರೆ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ' ಎಂದು ಹೇಳಿದರು.

'ಈ ಕಾಯ್ದೆ ಅಡಿಯಲ್ಲಿ ದೂರು ಸಲ್ಲಿಸಿದ ಕೂಡಲೆ, ಅಧಿಕಾರಿಗಳ ವಿರುದ್ಧ ಕ್ರಮ ವಹಿಸುವುದಿಲ್ಲ. ವಿಚಾರಣೆ ನಡೆಸಿ ಆರೋಪಕ್ಕೆ ಪ್ರತಿಕ್ರಿಯೆ ನೀಡಲು ಅಧಿಕಾರಿಗಳಿಗೆ ಅವಕಾಶವನ್ನು ನೀಡಲಾಗುವುದು. ಸುಳ್ಳು ದೂರು ನೀಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಸಿದರು.


ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಜಿಲ್ಲಾಧಿಕಾರಿ ಜಿ. ಜಗದೀಶ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಸ್. ಲತಾ ಕುಮಾರಿ, ಬೆಂಗಳೂರು ನಗರ ಈಶಾನ್ಯ ವಿಭಾಗದ ಉಪ ಪೊಲೀಸ್ ಆಯುಕ್ತರಾದ ಸಜೀತ್ ವಿ.ಜೆ, ಯಲಹಂಕ ವಲಯದ ಬಿಬಿಎಂಪಿ ವಲಯ ಆಯುಕ್ತ ಕರೀಗೌಡ ಸೇರಿ ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗಿಯಾಗಿದ್ದರು. ನೂರಾರು ಮಂದಿ ಅಹವಾಲುಗಳನ್ನು ಸಲ್ಲಿಸಿದರು.

'ಸಾರ್ವಜನಿಕ ಆಡಳಿತದಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಪಾತ್ರ ಮತ್ತು ಕರ್ನಾಟಕ ಲೋಕಾಯುಕ್ತ ಕಾಯ್ದೆ–1984' ಕುರಿತು ಉಪನ್ಯಾಸ ಆಯೋಜಿಸಲಾಗಿತ್ತು. ಶುಕ್ರವಾರವೂ ಅಹವಾಲು ಸ್ವೀಕರಿಸಲಾಗುತ್ತದೆ.

ಕನ್ನಡ ಪುಸ್ತಕ ಹಬ್ಬಕ್ಕೆ ಚಾಲನೆ ನೀಡಿದ ಆದಿಚುಂಚನಗಿರಿ ಶ್ರೀ

ಪುಸ್ತಕ ಓದುವ ಸಂಸ್ಕಾರ ಕಲಿಸಿ

ಪ್ರಜಾವಾಣಿ ವಾರ್ತೆ



ನಗರದಲ್ಲಿ ಶನಿವಾರ 'ರಾಷ್ಟ್ರೋತ್ಥಾನ ಸಾಹಿತ್ಯ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ, ಸಾಹಿತಿ ಚಂದ್ರಶೇಖರ್ ಕಂಬಾರ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಮತ್ತು ಎಂ.ಪಿ ಕುಮಾರ್ ಪುಸ್ತಕಗಳನ್ನು ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಉತ್ತಮ ಪುಸ್ತಕಗಳನ್ನು ಓದುವುದರಿಂದ ಜ್ಞಾನ ವೃದ್ಧಿಯಾಗುತ್ತದೆ. ಹಾಗಾಗಿ ಪೋಷಕರು ಮಕ್ಕಳಿಗೆ ಪುಸ್ತಕಗಳನ್ನು ಓದುವ ಸಂಸ್ಕಾರ ಕಲಿಸಬೇಕು ಎಂದು ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದ ನಾಥ ಸ್ವಾಮೀಜಿ ಸಲಹೆ ನೀಡಿದರು.

ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ ಶನಿವಾರ ಆಯೋಜಿಸಿದ್ದ ಕನ್ನಡ ಪುಸ್ತಕ ಹಬ್ಬಕ್ಕೆ ಚಾಲನೆ ನೀಡಿ ಮಾತನಾಡಿದರು.

'ಸಾಹಿತ್ಯದ ಹೆಸರಿನಲ್ಲಿ ಬರೆದಿರುವ ಎಲ್ಲ ಪುಸ್ತಕಗಳನ್ನು ಓದುತ್ತಾ ಹೋದರೆ ನಮ್ಮ ಪ್ರಜ್ಞೆ ಕುಸಿಯುತ್ತದೆ. ಕೆಲವು ಪುಸ್ತಕಗಳನ್ನು ಕೈ ತೊಳೆದುಕೊಂಡು ಓದಬೇಕು. ಇನ್ನು ಕೆಲವು ಪುಸ್ತಕಗಳನ್ನು ಓದಿದ ಬಳಿಕ ಕೈ ಮತ್ತು ಮನಸ್ಸು ತೊಳೆದುಕೊಳ್ಳಬೇಕು. ಒಳ್ಳೆಯ ಸಾಹಿತಿಗಳು ಬರೆದಿರುವ ಪುಸ್ತಕ ಓದಿದರೆ ಮನಸ್ಸು ಮತ್ತು ಜ್ಞಾನ ವೃದ್ಧಿಯಾಗುತ್ತದೆ' ಎಂದು ಹೇಳಿದರು.

'ಮಾತೃಭಾಷೆಯ ಸಾಹಿತ್ಯ ಓದಿದರೆ ವ್ಯಕ್ತಿಯ ಮನಸ್ಸು ಮತ್ತು ಬುದ್ಧಿ ವಿಕಸನವಾಗುತ್ತದೆ. ಜಗತ್ತಿನ ಇತಿಹಾಸ ಬದಲಿಸಿದ ವ್ಯಕ್ತಿಗಳ ಜೀವನ ಚರಿತ್ರೆ ಓದಿದರೆ ಪುಸ್ತಕಗಳ ಮಹತ್ವ ಏನು ಎಂಬುದು ಗೊತ್ತಾಗುತ್ತದೆ' ಎಂದರು.

'ನಾಲ್ಕನೇ ಕೈಗಾರಿಕಾ ಕ್ರಾಂತಿಗೆ ಕೃತಕ ಬುದ್ಧಿಮತ್ತೆ (ಎಐ) ಕಾರಣ ಆಗಬಹುದು. ರೊಬೋಟ್ ಹೇಳುವ ಭಾಷೆ ಕೇಳಿದರೆ ಭಯವಾಗುತ್ತದೆ. ಕೃತಕ ಬುದ್ಧಿಮತ್ತೆ ಮೇಲೆ ಸಂಪೂರ್ಣ ಅವಲಂಬಿತರಾದರೆ ಸೃಜನಶೀಲತೆ ಹಾಳಾಗಿ ಅಸ್ತಿತ್ವವೇ ಇರುವುದಿಲ್ಲ' ಎಂದು ಎಚ್ಚರಿಸಿದರು.

ಸಾಹಿತಿ ಚಂದ್ರಶೇಖರ ಕಂಬಾರ ಮಾತನಾಡಿ, 'ದೇಶ, ವಿದೇಶಗಳಲ್ಲಿ ಕನ್ನಡ ಭಾಷೆಯ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದೇನೆ. ಸಭೆ, ಸಮಾರಂಭ ಹಾಗೂ ಇತರೆ ಕಾರ್ಯಕ್ರಮದ ನೆಪದಲ್ಲಿ ಕನ್ನಡ ನೆನಪು ಮಾಡಿಕೊಳ್ಳುತ್ತೇವೆ' ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಮಾತನಾಡಿ, ಏಳು ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ ಸದಸ್ಯತ್ವ ಪಡೆಯುವುದರ ಜೊತೆಗೆ ಮಂಡ್ಯದಲ್ಲಿ ಡಿ.20 ರಿಂದ 23ರವರೆಗೆ ನಡೆಯುವ ಸಮ್ಮೇಳನದಲ್ಲಿ ಎಲ್ಲರೂ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ.ಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ಕನ್ನಡ ಪುಸ್ತಕಗಳಿಗೆ ಶೇ 50ರವರೆಗೆ ರಿಯಾಯಿತಿ

ಡಿಸೆಂಬರ್ 1ರವರೆಗೆ ನಡೆಯಲಿರುವ ಪುಸ್ತಕ ಹಬ್ಬದಲ್ಲಿ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟವಿರುತ್ತದೆ. ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಕಟಣೆಗಳ ಜೊತೆಗೆ, ಕನ್ನಡದ ಪ್ರಮುಖ ಲೇಖಕರ ಕೃತಿಗಳೂ ರಿಯಾಯಿತಿ ದರದಲ್ಲಿ ದೊರೆಯಲಿವೆ. ಶೇಕಡ 10 ರಿಂದ 50ರವರೆಗೂ ರಿಯಾಯಿತಿ ಇದೆ. ಕಳೆದ ವರ್ಷ 49 ಸಾವಿರ ಪುಸ್ತಕ ಮಾರಾಟವಾಗಿದ್ದವು ಎಂದು ಆಯೋಜಕರು ತಿಳಿಸಿದರು.

14 ಸಾವಿರ ಗುಂಡಿ ಮುಚ್ಚಲಾಗಿದೆ: ಸಿದ್ದರಾಮಯ್ಯ • ₹2,000 ಕೋಟಿ ನೆರವು ನೀಡಲು ವಿಶ್ವಸಂಸ್ಥೆ ಒಪ್ಪಿಗೆ

‘ರಾಜಕಾಲುವೆ ಅತಿಕ್ರಮಣ ತೆರವಿಗೆ ಕ್ರಮ’

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ರಾಜಕಾಲುವೆಗಳ ಅತಿಕ್ರಮಣ ತೆರವು ಕಾರ್ಯವನ್ನು ಆದ್ಯತೆ ಮೇರೆಗೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

‘ಮಳೆಯಿಂದ ಹಾನಿಗೀಡಾಗಿರುವ ರಸ್ತೆಗಳ ದುರಸ್ತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ 14 ಸಾವಿರ ಗುಂಡಿ ಮುಚ್ಚಿದ್ದೇವೆ. ಮುಚ್ಚಿದ ಬಳಿಕ ಮತ್ತಷ್ಟು ಮಳೆ ಬಂದಿದ್ದರಿಂದ ಮತ್ತೆ ಗುಂಡಿ ಬಿದ್ದಿವೆ. ಅವನ್ನೂ ಮುಚ್ಚಲು ಸೂಚನೆ ನೀಡಲಾಗಿದೆ’ ಎಂದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಈ ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ಎಲ್ಲ ರಾಜಕಾಲುವೆಗಳ ಒತ್ತುವರಿ ತೆರವು, ತಡೆಗೋಡೆ ನಿರ್ಮಾಣಕ್ಕೆ ಆದೇಶ ನೀಡಿದ್ದೆ. ಆದರೆ, ಈ ಕಾರ್ಯ ಇನ್ನೂ ಪೂರ್ಣಗೊಳ್ಳದ ಕಾರಣ ಪ್ರತಿವರ್ಷ ಮಳೆ ಬಂದ ತಕ್ಷಣ ಅನಾಹುತಗಳು ಸಂಭವಿಸುತ್ತಿವೆ’ ಎಂದರು.

‘ಅಕ್ಟೋಬರ್ ನಲ್ಲಿ ಈವರೆಗೆ 275 ಮಿ.ಮೀ. ಮಳೆಯಾಗಿದ್ದು, 2005ರಲ್ಲಿ ಇದೇ ಅವಧಿಯಲ್ಲಿ 407 ಮೀ.ಮೀ. ಮಳೆ ಆಗಿತ್ತು’ ಎಂದರು.

‘ಬೆಂಗಳೂರು ನಗರದಲ್ಲಿ ಬಾಕಿ ಇರುವ 173 ಕಿ.ಮೀ ರಾಜಕಾಲುವೆ ನಿರ್ಮಾಣ ಮಾಡಲು ₹2,000 ಕೋಟಿ ನೆರವು ನೀಡಲು ವಿಶ್ವಸಂಸ್ಥೆ ಒಪ್ಪಿಕೊಂಡಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಯೋಜನಾ ವರದಿಗೆ ಒಪ್ಪಿಗೆ ಪಡೆಯಲಾಗುವುದು. ಟೆಂಡರ್ ಪ್ರಕ್ರಿಯೆಯನ್ನು ಆದಷ್ಟು ಶೀಘ್ರ ಪೂರ್ಣಗೊಳಿಸಿ ಮುಂದಿನ ವರ್ಷದ ಆರಂಭದ ಒಳಗಾಗಿ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ಅತಿವೃಷ್ಟಿ ನಿರ್ವಹಣೆಗೆ ಎಂಟು ವಲಯಗಳ ನಿಯಂತ್ರಣ ಕೊಠಡಿಗಳ ಜೊತೆಗೆ 63 ಉಪ ವಿಭಾಗಗಳಲ್ಲಿ ಹೆಚ್ಚುವರಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ. ರಾಷ್ಟ್ರೀಯ ನೈಸರ್ಗಿಕ ವಿಕೋಪ ನಿರ್ವಹಣಾ ಪ್ರಾಧಿಕಾರ ವತಿಯಿಂದ ರಾಜಕಾಲುವೆಗಳ ಕಿರು ಸೇತುವೆಗಳ ವಿಸ್ತರಣೆ ಮತ್ತು ಕೆರೆಗಳ ಅಭಿವೃದ್ಧಿಗೆ ₹275 ಕೋಟಿ ಕ್ರಿಯಾ ಯೋಜನೆ ಅನುಮೋದನೆ ನೀಡಲಾಗಿದೆ. ಕೆರೆಗಳಿಗೆ ₹50 ಕೋಟಿ ವೆಚ್ಚದಲ್ಲಿ ತುರ್ತು ತೂಬುಗಾಲುವೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳ ಅಭಿವೃದ್ಧಿಗಾಗಿ ₹ 669 ಕೋಟಿ ಪ್ರಸ್ತಾವ ಸಿದ್ಧಪಡಿಸಲಾಗಿದೆ’ ಎಂದರು.

‘ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ ಅಡಿಯಲ್ಲಿ ₹175 ಕೋಟಿ ವೆಚ್ಚದಲ್ಲಿ ಕೆರೆಗಳ ಅಭಿವೃದ್ಧಿಗೆ ಟೆಂಡರ್ ಕರೆಯಲು ಸೂಚನೆ ನೀಡಲಾಗಿದೆ. ತೂಬು ಕಾಲುವೆಗೆ ₹85 ಕೋಟಿ, ಬೆಂಗಳೂರು ನಗರ ರಸ್ತೆ ನಿರ್ಮಾಣಕ್ಕೆ ₹165 ಕೋಟಿ ಪ್ರಸ್ತಾವ ಸಿದ್ಧಪಡಿಸಲಾಗಿದೆ’ ಎಂದರು.

ಅಕ್ರಮ, ಕಳಪೆ ಗುಣಮಟ್ಟದ ಕಟ್ಟಡ ತೆರವು– ಡಿಕೆಶಿ



ಡಿ.ಕೆ. ಶಿವಕುಮಾರ್

ಬೆಂಗಳೂರು: ‘ಕಳಪೆ ಗುಣಮಟ್ಟದ ಮತ್ತು ಅಕ್ರಮವಾಗಿ ನಿರ್ಮಿಸುತ್ತಿರುವ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯ ಮುಂದುವರಿಯಲಿದೆ’ ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಅಕ್ರಮ ಕಟ್ಟಡ ನಿರ್ಮಾಣ ತಡೆಯಲು ಅಧಿಕಾರಿಗಳಿಗೆ ನೀಡಿದ್ದ ಅಧಿಕಾರವನ್ನು ಹಿಂದಿನ ಸರ್ಕಾರ ಮೊಟಕುಗೊಳಿಸಿತ್ತು. ಆದರೆ, ನಾವು ಅಕ್ರಮ ಕಟ್ಟಡ ನಿರ್ಮಾಣ ತಡೆಯಲು ಬಿಬಿಎಂಪಿ, ಬಿಡಿಎ, ಬಿಎಂಆರ್‌ಡಿಎ ಅಧಿಕಾರಿಗಳಿಗೆ ಅಧಿಕಾರ ನೀಡಿದ್ದೇವೆ’ ಎಂದರು.

‘ಅಕ್ರಮ ಆಸ್ತಿಗಳ ನೋಂದಣಿಯನ್ನೂ ತಕ್ಷಣ ನಿಲ್ಲಿಸಲಾಗುವುದು. ಇದೇ ವೇಳೆ ಒತ್ತುವರಿ ತೆರವುಗೊಳಿಸುವ ಬಗ್ಗೆಯೂ ಗಮನಹರಿಸಲಾಗುವುದು’ ಎಂದು ಹೇಳಿದರು.

ಬೆಂಗಳೂರು ನಗರದಲ್ಲಿ ಮಳೆಯಿಂದ ಆಗಿರುವ ಸಮಸ್ಯೆಗಳ ಬಗ್ಗೆ ವಿರೋಧ ಪಕ್ಷಗಳು ಟೀಕಿಸುತ್ತಿರುವ ಬಗ್ಗೆ ಕೇಳಿದಾಗ, ‘ಬೆಂಗಳೂರು ನಗರದಲ್ಲಿ ಕೆರೆಯಲ್ಲಿ ಇಬ್ಬರು ಮಕ್ಕಳು ಮುಳುಗಿ ಸಾವಿಗೀಡಾಗಿದ್ದಾರೆ. ಉಳಿದಂತೆ, ಕಳಪೆಮಟ್ಟದ ಕಟ್ಟಡ ಕುಸಿತದ ಹೊರತಾಗಿ ಮಳೆಯಿಂದ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ’ ಎಂದು ತಿಳಿಸಿದರು.

‘ಮಳೆಯಿಂದ ಹಾನಿಗೆ ಒಳಗಾಗುವ ಪ್ರದೇಶಗಳಲ್ಲಿನ ಜನರನ್ನು ಹೋಟೆಲ್‌ಗಳಿಗೆ ಸ್ಥಳಾಂತರಿಸಿ, ಅವರಿಗೆ ಊಟ ಸೇರಿದಂತೆ ಎಲ್ಲ ವ್ಯವಸ್ಥೆ ಮಾಡಲಾಗಿದೆ. ಅಧಿಕಾರಿಗಳು ದಿನದ 24 ತಾಸು ಕೆಲಸ ಮಾಡಿದ್ದಾರೆ’ ಎಂದರು.

‘ಮಳೆಯಿಂದ ಉಂಟಾಗುವ ಸಮಸ್ಯೆಗಳ ನಿವಾರಣೆಗೆ ಶಾಶ್ವತ ಪರಿಹಾರ ಏನು’ ಎಂಬ ಪ್ರಶ್ನೆಗೆ, ‘ಒಂದೇ ಬಾರಿಗೆ ಮಳೆನೀರುಗಾಲುವೆ ನಿರ್ಮಾಣ ಮಾಡುತ್ತಿದ್ದೇವೆ. ರಾಜಕಾಲುವೆ ಅಕ್ಕಪಕ್ಕ 50 ಅಡಿ ಜಾಗ ಬಿಟ್ಟು ರಸ್ತೆ ನಿರ್ಮಿಸಲು ನಿರ್ಧರಿಸಿದ್ದೇವೆ. ಹೀಗೆ ರಸ್ತೆ ನಿರ್ಮಿಸುವುದರಿಂದ ಕಟ್ಟಡಗಳಿಗೂ ರಕ್ಷಣೆ ಸಿಗಲಿದೆ. ಅಲ್ಲದೆ, ಕಾಲುವೆಗಳ ಸ್ವಚ್ಛತೆಗೂ ನೆರವಾಗಲಿದೆ. ಮೊದಲ ಹಂತದಲ್ಲಿ 300 ಕಿ.ಮೀ. ಉದ್ದದ ರಸ್ತೆ ನಿರ್ಮಿಸಲಾಗುವುದು’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಕಾವೇರಿ ನೀರಿಗಾಗಿ ಮಧ್ಯವರ್ತಿಗಳು ಹಣ ಪಡೆದರೆ ಕ್ರಮ: ಜಲಮಂಡಳಿ

ಬೆಂಗಳೂರು: ಕಾವೇರಿ ನೀರಿನ ಸಂಪರ್ಕ ನೀಡಲು ಜಲಮಂಡಳಿ ಹೆಸರು ದುರಪಯೋಗಪಡಿಸಿಕೊಳ್ಳುವ ಹಾಗೂ ನಿಯಮ ಬಾಹಿರವಾಗಿ ಹೆಚ್ಚಿನ ಹಣ ಕೇಳುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಎಚ್ಚರಿಕೆ ನೀಡಿದ್ದಾರೆ.

ಕಾವೇರಿ ನೀರಿನ ಸಂಪರ್ಕ ಪಡೆಯುವ ಪ್ರಕ್ರಿಯೆ ಬಹಳ ಸುಲಭವಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದಲ್ಲಿ ಸಂಬಂಧಪಟ್ಟ ವಿಭಾಗದ ಅಧಿಕಾರಿಗಳು ಮುಂದಿನ ಕ್ರಮ ವಹಿಸಲಿದ್ದಾರೆ. ಹೊಸ ಸಂಪರ್ಕ ಪಡೆಯಲು ಮನೆಗಳಿಗೆ, ಅಪಾರ್ಟ್‌ಮೆಂಟ್‌ಗಳಿಗೆ, ವಾಣಿಜ್ಯ ಕಟ್ಟಡಗಳಿಗೆ ನಿಯಮಗಳ ಪ್ರಕಾರ ಹಣ ನಿಗದಿಪಡಿಸಿ ಡಿಮ್ಯಾಂಡ್ ನೋಟಿಸ್ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಕಾವೇರಿ ಸಂಪರ್ಕ ನೀಡಲು ನಿಯಮಬಾಹಿರವಾಗಿ ಹಣ ಕೇಳುವ, ಬಿಡಬ್ಲ್ಯುಎಸ್‌ಎಸ್‌ಬಿ ಹೆಸರು ಹೇಳಿಕೊಂಡು ಬರುವ ಮಧ್ಯವರ್ತಿಗಳಾಗಲಿ, ಜಲಮಂಡಳಿ ಸಿಬ್ಬಂದಿ ಅಥವಾ ಅಸೋಷಿಯೇಷನ್ ಸದಸ್ಯರು ಹಾಗೂ ಮಧ್ಯವರ್ತಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು. ಇಂತಹ ಪ್ರಕರಣಗಳನ್ನು ಕ್ಷಿಪ್ರ ರೀತಿಯಲ್ಲಿ ತನಿಖೆ ಮಾಡಿ ಪರಿಹಾರ ನೀಡಲು ಜಲಮಂಡಳಿಯ ಮುಖ್ಯ ಆಡಳಿತಾಧಿಕಾರಿ ನೇತೃತ್ವದಲ್ಲಿ ವಿಜಿಲೆನ್ಸ್ ತಂಡ ರಚಿಸಲಾಗಿದೆ. ಸಾರ್ವಜನಿಕರು bwssbvigilance@gmail.com ಗೆ ಅಗತ್ಯ ಮಾಹಿತಿಯ ಮೂಲಕ ದೂರು ನೀಡಬೇಕು. ದೂರುದಾರರ ಗುರುತು ಗೋಪ್ಯವಾಗಿ ಇಡಲಾಗುವುದು. ದೂರು ಬಂದ 24 ಗಂಟೆಯ ಒಳಗಾಗಿ ವಿಜಿಲೆನ್ಸ್ ತಂಡ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ.

ಹಬ್ಬಕ್ಕೆ 2,000 ವಿಶೇಷ ಬಸ್

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವ, ದೀಪಾವಳಿ ಮತ್ತು ವಾರಾಂತ್ಯದ ದಿನಗಳು ಒಟ್ಟೊಟ್ಟಿಗೆ ಬಂದಿವೆ. ಹೀಗಾಗಿ ಊರಿಗೆ, ಪ್ರವಾಸಕ್ಕೆ ಹೋಗುವವರ ಸಂಖ್ಯೆ ಹೆಚ್ಚಲಿರುವುದರಿಂದ ಕೆಎಸ್‌ಆರ್‌ಟಿಸಿ 2000 ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ. ಅ.30ರಿಂದ ನ.2ರವರೆಗೆ ನಾಲ್ಕು ದಿನ ಬೆಂಗಳೂರಿನಿಂದ ವಿವಿಧ ಪ್ರದೇಶಗಳಿಗೆ ಹಾಗೂ ನ.3 ಮತ್ತು 4ರಂದು ವಿವಿಧೆಡೆಯಿಂದ ಬೆಂಗಳೂರಿಗೆ ವಿಶೇಷ ಸಾರಿಗೆ ಇರಲಿದೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣಗಳಿಂದ ಬಸ್‌ಗಳು ಸಂಚರಿಸಲಿವೆ. ಸಾರ್ವಜನಿಕರ ಅನುಕೂಲಕ್ಕಾಗಿ ಹೆಚ್ಚುವರಿ ಸಾರಿಗೆಗಳಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಮುಂಗಡ ಕಾಯ್ದಿರಿಸಲಾಗಿರುವ ಟಿಕೆಟ್‌ಗಳ ಮೇಲೆ ನಮೂದಿಸಲಾಗಿರುವ ಬಸ್ ನಿಲ್ದಾಣ, ಪಿಕ್‌ಅಪ್ ಪಾಯಿಂಟ್ ಮಾಹಿತಿಯನ್ನು ಗಮನಿಸುವಂತೆ ಕೋರಲಾಗಿದೆ.

ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಕಾಯ್ದಿರಿಸಿದಲ್ಲಿ ಶೇ 5 ರಿಯಾಯಿತಿ ಸಿಗಲಿದೆ. ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟ್ ಒಟ್ಟಿಗೆ ಕಾಯ್ದಿರಿಸಿದರೆ ವಾಪಸ್ಸಾಗುವ ದರದಲ್ಲಿ ಶೇ 10 ರಿಯಾಯಿತಿ ದೊರೆಯಲಿದೆ ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

‘27 ವಿಧಾನಸಭಾ ಕ್ಷೇತ್ರ: ₹265 ಕೋಟಿ ಬಿಡುಗಡೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಜಯನಗರ ವಿಧಾನ ಸಭೆ ಕ್ಷೇತ್ರ ಹೊರತುಪಡಿಸಿ, ಉಳಿದ 27 ವಿಧಾನಸಭೆ ಕ್ಷೇತ್ರಗಳಿಗೆ ಬೆಂಗಳೂರು ಅಭಿವೃದ್ಧಿ ಸಚಿವರ ವಿವೇಚನಾ ಅನುದಾನದಲ್ಲಿ ₹265 ಕೋಟಿ ಬಿಡುಗಡೆ ಮಾಡಲಾಗಿದೆ.

ಉಪ ಮುಖ್ಯಮಂತ್ರಿಯೂ ಆಗಿರುವ ಡಿ.ಕೆ.ಶಿವಕುಮಾರ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಅಕ್ಟೋಬರ್ 25ರಂದು ಪತ್ರ ಬರೆದು, 2024-25 ನೇ ಸಾಲಿನ ಆಯವ್ಯಯದಡಿ ಅನುದಾನ ಬಿಡುಗಡೆ ಮಾಡಲು ಸೂಚಿಸಿದ್ದಾರೆ.

ಆನೇಕಲ್ ವಿಧಾನಸಭೆ ಕ್ಷೇತ್ರಕ್ಕೆ ₹ 5 ಕೋಟಿ ಬಿಡುಗಡೆ ಮಾಡಲಾಗಿದೆ. ಉಳಿದ 26 ವಿಧಾನಸಭೆ ಕ್ಷೇತ್ರಗಳಿಗೆ ತಲಾ ₹10 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಡಿಸಿಎಂ ಸೂಚಿಸಿದ್ದಾರೆ.



ಮಳೆ: 2 ಮನೆ ಕುಸಿತ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಎರಡು ದಿನದ ಹಿಂದೆ ಸುರಿದ ಜೋರು ಮಳೆಗೆ ಬಂಗಾರಪ್ಪ ನಗರದಲ್ಲಿ ಎರಡು ಮನೆಗಳು ಕುಸಿದು ಬಿದ್ದಿದ್ದು, ಸ್ಥಳಕ್ಕೆ ಬಿಬಿಎಂಪಿ ಉಪ ಆಯುಕ್ತ ಅಬ್ದುಲ್ ರಬ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮನೆಗಳನ್ನು ಕಳೆದುಕೊಂಡ ಶಿವಮ್ಮ ಮತ್ತು ಪದ್ಮ ಅವರಿಗೆ ಸಾಂತ್ವನ ಹೇಳಿ, ಸರ್ಕಾರದಿಂದ ಪರಿಹಾರ ಕೊಡಿಸುವ ಭರವಸೆ ನೀಡಿದರು. ನಂತರ ಮಾತನಾಡಿ, ಮಳೆಯಿಂದ ಹಾನಿಯಾಗಿರುವ ಕುಟುಂಬಗಳಿಗೆ ಬಿಬಿಎಂಪಿಯಿಂದ ಪರಿಹಾರ ಹಾಗೂ ಹೊಸದಾಗಿ ಮನೆಗಳನ್ನು ಮಂಜೂರು ಮಾಡಿಸಿ ಕೊಡಲಾಗುವುದು ಎಂದು ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಮಾಜಿ ಪ್ರಧಾನ ಕಾರ್ಯದರ್ಶಿ ಶಿವನಂಜ ಕುಮಾರ್ ಮಾತನಾಡಿ, ‘ಮನೆ ಕಳೆದುಕೊಂಡ ಸಂತ್ರಸ್ತರಿಗೆ ಕಾನೂನು ಪ್ರಕಾರ ಸಿಗಬೇಕಾದ ಎಲ್ಲಾ ಸವಲತ್ತುಗಳನ್ನು ದೊರಕಿಸಿಕೊಡಲಾಗುವುದು’ ಎಂದರು. ಸಹಾಯಕ ಕಂದಾಯ ಅಧಿಕಾರಿ ಸುರೇಶ್, ಕಂದಾಯ ಅಧಿಕಾರಿ ಗಣೇಶ್. ಸಹಾಯಕ ಎಂಜಿನಿಯರ್ ಅಮಿತ್ ಇದ್ದರು.

1.66 ಲಕ್ಷ ಮತದಾರರಲ್ಲಿ ಒಂದಕ್ಕಿಂತ ಹೆಚ್ಚು ಎಪಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ 1.66 ಲಕ್ಷ ಮತದಾರರು ಒಂದಕ್ಕಿಂತ ಹೆಚ್ಚು ಮತದಾರರ ಗುರುತಿನ ಚೀಟಿ (ಎಪಿಕ್) ಹೊಂದಿರುವುದು ಪರಿಶೀಲನೆಯಿಂದ ಪತ್ತೆಯಾಗಿದೆ.

ಎಪಿಕ್‌ನಲ್ಲಿರುವ ಭಾವಚಿತ್ರ, ಹೆಸರು, ತಂದೆಯ ಹೆಸರಿನ ಮೂಲಕ ರಾಜ್ಯದ 224 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯ ಮತದಾರರ ಪಟ್ಟಿಯನ್ನು ಪರಿಶೀಲಿಸಿದಾಗ ಒಂದಕ್ಕಿಂತ ಹೆಚ್ಚು ಬಾರಿ ಹೆಸರು ಹೊಂದಿರುವುದು ಕಂಡುಬಂದಿದೆ.

ಬಿಬಿಎಂಪಿಯ 28 ವಿಧಾನಸಭೆ ಕ್ಷೇತ್ರಗಳಲ್ಲಿ ಒಂದೇ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲೇ 3,885 ಹೆಸರು ಒಂದಕ್ಕಿಂತ ಹೆಚ್ಚು ಬಾರಿ ಮತಪಟ್ಟಿಯಲ್ಲಿದೆ. 7,973 ಮಂದಿಯ ಹೆಸರು ಪಾಲಿಕೆಯ ವ್ಯಾಪ್ತಿಯಲ್ಲೇ ಒಂದಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿಯಲ್ಲಿರುವುದು ಕಂಡುಬಂದಿದೆ. ಬಿಬಿಎಂಪಿ ವ್ಯಾಪ್ತಿಯ 1,54,226 ಮತದಾರರ ಹೆಸರು ರಾಜ್ಯದ ಇತರೆ ವಿಧಾನಸಭೆ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಇದೆ ಎಂಬುದನ್ನು ಗುರುತಿಸಲಾಗಿದೆ.



28 ವಿಧಾನಸಭೆ ಕ್ಷೇತ್ರಗಳಲ್ಲಿ ಮನೆ ಮನೆಗಳಿಗೆ ತೆರಳಿ ಮತದಾರರ ಪರಿಶೀಲನೆ ನಡೆಸಿದಾಗ, 41,876 ಮತದಾರರು ಅವರು ನೀಡಿದ್ದ ವಿಳಾಸದಲ್ಲಿ ಇರಲಿಲ್ಲ. 22,382 ಮತದಾರರು ಆ ವಿಳಾಸದಿಂದ ಬೇರೆಡೆಗೆ ಹೋಗಿದ್ದರು. 12,817 ಮಂದಿ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿತು. 5,524 ಮತದಾರರ ಭಾವಚಿತ್ರ ಮಸುಕಾಗಿರುವುದು ಕಂಡುಬಂದಿತು ಎಂದು ಬಿಬಿಎಂಪಿ ಚುನಾವಣೆ ವಿಭಾಗದ ಸಹಾಯಕ ಆಯುಕ್ತ ಶರಣಪ್ಪ ಅವರು ಮಾಹಿತಿ ನೀಡಿದರು.

10 ಮತಗಟ್ಟೆ ಕಡಿಮೆ: ಕೇಂದ್ರ ಚುನಾವಣೆ ಆಯೋಗದ ನಿರ್ದೇಶನದಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಮತಗಟ್ಟೆ ಗಳ ಪುನರ್‌ವಿಂಗಡಣೆ ಕಾರ್ಯ ಪೂರ್ಣಗೊಳಿಸಲಾಗಿದೆ. 8,982 ಮತಗಟ್ಟೆಗಳಿದ್ದು, ಪುನರ್‌ವಿಂಗಡಣೆಯಿಂದ 8,972 ಮತಗಟ್ಟೆಗಳನ್ನು ನಿಗದಿಪಡಿಸಲಾಗಿದೆ ಎಂದು ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ಸೆಲ್ವಮಣಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಮತದಾರರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಪುನರ್‌ವಿಂಗಡಣೆ ಕಾರ್ಯ ಕೈಗೊಳ್ಳಲಾಗಿತ್ತು. ಮತದಾರರ ನಿವಾಸದಿಂದ ಯಾವ ಮತಗಟ್ಟೆಯೂ ಎರಡು ಕಿ.ಮೀ ದೂರದಲ್ಲಿಲ್ಲದಂತೆ ನಿರ್ವಹಿಸಲಾಗಿದೆ. ಒಂದು ಮತಗಟ್ಟೆ ಮಾತ್ರ 1,500 ಮತದಾರರನ್ನು ಹೊಂದಿದೆ. 11 ಮತಗಟ್ಟೆಗಳನ್ನು ಸಮೀಪದ ಮತಗಟ್ಟೆಗಳೊಂದಿಗೆ ವಿಲೀನಗೊಳಿಸಲಾಗಿದೆ ಎಂದು ಹೇಳಿದರು.

ಎಚ್‌ಎಂಟಿ ಜಮೀನು ಮರುವಶದ ವಿರುದ್ಧ ಹೋರಾಟ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್‌ಎಂಟಿ ಸಂಸ್ಥೆಗೆ ಸೇರಿದ ಐದು ಎಕರೆ ಜಮೀನನ್ನು ಅರಣ್ಯ ಇಲಾಖೆ ಮರುವಶ ಮಾಡಿಕೊಂಡಿರುವುದರ ವಿರುದ್ಧ ಕಾನೂನು ಹೋರಾಟ ನಡೆಸುತ್ತೇವೆ’ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು ಹೇಳಿದರು.

ನಗರದ ಜಾಲಹಳ್ಳಿ–ಪೀಣ್ಯ ಗ್ರಾಮಗಳ ವ್ಯಾಪ್ತಿಯಲ್ಲಿರುವ ಎಚ್‌ಎಂಟಿ ಕ್ಯಾಂಪಸ್‌ನ ಐದು ಎಕರೆ ಅರಣ್ಯ ಜಮೀನನ್ನು ಅರಣ್ಯ ಇಲಾಖೆ ಶುಕ್ರವಾರ ಮರುವಶಕ್ಕೆ ಪಡೆದಿತ್ತು. ಅದರಲ್ಲಿನ ಕೆಲ ಸಣ್ಣ–ಪುಟ್ಟ ಒತ್ತುವರಿಗಳನ್ನು ತೆರವು ಮಾಡಿ, ‘ಪೀಣ್ಯ ಪ್ಲಾಂಟೇಷನ್’ ಎಂದು ಫಲಕ ಹಾಕಿತ್ತು.

ಸುದ್ದಿಗಾರರ ಪ್ರಶ್ನೆಗೆ ಅವರು, ‘ಎಚ್‌ಎಂಟಿ ಜಮೀನಿಗೆ ಸಂಬಂಧಿಸಿದ ಕೆಲ ಅರ್ಜಿಗಳು ಕೋರ್ಟ್‌ನಲ್ಲಿದೆ. ಐದು ಎಕರೆ ಜಮೀನನ್ನು ಬಲವಂತವಾಗಿ ವಶಕ್ಕೆ ಪಡೆದು, ಬೇಲಿ ಹಾಕಿದ್ದಾರೆ. ಇದನ್ನು ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ’ ಎಂದರು.

‘ನ್ಯಾಯಾಲಯದ ಆದೇಶವಿದೆ ಎಂದು ಅರಣ್ಯ ಇಲಾಖೆಯು ಹೇಳಿದೆ. ಅಂತಹ ಆದೇಶಗಳಿಗೆ ಎಚ್‌ಎಂಟಿ ಮತ್ತು ಅಧಿಕಾರಿಗಳು ತಲೆಬಾಗಲೇಬೇಕಾಗುತ್ತದೆ. ಮುಂದಿನ ನಡೆ ಏನಿರಬೇಕು ಎಂಬುದನ್ನು ಪರಿಶೀಲಿಸುತ್ತೇವೆ’ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಎಚ್‌ಎಂಟಿ ಕ್ಯಾಂಪಸ್‌ನಲ್ಲಿ ಬಳಕೆ ಮಾಡದ ಅರಣ್ಯ ಪ್ರದೇಶವನ್ನು ವಾಪಸ್ ಪಡೆದು, ಅಲ್ಲಿ ಕಬ್ಬನ್ ಉದ್ಯಾನ ಮತ್ತು ಲಾಲ್‌ಬಾಗ್‌ನಂತಹ ವೃಕ್ಷೋದ್ಯಾನ ನಿರ್ಮಿಸುವುದಾಗಿ ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದರು.

ಎಚ್‌ಎಂಟಿ ವಶದಲ್ಲಿರುವ ಯಾವ ಪ್ರದೇಶವನ್ನೂ ಬಿಟ್ಟುಕೊಡುವುದಿಲ್ಲ ಎಂದು ಕುಮಾರಸ್ವಾಮಿ ಅವರೂ ಪ್ರತಿಪಾದಿಸಿದ್ದರು. ಇದರ ಮಧ್ಯೆಯೇ ಅರಣ್ಯ ಇಲಾಖೆಯು, ಅರಣ್ಯ ಜಮೀನು ಮರುವಶ ಕಾರ್ಯಾಚರಣೆ ಆರಂಭಿಸಿದೆ.

‘ಮಾಜಿ ಸ್ಪೀಕರ್‌ರಿಂದ ಅರಣ್ಯ ಜಮೀನು ಲೂಟಿ’

‘ಮಾಜಿ ಸ್ಪೀಕರ್ ಒಬ್ಬರು ಶ್ರೀನಿವಾಸಪುರದಲ್ಲಿ ಅರಣ್ಯ ಜಮೀನನ್ನು ಲೂಟಿ ಹೊಡೆದಿದ್ದಾರೆ. ಅರಣ್ಯ ಸಚಿವ ಖಂಡ್ರೆ ಅವರು ಆ ಒತ್ತುವರಿಯನ್ನು ತೆರವು ಮಾಡುವ ಕೆಲಸ ಮೊದಲು ಮಾಡಲಿ’ ಎಂದು ಕುಮಾರಸ್ವಾಮಿ ಹೇಳಿದರು.

‘ಆ ಒತ್ತುವರಿಗೆ ಸಂಬಂಧಿಸಿದಂತೆ ನ್ಯಾಯಾಲಯ ನೀಡಿರುವ ಆದೇಶವನ್ನು ಕುರ್ಚಿ ಕೆಳಗೆ ಹಾಕಿಕೊಂಡು ಕೂತಿದ್ದಾರೆ. ಆ ಆದೇಶವನ್ನು ಪಾಲಿಸುವ ಕೆಲಸವನ್ನು ಮಾಡಲಿ’ ಎಂದರು.



‘ವಿದ್ಯಾರ್ಥಿಗಳ ಮುಂದಿರುವ ಸವಾಲುಗಳು ಮತ್ತು ಸರಿಯುತ್ತರ’ ಬಗ್ಗೆ ನಗರದ ಪಿಇಎಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದ ತುಮಕೂರು ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ವೀರೇಶಾನಂದ ಸರಸ್ವತಿ ಅವರನ್ನು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ. ಆರ್. ದೊರೆಸ್ವಾಮಿ ಗೌರವಿಸಿದರು

ಎಲೆಕ್ಟ್ರಿಕ್ ವೆಹಿಕಲ್: ಬಿಎಂಟಿಸಿಗೆ 2 ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಿಕ್ ವಾಹನಗಳನ್ನು ಮತ್ತು ಚಾರ್ಜಿಂಗ್ ಪಾಯಿಂಟ್ ಪರಿಚಯಿಸಿದ ಕಾರಣಕ್ಕೆ ಇವಿ ಬಸ್ ಚಾಂಪಿಯನ್ ಪ್ರಶಸ್ತಿ ಹಾಗೂ ಇದರಿಂದ ಮಾಲಿನ್ಯ ಕಡಿಮೆ ಮಾಡಿದ್ದಕ್ಕಾಗಿ ಗ್ರೀನ್ ಫ್ಲೀಟ್ ಎಕ್ಸಲೆನ್ಸ್ ಪ್ರಶಸ್ತಿಯನ್ನು ಬಿಎಂಟಿಸಿ ಪಡೆದಿದೆ.

ಎಲೆಕ್ಟ್ರಿಕ್ ವಾಹನಗಳು (ಇವಿ) ಮತ್ತು ಚಾರ್ಜಿಂಗ್ ಮೂಲಸೌಕರ್ಯ ಕ್ಷೇತ್ರಗಳಲ್ಲಿನ ಅತ್ಯುತ್ತಮ ಸಾಧನೆಗಳನ್ನು ಗುರುತಿಸುವ ಕಾರ್ಯಕ್ರಮದಲ್ಲಿ ಇತ್ತೀಚೆಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಕಾರ್ಯಕ್ರಮ ನಿರ್ದೇಶಕ ಅಭಿಜಿತ್ ಸಿನ್ಹಾ ಅವರು ಪ್ರಶಸ್ತಿ ಪ್ರದಾನ ಮಾಡಿದರು.



ಬಿಎಂಟಿಸಿಗೆ ಇವಿ ಬಸ್ ಚಾಂಪಿಯನ್ ಪ್ರಶಸ್ತಿ ಹಾಗೂ ಗ್ರೀನ್ ಫ್ಲೀಟ್ ಎಕ್ಸಲೆನ್ಸ್ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು

ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ (ಕಾರ್ಯಾಚರಣೆ) ಜಿ.ಟಿ. ಪ್ರಭಾಕರ ರೆಡ್ಡಿ, ಉಪ ಮುಖ್ಯ ಮೆಕ್ಯಾನಿಕಲ್ ಎಂಜಿನಿಯರ್ ಕೆ.ಎಸ್. ಚೈತ್ರಾ, ಸಾರ್ವಜನಿಕ ಸಂಪರ್ಕಾಧಿಕಾರಿ ಸುನೀತಾ ಜೆ. ಬಿಎಂಟಿಸಿ ಪರವಾಗಿ ಪ್ರಶಸ್ತಿ ಸ್ವೀಕಾರ ಮಾಡಿದರು.

ಸಮಾವೇಶದಲ್ಲಿ ರೈತಪರ 13 ನಿರ್ಣಯ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ರಾಜ್ಯ ಸಮ್ಮೇಳನ ಬಳ್ಳಾರಿಯಲ್ಲಿ ಶನಿವಾರ ನಡೆಯಿತು. ಸಮಾವೇಶದಲ್ಲಿ ರೈತಪರ ಒಟ್ಟು 13 ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಎಲ್ಲ ಜಿಲ್ಲೆಗಳಿಗೂ 210 ಕೆ. ವಿ. ವಿದ್ಯುತ್ ಪೂರೈಸಿ, ರೈತರಿಗೆ ನೆರವಾಗಬೇಕು. ಕನಿಷ್ಠ ಬೆಂಬಲ ಬೆಲೆ ಪರಿಷ್ಕರಿಸಿ, ಜಾರಿಗೊಳಿಸಬೇಕು. ಕೈಗಾರಿಕೆ ಉದ್ದೇಶಕ್ಕೆ ಬಳಕೆಯಾಗದ ಭೂಮಿಯನ್ನು ಭೂ ರಹಿತರಿಗೆ ಹಂಚಬೇಕು. ಬಳ್ಳಾರಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಶೀಘ್ರ ಪ್ರಾರಂಭಿಸಬೇಕು. ಚಿಕ್ಕಬಳ್ಳಾಪುರ ಜಿಲ್ಲೆ ಸೇರಿ ಅದರ ಸುತ್ತಮುತ್ತಲ ಪ್ರದೇಶದಲ್ಲಿ ಬೆಳೆಯುವ ದ್ರಾಕ್ಷಿ, ಚಕೋತ, ಸೀಬೆ ಮುಂತಾದ ಹಣ್ಣುಗಳಿಗೆ ಶೀತಲಗೃಹ ಸ್ಥಾಪಿಸಬೇಕು ಎಂಬುದು ಸೇರಿ ಒಟ್ಟು 13 ನಿರ್ಣಯಗಳನ್ನು ಕೈಗೊಳ್ಳಲಾಯಿತು.

ರೈತ ಸಂಘದ ಅಧ್ಯಕ್ಷ ಕರೂರು ಮಾಧವರೆಡ್ಡಿ ಮಾತನಾಡಿ, ‘ಸಂಘಟನೆಯ ಸದಸ್ಯರು ಆಯ್ಕೆ ಮಾಡುವವರೇ ಸಂಘಟನೆಯ ಮುಂದಿನ ಅಧ್ಯಕ್ಷರಾಗಲಿ’ ಎಂದರು.

ಶಾಸಕ ಬಿ.ಆರ್.ಪಾಟೀಲ್, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಸ.ರಘುನಾಥ, ಚಾಗ ನೂರು ಭೂ ಸಂರಕ್ಷಣಾ ಹೋರಾಟ ಸಮಿತಿಯ ಮಲ್ಲಿಕಾರ್ಜುನರೆಡ್ಡಿ, ಎಐಕೆಎಂಕೆಎಸ್‌ನ ಸಹ ಸಂಚಾಲಕಕಿ ಎಸ್.ಝಾನ್ಸಿ, ರೈತ ಮುಖಂಡ ಹನುಮಗೌಡ ಇದ್ದರು.

ಕಾಂಗ್ರೆಸ್‌ಗೆ 18 ಶಾಸಕರ ಸೇರ್ಪಡೆ: ಸಚಿವ

ಶಿರಸಿ: ‘ಕಾಂಗ್ರೆಸ್‌ಗೆ 8 ಅಲ್ಲ, 18 ಶಾಸಕರು ಬರುತ್ತಾರೆ. ಅವರಲ್ಲಿ ಯಲ್ಲಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ್ ಕೂಡ ಒಬ್ಬರು’ ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.

‘ಶಿವರಾಮ ಹೆಬ್ಬಾರ್ ಅವರು ಬರಲು ವಿಳಂಬ ಮಾಡುತ್ತಿದ್ದಾರೆ. ಅವರು ಕಾಂಗ್ರೆಸ್‌ನಿಂದಲೇ ಬಿಜೆಪಿಗೆ ಹೋದವರು. ಅವರಂತೆ ಈ ಹಿಂದೆ ಕಾಂಗ್ರೆಸ್ ತೊರೆದು ಹೋದ ಎಲ್ಲರೂ ಮರಳುತ್ತಾರೆ’ ಎಂದು ಅವರು ಶನಿವಾರ ತಿಳಿಸಿದರು.

ದೇಶದಾದ್ಯಂತ 33 ವಿಮಾನಗಳಿಗೆ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): ಭಾರತದ ವಿವಿಧ ವಿಮಾನಯಾನ ಸಂಸ್ಥೆಗಳಿಗೆ ಸೇರಿದ 33 ವಿಮಾನಗಳಿಗೆ ಶನಿವಾರ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ.

‘ಈ ಮೂಲಕ 13 ದಿನಗಳಲ್ಲಿ ಒಟ್ಟಾರೆ 300ಕ್ಕೂ ಹೆಚ್ಚು ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆಗಳು ಬಂದಂತಾಗಿವೆ. ಹೆಚ್ಚಿನ ಬೆದರಿಕೆ ಸಂದೇಶಗಳು ಸಾಮಾಜಿಕ ಮಾಧ್ಯಮಗಳ ಮೂಲಕವೇ ಬಂದಿವೆ. ಇಂಡಿಗೊ, ಏರ್ ಇಂಡಿಯಾ, ವಿಸ್ತಾರಾ ವಿಮಾನಯಾನ ಸಂಸ್ಥೆಗಳ ತಲಾ 11 ವಿಮಾನಗಳಿಗೆ ಶನಿವಾರ ಬೆದರಿಕೆಗಳು ಬಂದಿವೆ’ ಎಂದು ಮೂಲಗಳು ಮಾಹಿತಿ ನೀಡಿವೆ.

ಎಚ್.ಡಿ. ದೇವೇಗೌಡ ಭೇಟಿ ಮಾಡಿದ ಉಪರಾಷ್ಟ್ರಪತಿ ಧನಕರ್



ಉಪರಾಷ್ಟ್ರಪತಿ ಜಗದೀಪ್ ಧನಕರ್ ಮತ್ತು ಸುದೇಶ್ ಧನಕರ್ ಅವರಿಗೆ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಮತ್ತು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಉಡುಗೊರೆ ನೀಡಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಮತ್ತು ಅವರ ಪತ್ನಿ ಸುದೇಶ್ ಧನಕರ್ ಅವರು ಮಾಜಿ ಪ್ರಧಾನಿ ಮತ್ತು ಜೆಡಿಎಸ್ ವರಿಷ್ಠ ಎಚ್. ಡಿ.ದೇವೇಗೌಡ ಅವರ ನಿವಾಸಕ್ಕೆ ಶನಿವಾರ ಭೇಟಿ ನೀಡಿದರು.

ಅಲ್ಲಿಯೇ ಒಂದು ತಾಸಿಗೂ ಹೆಚ್ಚು ಇದ್ದ ಧನಕರ್ ದಂಪತಿ, ದೇವೇಗೌಡ ಅವರ ಕುಟುಂಬದ ಸದಸ್ಯರೊಂದಿಗೆ ಉಪಹಾರ ಸೇವಿಸಿದರು. ಚನ್ನಮ್ಮ ದೇವೇಗೌಡ ಅವರ ಯೋಗಕ್ಷೇಮ ವಿಚಾರಿಸಿದರು.

‘ಚನ್ನಮ್ಮ ಅವರ ಆರೋಗ್ಯ ಸುಧಾರಿಸಿದ ನಂತರ ಅವರನ್ನು ದೆಹಲಿಗೆ ಕರೆದುಕೊಂಡು ಬನ್ನಿ ಎಂದು ದೇವೇಗೌಡ ಅವರಿಗೆ ಹೇಳಿದರು. ಕೃಷಿ ಮತ್ತು ರೈತರ ಸಮಸ್ಯೆಗಳು ಸೇರಿ ಹಲವು ವಿಷಯಗಳ ಬಗ್ಗೆ ಚರ್ಚಿಸಿದರು’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

500 ಆಟೊಗಳಿಗೆ ‘‘ಲರ್ನ್ ಕನ್ನಡ ವಿತ್ ಆಟೊ ಕನ್ನಡಿಗ’ ಫಲಕ’ ಅಳವಡಿಸಿದ ಅಜ್ಜು ಸುಲ್ತಾನ್

ಪರಭಾಷಿಕರಿಗೆ ಕನ್ನಡ ಕಲಿಸುತ್ತಿರುವ ‘ಆಟೊ ಕನ್ನಡಿಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊದಲ್ಲಿ ಸಂಚರಿಸುವ ಪರಭಾಷಿಕರಿಗೆ ‘ಆಟೊ ಕನ್ನಡಿಗ’ ಅಜ್ಜು ಸುಲ್ತಾನ್ ಕನ್ನಡ ಕಲಿಸುತ್ತಿದ್ದಾರೆ. ಅದಕ್ಕಾಗಿ ಕನ್ನಡವನ್ನು ಇಂಗ್ಲಿಷ್‌ನಲ್ಲಿ ಬರೆದ ಫಲಕಗಳನ್ನು ಆಟೊಗಳಲ್ಲಿ ಅಳವಡಿಸುತ್ತಿದ್ದಾರೆ.

ಆಟೊ ಚಾಲಕನೊಂದಿಗೆ ಮಾತನಾಡಲು ಎಷ್ಟು ವಾಕ್ಯಗಳು ಬೇಕೋ ಅಷ್ಟನ್ನು ಇಂಗ್ಲಿಷ್‌ನಲ್ಲಿ ಮುದ್ರಿಸಿ ಲ್ಯಾಮಿನೇಟ್ ಮಾಡಿ ಪ್ರಯಾಣಿಕರಿಗೆ ಕಾಣುವ ಹಾಗೆ ಆಟೊದಲ್ಲಿ ಅಳವಡಿಸಿದ್ದಾರೆ. ‘Namaskara sir’ ನಿಂದ ಆರಂಭವಾಗಿ 14 ಕನ್ನಡ ವಾಕ್ಯಗಳು ಮತ್ತು ಅದರ ಇಂಗ್ಲಿಷ್ ಅರ್ಥಗಳು ಅದರಲ್ಲಿವೆ.

ಆಟೊ ಚಾಲಕರ ಕಣ್ಮಣಿ, ನಟ ಶಂಕರ್‌ನಾಗ್ ಅವರ ಫೋಟೊ ಈ ಫಲಕದಲ್ಲಿದೆ. ಬೆಂಬಲ ನೀಡಿದ ಸಂಘಟನೆಗಳ ಹೆಸರನ್ನೂ ದಾಖಲಿಸಿದ್ದಾರೆ. ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಯೂಟ್ಯೂಬ್‌ಗಳ ವಿವರಗಳು ಕೂಡ ಅದರಲ್ಲಿವೆ. ಇನ್‌ಸೈಡ್ ಆಟೊ, ಔಟ್‌ಸೈಡ್ ಆಟೊ ಎಂದು ಎರಡು ಕ್ಯೂಆರ್ ಕೋಡ್‌ಗಳಿವೆ. ಅದನ್ನು ಸ್ಕ್ಯಾನ್ ಮಾಡಿದರೆ ಆಟೊದಲ್ಲಿ ಸಂಚರಿಸುವಾಗ, ಆಟೊದ ಹೊರಗೆ ಇರುವಾಗ ಬಳಸುವ ಇನ್ನಷ್ಟು ಪದಗಳು ಸಿಗುವಂತೆ ಮಾಡಿದ್ದಾರೆ.



ಪರಭಾಷಿಕರಿಗೆ ಕನ್ನಡ ಕಲಿಸುವ ಫಲಕ

ಬಾಗಲಕೋಟೆಯ ಅಜ್ಮಲ್ ಹುಸೇನ್ ಅವರು 12 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ಆಟೊ ಚಾಲನಾ ವೃತ್ತಿಗೆ ಇಳಿದಿದ್ದರು. ಅವರನ್ನು ಅವರ ಗೆಳೆಯರು ಪ್ರೀತಿಯಿಂದ ‘ಅಜ್ಜು ಸುಲ್ತಾನ್’ ಎಂದು ಹೆಸರಿಟ್ಟಿದ್ದರು. 7ನೇ ತರಗತಿಯಷ್ಟೇ ವಿದ್ಯಾಭ್ಯಾಸ ಮಾಡಿದ್ದರೂ ಆಧುನಿಕ ತಂತ್ರಜ್ಞಾನಗಳ ಬಗೆಗೆ ಭಾರಿ ಕುತೂಹಲ ಹೊಂದಿರುವ ಅಜ್ಜು, ಇನ್‌ಸ್ಟಾಗ್ರಾಂಗಳಲ್ಲಿ ‘ಪ್ರಮೋಷನ್’ ಮಾಡುವುದರಲ್ಲಿಯೂ ತೊಡಗಿಸಿಕೊಂಡಿದ್ದಾರೆ.

‘ಎರಡು ತಿಂಗಳ ಹಿಂದೆ ಕನ್ನಡ ಭಾಷೆಯ ಬಗ್ಗೆ ಆಟೊ ಚಾಲಕರು ಮತ್ತು ಕನ್ನಡೇತರ ಪ್ರಯಾಣಿಕರ ನಡುವೆ ವಿವಾದ, ಘರ್ಷಣೆ ಉಂಟಾದಾಗ ಏನು ವಿವಾದ ಎಂದು ನೋಡದೇ ಆಟೊ ಚಾಲಕರನ್ನು ನಕಾರಾತ್ಮಕವಾಗಿ ಬಿಂಬಿಸಿದರು. ಆಗ ಪ್ರಯಾಣಿಕರಿಗೆ ಕನ್ನಡ ಕಲಿಸುವ ಬಗ್ಗೆ ಯೋಚನೆ ನನ್ನಲ್ಲಿ ಹುಟ್ಟಿಕೊಂಡಿತು’ ಎಂದು ಅಜ್ಜು ಸುಲ್ತಾನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ನನ್ನ ದಿನದ ಸುಮಾರು 20 ಟ್ರಿಪ್‌ನಲ್ಲಿ 16 ಕನ್ನಡೇತರರೇ ಇರುತ್ತಿದ್ದರು. ಕನ್ನಡ ಕಲಿಯುವ ಆಸಕ್ತಿ ಇದೆಯೇ ಎಂದು ಅವರನ್ನು ಕೇಳುತ್ತಿದ್ದೆ. ಆಸಕ್ತಿ ಇದೆ, ಆದರೆ ಸಮಯ ಇಲ್ಲ’ ಎಂದು ಉತ್ತರಿಸುತ್ತಿದ್ದರು. ‘10 ನಿಮಿಷದ ಪ್ರಯಾಣದಲ್ಲಿ ಚಾಲಕರನ್ನು ಮಾತನಾಡುವಷ್ಟು ಕನ್ನಡ ಕಲಿಸಿದರೆ ಕಲಿಯುತ್ತೀರಾ’ ಎಂದು ಕೇಳುತ್ತಿದ್ದೆ. ಎಲ್ಲರೂ ಅದಕ್ಕೆ ಒಪ್ಪಿಗೆ ಸೂಚಿಸುತ್ತಿದ್ದರು. ಅವರಿಗೆ ಅಗತ್ಯ ಇರುವ ಪದಗಳನ್ನು ಅವರಿಂದಲೇ ಕೇಳಿ ಬರೆದುಕೊಂಡು ಇಡುತ್ತಿದ್ದೆ. ಬೇರೆ ಬೇರೆ ಸಮಯದಲ್ಲಿ ಪ್ರಯಾಣಿಕರು ನೀಡಿದ ವಾಕ್ಯಗಳನ್ನೇ ಬರೆಸಿ ‘ಲರ್ನ್ ಕನ್ನಡ ವಿತ್ ಆಟೊ ಕನ್ನಡಿಗ’ ಫಲಕ ಮಾಡಿದೆ’ ಎಂದು ಅನುಭವ ಹಂಚಿಕೊಂಡರು.

‘ಒಂದು ಫಲಕಕ್ಕೆ ₹24 ವೆಚ್ಚವಾಗಿದೆ. ಈಗಾಗಲೇ 500 ಆಟೊಗಳಿಗೆ ಅಳವಡಿಸಿದ್ದೇನೆ. ಫಲಕ ಅಳವಡಿಸುವ ಕಾರ್ಯಕ್ಕೆ ಬೆಂಗಳೂರು ಆಟೊ ಸೇನೆ, ಸ್ನೇಹಜೀವಿ ಆಟೊ ಸಂಘ, ಡಾ.ಬಿ.ಆರ್. ಅಂಬೇಡ್ಕರ್ ಆಟೊ ಚಾಲಕರ ಸಂಘಟನೆ ಸೇರಿದಂತೆ ಕೆಲವು ಆಟೊ ಸಂಘಟನೆಗಳು ಸಹಕಾರ ನೀಡಿವೆ. ಜೊತೆಗೆ ನನ್ನ ಗೆಳೆಯರು ಕೂಡ ಫಲಕ ಒಯ್ಯಲು, ಅಳವಡಿಸಲು ಸಹಕರಿಸಿದ್ದಾರೆ. ಫಲಕ ತಯಾರಿಯ ವೆಚ್ಚವನ್ನು ಇಲ್ಲಿವರೆಗೆ ನಾನೇ ಭರಿಸಿದ್ದೇನೆ. ಇನ್‌ಸ್ಟಾಗ್ರಾಂನಲ್ಲಿ ನಡೆಸುವ ‘ಪ್ರಮೋಷನ್’ಗಳಿಂದ ಬಂದ ಹಣವನ್ನು ಇದಕ್ಕೆ ಬಳಸಿದ್ದೇನೆ’ ಎಂದು ವಿವರಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಶ್ಲಾಘನೆ



ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ಯಾವುದೇ ಭಾಷೆಯು ಕೇವಲ ಸಂವಹನಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ, ಅಸ್ಮಿತೆ, ಬಾಂಧವ್ಯ, ಸಂಸ್ಕೃತಿ, ಪರಂಪರೆ, ವ್ಯಾಪಾರ ಎಲ್ಲದರಲ್ಲೂ ಭಾಷೆಯ ಪ್ರಭಾವ ಅತಿ ಮುಖ್ಯ ಪಾತ್ರ ವಹಿಸುತ್ತದೆ. ಭಾಷೆ ಬಾಂಧವ್ಯವನ್ನು ಬೆಸೆಯುವುದಕ್ಕಿರುವುದೇ ಹೊರತು ಸಂಘರ್ಷಕ್ಕಿರುವುದಲ್ಲ. ಕರ್ನಾಟಕದಲ್ಲಿ ಇತ್ತೀಚೆಗೆ ಭಾಷೆಯ ಕಾರಣಕ್ಕೆ ಆಟೊ ಚಾಲಕರೊಂದಿಗೆ ಪರಭಾಷಿಕರ ಸಂಘರ್ಷದ ಘಟನೆಗಳು ನಡೆದಿದ್ದವು. ಇದನ್ನು ಗಮನದಲ್ಲಿರಿಸಿಕೊಂಡು ಆಟೊ ಚಾಲಕರೊಬ್ಬರು ತಂತ್ರಜ್ಞಾನವನ್ನು ಬಳಸಿ ಕನ್ನಡ ಕಲಿಕೆಯನ್ನು ಹಾಗೂ ಭಾಷಾ ಸಾಮರಸ್ಯವನ್ನು ಉತ್ತೇಜಿಸಲು ಕೈಗೊಂಡಿರುವ ಪ್ರಯತ್ನವು ಅಭಿನಂದನಾರ್ಹ. ಪರಭಾಷಿಕರಿಗೆ ಕನ್ನಡ ಕಲಿಸುವ ಈ ಪ್ರಯತ್ನವು ಸಣ್ಣದಾಗಿ ಕಂಡರೂ ಇದರ ಪರಿಣಾಮ ಆಗಾಧವಾಗಿರುತ್ತದೆ. ಕನ್ನಡದ ಸೇವೆ ಮಾಡುತ್ತಿರುವ ಆಟೋ ಕನ್ನಡಿಗನಿಗೆ ಅಭಿನಂದನೆಗಳು’ ಎಂದು ಬರೆದುಕೊಂಡಿದ್ದಾರೆ.

ಇವರಲ್ಲದೇ ಅನೇಕ ನೆಟ್ಟಿಗರು ಮೆಚ್ಚುಗೆಯ ನುಡಿಗಳನ್ನು ದಾಖಲಿಸಿದ್ದಾರೆ.

‘ಎಲ್ಲೆಡೆ ಕನ್ನಡ ಪಸರಿಸುವೆ’



ಅಜ್ಜು ಸುಲ್ತಾನ್

‘ನನ್ನ ಶಕ್ತಿಗೆ ಅನುಗುಣವಾಗಿ ಕನ್ನಡಪರ ಕೆಲಸ ಮಾಡುತ್ತಿದ್ದೇನೆ. ಇಂದಿರಾನಗರದ ಆಟೊಗಳಿಗೆ ಫಲಕ ಅಳವಡಿಸುವ ಕಾರ್ಯ ಆಗಿದೆ. ನನ್ನ ಗೆಳೆಯರ ಕ್ಯಾಬ್‌ಗಳಿಗೆ ಫಲಕ ಅಳವಡಿಸುವ ಕಾರ್ಯವನ್ನೂ ಶುರು ಮಾಡಿದ್ದೇನೆ. ಮುಂದೆ ಬಸ್, ಹೋಟೆಲ್, ಅಂಗಡಿಗಳಲ್ಲಿಯೂ ಇಂಥ ಕೆಲಸವಾಗಬೇಕು. ಬೇರೆಯವರು ಕೈಜೋಡಿಸಿದರೆ ಈ ಕೆಲಸ ಸುಲಭವಾಗುತ್ತದೆ. ಕೈ ಜೋಡಿಸದೇ ಇದ್ದರೂ ನನ್ನ ಪ್ರಯತ್ನ ಮುಂದುವರಿಸುತ್ತೇನೆ. ‘ಆಟೊ ಕನ್ನಡಿಗ’ ಹೆಸರಿನಲ್ಲಿ ಜಾಲತಾಣಗಳಲ್ಲಿ ನನ್ನ ಕಾರ್ಯದ ವಿವರಗಳಿವೆ’ ಎಂದು ಅಜ್ಜು ಸುಲ್ತಾನ್ ತಿಳಿಸಿದರು.

₹200 ಕೋಟಿ ಮೌಲ್ಯದ ಪದಾರ್ಥ ● ಅಮೆರಿಕ, ಬ್ರಿಟನ್, ಥಾಯ್ಲೆಂಡ್ ದೇಶಗಳಿಂದ ಪೂರೈಕೆ

ಅಂಚೆಯಲ್ಲೇ ಬಂದಿದೆ ಡ್ರಗ್ಸ್!

● ಕೆ.ಎಸ್.ಸುನಿಲ್



ಚಾಮರಾಜಪೇಟೆಯಲ್ಲಿನ ವಿದೇಶಿ ಅಂಚೆ ಕಚೇರಿಯಲ್ಲಿ ಸಿಸಿಬಿ ಪೊಲೀಸರು ಶ್ವಾನದಳದೊಂದಿಗೆ ಪಾರ್ಸೆಲ್‌ಗಳ ತಪಾಸಣೆ ನಡೆಸಿದರು.

ಬೆಂಗಳೂರು: ಅಂಚೆ ಇಲಾಖೆಯ ಸೇವೆಯನ್ನೇ ಬಳಸಿಕೊಂಡು ವಿದೇಶಗಳಿಂದ ನಗರಕ್ಕೆ ₹200 ಕೋಟಿಗೂ ಹೆಚ್ಚು ಮೌಲ್ಯದ ಮಾದಕ ವಸ್ತುಗಳನ್ನು ಪೂರೈಕೆ ಮಾಡಿರುವುದು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ ಮತ್ತು ಕಸ್ಟಮ್ಸ್ ಅಧಿಕಾರಿಗಳು ನಡೆಸಿದ ತನಿಖೆಯಲ್ಲಿ ಪತ್ತೆಯಾಗಿದೆ.

ವಿದೇಶಿ ಪೆಡ್ಲರ್‌ಗಳ ಜತೆ ಸ್ಥಳೀಯ ಪೆಡ್ಲರ್‌ಗಳು ಸಂಪರ್ಕ ಸಾಧಿಸಿ ಅಂಚೆ ಇಲಾಖೆ ಮೂಲಕವೇ ಅಂತರ ರಾಷ್ಟ್ರೀಯ ಮಟ್ಟದ ಮಾದಕವಸ್ತು ಪೂರೈಕೆ ಮಾಡುತ್ತಿದ್ದರು. ಈ ಜಾಲದ ಪತ್ತೆಗೆ ಪೊಲೀಸರು ತನಿಖೆ ಚುರುಕು ಗೊಳಿಸಿದ್ದಾರೆ. ಕೆಲ ಪೆಡ್ಲರ್‌ಗಳನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದ್ದು, 'ಅಂಚೆ ಡ್ರಗ್ಸ್ ಪೂರೈಕೆ ಜಾಲ'ದ ಕುರಿತು ಹಲವು ಮಾಹಿತಿಗಳು ಲಭಿಸಿವೆ ಎಂದು ಮೂಲಗಳು ತಿಳಿಸಿವೆ.

ಪೊಲೀಸರ ಪ್ರಕಾರ, 2–3 ವರ್ಷದಲ್ಲಿ ಅಂದಾಜು ₹100 ರಿಂದ ₹200 ಕೋಟಿಗೂ ಅಧಿಕ ಮೌಲ್ಯದ ಡ್ರಗ್ಸ್ ವಿದೇಶದಿಂದ ನಗರಕ್ಕೆ ಪೂರೈಕೆ ಆಗಿದೆ. ಕೆಲವರು ಆನ್‌ಲೈನ್ ಮೂಲಕ ನೇರವಾಗಿ ಮಾದಕವಸ್ತು ತರಿಸಿಕೊಂಡಿದ್ದಾರೆ. ಇನ್ನು ಕೆಲವರು ವಿದೇಶಿ ಪೆಡ್ಲರ್‌ಗಳನ್ನು ಸಂಪರ್ಕಿಸಿ ಡ್ರಗ್ಸ್ ತರಿಸಿಕೊಂಡು ಪರಿಚಿತರಿಗೇ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ.

'ಅಮೆರಿಕ, ಬ್ರಿಟನ್, ಥಾಯ್ಲೆಂಡ್ ದೇಶಗಳಿಂದ ಹೆಚ್ಚಿನ ಪ್ರಮಾಣದ ಮಾದಕ ವಸ್ತುಗಳನ್ನು ನಗರಕ್ಕೆ ತರಿಸಿ ಕೊಳ್ಳಲಾಗುತ್ತಿತ್ತು. ಸ್ಥಳೀಯ ಪೆಡ್ಲರ್‌ಗಳು ಪರಸ್ಪರ ಸಂಪರ್ಕದಲ್ಲಿದ್ದುಕೊಂಡು ಮಾರಾಟ ಮಾಡುತ್ತಿದ್ದರು. ಬಹುತೇಕ ಸಂದರ್ಭಗಳಲ್ಲಿ ಪರಿಚಿತ ವ್ಯಕ್ತಿಗಳಿಗೇ ಮಾರಾಟ ಮಾಡಲಾಗುತ್ತಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಥಾಯ್ಲೆಂಡ್ ಸೇರಿ ಹಲವು ದೇಶಗಳಲ್ಲಿ ಕಾನೂನು ಬದ್ಧವಾಗಿಯೇ ಗಾಂಜಾ ಮಾರಾಟಕ್ಕೆ ಅವಕಾಶವಿದೆ. ಇದನ್ನು ತಿಳಿದ ಪೆಡ್ಲರ್‌ಗಳು ಹಾಗೂ ವ್ಯಸನಿಗಳು, ಡಾರ್ಕ್ ವೆಬ್ ಮೂಲಕ ವಿದೇಶಿ ಪೆಡ್ಲರ್‌ಗಳನ್ನು ಸಂಪರ್ಕಿಸಿ ವಿದೇಶಿ ಅಂಚೆಗಳಲ್ಲಿ ಡ್ರಗ್ಸ್ ತರಿಸಿಕೊಳ್ಳುತ್ತಿದ್ದರು ಎಂಬ ಮಾಹಿತಿ ತನಿಖಾ ತಂಡಕ್ಕೆ ಲಭಿಸಿದೆ.

ವಿಳಾಸ ಬದಲಿಸಿದವರ ಪತ್ತೆಗೆ ಶೋಧ: ಡ್ರಗ್ಸ್ ಖರೀದಿಸಿದ್ದವರ ಪತ್ತೆಗೆ ಹಲವು ಆಯಾಮಗಳಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಡ್ರಗ್ಸ್ ಪಾರ್ಸೆಲ್‌ಗಳ ಮೇಲಿರುವ ವಿಳಾಸಗಳನ್ನು ಪತ್ತೆ ಮಾಡಿದ್ದು, ಬಹುತೇಕರು ವಿಳಾಸ ಬದಲಿಸಿದ್ದಾರೆ. ಪಾರ್ಸೆಲ್‌ಗಳ ಮೇಲಿರುವ ವಿಳಾಸ ಗಳಲ್ಲಿಯೇ ಕೆಲವರು ವಾಸಿಸುತ್ತಿದ್ದಾರೆ. ಆದರೆ, ಪಾರ್ಸೆಲ್‌ಗೂ ತಮಗೂ ಯಾವುದೇ ಸಂಬಂಧವಿಲ್ಲ ಎಂದು ಅವರು ಪೊಲೀಸರಿಗೆ ಹೇಳಿದ್ದಾರೆ. ಅನುಮಾನಾಸ್ಪದ ವ್ಯಕ್ತಿಗಳನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ.

'ವಿದೇಶಗಳಿಂದ ಡ್ರಗ್ಸ್ ತರಿಸಿ ಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಮಂದಿಯನ್ನು ಬಂಧಿಸಲಾಗಿದೆ. ಅಂತರರಾಷ್ಟ್ರೀಯ ಮಟ್ಟದ ಜಾಲದ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ವಿದೇಶಗಳಿಂದ ಅಂಚೆ ಮೂಲಕ ಡ್ರಗ್ಸ್ ತರಿಸಿಕೊಳ್ಳುತ್ತಿದ್ದವರ ಮೇಲೆ ನಿಗಾ ಇಡಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಚಾಮರಾಜಪೇಟೆಯಲ್ಲಿನ ವಿದೇಶಿ ಅಂಚೆ ಕಚೇರಿಯಲ್ಲಿ 2020ರಿಂದ ವಿದೇಶಗಳಿಂದ ಬಂದಿದ್ದ 3,500 ಪಾರ್ಸೆಲ್‌ಗಳನ್ನು ಯಾರೂ ಸ್ವೀಕರಿಸಿರಲಿಲ್ಲ. ಕೋವಿಡ್ ಸಂದರ್ಭದಲ್ಲಿ ಕೆಲವರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ನಗರ ಬಿಟ್ಟು ತೆರಳಿದರು. ನಾನಾ ಕಾರಣಕ್ಕೆ ಕೆಲವರು ಉದ್ಯೋಗ ಕಳೆದುಕೊಂಡರು. ಆಗಿನಿಂದ ಯಾರೂ ಸ್ವೀಕರಿಸದ ಪಾರ್ಸೆಲ್‌ಗಳ ಪರಿಶೀಲನೆ ನಡೆಸಿದಾಗ ಮಾದಕ ವಸ್ತುಗಳು ಇರುವುದು ಕಂಡು ಬಂತು. ₹21.17 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ.

'ಈ ಜಾಲದ ಮೂಲ ಬೇರು ಪತ್ತೆ ಹಚ್ಚುವ ಕಾರ್ಯ ನಡೆದಿದೆ. ವಿಳಾಸ ಬದಲಿಸಿರುವ ಕೆಲವರ ಬಗ್ಗೆಯೂ ಮಾಹಿತಿ ದೊರಕಿದ್ದು, ಶೀಘ್ರದಲ್ಲಿಯೇ ಅವರನ್ನು ವಶಕ್ಕೆ ಪಡೆಯಲಾಗುವುದು' ಎಂದು ಪೊಲೀಸರು ಹೇಳಿದರು.

ಡ್ರಗ್ಸ್ ಪತ್ತೆಗೆ 'ರಾಣಾ' ನೆರವು

ಚಾಮರಾಜಪೇಟೆಯಲ್ಲಿನ ವಿದೇಶಿ ಅಂಚೆ ಕಚೇರಿಯಲ್ಲಿ 2020ರಿಂದ ವಿದೇಶಗಳಿಂದ ಬಂದಿದ್ದು ವಿಲೇವಾರಿಯಾಗದೇ ಉಳಿದಿದ್ದ ಪಾರ್ಸೆಲ್‌ಗಳಲ್ಲಿ ಮಾದಕವಸ್ತುಗಳು ಇರುವ ಅನುಮಾನ ವ್ಯಕ್ತವಾಗಿತ್ತು. ಮಾದಕ ವಸ್ತುಗಳನ್ನು ಪತ್ತೆ ಹಚ್ಚುವ ತರಬೇತಿ ಪಡೆದ ಶ್ವಾನ 'ರಾಣಾ'ನನ್ನು ಈ ಪಾರ್ಸೆಲ್‌ಗಳ ತಪಾಸಣೆಗೆ ಬಿಡಲಾಗಿತ್ತು. ಡ್ರಗ್ಸ್ ತುಂಬಿದ್ದ 606 ಪಾರ್ಸೆಲ್‌ಗಳನ್ನು ಅದು ಪತ್ತೆಹಚ್ಚಿತ್ತು.

ಪಾರ್ಸೆಲ್‌ಗಳಲ್ಲಿ ಹೈಡ್ರೋ ಗಾಂಜಾ, ಎಲ್‌ಎಸ್‌ಡಿ ಸ್ಟ್ರಿಪ್ಸ್, ಎಂಡಿಎಂಎ ಕ್ರಿಸ್ಟಲ್, ಎಕ್ಸ್‌ಟಸಿ ಮಾತ್ರೆ, ಹೆರಾಯಿನ್, ಕೋಕೆನ್, ಚರಸ್, ಗಾಂಜಾ ಎಣ್ಣೆ, ಮ್ಯಾಥಾಕ್ಲಿನಾ, ಎಂಎಲ್ ನಿಕೋಟಿನ್ ಇರುವುದು ಕಂಡು ಬಂತು.

ಡ್ರಗ್ಸ್ ಮಾರಾಟ ಜಾಲಕ್ಕೆ ಅಂಕುಶ'

ಪ್ರಜಾವಾಣಿ ವಾರ್ತೆ



ಶಿವಮೊಗ್ಗ: 'ರಾಜ್ಯದಲ್ಲಿ ಗಾಂಜಾ, ಡ್ರಗ್ಸ್ ಸೇರಿದಂತೆ ಮಾದಕ ವಸ್ತುಗಳ ಮಾರಾಟ ಜಾಲಕ್ಕೆ ಸಂಪೂರ್ಣ ಅಂಕುಶ ಹಾಕಿ ಅದನ್ನು ಬುಡಸಮೇತ ಕಿತ್ತು ಹಾಕುತ್ತೇವೆ' ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ಹೇಳಿದರು.

'ಬೆಂಗಳೂರಿನಲ್ಲಿ ಶುಕ್ರವಾರ ₹1.50 ಕೋಟಿ ಮೌಲ್ಯದ ಗಾಂಜಾ ವಶಪಡಿಸಿಕೊಂಡು ನೈಜೀರಿಯಾ ಮೂಲದ ಆರೋಪಿಯನ್ನು ಬಂಧಿಸಲಾಗಿದೆ. ವಾರದ ಹಿಂದೆ ₹ 5 ಕೋಟಿ ಮೌಲ್ಯದ ಗಾಂಜಾ ಜಪ್ತಿ ಮಾಡಲಾಗಿದೆ. ಗಾಂಜಾ ಮಾರಾಟ ಅವ್ಯಾಹತವಾಗಿ ನಡೆಯುತ್ತಿರುವುದು ಗಮನಕ್ಕೆ ಬಂದರೆ ಆಯಾ ಠಾಣಾ ವ್ಯಾಪ್ತಿಯ ಅಧಿಕಾರಿಗಳು, ಎಸ್ಪಿ ಹಾಗೂ ಡಿಸಿಪಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಈ ಕುರಿತು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ಸುದ್ದಿಗಾರರಿಗೆ ಶನಿವಾರ ತಿಳಿಸಿದರು.

'ಬೆಂಗಳೂರಿನಲ್ಲಿ ಡ್ರಗ್ಸ್ ಹಾವಳಿ ನಿಯಂತ್ರಿಸಲು ಕಠಿಣ ಕ್ರಮ ಕೈಗೊಳ್ಳುತ್ತೇವೆ. ಈ ವಿಚಾರದಲ್ಲಿ ನಿರ್ಲಕ್ಷ್ಯ ಮಾಡುವುದಿಲ್ಲ. ಜಾತಿ ಗಣತಿ ವರದಿಯನ್ನು ಮೊದಲು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಚರ್ಚಿಸುತ್ತೇವೆ. ಆಮೇಲೆ ಅದರ ಜಾರಿ ಕುರಿತು ನೋಡೋಣ' ಎಂದರು.

ಪೌರಕಾರ್ಮಿಕರಿಗೆ ರಕ್ಷಣೆಯ ಅಭಯ: ಕಮಿಷನರ್

ಪ್ರಜಾವಾಣಿ ವಾರ್ತೆ

ಜನ ಸಂಪರ್ಕ ಸಭೆ

ಬೆಂಗಳೂರು: 'ಪೌರ ಕಾರ್ಮಿಕರಿಗೆ ರಕ್ಷಣೆ ಒದಗಿಸುವುದು ಪೊಲೀಸರ ಜವಾಬ್ದಾರಿ ಹಾಗೂ ಕರ್ತವ್ಯ. ಪೌರ ಕಾರ್ಮಿಕರಿಗೆ ಯಾವುದಾರೂ ಸಮಸ್ಯೆ ಬಂದರೆ ತಮ್ಮ ವ್ಯಾಪ್ತಿಯ ಠಾಣೆಯನ್ನು ಸಂಪರ್ಕಿಸಿದರೆ ಪೊಲೀಸರು ನೆರವು ಕಲ್ಪಿಸಲಿದ್ದಾರೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು.



ಬಿ.ದಯಾನಂದ

ಉತ್ತರ ವಿಭಾಗದ ಪೊಲೀಸರ ನೇತೃತ್ವದಲ್ಲಿ ಭೂಪಸಂದ್ರದಲ್ಲಿ ಶನಿವಾರ ಆಯೋಜಿಸಿದ್ದ ತಿಂಗಳ ಜನಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು.

'ನಗರದ ಸ್ವಚ್ಛತೆಯಲ್ಲಿ ಪೌರ ಕಾರ್ಮಿಕರ ಪಾತ್ರ ದೊಡ್ಡದಿದೆ. ಅವರು ಕರ್ತವ್ಯ ನಿರ್ವಹಣೆ ವೇಳೆ ತೊಂದರೆಗೆ ಒಳಗಾದರೆ ತಕ್ಷಣವೇ ಸ್ಪಂದಿಸಲಾಗುತ್ತಿದೆ' ಎಂದರು.

ಡ್ರಗ್ಸ್ ನಿರ್ಮೂಲನೆ: 'ನಗರದಲ್ಲಿ ಡ್ರಗ್ಸ್ ನಿರ್ಮೂಲನೆಗೆ ಸಾರ್ವಜನಿಕರ ಸಹಕಾರ ಅಗತ್ಯ. ನಗರದಲ್ಲಿ ಯಾವುದೇ ಮೂಲೆಯಲ್ಲಿ ಡ್ರಗ್ಸ್ ಮಾರಾಟ, ಸರಬರಾಜು ಕಂಡುಬಂದರೆ ಪೊಲೀಸರಿಗೆ ಮಾಹಿತಿ ನೀಡಬಹುದು. ಮಾಹಿತಿ ನೀಡಿದ ವ್ಯಕ್ತಿಯ ಹೆಸರು ಗೋಪ್ಯವಾಗಿ ಇಟ್ಟು ಆರೋಪಿಗಳ ವಿರುದ್ಧ ತಕ್ಷಣವೇ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಹೇಳಿದರು.

'ಪೊಲೀಸ್ ಠಾಣೆಗೆ ತೆರಳಲು ಸಾಧ್ಯವಾಗದ ಸಂದರ್ಭಗಳಲ್ಲಿ ತಿಂಗಳ ಸಭೆಗೆ ಬಂದು ಸಮಸ್ಯೆ ಹೇಳಿಕೊಳ್ಳುತ್ತಿದ್ದೇವೆ. ಸಭೆಯಲ್ಲಿ ಪ್ರಸ್ತಾಪಿಸಿದ ಕೆಲವು ಸಮಸ್ಯೆಗಳು ಹಾಗೆಯೇ ಉಳಿಯುತ್ತಿವೆ. ಬೇಗನೆ ಪರಿಹಾರ ದೊರಕಿಸಿಕೊಡಬೇಕು' ಎಂದು ಸಾರ್ವಜನಿಕರೊಬ್ಬರು ಕೋರಿದರು. ಇದೇ ವೇಳೆ ಪ್ರತಿ ಠಾಣೆಯಲ್ಲೂ ಮಹಿಳಾ ಕೌನ್ಸಿಲ್‌ನ ಅಗತ್ಯವಿದೆ ಎಂದೂ ಮನವಿ ಸಲ್ಲಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ದಯಾನಂದ ಅವರು, ನಗರದ ಪ್ರತಿ ವಿಭಾಗದಲ್ಲೂ ಮಹಿಳಾ ಠಾಣೆಗಳು ಇರುತ್ತವೆ. ಅಲ್ಲಿ ಕೌನ್ಸಿಲ್ ಸಹ ಇರುತ್ತಾರೆ. ಮಹಿಳಾ ಸಿಬ್ಬಂದಿ ಇರುತ್ತಾರೆ. ಅವರಿಗೆ ಸಮಸ್ಯೆ ತಿಳಿಸಬಹುದು ಎಂದು ಹೇಳಿದರು.

ನಗರದಲ್ಲಿ ಸಂಚಾರ ಸುಧಾರಣೆಗೆ ಹಲವು ಕ್ರಮ ತೆಗೆದುಕೊಳ್ಳಲಾಗಿದೆ ಎಂದೂ ಹೇಳಿದರು.

ಮಾಜಿ ಸಚಿವ ಮಾಲೀಕಯ್ಯ ಗುತ್ತೇದಾರ್‌ರಿಂದ ₹20 ಲಕ್ಷ ಸುಲಿಗೆಗೆ ಯತ್ನ

ನಲಪಾಡ್ ಬ್ರಿಗೇಡ್‌ನ ಅಧ್ಯಕ್ಷೆ, ಆಕೆಯ ಪತಿ ಸೆರೆ

ಪ್ರಜಾವಾಣಿ ವಾರ್ತೆ



ಮಂಜುಳಾ ಪಾಟೀಲ



ಶಿವರಾಜ್ ಪಾಟೀಲ

ಬೆಂಗಳೂರು: ಮೊಬೈಲ್ ಹಾಗೂ ವಿಡಿಯೊ ಕರೆಗಳನ್ನು ರೆಕಾರ್ಡ್ ಮಾಡಿಕೊಂಡು ಕಾಂಗ್ರೆಸ್ ಮುಖಂಡ, ಮಾಜಿ ಸಚಿವ ಮಾಲೀಕಯ್ಯ ಗುತ್ತೇದಾರ್ ಅವರಿಂದ ಹಣ ಸುಲಿಗೆಗೆ ಪ್ರಯತ್ನಿಸಿದ್ದ ಪ್ರಕರಣದಲ್ಲಿ ನಲಪಾಡ್ ಬ್ರಿಗೇಡ್‌ನ ಕಲಬುರಗಿ ಘಟಕದ ಅಧ್ಯಕ್ಷೆ ಹಾಗೂ ಆಕೆಯ ಪತಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮಂಜುಳಾ ಪಾಟೀಲ ಹಾಗೂ ಆಕೆಯ ಪತಿ ಶಿವರಾಜ್ ಪಾಟೀಲ ಬಂಧಿತರು. ಆರೋಪಿಗಳು ಕಲಬುರಗಿಯ ಆಳಂದ ರಸ್ತೆಯ ವಿಜಯನಗರ ಕಾಲೊನಿ ನಿವಾಸಿಗಳು.

ಪ್ರಕರಣದ ಸಂಬಂಧ ಮಾಲೀಕಯ್ಯ ಗುತ್ತೇದಾರ್ ಅವರ ಪುತ್ರ ರಿತೇಶ್ ಗುತ್ತೇದಾರ್ ಅವರು ಶುಕ್ರವಾರ ದೂರು ನೀಡಿದ್ದರು. ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಶನಿವಾರವೇ ನಗರದ ಗರುಡಾ ಮಾಲ್ ಬಳಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

'ಬಂಧಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ನ್ಯಾಯಾಲಯವು ಆರೋಪಿಗಳನ್ನು ಎಂಟು ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದೆ. ಆರೋಪಿಗಳನ್ನು ವಿಚಾರಣೆ ನಡೆಸಿ ಇನ್ನಷ್ಟು ಮಾಹಿತಿ ಕಲೆ ಹಾಕಲಾಗುವುದು' ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

'ಅಕ್ಟೋಬರ್ 21ರಂದು ರಿತೇಶ್ ಅವರಿಗೆ ಕರೆ ಮಾಡಿದ್ದ ಆರೋಪಿ ಮಂಜುಳಾ, ತಾನು ನಲಪಾಡ್ ಬ್ರಿಗೇಡ್ ಅಧ್ಯಕ್ಷೆ ಎಂದು ಪರಿಚಯಿಸಿಕೊಂಡಿದ್ದರು. ಮಾಲೀಕಯ್ಯ ಗುತ್ತೇದಾರ್ ಅವರು ತನಗೆ ನಿಂದನೆಯ ಸಂದೇಶ ಕಳುಹಿಸುತ್ತಿದ್ದಾರೆ. ಈ ಸಂಬಂಧ ತಮ್ಮೊಂದಿಗೆ ಚರ್ಚಿಸಬೇಕೆಂದು ಕೇಳಿ ಕೊಂಡಿದ್ದರು. ನಂತರ, ಕೊಡಿಗೇಹಳ್ಳಿಯ ಸ್ವಾತಿ ಗಾರ್ಡೆನಿಯಾ ಹೋಟೆಲ್‌ನಲ್ಲಿ ರಿತೇಶ್ ಅವರನ್ನು ಆರೋಪಿಗಳು ಭೇಟಿ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಹಣಕ್ಕೆ ಬೇಡಿಕೆ: ಮಾಲೀಕಯ್ಯ ಅವರ ವಿರುದ್ಧ ಪೊಲೀಸರಿಗೆ ಯಾವುದೇ ದೂರು ನೀಡದಿರಲು ಹಾಗೂ ಮಾಧ್ಯಮಗಳಿಗೆ ಮಾಹಿತಿ ನೀಡದಿರಲು ₹20 ಲಕ್ಷ ನೀಡುವಂತೆ ಬೇಡಿಕೆ ಇಟ್ಟಿದ್ದರು. ಅ.23 ಹಾಗೂ 24ರಂದು ಪದೇ ಪದೇ ವಾಟ್ಸ್‌ಆ್ಯಪ್ ಕರೆ ಮಾಡಿ ಹಣ ನೀಡಿದರೆ ನಿಂದನೆ ಸಂದೇಶಗಳನ್ನು ಡಿಲೀಟ್ ಮಾಡುತ್ತೇವೆ. ಇಲ್ಲದಿದ್ದರೆ ಬಹಿರಂಗ ಪಡಿಸುವುದಾಗಿ ಆರೋಪಿಗಳು ಬೇಡಿಕೆ ಇಟ್ಟಿದ್ದರು' ಎಂದು ಪೊಲೀಸರು ಹೇಳಿದರು.

'ಬೇರೆ ಬೇರೆ ಮೊಬೈಲ್ ಸಂಖ್ಯೆಗಳಲ್ಲಿ ಆರೋಪಿಗಳು ಕರೆ ಮಾಡಿ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಮೊಬೈಲ್ ಹಾಗೂ ವಿಡಿಯೊ ಕರೆಗಳನ್ನು ಪೆನ್‌ಡ್ರೈವ್‌ನಲ್ಲಿ ಸಂಗ್ರಹಿಸಿಕೊಂಡು ಹಣ ಸುಲಿಗೆಗೆ ಪ್ರಯತ್ನಿಸಿದ್ದರು ಎಂದು ಗೊತ್ತಾಗಿದೆ. ವಿಡಿಯೊಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ನಾಯಿಗೆ ಕಲ್ಲು ಎಸೆತ: ಮಹಿಳೆ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎನ್‌.ಆರ್‌.ಐ ಲೇಔಟ್‌ನಲ್ಲಿ ನಾಯಿಗಳತ್ತ ಕಲ್ಲು ಎಸೆದ ಆರೋಪದ ಮೇಲೆ ಮಹಿಳೆಗೆ ವ್ಯಕ್ತಿಯೊಬ್ಬರು ಹಲ್ಲೆ ನಡೆಸಿದ್ದು, ಈ ಸಂಬಂಧ ರಾಮಮೂರ್ತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ಟೋಬರ್ 23ರಂದು ಮಧ್ಯಾಹ್ನ ಎನ್‌.ಆರ್‌.ಐ ಲೇಔಟ್‌ನಲ್ಲಿ ಘಟನೆ ನಡೆದಿದೆ. ಮಹಿಳೆ ನೀಡಿದ ದೂರಿನ ಅನ್ವಯ ಆರೋಪಿ ವಿರುದ್ಧ ಪ್ರಕರಣ ದಾಖಲಾಗಿದೆ.

ಮಹಿಳೆಯೊಬ್ಬರು ಸ್ನೇಹಿತರೊಂದಿಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಅದೇ ಸಂದರ್ಭದಲ್ಲಿ ಬೀದಿ ನಾಯಿಗಳು ಅವರನ್ನು ಅಟ್ಟಿಸಿಕೊಂಡು ಬಂದಿದ್ದವು. ಇದರಿಂದ ಬೆದರಿದ್ದ ಮಹಿಳೆ ಸ್ವಲ್ಪ ದೂರದಲ್ಲೇ ಸ್ಕೂಟರ್ ನಿಲ್ಲಿಸಿ, ನಾಯಿಗಳತ್ತ ಕಲ್ಲು ಎಸೆದಿದ್ದರು. ಆ ಸಂದರ್ಭದಲ್ಲಿ ಬಂದ ವ್ಯಕ್ತಿಯೊಬ್ಬರು ಸ್ಕೂಟರ್ ಕೀ ಕಸಿದುಕೊಂಡು, 'ನಾಯಿಗಳಿಗೆ ಕಲ್ಲು ಹೊಡೆದಿದ್ದು ಯಾಕೆ' ಎಂದು ಪ್ರಶ್ನಿಸಿ ಜಗಳ ತೆಗೆದಿದ್ದಾರೆ. ಅಲ್ಲದೇ ಮಹಿಳೆ ಮೇಲೆ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

'ಗಲಾಟೆ ವಿಕೋಪಕ್ಕೆ ತಿರುಗಿದ ಮೇಲೆ ಸ್ಥಳೀಯರು, ಇಬ್ಬರನ್ನೂ ಸಮಾಧಾನಪಡಿಸಿ ಸ್ಕೂಟರ್ ಕೀಯನ್ನು ಮಹಿಳೆಗೆ ವಾಪಸ್ ಕೊಡಿಸಿ ಕಳುಹಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ದೌರ್ಜನ್ಯ ಎಸಗಿದ ಆರೋಪಿಯ ಹೆಸರು, ಫೋಟೊ ಹಾಗೂ ವಿಳಾಸ ನೀಡಿದರೂ ಪೊಲೀಸರು ಎಫ್‌ಐಆರ್‌ನಲ್ಲಿ ಆರೋಪಿ ಹೆಸರು ನಮೂದಿಸಿಲ್ಲ. ಅಲ್ಲದೇ ಆತನನ್ನು ಕರೆಸಿ ವಿಚಾರಣೆ ನಡೆಸಿಲ್ಲ. ಕ್ರಮ ತೆಗೆದುಕೊಂಡಿಲ್ಲ' ಎಂದು ದೂರು ನೀಡಿದ ಮಹಿಳೆ ಆಪಾದಿಸಿದ್ದಾರೆ.

ಪತಿ ಕೊಲೆಗೆ ಸುಪಾರಿ ನೀಡಿದ್ದ ಪತ್ನಿ

ಐವರು ಸೆರೆ: ಬೆಳ್ಳಂದೂರು ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ



ರಾಮ್



ಶಶಿಕುಮಾರ್



ಸುರೇಶ್



ಚಿನ್ನ

ಬೆಂಗಳೂರು: ಸುಪಾರಿ ನೀಡಿ ಪತಿಯ ಕೊಲೆ ಮಾಡಿಸಿದ್ದ ಪ್ರಕರಣದಲ್ಲಿ ಪತ್ನಿ ಸೇರಿದಂತೆ ನಾಲ್ವರು ಆರೋಪಿಗಳನ್ನು ಬೆಳ್ಳಂದೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.



ನಾಗರತ್ನಾ


ನಾಗರತ್ನಾ (27), ರಾಮ್(34), ಶಶಿಕುಮಾರ್(30), ಸುರೇಶ್ (29) ಹಾಗೂ ಚಿನ್ನ(29) ಬಂಧಿತರು. ಅ.14ರಂದು ಬೆಳ್ಳಂದೂರು ಠಾಣಾ ವ್ಯಾಪ್ತಿಯ ಬೋಗನಹಳ್ಳಿ ಸಮೀಪದ ನೀಲಗಿರಿ ತೋಪಿನಲ್ಲಿ ತಿಪ್ಪೇಶ್ (30) ಅವರ ಶವ ಪತ್ತೆಯಾಗಿತ್ತು. ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಕರೂರು ನಿವಾಸಿಗಳಾದ ತಿಪ್ಪೇಶ್ – ನಾಗರತ್ನಾ ದಂಪತಿಗೆ ಇಬ್ಬರು ಮಕ್ಕಳಿದ್ದು, ಬೆಳ್ಳಂದೂರಿನ ಬೋಗನಹಳ್ಳಿಯ ಲೇಬರ್ ಶೆಡ್‌ನಲ್ಲಿ ವಾಸವಾಗಿದ್ದರು. ಖಾಸಗಿ ಕಂಪನಿಯಲ್ಲಿ ಇಬ್ಬರೂ ಗಾರ್ಡನ್ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

'ನಾಗರತ್ನಾ ಹಾಗೂ ರಾಮ್ ಮಧ್ಯೆ ಸಲುಗೆ ಬೆಳೆದಿತ್ತು. ಈ ವಿಷಯ ತಿಪ್ಪೇಶ್ ಅವರಿಗೆ ಗೊತ್ತಾಗಿತ್ತು. ಪತ್ನಿಯೊಂದಿಗೆ ಜಗಳವಾಡಿದ್ದರು. ಇದಾದ ಮೇಲೆ ಪತಿಯ ಕೊಲೆಗೆ ಪತ್ನಿ ಸುಪಾರಿ ನೀಡಿದ್ದರು. ರಾಮ್ ಹಾಗೂ ಆತನ ಸ್ನೇಹಿತರು ಕೊಲೆಗೆ ಸಂಚು ರೂಪಿಸಿದ್ದರು. ತನ್ನ ಸ್ನೇಹಿತರಾದ ಶಶಿಕುಮಾರ್, ಸುರೇಶ್ ಮತ್ತು ಚಿನ್ನ ಅವರನ್ನು ಕರೆಸಿಕೊಂಡು ಅ.14ರಂದು ಬೋಗನಹಳ್ಳಿ ಕೆರೆ ಬಳಿಯ ನೀಲಗಿರಿ ತೋಪಿನ ಬಳಿ ಕರೆದೊಯ್ದು ಕೆಳಗೆ ತಳ್ಳಿ ಕುತ್ತಿಗೆ ಹಿಸುಕಿ ಮರ್ಮಾಂಗಕ್ಕೆ ಒದ್ದು ಕೊಲೆ ಮಾಡಿ ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

'ನೀಲಗಿರಿ ತೋಪಿನಲ್ಲಿ ತಿಪ್ಪೇಶ್ ಅವರ ಕೊಲೆ ಆಗಿದೆ ಎಂದು ಸಂಬಂಧಿಕರು ಹಾಗೂ ಸ್ಥಳೀಯರು ನಾಗರತ್ನಾ ಅವರಿಗೆ ತಿಳಿಸಿದ್ದರು. ಸ್ಥಳಕ್ಕೆ ತೆರಳಿದ್ದ ನಾಗರತ್ನಾ ಮೃತದೇಹದ ಎದುರು ಪತಿಯನ್ನು ಯಾರೋ ಕೊಲೆ ಮಾಡಿದ್ದಾರೆ' ಎಂದು ಕಣ್ಣೀರಿಟ್ಟು ನಾಟಕವಾಡಿದ್ದರು. ದುಷ್ಕರ್ಮಿಗಳು ಪತಿಯ ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ನಾಗರತ್ನಾ ಪೊಲೀಸರಿಗೆ ದೂರು ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ತನಿಖೆ ಕೈಗೊಂಡಾಗ ಆರಂಭದಲ್ಲಿ ಕೊಲೆಯ ಬಗ್ಗೆ ಯಾವುದೇ ಸುಳಿವು ಸಿಕ್ಕಿರಲಿಲ್ಲ. ನಂತರ ಘಟನೆ ನಡೆದ ಸುತ್ತ-ಮುತ್ತಲಿನ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಲಾಯಿತು. ಆರೋಪಿಗಳ ಚಲನವಲನ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ನಾಗರತ್ನಾ ಮೊಬೈಲ್ ಫೋನ್ ಕರೆಗಳನ್ನು ಪರಿಶೀಲಿಸಿದಾಗ ಆರೋಪಿ ರಾಮ್ ಜತೆ ನಿರಂತರವಾಗಿ ಸಂಪರ್ಕದಲ್ಲಿ ಇರುವುದು ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು.

ಭಾರತ– ಚೀನಾ ಒಪ್ಪಂದ: ಸೇನೆ, ರಾಜತಾಂತ್ರಿಕ ಕಾರ್ಯಕ್ಕೆ ಶ್ಲಾಘನೆ



ಎಸ್.ಜೈಶಂಕರ್

ಪುಣೆ (ಪಿಟಿಐ): ಭಾರತ ಮತ್ತು ಚೀನಾ ನಡುವಿನ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಗಸ್ತು ಕುರಿತ ಮಹತ್ವದ ಒಪ್ಪಂದಕ್ಕೆ ಸಂಬಂಧಿಸಿದಂತೆ ಊಹೆಗೂ ನಿಲುಕದ ಪರಿಸ್ಥಿತಿಗಳಲ್ಲಿ ಕೆಲಸ ನಿರ್ವಹಿಸಿದ ಸೇನೆ ಮತ್ತು ಚತುರ ರಾಜತಾಂತ್ರಿಕ ಕಾರ್ಯವನ್ನು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶ್ಲಾಘಿಸಿದ್ದಾರೆ.

ಪುಣೆಯಲ್ಲಿ ವಿದ್ಯಾರ್ಥಿಗಳ ಜತೆಗಿನ ಸಂವಾದದಲ್ಲಿ ಮಾತನಾಡಿ, 'ಸಂಬಂಧಗಳು ಸಹಜ ಸ್ಥಿತಿಗೆ ಬರಲು ಮತ್ತು ವಿಶ್ವಾಸ ವೃದ್ಧಿಗೆ ಸಮಯ ತೆಗೆದುಕೊಳ್ಳುತ್ತದೆ' ಎಂದರು.

ರಷ್ಯಾದ ಕಜಾನ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಭೇಟಿಯಾದಾಗ, ಈ ವಿಷಯದಲ್ಲಿ ಎರಡೂ ದೇಶಗಳ ವಿದೇಶಾಂಗ ಸಚಿವರು ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರರು ಹೇಗೆ ಮುಂದುವರಿಯಬೇಕು ಎಂಬುದನ್ನು ನಿರ್ಧರಿಸಲಾಯಿತು ಎಂದು ಅವರು ತಿಳಿಸಿದರು.

ದಶಕದಿಂದ ಗಡಿ ಭಾಗದಲ್ಲಿ ಭಾರತ ಮೂಲಸೌಕರ್ಯವನ್ನು ಹೆಚ್ಚಿಸಿದೆ. ಹಿಂದಿನ ವರ್ಷಗಳಲ್ಲಿ ಈ ಕಾರ್ಯವನ್ನು ನಿರ್ಲಕ್ಷಿಸಲಾಗಿತ್ತು ಎಂದು ಅವರು ಉತ್ತರಿಸಿದರು.

ವಿಶ್ವಸಂಸ್ಥೆಯಲ್ಲಿ ಪಾಕ್‌ಗೆ ತಿರುಗೇಟು

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಮಹಿಳೆಯರು, ಶಾಂತಿ ಮತ್ತು ಭದ್ರತೆ ಕುರಿತು ಆಯೋಜಿಸಿದ್ದ ಸಭೆಯಲ್ಲಿ ಪಾಕಿಸ್ತಾನವು 'ಕುಚೋದ್ಯದ ಪ್ರಚೋದನೆಯ' ಕೆಲಸ ಮಾಡಿದೆ ಎಂದು ಭಾರತವು ತಿರುಗೇಟು ನೀಡಿದೆ.

ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಮಹಿಳೆಯರ ಸ್ಥಿತಿಯು ಶೋಚನೀಯವಾಗಿದೆ ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಹರೀಶ್ ಪಿ. ಹೇಳಿದ್ದಾರೆ. ಪಾಕಿಸ್ತಾನದ ಪ್ರತಿನಿಧಿಗಳು ಭದ್ರತಾ ಮಂಡಳಿಯಲ್ಲಿ ಕಾಶ್ಮೀರದ ವಿಚಾರವನ್ನು ಮತ್ತೆ ಪ್ರಸ್ತಾಪಿಸಿದ್ದರು. 'ಹಿಂದೂಗಳು, ಸಿಖ್ಖರು ಮತ್ತು ಕ್ರೈಸ್ತ ಸಮುದಾಯಕ್ಕೆ ಸೇರಿದ ಮಹಿಳೆಯರ ಸ್ಥಿತಿ ಪಾಕಿಸ್ತಾನದಲ್ಲಿ ಶೋಚನೀಯವಾಗಿದೆ ಎಂಬುದು ನಮಗೆಲ್ಲ ತಿಳಿದಿದೆ' ಎಂದು ಹರೀಶ್ ಹೇಳಿದ್ದಾರೆ.

ನಿಧನ ವಾರ್ತೆ

ಎಲ್.ಬಿ.ಗೌಡ



ಬೆಂಗಳೂರು: ಕತ್ರಿಗುಪ್ಪೆ ನಿವಾಸಿ ನಿವೃತ್ತ ಶಿಕ್ಷಣಾಧಿಕಾರಿ ಎಲ್.ಬಿ.ಗೌಡ (82) ಅವರು ವಯೋಸಹಜ ಅನಾರೋಗ್ಯದಿಂದ ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಡಾ.ಮಮತಾ ಇದ್ದಾರೆ. ಮಾಗಡಿ ತಾಲ್ಲೂಕಿನ ಗೇರಹಳ್ಳಿಯಲ್ಲಿ ಭಾನುವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಗೆಳೆಯರೊಂದಿಗೆ ಸೇರಿ ಪತಿಯ ಕೊಲೆ: ಸುಂಟಿಕೊಪ್ಪದಲ್ಲಿ ಶವ ದಹನ

ಪ್ರಜಾವಾಣಿ ವಾರ್ತೆ



ನಿಹಾರಿಕಾ



ಡಾ.ನಿಖಿಲ್



ಅಂಕೂರ್

ಮಡಿಕೇರಿ: ತನ್ನ 3ನೇ ಪತಿ, ಹೈದರಾಬಾದ್ ನಿವಾಸಿ ರಮೇಶ್‌ಕುಮಾರ್ (54) ಎಂಬವರನ್ನು ತೆಲಂಗಾಣದಲ್ಲಿ ಕೊಂದು, ಶವವನ್ನು ಕೊಡಗು ಜಿಲ್ಲೆಯ ಸುಂಟಿಕೊಪ್ಪಕ್ಕೆ ತಂದು ಸುಟ್ಟು ಹಾಕಿದ ಆರೋಪದಲ್ಲಿ ತೆಲಂಗಾಣದ ಮಹಿಳೆ ನಿಹಾರಿಕಾ (29) ಹಾಗೂ ಆಕೆಯ ಇಬ್ಬರು ಸ್ನೇಹಿತರನ್ನು ಪೊಲೀಸರು ಬಂಧಿಸಿದ್ದಾರೆ.



ರಮೇಶ್

ನಿಹಾರಿಕಾ ಸ್ನೇಹಿತರಾದ ಬೆಂಗಳೂರಿನ ಪಶುವೈದ್ಯ ನಿಖಿಲ್ ಮೈರೆಡ್ಡಿ (28), ಹರಿಯಾಣದ ಅಂಕೂರ್ ರಾಣಾ (30) ಬಂಧಿತರು.

'ನಿಹಾರಿಕಾ ತನ್ನ ಆಸ್ತಿ ಮಾರಾಟದಿಂದ ಬರಬೇಕಿದ್ದ ₹8 ಕೋಟಿ ಪಡೆಯಲು ರಮೇಶ್‌ಕುಮಾರ್ ಅವರನ್ನು ಗೆಳೆಯ ಅಂಕೂರ್ ರಾಣಾ ಜೊತೆ ಸೇರಿ ತೆಲಂಗಾಣದಲ್ಲಿ ಕೊಲೆ ಮಾಡಿದ್ದಳು. ನಂತರ ಶವವನ್ನು ಇನ್ನೊಬ್ಬ ಸ್ನೇಹಿತ ನಿಖಿಲ್ ಮೈರೆಡ್ಡಿ ಜೊತೆ ಸೇರಿ ಅ. 8ರಂದು ಸುಂಟಿಕೊಪ್ಪದ ಸಮೀಪಕ್ಕೆ ತಂದು ಸುಟ್ಟಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಎಸ್ಪಿ ಕೆ. ರಾಮರಾಜನ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮೊದಲ ಪತಿಗೆ ವಿಚ್ಛೇದನ ನೀಡಿ ಹರಿಯಾಣದ ವ್ಯಕ್ತಿಯನ್ನು ವಿವಾಹವಾಗಿದ್ದ ನಿಹಾರಿಕಾ ವಿರುದ್ಧ 2ನೇ ಪತಿ ವಂಚನೆ ಪ್ರಕರಣ ದಾಖಲಿಸಿ, ಆಕೆಯನ್ನು ಜೈಲಿಗೆ ಕಳುಹಿಸಿದ್ದರು. ಜೈಲಿನಿಂದ ಬಿಡುಗಡೆಯಾದ ಬಳಿಕ ಆಕೆ ರಮೇಶ್‌ಕುಮಾರ್ ಜೊತೆ ವಿವಾಹವಾಗಿದ್ದಳು. ನಂತರ ಕಂಪನಿಯೊಂದರಲ್ಲಿ ಉದ್ಯೋಗಕ್ಕೆ ಸೇರಿ, ಬೆಂಗಳೂರಿನಲ್ಲಿ ನೆಲಸಿದ್ದಳು.

ಈ ವೇಳೆ ರಾಮಮೂರ್ತಿ ನಗರದ ಪಶುವೈದ್ಯ ನಿಖಿಲ್ ಜೊತೆ ಗೆಳೆತನ ಬೆಳೆಸಿದ್ದಳು. ಹತ್ಯೆಗೆ ಸಹಕಾರ ನೀಡಿದ ಅಂಕೂರ್ ರಾಣಾನನ್ನು ಹರಿದ್ವಾರದಿಂದ ಬಂಧಿಸಿ ಕರೆ ತರಲಾಯಿತು' ಎಂದು ಹೇಳಿದರು.

ಏಷ್ಯನ್ ನೆಟ್‌ಬಾಲ್ ಟೂರ್ನಿ ಫೈನಲ್‌ಗೆ ಶ್ರೀಲಂಕಾ, ಸಿಂಗಪುರ



ಭಾರತ ಮತ್ತು ಚೀನಾ ತೈಪೆ ಆಟಗಾರ್ತಿರ ಸೆಣಸಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿ ಚಾಂಪಿಯನ್ ಶ್ರೀಲಂಕಾ ಮತ್ತು ಸಿಂಗಪುರ ತಂಡಗಳು ಇಲ್ಲಿ ನಡೆಯುತ್ತಿರುವ 13ನೇ ಏಷ್ಯನ್ ನೆಟ್‌ಬಾಲ್ ಮಹಿಳಾ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ಪ್ರವೇಶಿಸಿದವು. ಭಾರತ ತಂಡವು ಟೂರ್ನಿಯಲ್ಲಿ 9ನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿತು.

ಇಲ್ಲಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಆರು ಬಾರಿಯ ಚಾಂಪಿಯನ್ ಶ್ರೀಲಂಕಾ ತಂಡವು 71–47ರಿಂದ ಹಾಂಗ್‌ಕಾಂಗ್ ತಂಡವನ್ನು ಸೋಲಿಸಿದರೆ, ಸಿಂಗಪುರ 54–46ರಿಂದ ಮಲೇಷ್ಯಾ ತಂಡವನ್ನು ಮಣಿಸಿತು. ಫೈನಲ್ ಹಣಾಹಣಿ ಭಾನುವಾರ ನಡೆಯಲಿದೆ.

ಇದಕ್ಕೂ ಮೊದಲು ನಡೆದ ಲೀಗ್‌ನಲ್ಲಿ ಭಾರತ ತಂಡವು 56–37ರಿಂದ ಚೀನಾ ತೈಪೆಯನ್ನು ಸೋಲಿಸಿತು. ಇತರ ಪಂದ್ಯಗಳಲ್ಲಿ ಸೌದಿ ಅರೇಬಿಯಾ 44–22ರಿಂದ ಇರಾಕ್ ತಂಡವನ್ನು; ಜಪಾನ್ 44–33ರಿಂದ ಬಹರೇನ್ ತಂಡವನ್ನು; ಥಾಯ್ಲೆಂಡ್ 57–39ರಿಂದ ಮಾಲ್ಡೀವ್ಸ್ ತಂಡವನ್ನು ಸೋಲಿಸಿತು.

ಭಾನುವಾರ ಫೈನಲ್‌ನಲ್ಲಿ ಶ್ರೀಲಂಕಾ ಮತ್ತು ಸಿಂಗಪುರ ತಂಡಗಳು ಸೆಣಸಲಿವೆ. ಮೂರನೇ ಸ್ಥಾನಕ್ಕಾಗಿ ಹಾಂಗ್‌ಕಾಂಗ್ ಮತ್ತು ಮಲೇಷ್ಯಾ ತಂಡಗಳು ಮುಖಾಮುಖಿಯಾಗುತ್ತಿವೆ.

ನಗರದಲ್ಲಿ ಇಂದು

ವಿಶ್ವ ಪಾರ್ಶ್ವವಾಯು ದಿನದ ಅಂಗವಾಗಿ ಜಾಗೃತಿ ಕಾರ್ಯಕ್ರಮ: ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಅಮಿತ್ ಕುಲಕರ್ಣಿ, ಜಿ.ಟಿ. ಸುಭಾಷ್, ಆಯೋಜನೆ: ವರ್ಲ್ಡ್ ಸ್ಟ್ರೋಕ್ ಆರ್ಗನೈಸೇಷನ್, ಸ್ಥಳ: ಡಿ.ಎ. ಪಾಂಡು ಮೆಮೊರಿಯಲ್ ಆರ್‌.ವಿ. ಡೆಂಟಲ್ ಕಾಲೇಜು, ಬೆಳಿಗ್ಗೆ 9

'ಹಳ್ಳಿಕಾರ ಸಮುದಾಯದ ಸಮಾವೇಶ–2024 ಹಾಗೂ ವಿದ್ಯಾರ್ಥಿವೇತನ ವಿತರಣಾ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅತಿಥಿಗಳು: ಎಂ. ವೀರಪ್ಪ ಮೊಯಿಲಿ, ಜಿ. ಪರಮೇಶ್ವರ, ರಾಮಲಿಂಗಾರೆಡ್ಡಿ, ಕೆ.ಎನ್. ರಾಜಣ್ಣ, ಶಿವರಾಜ್ ತಂಗಡಗಿ, ಡಿ. ಸುಧಾಕರ್, ಟಿ.ಬಿ. ಜಯಚಂದ್ರ, ಎಚ್‌.ಎಂ. ರೇವಣ್ಣ, ಅಶೋಕ್ ಎಂ. ಪಟ್ಟಣ, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಆಯೋಜನೆ: ಕರ್ನಾಟಕ ರಾಜ್ಯ ಹಳ್ಳಿಕಾರ ಸಂಘ, ಸ್ಥಳ: ಪೂರ್ಣಿಮಾ ಪ್ಯಾಲೇಸ್, ಮೈಸೂರು ರಸ್ತೆ, ಬೆಳಿಗ್ಗೆ 9.30



ದು.ಸರಸ್ವತಿ

ದು. ಸರಸ್ವತಿ ಅವರು ಅನುವಾದಿಸಿದ 'ಜಾತಿ ಮತ್ತು ಲಿಂಗತ್ವ' ಪುಸ್ತಕ ಬಿಡುಗಡೆ: ಕೆ.ವಿ. ನೇತ್ರಾವತಿ, ಉಮಾ ಚಕ್ರವರ್ತಿ, ಅತಿಥಿಗಳು: ಧಮ್ಮ ಸಂಘಿನಿ ರಮಾಫೋರಕ್, ಅನಘ ತಾಂಬೆ, ಪುಸ್ತಕದ ಕುರಿತು: ಭಾರತಿ ದೇವಿ ಪಿ., ಉಪಸ್ಥಿತಿ: ಮಮತಾ ಕೆ.ಎನ್., ಆಯೋಜನೆ: ಕೌದಿ ಪ್ರಕಾಶನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ಗೆಜ್ಜೆಗಾರ ಘಟ್ಟಿವಾಳಯ್ಯ ಜಯಂತಿ: ಉದ್ಘಾಟನೆ: ಡಿ. ಗಂಗಾಧರಪ್ಪ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಅತಿಥಿಗಳು: ಬಸವರಾಜಣ್ಣ, ಸುರೇಶ್, 'ವಚನ ಚಳವಳಿಯ ಗೆಜ್ಜೆಗಾರ ಘಟ್ಟಿವಾಳಯ್ಯ' ಉಪನ್ಯಾಸ: ಸುಜಾತ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಗುರು ಬಸವೇಶ್ವರ ಅಂಗಳ, ಬಾಗಲಗುಂಟೆ, ಬೆಳಿಗ್ಗೆ 10

ಭರತನಾಟ್ಯ ಪ್ರದರ್ಶನ: ಐಶ್ವರ್ಯ ಎನ್., ಮಾನ್ವಿ ಎಂ. ಸಿಂಚನಾ ಬಿ.ಎಲ್., ತನ್ಮಯಿ ಎಂ.ಆರ್., ಅತಿಥಿಗಳು: ನಿರ್ಮಲಾ ಸಿ. ಯಲಿಗಾರ್, ದೀಪಾ ಭಟ್, ಮಂಜುನಾಥ್ ಪುತ್ತೂರ್, ಆಯೋಜನೆ: ಶ್ರೀಗಣೇಶ ನೃತ್ಯಾಲಯ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ರಾ.ಕೆ. ಹನುಮಂತಯ್ಯ, ಉಪಸ್ಥಿತಿ: ಎಂ.ಆರ್. ವೆಂಕಟಾಚಲ ಅಯ್ಯಂಗಾರ್, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಏಳನೇ ಮುಖ್ಯರಸ್ತೆ, ಸಹಕಾರನಗರ, ಬೆಳಿಗ್ಗೆ 10

'ಲಿಪಿಗಳ ಉಗಮ ಮತ್ತು ವಿಕಾಸ' ಉಪನ್ಯಾಸ: ಕೆ.ಪಿ. ರಾವ್, 'ಭಾರತೀಯ ಪ್ರಾಚೀನ ಲಿಪಿಗಳು' ಉಪನ್ಯಾಸ, ಸಂವಾದ: ಅತಿಥಿ: ಸಂತೋಷ್ ತಮ್ಮಯ್ಯ, ಮಹೇಂದ್ರ ಡಿ., ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಕೆ.ಪಿ. ಸುರೇಶ ಅವರು ಅನುವಾದಿಸಿದ 'ದಕ್ಷಿಣ Vs ಉತ್ತರ' ಪುಸ್ತಕ ಬಿಡುಗಡೆ: ಅತಿಥಿಗಳು: ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಸಿ.ಎಂ. ಫೈಜ್, ಅಧ್ಯಕ್ಷತೆ: ಕವಿರಾಜ್, ಆಯೋಜನೆ: ಕಾನ್ಕೇವ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

'ಒಳಮೀಸಲಾತಿ@30' ಮುಂದಿನ ಸವಾಲುಗಳು: ಉದ್ಘಾಟನೆ: ಕೆ.ಎಚ್. ಮುನಿಯಪ್ಪ, ಸಾನ್ನಿಧ್ಯ: ಷಡಕ್ಷರಿಮುನಿ ಸ್ವಾಮೀಜಿ, ಗದ್ದಿಗೆಪ್ಪ ಅಜ್ಜ, ಅತಿಥಿಗಳು: ಎ. ನಾರಾಯಣಸ್ವಾಮಿ, ಎಲ್. ಹನುಮಂತಯ್ಯ, ಶ್ರೀನಿವಾಸ್, ಡಿ. ತಿಮ್ಮಯ್ಯ, ಸುಧಾಮದಾಸ್, ಆರ್. ಧರ್ಮಸೇನಾ, ಜಿ.ಎಸ್. ಮಂಜುನಾಥ್, ಮುಂಡರಗಿ ನಾಗರಾಜ್, ಮಾರಸಂದ್ರ ಮುನಿಯಪ್ಪ, ಆಯೋಜನೆ: ಮೂಲ ಮಾದಿಕ ಮೂವ್‌ಮೆಂಟ್–ಎಂ3 ಕರ್ನಾಟಕ, ಸ್ಥಳ: ಬಾಬೂಜಿ ಸಭಾಂಗಣ, ಲಿಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11

'ಕನ್ನಡ ತಂತ್ರಾಂಶ ಬಳಕೆಯಲ್ಲಿ ಸಾರ್ವಜನಿಕರು ಮತ್ತು ಸರ್ಕಾರದ ಪಾತ್ರ' ಸಮಾವೇಶ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅತಿಥಿಗಳು: ಎಂ. ನಾಗರಾಜು, ಡಾ. ವಸುಂಧರಾ ಭೂಪತಿ, ಅಧ್ಯಕ್ಷತೆ: ಎಸ್.ಎಲ್. ಗಂಗಾಧರಪ್ಪ, ಆಯೋಜನೆ: ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಟ್ರಸ್ಟ್‌ನ 36ನೇ ವಾರ್ಷಿಕೋತ್ಸವ, 'ಮೂರನೇ ಆದರ್ಶ ಜೈನ ಮಹಿಳಾ ರತ್ನ' ಪ್ರಶಸ್ತಿ ಪ್ರದಾನ, 25ನೇ ಪ್ರತಿಭಾ ಪುರಸ್ಕಾರ ಪ್ರದಾನ: ಸಾನ್ನಿಧ್ಯ: ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ, ಉದ್ಘಾಟನೆ: ಸುರೇಂದ್ರ ಕುಮಾರ್, ಅಧ್ಯಕ್ಷತೆ: ಎಸ್. ಜಿತೇಂದ್ರ ಕುಮಾರ್, ಪ್ರಶಸ್ತಿ ಪುರಸ್ಕೃತರು: ಅನುರಾಧ ಬಿ. ದೇಸಾಯಿ, ಅತಿಥಿ: ಅನಿತ ಸುರೇಂದ್ರ ಕುಮಾರ್, ಆಯೋಜನೆ: ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್, ಸ್ಥಳ: ಕರ್ನಾಟಕ ಜೈನ ಭವನ, ಕೆ.ಆರ್. ರಸ್ತೆ, ಶಂಕರಪುರ, ಮಧ್ಯಾಹ್ನ 2.30

ದಸರಾ ಉಪನ್ಯಾಸ ಮಾಲಿಕೆ: ರಮಾನಂದ ಚಕ್ರವರ್ತಿ, ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಹೈಗ್ರೌಂಡ್ಸ್, ಸಂಜೆ 4

'ಕಾಳಿಂಗ ನಾವಡ ಪ್ರಶಸ್ತಿ' ಪ್ರದಾನ: ಪ್ರಶಸ್ತಿ ಪುರಸ್ಕೃತರು: ಶಿವಾನಂದ ಕೋಟ, ಅತಿಥಿಗಳು: ಕಿರಣ್ ಕುಮಾರ್ ಕೊಡ್ಗಿ, ರವಿ ಬಸ್ರೂರ್, ಗಣೇಶ್ ಕಾಸರಗೋಡು, ಕೃಷ್ಣಮೂರ್ತಿ ಅಡಿಗ, ಗಣಪಯ್ಯ ನಾವಡ, ರಾಧಾಕೃಷ್ಣ ಉರಾಳ, 'ಕಾಲನೇಮಿ ಕಾಳಗ' ಯಕ್ಷಗಾನ ಪ್ರದರ್ಶನ, ಆಯೋಜನೆ: ಕಲಾ ಕದಂಬ ಆರ್ಟ್ ಸೆಂಟರ್, ಸ್ಥಳ: ಉದಯಭಾನು ಕಲಾ ಸಂಘ, ಗವಿಪುರ ಚಾಮರಾಜಪೇಟೆ, ಸಂಜೆ 4

ಭರತನಾಟ್ಯ ರಂಗಪ್ರವೇಶ: ಶುಭಶ್ರೀ ಎಂ.ಪಿ., ಅತಿಥಿಗಳು: ಪ್ರಸನ್ನ ಕಸ್ತೂರಿ, ಬ್ಯಾಂಕ್ ಜನಾರ್ಧನ್, ನಿರ್ಮಲಾ ಪ್ರಸನ್ನ, ಎಂ.ಆರ್. ಕಮಲ, ಸ್ಥಳ: ಶ್ರೀಕೃಷ್ಣ ದೇವರಾಯ ಕಲಾಮಂದಿರ, ಚೌಡಯ್ಯ ಸ್ಮಾರಕ ಭವನದ ಹಿಂಭಾಗ, ಮಲ್ಲೇಶ್ವರ, ಸಂಜೆ 5

22ನೇ ಸಂಗೀತೋತ್ಸವ ಹಾಗೂ ಪ್ರಶಸ್ತಿ ಪುರಸ್ಕಾರ: ಉದ್ಘಾಟನೆ: ಬಲವಂತರಾವ ಪಾಟೀಲ, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಪ್ರಶಸ್ತಿ ಪ್ರದಾನ: ಕೆ.ಪಿ. ಪುತ್ತೂರಾಯ, ಪ್ರಶಸ್ತಿ ಪುರಸ್ಕೃತರು: ಸಂಜೀವ ಯು. ಪೋತದಾರ, ಅತಿಥಿಗಳು: ಡಾ. ಅರ್ಚನಾ ಮಡ್ಡಿ, ದತ್ತರಾಜ್ ಜ. ಕುಲಕರ್ಣಿ, ಆಯೋಜನೆ: ಗುರು ಸಮರ್ಥ ಸಂಗೀತ ವಿದ್ಯಾಲಯ ಟ್ರಸ್ಟ್, ಸ್ಥಳ: ಪತ್ತಿ ಸಭಾಂಗಣ, ರಾಮಮಂದಿರ ಎನ್‌.ಆರ್. ಕಾಲೊನಿ, ಸಂಜೆ 6

ಕೆ.ಎನ್. ವಿಜಯಲಕ್ಷ್ಮಿ ಅನುವಾದ ಕಾವ್ಯ ಕಮ್ಮಟ ಮತ್ತು ಪ್ರಶಸ್ತಿ ಪ್ರದಾನ ಶಿಬಿರದ ಸಮಾರೋಪ ಸಮಾರಂಭ: ಪ್ರಶಸ್ತಿ ಪ್ರದಾನ: ಶೂದ್ರ ಶ್ರೀನಿವಾಸ್, ಪ್ರಶಸ್ತಿ ಪುರಸ್ಕೃತರು: ಮಲರ್‌ವಿಳಿ ಕೆ., ಅತಿಥಿಗಳು: ಕೆ.ಎನ್. ಸಹನ, ಕೆ.ಎನ್. ಕವನ, ಕೆ.ಎನ್. ಚಂದನ, ಕೂಡ್ಲೂರು ವೆಂಕಟಪ್ಪ, ಎಂ. ಜಯರಾಮು, ಆಯೋಜನೆ: ಸಂಸ ಥಿಯೇಟರ್, ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

ಭರತನಾಟ್ಯ ರಂಗಪ್ರವೇಶ: ಅನನ್ಯಾ ವೆಂಕಟೇಶ್, ಅತಿಥಿಗಳು: ರೂಪಶ್ರೀ ಮಧುಸೂಧನ್, ಟಿ.ಜಿ. ನರಸಿಂಹಮೂರ್ತಿ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮೈಸೂರು ಡರ್ಬಿ

ಜಾನ್ ವಿಕ್ ಗೆಲ್ಲುವ ನಿರೀಕ್ಷೆ

ಕ್ಯೂಬಿಕ್ ಮೈಸೂರು ಡರ್ಬಿ 2024 ಭಾನುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜಾನ್ ವಿಕ್ ಡರ್ಬಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬಾಲ್ಟಿಮೋರ್ 10, ದಿ ಗ್ರೇ ಗೆರೇನಿಯಮ್ 3, ಮೆಗಾನ್ 9
2ನೇ ರೇಸ್: ಹೈ ಒಪಿನಿಯನ್ 8, ಸದರ್ನ್ ಫೋರ್ಸ್ 5, ಗೋಲ್ಡನ್ ಟೈಮ್ 1
3ನೇ ರೇಸ್: ಡೈನಾಮಿಕ್ ಫೋರ್ಸ್ 6, ನ್ಯಾಚುರಲ್ ಒನ್ 7, ಮ್ಯಾಜಿಕ್ ಸರ್ಕಲ್ 4
4ನೇ ರೇಸ್: ಪಾಲಿಶ್ಡ್ ಗರ್ಲ್ 1, ಕ್ವಾರ್ 4, ಬ್ರೇವ್ ಟ್ರೂಪರ್ 6
5ನೇ ರೇಸ್: ಶ್ಯಾಮ್‌ರಾಕ್ 1, ಶುಬಾಂಕರ್ 4, ಓ ಹನ್ನಿ 2
6ನೇ ರೇಸ್: ಜಾನ್ ವಿಕ್ 4, ಬೋರ್ಬನೇರ್ 3, ಆಬುಶನ್ 1
7ನೇ ರೇಸ್: ಮಿಸ್ಟಿಕೋಸ್ 5, ಟೈಗರ್‌ಕಿಂಗ್ 3, ಶೆರ್ವಾ 2
8ನೇ ರೇಸ್: ಚಿಸಾಕ್ಸ್ 5, ಫಸ್ಟ್ ಇಂಪ್ರೆಶನ್ 4, ಅಲ್ಟಿಮೇಟ್ ಸ್ಟ್ರೈಕರ್ 9

ಉತ್ತಮ ಬೆಟ್: ದಿ ಗ್ರೇ ಗೆರೇನಿಯಮ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ನೆರೆಪೀಡಿತ ಪ್ರದೇಶಗಳ ಭೇಟಿಗೆ ಕಟ್ಟಪ್ಪಣೆ

ಹಿಂಗಾರು ಅವಧಿಯಲ್ಲಿ 25 ಸಾವು, 1.06 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಹಾನಿ • ಡಿಸೆಂಬರ್‌ವರೆಗೂ ಮಳೆ ಸಂಭವ –ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತಿವೃಷ್ಟಿ, ಪ್ರವಾಹ, ನೆರೆಪೀಡಿತ ಪ್ರದೇಶಗಳಿಗೆ ತಕ್ಷಣ ಭೇಟಿ ನೀಡಿ, ನಿಯಮಾವಳಿ ಪ್ರಕಾರ ಪರಿಹಾರ ನೀಡಬೇಕು. ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು' ಎಂದು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟಪ್ಪಣೆ ನೀಡಿದರು.

ಪ್ರಸಕ್ತ ಸಾಲಿನ ಹಿಂಗಾರು ಅವಧಿಯಲ್ಲಿ ಈವರೆಗೆ (ಅ.10ರ 25) ಅತಿವೃಷ್ಟಿಯಿಂದ ಹಾನಿಗೊಳಗಾದ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ಅವರು ಇಲ್ಲಿ ಸಭೆ ನಡೆಸಿ, ವಸ್ತುಸ್ಥಿತಿಯ ವಿವರ ಪಡೆದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು, 'ಹಿಂಗಾರು ಅವಧಿಯಲ್ಲಿ ಈವರೆಗೆ ವಾಡಿಕೆಗಿಂತಲೂ ಶೇ 58ರಷ್ಟು ಹೆಚ್ಚು ಮಳೆಯಾಗಿದೆ. ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ರಾಜ್ಯದ ಹಲವು ಭಾಗಗಳಲ್ಲಿ ಹೆಚ್ಚು ಮಳೆ ಆಗಲಿದೆ ಎಂದು ಈಗಾಗಲೇ ಮುನ್ಸೂಚನೆ ನೀಡಲಾಗಿದೆ' ಎಂದರು.

'ಅತಿವೃಷ್ಟಿಯಿಂದ ಮೃತಪಟ್ಟ 25 ಮಂದಿಯ ಕುಟುಂಬದವರಿಗೆ ತುರ್ತು ಪರಿಹಾರ ನೀಡಲಾಗಿದೆ. ಹಾನಿಗೀಡಾದ ಮನೆಗಳಿಗೆ ತಲಾ ₹ 1.20 ಲಕ್ಷ ಪರಿಹಾರ ಮತ್ತು ಮನೆ ನಿರ್ಮಿಸಿ ಕೊಡಲು, ಭಾಗಶಃ ಹಾನಿಗೀಡಾದ ಮನೆಗಳಿಗೆ ₹ 50 ಸಾವಿರದವರೆಗೆ ಪರಿಹಾರ ನೀಡಲು ಸೂಚಿಸಲಾಗಿದೆ. ಮನೆ ಮತ್ತು ಪ್ರಾಣ ಹಾನಿ ಪ್ರಕರಣಗಳಲ್ಲಿ 48 ಗಂಟೆಗಳಲ್ಲಿ ಪರಿಹಾರ ನೀಡಲು ಅಧಿಕಾರಿಗಳಿಗೆ ತಿಳಿಸಲಾಗಿದೆ' ಎಂದರು.

'ಪ್ರಾಥಮಿಕ ವರದಿ ಪ್ರಕಾರ 1.06 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಹಾನಿಯಾಗಿದೆ. ಬೆಳೆ ಹಾನಿ ಕುರಿತು ಜಂಟಿ ಸಮೀಕ್ಷೆಯು 3-4 ದಿನಗಳಲ್ಲಿ ಪೂರ್ಣಗೊಳ್ಳಲಿದೆ. ವಾರದಲ್ಲಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ವರದಿ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದರು.

'ಕೆರೆಗಳ ಒತ್ತುವರಿ ತೆರವುಗೊಳಿಸಲು ಈಗಾಗಲೇ ಎಲ್ಲ ಜಿಲ್ಲಾಧಿಕಾರಿಗಳಿಗೆ ಗಡುವು ವಿಧಿಸಲಾಗಿದೆ. ಬೆಂಗಳೂರು ಸುತ್ತಮುತ್ತಲಿನ ಬಹುತೇಕ ಕೆರೆಗಳು ಕೇವಲ ಶೇ 30ರಷ್ಟು ಮಾತ್ರ ತುಂಬಿವೆ. ಇದನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ' ಎಂದರು.

'ಅಲ್ಲದೆ, ಅತಿವೃಷ್ಟಿಯಿಂದ 12,553 ಕಿ.ಮೀ ಗ್ರಾಮೀಣ ರಸ್ತೆಗಳು, ಗ್ರಾಮೀಣ ಪ್ರದೇಶಗಳಲ್ಲಿ 1,106 ಸಣ್ಣ ಸೇತುವೆ, ಮೋರಿಗಳು ಹಾನಿಗೀಡಾಗಿವೆ. ಮೂಲಸೌಕರ್ಯಗಳಿಗೆ ಹಾನಿ ಕುರಿತೂ ಸಮಗ್ರ ವರದಿ ಸಲ್ಲಿಸಲು ಸೂಚಿಸಿದ್ದೇನೆ' ಎಂದು ಮುಖ್ಯಮಂತ್ರಿ ಹೇಳಿದರು.


ಪ್ರಸಕ್ತ ಸಾಲಿನ ಹಿಂಗಾರು ಅವಧಿಯಲ್ಲಿ ಈವರೆಗೆ ಹೆಚ್ಚು ಮಳೆಯಿಂದ ಹಾನಿಗೊಳಗಾದ ಜಿಲ್ಲೆಗಳ ಡಿಸಿ, ಸಿಇಒ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿದರು. ಸಚಿವರಾದ ಕೃಷ್ಣ ಬೈರೇಗೌಡ, ಎನ್. ಚಲುವರಾಯಸ್ವಾಮಿ, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಭೈರತಿ ಸುರೇಶ್ ಭಾಗವಹಿಸಿದ್ದರು

ಅತಿವೃಷ್ಟಿ ಪರಿಹಾರ ಕಾರ್ಯಗಳಿಗೆ ಜಿಲ್ಲಾಧಿಕಾರಿಗಳ ಖಾತೆಗಳಲ್ಲಿ ಒಟ್ಟು ₹ 551.25 ಕೋಟಿ, ತಹಶೀಲ್ದಾರ್‌ಗಳ ಖಾತೆಯಲ್ಲಿ ₹ 115.71 ಕೋಟಿ ಸೇರಿ ₹ 666.96 ಕೋಟಿ ಲಭ್ಯವಿದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಂಕಿ ಅಂಶಗಳು

- 181 ಮಿ.ಮೀ – ಅ.1ರಿಂದ ಬರಬೇಕಿದ್ದ ಸರಾಸರಿ ಮಳೆ
- 114 ಮಿ.ಮೀ – ಈ ಅವಧಿಯ ವಾಡಿಕೆ ಸರಾಸರಿ ಮಳೆ
- 25 – ಹಿಂಗಾರು ಅವಧಿಯಲ್ಲಿ ಈವರೆಗಿನ ಜೀವಹಾನಿ
- 84 – ಸಂಪೂರ್ಣ ಹಾನಿಯಾದ ಮನೆಗಳು
- 2,077 – ಭಾಗಶಃ ಹಾನಿಯಾದ ಮನೆಗಳು
- 895.62 ಟಿಎಂಸಿ ಅಡಿ – ರಾಜ್ಯದ ಪ್ರಮುಖ ಜಲಾಶಯಗಳ ನೀರು ಸಂಗ್ರಹಣಾ ಸಾಮರ್ಥ್ಯ
- 871.26 ಟಿಎಂಸಿ ಅಡಿ – ಪ್ರಸ್ತುತ ನೀರು ಸಂಗ್ರಹ
- 505.81 ಟಿಎಂಸಿ ಅಡಿ – (ಕಳೆದ ವರ್ಷ ಇದೇ ಅವಧಿಯಲ್ಲಿ ಸಂಗ್ರಹ)
- 74,993 ಹೆಕ್ಟೇರ್ – ಅತಿವೃಷ್ಟಿಯಿಂದ ಕೃಷಿ ಬೆಳೆ ಹಾನಿ
- 30,941 ಹೆಕ್ಟೇರ್ – ತೋಟಗಾರಿಕಾ ಬೆಳೆ ಹಾನಿ

ಸುದ್ದಿ 2 ನಿಮಿಷ

ರೈತ ಸಂಘ: ಅಧ್ಯಕ್ಷರಾಗಿ ಬಡಗಲಪುರ ನಾಗೇಂದ್ರ ಪುನರಾಯ್ಕೆ

ಚಿತ್ರದುರ್ಗ: ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷರಾಗಿ ಬಡಗಲಪುರ ನಾಗೇಂದ್ರ, ಗೌರವಾಧ್ಯಕ್ಷರಾಗಿ ಚಾಮರಸ ಮಾಲಿಪಾಟೀಲ, ಪ್ರಧಾನ ಕಾರ್ಯದರ್ಶಿಯಾಗಿ ರವಿಕಿರಣ್ ಪೂಣಚ್ಚ ಹಾಗೂ ಉಪಾಧ್ಯಕ್ಷರಾಗಿ ಕೆ.ಪಿ.ಭೂತಯ್ಯ ಶನಿವಾರ ಪುನರಾಯ್ಕೆಯಾದರು.

ಇಲ್ಲಿ ನಡೆದ ಸಂಘದ ರಾಜ್ಯ ಘಟಕದ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ನೂತನ ಪ್ರಧಾನ ಕಾರ್ಯದರ್ಶಿಯಾಗಿ ಎನ್.ಡಿ. ವಸಂತಕುಮಾರ್, ಕಾರ್ಯಾಧ್ಯಕ್ಷರಾಗಿ ಜೆ.ಎಂ.ವೀರಸಂಗಯ್ಯ, ಎ.ಗೋವಿಂದರಾಜು ಮತ್ತು ಎ.ಎಂ.ಮಹೇಶ್‌ಪ್ರಭು ಆಯ್ಕೆಯಾದರು.

ಖಜಾಂಚಿಯಾಗಿ ಪ್ರಸನ್ನ ಎನ್.ಗೌಡ, ಕಾರ್ಯದರ್ಶಿಗಳಾಗಿ ಗೋಪಾಲ ಪಾಪೇಗೌಡ, ಅರುಣ್‌ಕುಮಾರ್ ಕುರುಡಿ, ಸೂಗೂರಯ್ಯ ಎಸ್.ಮಠ, ಸಂಘಟನಾ ಕಾರ್ಯದರ್ಶಿಗಳಾಗಿ ಶ್ರೀಗೋಣಿ ಬಸಪ್ಪ, ಶಿವಾನಂದ ಇಟಗಿ, ರಾಜ್ಯ ಘಟಕದ ಉಪಾಧ್ಯಕ್ಷರಾಗಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸೇರಿ 11 ಮಂದಿ ಆಯ್ಕೆ ಮಾಡಲಾಯಿತು. ವರಿಷ್ಠ ಸಮಿತಿಯಲ್ಲಿ ಸುನೀತಾ ಪುಟ್ಟಣ್ಣಯ್ಯ ಅವರನ್ನು ಮುಂದುವರಿಸಲಾಯಿತು.

ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆಯಾಗಿ ನಾಗರತ್ನಮ್ಮ ವಿ.ಪಾಟೀಲ, ಪ್ರಧಾನ ಕಾರ್ಯದರ್ಶಿಗಳಾಗಿ ನೇತ್ರಾವತಿ, ರಮ್ಯಾ ರಾಮಣ್ಣ, ಕಾರ್ಯಾಧ್ಯಕ್ಷರಾಗಿ ಯದುಶೈಲ ಸಂಪತ್, ಉಪಾಧ್ಯಕ್ಷರಾಗಿ ಶಾಂತಮ್ಮಬಾಯಿ, ಪ್ರೇಮಾ ಕಂದಗಾಲ, ಕಾರ್ಯದರ್ಶಿಗಳಾಗಿ ಮಮತಾ ಹಾಗೂ ರತ್ನಮ್ಮ ಆಯ್ಕೆಯಾದರು.



'ಹಸಿರು ಪಟಾಕಿಗಷ್ಟೇ ಅವಕಾಶ'

ಬೆಂಗಳೂರು: 'ದೀಪಾವಳಿ ಸಂದರ್ಭದಲ್ಲಿ ಹಸಿರು ಪಟಾಕಿಗೆ ಮಾತ್ರ ಅವಕಾಶವಿದ್ದು, ಪರಿಸರಕ್ಕೆ ಹಾನಿಯಾಗುವ ಪಟಾಕಿಗಳಿಗೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು' ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ ನೀಡಿದ್ದಾರೆ.

'ಪಟಾಕಿ ದಾಸ್ತಾನು, ಮಾರಾಟ ಪ್ರಕ್ರಿಯೆಯಲ್ಲಿ ಸುರಕ್ಷತೆ ವಿಷಯದಲ್ಲಿ ಯಾವುದೇ ಲೋಪ ಆಗದಂತೆ ನೋಡಿಕೊಳ್ಳಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು' ಎಂದೂ ಅವರು ಸೂಚಿಸಿದ್ದಾರೆ.

'ರಾತ್ರಿ 8 ಗಂಟೆಯಿಂದ 10 ಗಂಟೆಯವರೆಗೆ ಮಾತ್ರ ಪಟಾಕಿ ಸಿಡಿಸಬೇಕು. ಹಸಿರು ಪಟಾಕಿ ಬಿಟ್ಟು ಬೇರೆ ಪಟಾಕಿ ಮಾರಾಟ ಮಾಡಲು ಅವಕಾಶ ಇಲ್ಲ. ನಿಯಮ ಉಲ್ಲಂಘಿಸಿದರೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು' ಎಂದು ಪಟಾಕಿ ಮಾರಾಟಗಾರರಿಗೆ ಮುಖ್ಯಮಂತ್ರಿ ಎಚ್ಚರಿಕೆ ನೀಡಿದ್ದಾರೆ.

ಗಂಗರಾಜುಗೆ ಇ.ಡಿ. ನೋಟಿಸ್

ಪ್ರಜಾವಾಣಿ ವಾರ್ತೆ


ಗಂಗರಾಜು

ಮೈಸೂರು: ಮುಡಾ ನಿವೇಶನಗಳ ಹಂಚಿಕೆ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಇಲ್ಲಿನ ಮಾಹಿತಿ ಹಕ್ಕು ಕಾರ್ಯಕರ್ತ ಎನ್. ಗಂಗರಾಜು ಅವರಿಗೆ ನೋಟಿಸ್ ನೀಡಿದ್ದಾರೆ.

'ಅ. 28ರಂದು ಬೆಂಗಳೂರಿನ ಇ.ಡಿ. ಕಚೇರಿಗೆ ವಿಚಾರಣೆಗೆ ಹಾಜರಾಗಲಿದ್ದೇನೆ. ಪ್ರಕರಣಕ್ಕೆ ಸಂಬಂಧಿಸಿ ಅಧಿಕಾರಿಗಳು ಕೇಳುವ ಪೂರಕ ದಾಖಲೆಗಳನ್ನು ಒದಗಿಸಲಿದ್ದೇನೆ' ಎಂದು ಗಂಗರಾಜು 'ಪ್ರಜಾವಾಣಿ'ಗೆ ತಿಳಿಸಿದರು.

'ಪೇಜಾವರ ಶ್ರೀ ಸರ್ಕಾರ ನಡೆಸಲ್ಲ'

ಪ್ರಜಾವಾಣಿ ವಾರ್ತೆ

ಸಾಗರ/ಸೊರಬ (ಶಿವಮೊಗ್ಗ): 'ಜಾತಿಗಣತಿ ಅವಶ್ಯಕತೆ ಇಲ್ಲ ಎಂದು ಪೇಜಾವರ ಶ್ರೀ ಹೇಳಿರಬಹುದು. ಆದರೆ ಅವರು ಸರ್ಕಾರ ನಡೆಸುವುದಿಲ್ಲವಲ್ಲ' ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಕುಟುಕಿದರು.

ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಅವರ ನಿವಾಸಕ್ಕೆ ಶನಿವಾರ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಜಾತಿ ಗಣತಿಗಾಗಿ ಸರ್ಕಾರ ₹160 ಕೋಟಿ ಖರ್ಚು ಮಾಡಿದೆ. ಅದನ್ನು ಬಿಡುಗಡೆ ಮಾಡಬಾರದು ಎಂದು ಹೇಳುವುದು ಸರಿಯಲ್ಲ. ಶಾಸಕ ಶಾಮನೂರು ಶಿವಶಂಕರಪ್ಪ ಜಾತಿ ಗಣತಿ ಕುರಿತು ಅಭಿಪ್ರಾಯ ಮಂಡಿಸಿದಾಕ್ಷಣ ಕಾಂಗ್ರೆಸ್ ಪಕ್ಷ ಇಬ್ಭಾಗವಾಗುತ್ತದೆ ಎಂದು ಅರ್ಥೈಸುವುದು ಸರಿಯಲ್ಲ' ಎಂದರು.

ಸೊರಬದ ಬಂಗಾರಧಾಮದಲ್ಲಿ ನಡೆದ ಎಸ್.ಬಂಗಾರಪ್ಪ ಅವರ 92ನೇ ಜನ್ಮದಿನಾಚರಣೆ ಸಮಾರಂಭದಲ್ಲೂ ಜಾತಿ ಗಣತಿ ವಿಚಾರವಾಗಿ ಮಾತನಾಡಿದರು.

'ರಾಜ್ಯದಲ್ಲಿ ಯಾರು ಎಷ್ಟು ಸಂಖ್ಯೆಯಲ್ಲಿ ಇದ್ದಾರೆ ಎಂದು ಹೇಳುವುದಕ್ಕೂ ಹಿಂಜರಿಯಬೇಕಾದ ಪರಿಸ್ಥಿತಿ ಬಂದಿರುವುದು ವಿಪರ್ಯಾಸ. ವರದಿ ಬಿಡುಗಡೆಯಾದ ನಂತರ ಆ ಬಗ್ಗೆ ಟೀಕೆ ಟಿಪ್ಪಣಿ ಮಾಡಲಿ. ವರದಿಯ ಸಾಧಕ-ಬಾಧಕಗಳ ಕುರಿತು ಚರ್ಚಿಸಲಿ. ವರದಿ ಆಧರಿಸಿ ಸರ್ಕಾರಕ್ಕೆ ಸಲಹೆ-ಸೂಚನೆ ನೀಡಲಿ' ಎಂದು ಹೇಳಿದರು.

'ಜಾತಿ ಜನಗಣತಿ ಯಾರನ್ನೂ ದೂರ ಇಡುವ ಉದ್ದೇಶದಿಂದ ಮಾಡಿದ್ದಲ್ಲ. ವರದಿ ಶೀಘ್ರ ಬಹಿರಂಗಕ್ಕೆ ಸರ್ಕಾರ ಬದ್ಧವಿದೆ' ಎಂದು ಸ್ಪಷ್ಟಪಡಿಸಿದರು.

'ವೇದ–ಮಂತ್ರಗಳಿಂದ ಜೀವನ ಸಾರ್ಥಕ'

'ನಮಃ ಶಿವಾಯ' ಸ್ತೋತ್ರ ಮಹಾಸಮರ್ಪಣೆ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನುಷ್ಯ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವ ಎಲ್ಲ ಸೂತ್ರಗಳನ್ನೂ ವೇದ–ಮಂತ್ರಗಳು ಒಳಗೊಂಡಿವೆ. ಈ ದೈವತ್ವದಲ್ಲಿ ಭಿನ್ನತೆ, ಅಸಮಾನತೆಗೆ ಅವಕಾಶವೇ ಇಲ್ಲ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದರು.

ಅರಮನೆ ಮೈದಾನದಲ್ಲಿ ಸುವರ್ಣ ಭಾರತೀ, ವೇದಾಂತ ಭಾರತೀ ಹಾಗೂ ಮಿಥಿಕ್ ಸೊಸೈಟಿ ಸಹಯೋಗದಲ್ಲಿ ಶೃಂಗೇರಿ ಶಾರದಾ ಪೀಠದ ಶಂಕರಾಚಾರ್ಯ ಭಾರತೀ ತೀರ್ಥ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಸುವರ್ಣ ಭಾರತೀ ಸಮಾವೇಶ, 'ನಮಃ ಶಿವಾಯ' ಸ್ತೋತ್ರ ಮಹಾಸಮರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಹಿಂಸೆ, ಗುರುಹಿರಿಯರನ್ನು ಗೌರವಿಸುವಿಕೆ, ಸಹಭಾಗಿತ್ವ, ಒಳಗೊಳ್ಳುವಿಕೆಯೇ ಸನಾತನ ಧರ್ಮದ ತಿರುಳು. ಶ್ಲೋಕಗಳು ಎಲ್ಲರ ಹೃದಯ ಶುದ್ಧೀಕರಣಗೊಳಿಸುತ್ತವೆ. ಇದೇ ಭಾರತೀಯ ಸಂಸ್ಕೃತಿ. ಮಾನವೀಯ ಧರ್ಮದ ತಳಹದಿ. ವಸುಧೈವ ಕುಟುಂಬಕಂ ಪರಿಕಲ್ಪನೆ, ಮಂತ್ರಗಳು ಸೃಷ್ಟಿಸುವ ಕಂಪನ, ತಾಳ, ಆಲಾಪಗಳು ಶಾಂತಿ, ಸೌಹಾರ್ದ ಸಾರುತ್ತವೆ. ಬಡವರಲ್ಲಿಯೂ ದೇವರನ್ನು ಕಾಣುವ ಉದಾತ್ತ ಚಿಂತನೆಯನ್ನು ಹಿಂದೂ ಧರ್ಮ ಒಳಗೊಂಡಿದೆ ಎಂದು ಬಣ್ಣಿಸಿದರು.

ಭಾರತೀಯ ಸನಾತನ ಧರ್ಮ ಮಾನವೀಯತೆಯನ್ನು ಜಗತ್ತಿಗೆ ಸಾರಿದೆ. ಇಡೀ ಭಾರತವೇ ಆಧ್ಯಾತ್ಮದ ಕೇಂದ್ರವಾಗಿದೆ. ಪೆನ್, ಪೆನ್‌ಡ್ರೈವ್ ಇಲ್ಲದ ಕಾಲದಲ್ಲಿ ವೇದಮಂತ್ರಗಳನ್ನು ಉಳಿಸಿಕೊಂಡು ಬಂದಿರುವ ಪೂರ್ವಿಕರ ಧೀಶಕ್ತಿ ಊಹಿಸಲೂ ಸಾಧ್ಯವಿಲ್ಲ. ಸ್ವಾರ್ಥ ಇಲ್ಲದ ಭಾರತೀ ತೀರ್ಥ ಸ್ವಾಮೀಜಿ ಅವರು ಸನ್ಯಾಸ ಸ್ವೀಕರಿಸಿ ಐದು ದಶಕಗಳು ಪೂರ್ಣಗೊಂಡಿವೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಕಳುಹಿಸಿದ್ದ ಸಂದೇಶವನ್ನು ಅಖಿಲ ಭಾರತ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ಓದಿದರು. ಕೆ .ಆರ್.ನಗರದ ಯಡತೊರೆ ಯೋಗಾನಂದೇಶ್ವರ ಸರಸ್ವತಿ ಮಠದ ಶಂಕರಭಾರತಿ, ಬ್ರಹ್ಮಾನಂದ ಭಾರತಿ ಸ್ವಾಮೀಜಿ, ಕೇಂದ್ರ ಸಚಿವ ವಿ. ಸೋಮಣ್ಣ ಉಪಸ್ಥಿತರಿದ್ದರು.


ಬೆಂಗಳೂರಿನಲ್ಲಿ ಶನಿವಾರ ನಡೆದ ಶೃಂಗೇರಿ ಶಂಕರಾಚಾರ್ಯ ಭಾರತೀ ತೀರ್ಥ ಸ್ವಾಮೀಜಿ ಅವರ ಸುವರ್ಣ ಭಾರತೀ ಸಮಾವೇಶದಲ್ಲಿ ಭಾಗವಹಿಸಿದ್ದ ಉಪರಾಷ್ಟ್ರಪತಿ ಜಗದೀಪ್ ಧನಕರ್, ಅವರ ಪತ್ನಿ ಸುದೇಶ್ ಧನಕರ್ ಅವರು ಶೃಂಗೇರಿ ವಿಧುಶೇಖರ ಭಾರತಿ ಸ್ವಾಮೀಜಿ ಆಶೀರ್ವಾದ ಪಡೆದರು —ಪಿಟಿಐ ಚಿತ್ರ

ಶೃಂಗೇರಿ ಮಠದ ಭಾರತೀ ತೀರ್ಥರು ಧರ್ಮ ಉಳಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಅಂತಹ ಮಠದ ಜತೆಗೆ ಇಡೀ ಸರ್ಕಾರ ಇದೆ
ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಧರ್ಮ ಮಾರ್ಗದಲ್ಲಿ ಬದುಕು ಎಂಬುದನ್ನು ಕಲಿಸಿದ್ದು ಸನಾತನ ಧರ್ಮ. ಇಂತಹ ಧರ್ಮದ ಉಳಿವಿಗೆ ಶ್ರಮಿಸಿದವರು ಶಂಕರಾಚಾರ್ಯರು
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ದಾಖಲೆಗೆ ಸೇರಿದ 'ನಮಃ ಶಿವಾಯ'

ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 1.5 ಲಕ್ಷ ಜನರು ಏಕಕಾಲಕ್ಕೆ 'ನಮಃ ಶಿವಾಯ' ಸ್ತೋತ್ರ ಪಠಣ ಮಾಡಿದರು. ಈ ಪಠಣ 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್'ಗೆ ಸೇರಿತು.

'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್'ನ ಅಧಿಕಾರಿಗಳು ಶೃಂಗೇರಿ ಮಠದ ವಿಧುಶೇಖರ ಭಾರತೀ ಸ್ವಾಮೀಜಿ ಅವರಿಗೆ ದಾಖಲೆಗೆ ಸೇರ್ಪಡೆ ಮಾಡಿದ ಪ್ರಮಾಣಪತ್ರ ನೀಡಿದರು.

'ಸನಾತನ ಹಿಂದೂಗಳು ಒಟ್ಟಾಗಬೇಕು'

ವಿಶ್ವದ ಎಲ್ಲಾ ಸನಾತನ ಹಿಂದೂಗಳು ಒಟ್ಟಿಗೆ ಸೇರಬೇಕು ಎನ್ನುವ ಆಶಯವಿದೆ. ಹಿಂದೂ ಧರ್ಮ ಉಳಿದರೆ ಜಗತ್ತಿನ ಎಲ್ಲಾ ಧರ್ಮಗಳೂ ಉಳಿಯುತ್ತವೆ ಎಂದು ಶೃಂಗೇರಿ ಶಾರದಾ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿ ಹೇಳಿದರು.

ಹಿಂದೂ ಧರ್ಮ ರಕ್ಷಣೆಗೆ ಎಲ್ಲರೂ ಏಕ ಧ್ವನಿಯಿಂದ ಮುನ್ನಡೆಯಬೇಕು. ಶಂಕರಭಾರತೀ ಮಹಾಸ್ವಾಮೀಜಿ ಆಡಂಬರಗಳಿಲ್ಲದೇ ನೈಜ ಕೆಲಸ ಮಾಡುವ ಯತಿಗಳು. ಬ್ರಹ್ಮಾನಂದ ಭಾರತೀ ಸ್ವಾಮೀಜಿ ಸಹ ಗುರುಗಳನ್ನು ಅನುಸರಣೆ ಮಾಡುತ್ತಿದ್ದರು ಎಂದು ಸ್ಮರಿಸಿದರು.



'ಬಂಗಾರ' ಪ್ರಶಸ್ತಿ ಪ್ರದಾನ

ಶಿವಮೊಗ್ಗ ಜಿಲ್ಲೆ ಸೊರಬದ ಬಂಗಾರಧಾಮದಲ್ಲಿ ಶನಿವಾರ ರಾತ್ರಿ ನಡೆದ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ 92ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಸಾಹಿತಿ ಕುಂ.ವೀರಭದ್ರಪ್ಪ ಅವರಿಗೆ 'ಸಾಹಿತ್ಯ ಬಂಗಾರ', ಬೆಂಗಳೂರಿನ ಸುಮಂಗಲಿ ಆಶ್ರಮದ ಅಧ್ಯಕ್ಷೆ ಎಸ್.ಜಿ.ಸುಶೀಲಮ್ಮ ಅವರಿಗೆ 'ಸೇವಾ ಬಂಗಾರ' ಹಾಗೂ ರಂಗಕರ್ಮಿ ಪ್ರತಿಭಾ ನಾರಾಯಣ್ ಅವರಿಗೆ 'ಕಲಾ ಬಂಗಾರ' ಪ್ರಶಸ್ತಿಯನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ ಹಾಗೂ ನಟ ಶಿವರಾಜಕುಮಾರ್ ಪ್ರದಾನ ಮಾಡಿದರು. ಸಚಿವ ಮಧು ಬಂಗಾರಪ್ಪ, ಶಿರಸಿ ಶಾಸಕ ಭೀಮಣ್ಣ ನಾಯ್ಕ, ವಿಧಾನ ಪರಿಷತ್ ಸದಸ್ಯರಾದ ಮಂಜುನಾಥ ಭಂಡಾರಿ, ಬಲ್ಕಿಷ್ ಬಾನು, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಆರ್. ಪ್ರಸನ್ನಕುಮಾರ್, ಬಂಗಾರಪ್ಪ ಫೌಂಡೇಷನ್ ಅಧ್ಯಕ್ಷ ವೇಣುಗೋಪಾಲ ನಾಯ್ಕ ಹಾಗೂ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಉಪಸ್ಥಿತರಿದ್ದರು

ಶೇ 3ರಷ್ಟು ಪ್ರತ್ಯೇಕ ಮೀಸಲಾತಿಗೆ ಚರ್ಮಕಾರ ಮಹಾಸಭಾ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಚರ್ಮಕಾರರ ಉಪ ಜಾತಿಗಳನ್ನು ಮಾದಿಗ ಸಂಬಂಧಿತ ಪಟ್ಟಿಯಿಂದ ಬೇರ್ಪಡಿಸಿ ಶೇಕಡ 3 ರಷ್ಟು ಪ್ರತ್ಯೇಕ ಮೀಸಲಾತಿ ನೀಡಬೇಕು' ಎಂದು ಅಖಿಲ ಕರ್ನಾಟಕ ಚರ್ಮಕಾರ ಮಹಾಸಭಾ ಶನಿವಾರ ಆಗ್ರಹಪಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಭೀಮರಾವ್ ಪವಾರ, 'ಮೂಲ ಚರ್ಮಕಾರ ಸಮುದಾಯಗಳಾದ ಸಮಗಾರ, ಘೋರ, ಡೋಹಾರ, ಮೋಚಿ, ಚಂಬಾರ, ತೆಲುಗು ಮೋಚಿ, ಕಾಮಾಟಿ ಮೋಚಿ, ಚಮಗಾರ್, ಸಮಗಾರ್ ಸೇರಿ 18 ಸಮುದಾಯಗಳನ್ನು ಮಾದಿಗ ಸಂಬಂಧಿತ ಜಾತಿಗಳ ಪಟ್ಟಿಯಿಂದ ಪ್ರತ್ಯೇಕಿಸಿ, ಪ್ರತ್ಯೇಕವಾಗಿ ಶೇ 3ರಷ್ಟು ಮೀಸಲಾತಿ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

'ರಾಜಕೀಯ ಸೀಟು ಹಂಚಿಕೆ ಮತ್ತು ಸರ್ಕಾರದ ಉನ್ನತ ಹುದ್ದೆಗಳನ್ನು ನೀಡುವಾಗ ಇಷ್ಟು ಪ್ರಮಾಣದ ಮೀಸಲಾತಿಯನ್ನು ಪರಿಗಣಿಸಬೇಕು. ಡಾ.ಅಂಬೇಡ್ಕರ್ ಅವರು 1927ರಲ್ಲಿ ಧಾರವಾಡಕ್ಕೆ ಭೇಟಿ ನೀಡಿ ಉದ್ಘಾಟಿಸಿದ ಮಚಿಗಾರ್ ಸಹಕಾರ ಸಂಘದ ಕಟ್ಟಡ ಮತ್ತು ಸಂಪೂರ್ಣ ನಿವೇಶವನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಘೋಷಿಸಬೇಕು' ಎಂದು ಅವರು ಆಗ್ರಹಿಸಿದರು.

ರಾಜ್ಯದಲ್ಲಿ ಮೂಲ ಚರ್ಮಕಾರರ ಜನಸಂಖ್ಯೆ 15 ಲಕ್ಷದಿಂದ 16 ಲಕ್ಷದವರೆಗೂ ಇದೆ ಎಂದು ಪ್ರತಿಪಾದಿಸಿದರು. ಮಹಾಸಭಾದ ಗೌರವಾಧ್ಯಕ್ಷ ಮೋಹನ ಉಳ್ಳಿಕಾಶಿ, ಪ್ರಧಾನ ಕಾರ್ಯದರ್ಶಿ ಸುನೀಲ ಮದನಭಾವಿ, ಉಪಾಧ್ಯಕ್ಷ ಶಿವಲಿಂಗಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

ಕುಳುವ ಮಹಾಸಂಘ ವಿರೋಧ

ಬೆಂಗಳೂರು: ಸರ್ಕಾರ ಯಾರದೋ ಒತ್ತಡಕ್ಕೆ ಮಣಿದು ಒಳಮೀಸಲಾತಿಯನ್ನು ಜಾರಿಗೊಳಿಸಬಾರದು ಎಂದು ಅಖಿಲ ಕರ್ನಾಟಕ ಕುಳುವ ಮಹಾ ಸಂಘ ಶನಿವಾರ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಕಾರ್ಯದರ್ಶಿ ಶ್ರೀಕಾಂತ್, '2011ರ ಜನಸಂಖ್ಯೆಯ ಅನುಗುಣವಾಗಿ ಒಳಮೀಸಲಾತಿ ಜಾರಿಗೊಳಿಸಿದರೆ, ಅನೇಕ ಸಮುದಾಯಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಸರ್ಕಾರ ಹೊಸದಾಗಿ ಜಾತಿಗಣತಿಯನ್ನು ನಡೆಸಬೇಕು. ಒಳಮೀಸಲಾತಿ ಹಂಚಿಕೆಗೆ ಸಂಬಂಧಿಸಿದಂತೆ ತಜ್ಞರ ಸಮಿತಿ ರಚಿಸಬೇಕು' ಎಂದು ಒತ್ತಾಯಿಸಿದರು.

'ರಾಜ್ಯದಲ್ಲಿ ನಮ್ಮ ಸಮುದಾಯದ ಜನಸಂಖ್ಯೆ ಸುಮಾರು 15ಲಕ್ಷಕ್ಕಿಂತ ಹೆಚ್ಚಿದೆ. ಸಾಮಾಜಿಕ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿದೆ. ಯಾವುದೇ ಕಾರಣಕ್ಕೂ 2011ರ ಜನಗಣತಿಯನ್ನು ಪರಿಗಣಿಸಿ ಒಳಮೀಸಲಾತಿ ಜಾರಿಗೊಳಿಸಬಾರದು. ಕಾಂತರಾಜ ಆಯೋಗದ ವರದಿಯನ್ನು ಈ ಕೂಡಲೇ ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು. ಸಂಘದ ಸದಸ್ಯರಾದ ರಾಜಲಕ್ಷ್ಮಿ, ಗಾಯತ್ರೀ, ಗೀತಾ, ಪ್ರಭಾವತಿ ಸುದ್ದಿಗೋಷ್ಠಿಯಲ್ಲಿದ್ದರು.

ಮುಖ್ಯ ಕಾರ್ಯದರ್ಶಿಗೆ ಸಮನ್ಸ್: ಸುಪ್ರೀಂ ಕೋರ್ಟ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ರಿಮಿನಲ್ ಪ್ರಕರಣವೊಂದರಲ್ಲಿ ರಾಜ್ಯ ವಕೀಲರಿಗೆ ತಪ್ಪು ಸೂಚನೆ ನೀಡಿದ ಕರ್ನಾಟಕ ಸರ್ಕಾರವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತರಾಟೆಗೆ ತೆಗೆದುಕೊಂಡಿದೆ. ಸರ್ಕಾರಿ ವಕೀಲರು ಸೂಕ್ತ ಸಹಕಾರ ನೀಡದಿದ್ದರೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಸಮನ್ಸ್ ನೀಡಲಾಗುವುದು ಎಂದು ಎಚ್ಚರಿಸಿದೆ.

ವಿವಿಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪದಲ್ಲಿ ವಿನಾಯಕ್ ಯಾನೆ ವಿನಯ್ ಗೌಡ ಮರಿಗೌಡ ಎಂಬುವರ ವಿರುದ್ಧ ಗೋಕಾಕ ನಗರ ಠಾಣೆಯಲ್ಲಿ 2020ರಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ಅವರನ್ನು ಬಂಧಿಸಲಾಗಿತ್ತು. ಇದನ್ನು ಪ್ರಶ್ನಿಸಿ ಆರೋಪಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ವಿನಾಯಕ್ ಅವರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಆರೋಪಿಗೆ ಮೂರು ತಿಂಗಳ ಮಧ್ಯಂತರ ಜಾಮೀನನ್ನು ಆಗಸ್ಟ್ 30ರಂದು ಮಂಜೂರು ಮಾಡಲಾಗಿತ್ತು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ಪೀಠ, 'ರಾಜ್ಯದ ಕಡೆಯಿಂದ ಇಂತಹ ಲೋಪ ನಡೆಯುತ್ತಿರುವುದು ಇದೇ ಮೊದಲಲ್ಲ. ಅತ್ಯಂತ ಸರಿಪಡಿಸಲಾಗದ ರಾಜ್ಯ' ಎಂದು ತರಾಟೆಗೆ ತೆಗೆದುಕೊಂಡಿತು.

ಇದಕ್ಕೂ ಮುನ್ನ ರಾಜ್ಯದ ಪರ ವಾದ ಮಂಡಿಸಿದ ಹಿರಿಯ ವಕೀಲ ದೇವದತ್ ಕಾಮತ್, 'ಆರೋಪಿ ವಿರುದ್ಧ ಆರೋಪ ಹೊರಿಸಲಾಗಿಲ್ಲ ಎಂದು ಹಿಂದಿನ ಆದೇಶದಲ್ಲಿ ತಪ್ಪಾಗಿ ದಾಖಲಿಸಲಾಗಿದೆ. ಸರ್ಕಾರದಿಂದ ಅಚಾತುರ್ಯ ಆಗಿದೆ' ಎಂದರು.

ಹಿಂದಿನ ವಿಚಾರಣೆಯ ಸಂದರ್ಭದಲ್ಲಿ ರಾಜ್ಯದ ವಕೀಲರು, 'ಅರ್ಜಿದಾರರು ಅನೇಕ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಮತ್ತು ಸಾರ್ವಜನಿಕರಿಗೆ ಅಪಾಯವನ್ನುಂಟು ಮಾಡಿದ್ದಾರೆ. ಪ್ರಕರಣದಲ್ಲಿ ಭಾಗಿಯಾದ 21 ಆರೋಪಿಗಳು ಒಂದರ ನಂತರ ಒಂದರಂತೆ ವಿವಿಧ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆ. ಆರೋಪಿಗಳ ಮೇಲೆ ವಿಚಾರಣಾ ನ್ಯಾಯಾಲಯವು ಈವರೆಗೆ ಆರೋಪ ಹೊರಿಸಿಲ್ಲ' ಎಂದು ನ್ಯಾಯಪೀಠದ ಗಮನಕ್ಕೆ ತಂದಿದ್ದರು.

ಶಾಸಕ ಸೈಲ್‌ಗೆ 7 ವರ್ಷ ಜೈಲು

ಒಂದನೇ ಪುಟದಿಂದ...

ಶಿಕ್ಷೆಯ ಪ್ರಮಾಣವನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ 82ನೇ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಶನಿವಾರ ನ್ಯಾಯಾಲಯದಲ್ಲಿ ಪ್ರಕಟಿಸಿದರು.

ಎಲ್ಲ ಅಪರಾಧಿಗಳಿಗೆ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 379ರ ಅಡಿ ಕಳವು ಅಪರಾಧಕ್ಕೆ 3 ವರ್ಷ, 120-ಬಿಯ ಕ್ರಿಮಿನಲ್ ಪಿತೂರಿಗೆ 5 ವರ್ಷ ಹಾಗೂ 420ರ ವಂಚನೆ ಅಡಿಯ ಅಪರಾಧಕ್ಕೆ 7 ವರ್ಷಗಳ ಗರಿಷ್ಠ ಜೈಲು ಶಿಕ್ಷೆ ವಿಧಿಸಲಾಗಿದೆ.ಎಲ್ಲ ಶಿಕ್ಷೆಗಳೂ ಏಕಕಾಲಕ್ಕೆ ಜಾರಿಯಾಗುವ ಕಾರಣ ಗರಿಷ್ಠ 7 ವರ್ಷಗಳ ಜೈಲು ಶಿಕ್ಷೆಯೇ ಅಂತಿಮ ಪರಿಗಣನೆಗೆ ಬರಲಿದೆ. ಐಪಿಸಿ ಕಲಂ 420ರ ವಂಚನೆ ಅಪರಾಧದ ಅಡಿ ಸತೀಶ್ ಸೈಲ್‌ಗೆ ಎಲ್ಲ ಆರು ಪ್ರಕರಣಗಳಲ್ಲಿ ಏಳು ವರ್ಷಗಳ ಗರಿಷ್ಠ ಜೈಲು ಶಿಕ್ಷೆ ವಿಧಿಸಲಾಗಿದೆ. ಮಹೇಶ್ ಜೆ.ಬಿಳಿಯೆ ಅವರಿಗೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ–1988ರ ಕಲಂ 13(1) (ಸಿ) ಮತ್ತು (ಡಿ) ಜೊತೆಗೆ 13(2)ರ ಅಡಿಯಲ್ಲೂ ಶಿಕ್ಷೆ ವಿಧಿಸಲಾಗಿದೆ.

ಪೊಲೀಸರು ಎಲ್ಲ ಅಪರಾಧಿಗಳನ್ನು ಕೋರ್ಟ್‌ಗೆ ಖುದ್ದು ಹಾಜರುಪಡಿಸಿದ್ದರು.

ಆರು ಪ್ರಕರಣ; ದಂಡ ಎಷ್ಟು?

ಒಂದನೇ ಪುಟದಿಂದ...

- 4: ಮಹೇಶ್ ಜೆ.ಬಿಳಿಯೆ, ಮೆಸರ್ಸ್ ಸ್ವಸ್ತಿಕ್ ಸ್ಟೀಲ್ಸ್ (ಹೊಸಪೇಟೆ) ಪ್ರೈವೇಟ್ ಲಿಮಿಟೆಡ್ ಮತ್ತು ಅದರ ಮಾಲೀಕರಾದ ಕೆ.ವಿ.ನಾಗರಾಜ್ ಹಾಗೂ ಕೆ.ವಿ.ಎನ್. ಗೋವಿಂದರಾಜ್ ಮತ್ತು ಮೆಸರ್ಸ್ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಸೈಲ್‌ಗೆ ₹9.54 ಕೋಟಿ ದಂಡ.
- 5: ಮಹೇಶ್ ಜೆ.ಬಿಳಿಯೆ, ಮೆಸರ್ಸ್ ಶ್ರೀ ಲಕ್ಷ್ಮಿ ವೆಂಕಟೇಶ್ವರ ಮಿನರಲ್ಸ್ ಮಾಲೀಕ ಕೆ.ಮಹೇಶ್ ಕುಮಾರ್ ಅಲಿಯಾಸ್ ಖಾರದಪುಡಿ ಮಹೇಶ್, ಮೆಸರ್ಸ್ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಸೈಲ್‌ಗೆ ₹9.25 ಕೋಟಿ ದಂಡ.
- 6: ಮಹೇಶ್ ಜೆ.ಬಿಳಿಯೆ, ಮೆಸರ್ಸ್ ಲಾಲ್ ಮಹಲ್ ಲಿಮಿಟೆಡ್ ಮತ್ತು ಅದರ ಮಾಲೀಕ ಪ್ರೇಮ್‌ಚಂದ್ ಗರಗ್ ಮತ್ತು ಮೆಸರ್ಸ್ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಸೈಲ್‌ಗೆ ₹90 ಲಕ್ಷ ದಂಡ.

ಸೈಲ್ ಅನರ್ಹಗೊಳಿಸಿ: ಪ್ರಲ್ಹಾದ ಜೋಶಿ

ಬೆಂಗಳೂರು: ಬೇಲೆಕೇರಿ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ಸತೀಶ್ ಸೈಲ್ ಶಾಸಕತ್ವವನ್ನು ಸಭಾಧ್ಯಕ್ಷರು ಕೂಡಲೇ ಅನರ್ಹಗೊಳಿಸಬೇಕು ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಆಗ್ರಹಿಸಿದರು.

ಮಾಧ್ಯಮದವರ ಜತೆ ಮಾತನಾಡಿದ ಅವರು, ಕಾಂಗ್ರೆಸ್ ನಾಯಕರು ಕಳ್ಳರ ಪರ ನಿಂತಿದ್ದಾರೆ. ಹೀಗಾಗಿಯೇ, ಸತೀಶ್ ಸೈಲ್ ಅವರನ್ನು ಸಮರ್ಥಿಸಿಕೊಂಡಿದ್ದರು. ಕಳ್ಳರು, ವಂಚಕರನ್ನು ಕಾಂಗ್ರೆಸ್‌ನವರು ಸಮರ್ಥಿಸಿಕೊಳ್ಳುತ್ತಾರೆ ಎಂಬುದಕ್ಕೆ ಇದು ಮತ್ತೊಂದು ನಿದರ್ಶನ. ಕಾಂಗ್ರೆಸ್ ಪಕ್ಷ ಭ್ರಷ್ಟರ ಪಕ್ಷ ಎಂಬುದಕ್ಕೆ ಈ ಪ್ರಕರಣ ಮತ್ತೊಂದು ಉದಾಹರಣೆ ಎಂದರು.

ಬೇಲೆಕೇರಿ: ಬಂದರು ಅಧಿಕಾರಿಗಳ ಸುಪರ್ದಿಯಲ್ಲಿದ್ದ ಅಕ್ರಮ ಕಬ್ಬಿಣದ ಅದಿರು

ಬಿಗಿಭದ್ರತೆ ಮಧ್ಯೆಯೇ ಅದಿರು ಕದ್ದು ರಫ್ತು

• ಜಯಸಿಂಹ ಆರ್.

ಬೆಂಗಳೂರು: ಬೇಲೆಕೇರಿ ಬಂದರಿನಲ್ಲಿ ವಶಕ್ಕೆ ಪಡೆದು ಇರಿಸಲಾಗಿದ್ದ ಕಬ್ಬಿಣದ ಅದಿರಿನಲ್ಲಿ, 6.10 ಲಕ್ಷ ಟನ್ ಅದಿರನ್ನು ಕದ್ದು ಎರಡೇ ತಿಂಗಳಲ್ಲಿ ಸಾಗಿಸಲಾಗಿದ್ದ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಸೇರಿ ಹಲವರಿಗೆ ಶಿಕ್ಷೆಯಾಗಿದೆ.

ರಾಜ್ಯದ ವಿವಿಧ ಗಣಿಗಳಿಂದ ಸಾಗಿಸಿದ್ದ ಕಬ್ಬಿಣದ ಅದಿರನ್ನು ಲೋಕಾಯುಕ್ತ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಜಂಟಿ ಕಾರ್ಯಾಚರಣೆಯಲ್ಲಿ ಕಾರವಾರ ಬಳಿಯ ಬೇಲೆಕೇರಿ ಬಂದರಿನಲ್ಲಿ ವಶಕ್ಕೆ ಪಡೆದಿದ್ದರು. ಹೀಗೆ ಬಿಗಿ ಭದ್ರತೆಯಲ್ಲಿ ಇದ್ದ ಅದಿರನ್ನೇ ಕದ್ದು, ರಫ್ತು ಮಾಡಿದ ಪ್ರಕರಣವಿದು.

ರಾಜ್ಯದಲ್ಲಿನ ಕಬ್ಬಿಣದ ಅದಿರು ಅಕ್ರಮ ಗಣಿಗಾರಿಕೆ, ಅಕ್ರಮ ಸಾಗಣೆ ಮತ್ತು ರಫ್ತು ಸಂಬಂಧ ತನಿಖೆ ನಡೆಸಿದ್ದ, ಯು.ವಿ.ಸಿಂಗ್ ನೇತೃತ್ವದ ಲೋಕಾಯುಕ್ತ ತನಿಖಾ ತಂಡ, ಲೋಕಾಯುಕ್ತರಿಗೆ ವರದಿ ನೀಡಿತ್ತು. ರಾಜ್ಯದಿಂದ ಅಕ್ರಮವಾಗಿ ಸಾಗಿಸಿದ ಅದಿರಿನಲ್ಲಿ ಬಹುತೇಕ ಪ್ರಮಾಣವನ್ನು ಬೇಲೆಕೇರಿ ಬಂದರಿನ ಮೂಲಕ ಅಕ್ರಮವಾಗಿ ರಫ್ತು ಮಾಡಲಾಗಿತ್ತು.

ತನಿಖೆಯ ಭಾಗವಾಗಿ 2010ರ ಮಾರ್ಚ್ 20ರಂದು ಲೋಕಾಯುಕ್ತ, ಲೋಕಾಯುಕ್ತ ಪೊಲೀಸರು ಬೇಲೆಕೇರಿ ಬಂದರಿನ ಮೇಲೆ ದಿಢೀರ್ ದಾಳಿ ನಡೆಸಿದ್ದರು. ಅರಣ್ಯ ಇಲಾಖೆಯ ಅಧಿಕಾರಿಗಳೂ ಭಾಗಿಯಾಗಿದ್ದರು. ಲೋಕಾಯುಕ್ತ ಸಿಬ್ಬಂದಿಯು ಅದಿರು ಅಕ್ರಮ ರಫ್ತಿಗೆ ಸಂಬಂಧಿಸಿದ ದಾಖಲೆಗಳು, ಕಂಪ್ಯೂಟರ್‌ಗಳು, ಲೆಕ್ಕಪತ್ರಗಳನ್ನು ವಶಕ್ಕೆ ಪಡೆದಿದ್ದರು. ಬೇಲೆಕೇರಿ ಬಂದರಿನ ಸ್ಟಾಕ್‌ಯಾರ್ಡ್‌ನಲ್ಲಿ, ರಾಶಿ ಮಾಡಲಾಗಿದ್ದ ಕಬ್ಬಿಣದ ಅದಿರನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದರು.

ಬಂದರು ನಿರ್ವಹಣಾ ಅಧಿಕಾರಿಗಳ ದಾಖಲೆ ಪುಸ್ತಕಗಳು, ರಫ್ತು ನಿರ್ವಹಣೆ ಮಾಡುತ್ತಿದ್ದ ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಮತ್ತು ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ದಾಖಲೆಗಳ ಆಧಾರದ ಮೇಲೆ, ವಶಕ್ಕೆ ಪಡೆದ ಕಬ್ಬಿಣದ ಅದಿರಿನ ಪ್ರಮಾಣ 8.05 ಲಕ್ಷ ಟನ್‌ಗಳಷ್ಟು ಎಂದು ಅಂದಾಜಿಸಲಾಗಿತ್ತು. ಅದನ್ನು ಬಂದರು ಅಧಿಕಾರಿಗಳ ಭದ್ರತೆಗೆ ನೀಡಲಾಗಿತ್ತು. ಆದರೆ ಮತ್ತೆ 2010ರ ಜೂನ್‌ನಲ್ಲಿ ಪರಿಶೀಲನೆ ನಡೆಸಿದಾಗ, ವಶದಲ್ಲಿದ್ದ ಅದಿರನ್ನು ಕದ್ದು ರಫ್ತು ಮಾಡಿರುವುದು ಪತ್ತೆಯಾಗಿತ್ತು.

ವಶಕ್ಕೆ ಪಡೆದಿದ್ದ ಅದಿರು 8.05 ಲಕ್ಷ ಟನ್ ಎಂದು ನಮೂದಿಸಿದ್ದರೂ, ಕದ್ದು ರಫ್ತು ಮಾಡಿದ ಮತ್ತು ಬಂದರಿನಲ್ಲಿ ಉಳಿದಿದ್ದ ಅದಿರಿನಲ್ಲಿ ಮೂರು ಬಾರಿ ಲೆಕ್ಕ ಮಾಡಲಾಯಿತು. ಈ ಪ್ರಕಾರ ಅರಣ್ಯ ಇಲಾಖೆ ವಶಕ್ಕೆ ಪಡೆದಿದ್ದ ಅದಿರಿನ ಪ್ರಮಾಣ 8.82 ಲಕ್ಷ ಟನ್‌ಗಿಂತಲೂ ಹೆಚ್ಚು ಎಂಬ ಲೆಕ್ಕ ಸಿಕ್ಕಿತ್ತು.

- **8.82** ಲಕ್ಷ ಟನ್ – 2010ರ ಮಾರ್ಚ್ 20ರಂದು ವಶಕ್ಕೆ ಪಡೆದು, ಬೇಲೆಕೇರಿ ಬಂದರಿನಲ್ಲಿ ಇರಿಸಲಾಗಿದ್ದ ಕಬ್ಬಿಣದ ಅದಿರಿನ ಪ್ರಮಾಣ
- **2.72** ಲಕ್ಷ ಟನ್ – 2010ರ ಜೂನ್ 2ರಂದು ಮರುಪರಿಶೀಲನೆ ನಡೆಸಿದಾಗ ಬಂದರಿನಲ್ಲಿ ಉಳಿದಿದ್ದ ಕಬ್ಬಿಣದ ಅದಿರು
- **6.10** ಲಕ್ಷ ಟನ್ – 2010ರ ಮಾರ್ಚ್ 20ರಿಂದ ಜೂನ್2ರ ಮಧ್ಯೆ ಕದ್ದು, ರಫ್ತು ಮಾಡಲಾಗಿದ್ದ ಕಬ್ಬಿಣದ ಅದಿರು


ಬೇಲೆಕೇರಿ ಬಂದರಿನಲ್ಲಿನ ಕಬ್ಬಿಣದ ಅದಿರಿನ ರಾಶಿಗಳು: 2010ರ ಮಾರ್ಚ್ 20ರಂದು ವಶಕ್ಕೆ ಪಡೆದಾಗ ಇಂತಹ 100ಕ್ಕೂ ಹೆಚ್ಚು ರಾಶಿಗಳು ಇದ್ದವು. 2010ರ ಜೂನ್ 2–5ರ ನಡುವೆ ಪರಿಶೀಲನೆ ನಡೆಸಿದಾಗ, ಅಲ್ಲಿ ಕಬ್ಬಿಣದ ಅದಿರಿನ 56 ರಾಶಿಗಳಷ್ಟೇ ಉಳಿದಿದ್ದವು —ಚಿತ್ರ: ಪ್ರಜಾವಾಣಿ ಆರ್ಕೈವ್

ಪ್ರಕರಣದ ಹಿನ್ನೆಲೆ...

- ವಶಕ್ಕೆ ಪಡೆದಿದ್ದ ಅದಿರನ್ನು ಬೇಲೆಕೇರಿ 'ಪೋರ್ಟ್ ಕನ್ಸರ್ವೇಟರ್'ನ ಸುಪರ್ದಿಗೆ ಅಧಿಕಾರಿಗಳು ನೀಡಿದ್ದರು
- 2010ರ ಏಪ್ರಿಲ್ ಮತ್ತು ಮೇ 30ಗಳಿನಲ್ಲಿ ಬೇಲೆಕೇರಿ ಮೂಲಕ 11.59 ಲಕ್ಷ ಟನ್ ಅದಿರನ್ನು ರಫ್ತು ಮಾಡಲಾಗಿತ್ತು. ಇದರಲ್ಲಿ ಕದ್ದ 6.10 ಲಕ್ಷ ಟನ್ ಅದಿರೂ ಸೇರಿತ್ತು
- 2006ರಿಂದ 2010ರವರೆಗೆ ಈ ಬಂದರಿನಲ್ಲಿ ವಾರ್ಷಿಕ ಸರಾಸರಿ 30 ಲಕ್ಷ ಟನ್ ಅದಿರು ರಫ್ತು ಮಾಡಲಾಗಿತ್ತು. ಆದರೆ ಕದ್ದು, ರಫ್ತು ಮಾಡುವ ಉದ್ದೇಶದಿಂದ 2010ರ ಏಪ್ರಿಲ್–ಮೇ 30ಗಳಿನಲ್ಲೇ 11.59 ಲಕ್ಷದಷ್ಟು ಅದಿರನ್ನು ರಫ್ತು ಮಾಡಲಾಗಿತ್ತು
- ಈ ಸಂಬಂಧ ಬಂದರು ಅಧಿಕಾರಿಗಳು, 2 ಶಿಪ್ಪಿಂಗ್ ಕಂಪನಿಗಳು, ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು

ಪಿಡಿಪಿಯ ಎಲ್ಲ ಘಟಕಗಳ ವಿಸರ್ಜನೆ

ಶ್ರೀನಗರ: ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಿದ ಕಾರಣ, ಜಮ್ಮು–ಕಾಶ್ಮೀರದ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿಯ (ಪಿಡಿಪಿ) ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರು ತಮ್ಮ ಪಕ್ಷದ ಎಲ್ಲ ಘಟಕಗಳನ್ನು ವಿಸರ್ಜಿಸಿದ್ದಾರೆ.

ಪಕ್ಷದ ಹಿರಿಯ ನಾಯಕರ ಜತೆಗೆ ಚರ್ಚೆ ನಡೆಸಿದ ಬಳಿಕ ವಿವಿಧ ಘಟಕಗಳನ್ನು ರಚಿಸಿ, ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗುವುದು ಎಂದು ಪಿಡಿಪಿಯು ತಿಳಿಸಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ.

ಜಮ್ಮು–ಕಾಶ್ಮೀರ ವಿಧಾನ ಸಭಾ ಚುನಾವಣೆಯಲ್ಲಿ ಕೇವಲ 3 ಕ್ಷೇತ್ರಗಳಲ್ಲಿ ಗೆಲುವು ಪಡೆದಿದ್ದು, ಪಕ್ಷವು ಕಳಪೆ ಪ್ರದರ್ಶನ ಮಾಡಿತ್ತು. ಈ ಬಗ್ಗೆ ಗುರುವಾರ ನಡೆದ ಪರಾಮರ್ಶನಾ ಸಭೆಯಲ್ಲಿ ಚರ್ಚೆ ನಡೆದು, ಪಕ್ಷದ ಘಟಕಗಳನ್ನು ವಿಸರ್ಜಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಮುಖ್ಯಮಂತ್ರಿ– ಉಪಮುಖ್ಯಮಂತ್ರಿ ಸೂಚನೆಯಂತೆ 9 ಸಚಿವರು, 23 ಶಾಸಕರು ಮೊಕ್ಕಾಂ

ಶಿಗ್ಗಾವಿ: 'ಕೈ' ಅಭ್ಯರ್ಥಿ ಗೆಲ್ಲಿಸಲು ಪಣ

● ಸಂತೋಷ ಜಿಗಳಿಕೊಪ್ಪ

ಶಿಗ್ಗಾವಿ (ಹಾವೇರಿ ಜಿಲ್ಲೆ): 20 ವರ್ಷಗಳಿಂದ ಬಿಜೆಪಿ ತೆಕ್ಕೆಯಲ್ಲಿರುವ ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿ ಗೆಲ್ಲಿಸಲು ಪಣ ತೊಟ್ಟಿರುವ ಕಾಂಗ್ರೆಸ್ ಹೈಕಮಾಂಡ್, ಚುನಾವಣೆ ನಿರ್ವಹಣೆಗಾಗಿ ಜಿಲ್ಲಾ ಪಂಚಾಯಿತಿಗೊಬ್ಬ ಸಚಿವರನ್ನು ನೇಮಕ ಮಾಡಿ, ಜವಾಬ್ದಾರಿ ವಹಿಸಿದೆ.

ಶಿಗ್ಗಾವಿ ಕ್ಷೇತ್ರದಲ್ಲಿ 6 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳು, 23 ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳು ಹಾಗೂ 3 ಪುರಸಭೆಗಳಿವೆ. ಪ್ರತಿ ಕ್ಷೇತ್ರದಲ್ಲೂ ಮತದಾರರನ್ನು ನೇರ ಭೇಟಿಯಾಗಿ ಮತಯಾಚಿಸುವಂತೆ ಸಚಿವರಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ.

'ಶಿಗ್ಗಾವಿ ತಾಲ್ಲೂಕಿನಲ್ಲಿ ತಡಸ, ದುಂಡಶಿ, ಕುಂದೂರು ಮತ್ತು ಹುಲಗೂರು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಾಗಿವೆ. ಸವಣೂರು ತಾಲ್ಲೂಕಿನಲ್ಲಿ ಕಾರಡಗಿ ಹಾಗೂ ಹುರುಳಿಕುಪ್ಪಿ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿವೆ. ಇದರ ಜೊತೆಗೆ, ಬಂಕಾಪುರ, ಶಿಗ್ಗಾವಿ ಹಾಗೂ ಸವಣೂರು ಪುರಸಭೆಗಳಾಗಿವೆ. ಪ್ರತಿ ಜಿಲ್ಲಾ ಪಂಚಾಯಿತಿ ಕ್ಷೇತ್ರ ಮತ್ತು ಪುರಸಭೆಗೊಬ್ಬ ಸಚಿವರನ್ನು ನೇಮಿಸಿ, ಚುನಾವಣೆ ಜವಾಬ್ದಾರಿ ವಹಿಸಲಾಗಿದೆ' ಎಂದು ಕಾಂಗ್ರೆಸ್ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

> **ರೌಡಿಶೀಟರ್‌ಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದೆ ಎಂದು ಕಾಂಗ್ರೆಸ್‌ನವರೇ ಆರೋಪಿಸಿದ್ದಾರೆ. ಈ ಬಗ್ಗೆ ಕಾಂಗ್ರೆಸ್ ನಾಯಕರು ಸ್ಪಷ್ಟೀಕರಣ ನೀಡಬೇಕು**
> **ಬಸವರಾಜ ಬೊಮ್ಮಾಯಿ,** ಸಂಸದ

> **ಚುನಾವಣೆಯ ಜವಾಬ್ದಾರಿಗಳನ್ನು ಕಾರ್ಯಕರ್ತರಿಗೆ ವಹಿಸಿದ್ದೇವೆ. ಕಾಂಗ್ರೆಸ್ ಗೆಲುವು ಕಾರ್ಯಕರ್ತರನ್ನು ಅವಲಂಬಿಸಿದೆ. ಸಿ.ಎಂ, ಡಿಸಿಎಂ ಪ್ರಚಾರ ನಡೆಸುವರು**
> **ಸತೀಶ ಜಾರಕಿಹೊಳಿ,** ಸಚಿವ

ತಾಲ್ಲೂಕು ಪಂಚಾಯಿತಿಗೊಬ್ಬ ಶಾಸಕ: ಶಿಗ್ಗಾವಿ ತಾಲ್ಲೂಕಿನಲ್ಲಿ 14 ಹಾಗೂ ಸವಣೂರು ತಾಲ್ಲೂಕಿನಲ್ಲಿ 9 ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳಿವೆ. ತಾಲ್ಲೂಕು ಪಂಚಾಯಿತಿಗೊಬ್ಬ ಶಾಸಕರನ್ನು ನಿಯೋಜಿಸಲಾಗಿದೆ. ಮುಖ್ಯಮಂತ್ರಿ–ಉಪ ಮುಖ್ಯಮಂತ್ರಿ ಅವರ ಸೂಚನೆಯಂತೆ ರಾಜ್ಯ ಸರ್ಕಾರದ 9 ಸಚಿವರು ಹಾಗೂ 23 ಶಾಸಕರು, ಶಿಗ್ಗಾವಿ ಕ್ಷೇತ್ರದಲ್ಲಿಯೇ ಮೊಕ್ಕಾಂ ಹೂಡಲಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬರಲು ಮನೆ ಮನೆಗೆ ತೆರಳಿ ಪ್ರಚಾರ ಮಾಡಲಿದ್ದಾರೆ.

ಕಾಂಗ್ರೆಸ್ ಬಂಡಾಯ ಶಮನ: ಖಾದ್ರಿ ಮನವೊಲಿಕೆ

ಬೆಂಗಳೂರು: ಉಪ ಚುನಾವಣೆ ನಡೆಯಲಿರುವ ಶಿಗ್ಗಾವಿ ಕ್ಷೇತ್ರದಲ್ಲಿ ಟಿಕೆಟ್ ಸಿಗದ ಕಾರಣಕ್ಕೆ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಸೈಯದ್ ಅಜ್ಜಂಪೀರ್ ಖಾದ್ರಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆ ಮಾತುಕತೆ ನಡೆಸಿದ ಬಳಿಕ ನಾಮಪತ್ರ ಹಿಂಪಡೆಯಲು ಒಪ್ಪಿದ್ದಾರೆ.

ಖಾದ್ರಿ ಅವರನ್ನು ಸಚಿವ ಜಮೀರ್ ಅಹಮದ್ ಖಾನ್ ಅವರು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯನ್ನು ಶನಿವಾರ ಭೇಟಿ ಮಾಡಿಸಿ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಜ್ಜಂಪೀರ್ ಖಾದ್ರಿ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ಇದೇ 30ರಂದು ತಮ್ಮ ನಾಮಪತ್ರವನ್ನು ಖಾದ್ರಿ ಹಿಂಪಡೆಯಲಿದ್ದಾರೆ. ಅವರ ಅರ್ಹತೆಗೆ ತಕ್ಕಂತೆ ಪಕ್ಷವು ಅಧಿಕಾರ ನೀಡಲಿದೆ' ಎಂದರು.

'ಖಾದ್ರಿ ತಮ್ಮ ನೋವು ಹೇಳಿಕೊಂಡಿದ್ದಾರೆ. ಚುನಾವಣಾ ನೀತಿ ಸಂಹಿತೆ ಇರುವ ಕಾರಣಕ್ಕೆ ಅವರಿಗೆ ನೀಡಿರುವ ಭರವಸೆಗಳನ್ನು ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ. ಖಾದ್ರಿ ಅವರ ಬಳಿ ಗೌಪ್ಯವಾಗಿ ಮಾತನಾಡಿದ್ದೇನೆ' ಎಂದರು.

ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ: ಅಜ್ಜಂಪೀರ್ ಖಾದ್ರಿ ಮಾತನಾಡಿ, 'ಈ ಬಾರಿ ಟಿಕೆಟ್ ನೀಡಿದರೆ ನಾನೇ ಗೆಲ್ಲುತ್ತೇನೆ, ಟಿಕೆಟ್ ಕೊಡಿ ಎಂದು ನಾಯಕರ ಬಳಿ ಮತ್ತೊಮ್ಮೆ ಮನವಿ ಮಾಡಿದೆ. ಇದು ನಮ್ಮ ತೀರ್ಮಾನವಲ್ಲ, ಹೈಕಮಾಂಡ್ ತೀರ್ಮಾನ ಎಂದರು. ನಾನು ಪಕ್ಷದ ತೀರ್ಮಾನವನ್ನು ಕ್ಷೇತ್ರದ ಕಾರ್ಯಕರ್ತರ ಬಳಿಗೆ ತೆಗೆದುಕೊಂಡು ಹೋಗುತ್ತೇನೆ. ಅವರ ಬಳಿ ಚರ್ಚಿಸುತ್ತೇನೆ. ಕಾರ್ಯಕರ್ತರಿಗೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರನ್ನು ಭಾನುವಾರ (ಅ. 27) ಭೇಟಿ ಮಾಡಿಸಿ, ನಾಯಕರ ಆದೇಶ ಪಾಲಿಸುತ್ತೇನೆ' ಎಂದರು.

'ಯೋಗೇಶ್ವರ್ ಗೆದ್ದರೆ ಡಿಕೆಶಿ ಸಿ.ಎಂ'



ಎಂ.ಸಿ. ಅಶ್ವಥ್

ಚನ್ನಪಟ್ಟಣ (ರಾಮನಗರ): 'ಉಪ ಚುನಾವಣೆಯಲ್ಲಿ ಯೋಗೇಶ್ವರ್ ಅವರನ್ನು ನಾವು ಗೆಲ್ಲಿಸಿಕೊಂಡರೆ, ನಮ್ಮ ಜಿಲ್ಲೆ ಮಗನಾದ ಡಿ.ಕೆ. ಶಿವಕುಮಾರ್ ಈ ಅವಧಿಯಲ್ಲೇ ಮುಖ್ಯಮಂತ್ರಿಯಾಗುತ್ತಾರೆ' ಎಂದು ಮಾಜಿ ಶಾಸಕ ಎಂ.ಸಿ. ಅಶ್ವಥ್ ಹೇಳಿದರು.

ತಾಲ್ಲೂಕಿನ ತಿಟ್ಟಮಾರನಹಳ್ಳಿಯಲ್ಲಿ ಶನಿವಾರ ನಡೆದ ಕಾಂಗ್ರೆಸ್ ಸಮನ್ವಯ ಸಭೆಯಲ್ಲಿ ಅವರು ಮಾತನಾಡಿದರು.

'ಕುಮಾರಸ್ವಾಮಿ ಮತ್ತು ನಿಖಿಲ್‌ಗೆ ಬೇರೆ ಕ್ಷೇತ್ರಗಳಿವೆ. ಯೋಗೇಶ್ವರ್‌ಗೆ ಇರೋದು ಇದೊಂದೇ. ಕುಮಾರಸ್ವಾಮಿ ಇಲ್ಲಿ ಯಾಕೆ ಉದ್ಯೋಗಮೇಳ ಮಾಡಲಿಲ್ಲ. ಅವರಿಗೆ ಹಾಸನ ಸ್ವಂತ ಜಿಲ್ಲೆಯಾದರೆ, ರಾಮನಗರ ಎರಡನೇ ಪತ್ನಿ ತರ' ಎಂದು ಮಾಗಡಿ ಶಾಸಕ ಎಚ್‌.ಸಿ. ಬಾಲಕೃಷ್ಣ ಹೇಳಿದರು.

'ಕೈ ತಪ್ಪಲಿದ್ದಾರೆ ಕಾಂಗ್ರೆಸ್ ಶಾಸಕರು'


ವಿಜಯೇಂದ್ರ

ಬೆಂಗಳೂರು: 'ಉಪ ಚುನಾವಣೆ ಫಲಿತಾಂಶದ ನಂತರ ಕಾಂಗ್ರೆಸ್ ನಾಯಕರಿಗೆ, ಪಕ್ಷದ ಶಾಸಕರನ್ನು ಹಿಡಿದಿಟ್ಟುಕೊಳ್ಳಲೂ ಕಷ್ಟವಾಗಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಅಭಿವೃದ್ಧಿಗೆ ಹಣ ಕೊಡದ ಕಾರಣ ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕಾಂಗ್ರೆಸ್‌ನ ರಾಜು ಕಾಗೆ ಹೇಳಿದ್ದಾರೆ. ಎಂಟು ಬಾರಿ ಶಾಸಕರಾದ ಆರ್‌.ವಿ.ದೇಶಪಾಂಡೆ ಕೂಡ ಅನುದಾನ ಸಿಗುತ್ತಿಲ್ಲ ಎಂದಿದ್ದಾರೆ. ಮತ್ತೊಂದೆಡೆ ಬಿ.ಆರ್. ಪಾಟೀಲ ಅವರು ಅಧಿಕಾರಿಗಳು ಮಾತು ಕೇಳುತ್ತಿಲ್ಲ ಎನ್ನುತ್ತಿದ್ದಾರೆ. ಉಪ ಚುನಾವಣೆಯ ನಂತರ ಇಂತಹ ಅಸಮಾಧಾನಗಳು ಸ್ಫೋಟವಾಗಲಿವೆ ಎಂದರು.

ರಾಜ್ಯದಲ್ಲಿ ಮಳೆ ಹೆಚ್ಚಾಗಿ ನೆರೆ ಪರಿಸ್ಥಿತಿ ಇದೆ. ಬೆಳೆ ಸಂಪೂರ್ಣ ನಾಶವಾಗಿದೆ. ರೈತರು ಸಂಕಷ್ಟದಲ್ಲಿದ್ದಾರೆ. ಉಪ ಚುನಾವಣೆ ನಡೆಯುತ್ತಿರುವ ಕ್ಷೇತ್ರಗಳಿಗೆ ತಲಾ 10 ಸಚಿವರು, 20ರಿಂದ 30 ಜನ ಶಾಸಕರನ್ನು ನೇಮಿಸಿದೆ. ಹಣದ ಮೂಟೆ ಇಟ್ಟುಕೊಂಡು ಉಪ ಚುನಾವಣೆ ಎದುರಿಸಲು ಸಜ್ಜಾಗುತ್ತಿದ್ದಾರೆ. ರೈತರ ಸಂಕಷ್ಟ ಕಣ್ಣಿಗೆ ಕಾಣುತ್ತಿಲ್ಲ ಎಂದು ದೂರಿದರು. ಹಿಂದೆ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಬಡವರು ಮನೆ ಕಳೆದುಕೊಂಡರೆ ₹5 ಲಕ್ಷ ಕೊಡುತ್ತಿದ್ದರು. ಈ ಸರ್ಕಾರ ₹1 ಲಕ್ಷ ಕೊಡಲೂ ಮೀನಮೇಷ ಎಣಿಸುತ್ತಿದೆ ಎಂದು ಆರೋಪಿಸಿದರು.

ಗೆಲುವಿನ ಕಾರ್ಯತಂತ್ರದತ್ತ ಹೆಜ್ಜೆ

ಒಂದನೇ ಪುಟದಿಂದ...

ಬಳಿಕ ಖಾದ್ರಿ ನಾಮಪತ್ರ ಹಿಂಪಡೆಯಲು ಒಪ್ಪಿದರು. ಆದರೆ, ಇನ್ನೊಬ್ಬ ಬಂಡಾಯ ಅಭ್ಯರ್ಥಿ, ಮಾಜಿ ಶಾಸಕ ಮಂಜುನಾಥ ಕುನ್ನೂರ್ ಅವರ ಬಂಡಾಯ ಶಮನವಾಗಿಲ್ಲ. ಸಂಡೂರಿನಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಎನ್‌.ವೆಂಕಣ್ಣ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದು, ಎಲ್ಲರೂ ನಾಮಪತ್ರ ವಾಪಸ್ ಪಡೆಯುವರು ಎಂದು ಡಿ.ಕೆ. ಶಿವಕುಮಾರ್ ಭರವಸೆ ವ್ಯಕ್ತಪಡಿಸಿದ್ದಾರೆ.

ಚನ್ನಪಟ್ಟಣ: ನಿಖಿಲ್ ಗೆಲುವಿಗೆ ಬಿಜೆಪಿ ಪಣ

ಬೆಂಗಳೂರು: ಚನ್ನಪಟ್ಟಣ ಕ್ಷೇತ್ರದ ಮೈತ್ರಿ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರ ಗೆಲುವಿಗೆ ಕಾರ್ಯತಂತ್ರ ರೂಪಿಸಲು ಶನಿವಾರ ಬಿಜೆಪಿ ಕಾರ್ಯಾಲಯದಲ್ಲಿ ಚನ್ನಪಟ್ಟಣ ಮುಖಂಡರು ಹಾಗೂ ಪ್ರಮುಖ ಕಾರ್ಯಕರ್ತರ ಸಭೆ ನಡೆಯಿತು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಸಿ.ಎನ್. ಅಶ್ವತ್ಥನಾರಾಯಣ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಬಿಜೆಪಿಯ ಹಲವು ನಾಯಕರು ಹಾಗೂ ಅಭ್ಯರ್ಥಿ ನಿಖಿಲ್ ಹಾಗೂ ಜೆಡಿಎಸ್ ರಾಮನಗರ ಜಿಲ್ಲಾ ಘಟಕದ ಅಧ್ಯಕ್ಷ ಮಂಜಣ್ಣ ಸಹ ಉಪಸ್ಥಿತರಿದ್ದರು.

ಸಭೆಯ ನಂತರ ಮಾತನಾಡಿದ ವಿಜಯೇಂದ್ರ, 'ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರು ದೊಡ್ಡ ಅಂತರದಲ್ಲಿ ಗೆಲ್ಲುವಂತೆ ಕಾರ್ಯತಂತ್ರ ರೂಪಿಸಲು ಸಭೆ ನಡೆಸಿದ್ದೇವೆ. ನಿಖಿಲ್ ಅವರ ಗೆಲುವಿಗೆ ಎಲ್ಲ ಕಾರ್ಯಕರ್ತರು ಹಗಲು–ರಾತ್ರಿ ಶ್ರಮಿಸಿ ಗೆಲ್ಲಿಸುವ ಭರವಸೆ ಕೊಟ್ಟಿದ್ದೇವೆ' ಎಂದರು.

'ಮೂರು ಕ್ಷೇತ್ರಗಳ ಚುನಾವಣೆಯನ್ನೂ ಸವಾಲಾಗಿ ಸ್ವೀಕರಿಸಿದ್ದೇವೆ. ಶಿಗ್ಗಾವಿ ಕ್ಷೇತ್ರವನ್ನು ಬಿಜೆಪಿ ಈಗಾಗಲೇ ಗೆದ್ದಿರುವ ವಾತಾವರಣ ನಿರ್ಮಾಣವಾಗಿದೆ. ಸಂಡೂರಿನಲ್ಲೂ ಐತಿಹಾಸಿಕ ಗೆಲುವಿನ ನಿರೀಕ್ಷೆಯಲ್ಲಿದ್ದೇವೆ' ಎಂದು ಹೇಳಿದರು.

ನಿಖಿಲ್ ಕುಮಾರಸ್ವಾಮಿ ಮಾತನಾಡಿ, 'ಜೆಡಿಎಸ್ ಕಾರ್ಯಕರ್ತರು ಉತ್ಸಾಹದಲ್ಲಿದ್ದಾರೆ. ಬಿಜೆಪಿ ಸ್ಥಳೀಯ ಮುಖಂಡರು, ಕಾರ್ಯಕರ್ತರು ನನ್ನ ಗೆಲುವಿಗೆ ಶ್ರಮಿಸುವ ಭರವಸೆ ನೀಡಿದ್ದಾರೆ. ದೇವೇಗೌಡರು ಹಾಗೂ ತಂದೆ ಕುಮಾರಸ್ವಾಮಿ ಅವರು ಸ್ಥಳದಲ್ಲೇ ಇದ್ದು ಪ್ರಚಾರ ನಡೆಸಲು ಮುಂದಾಗಿರುವುದು ಇನ್ನಷ್ಟು ಬಲ ತಂದಿದೆ' ಎಂದು ಹೇಳಿದರು.

ಜೆಡಿಎಸ್ ವಿರುದ್ಧ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಉಪ ಚುನಾವಣೆ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಶುಕ್ರವಾರ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ನಡೆದ ರೋಡ್ ಷೋದಲ್ಲಿ ನೀತಿ ಸಂಹಿತೆ ಉಲ್ಲಂಘನೆಯಾಗಿದೆ ಎಂದು ಚುನಾವಣಾ ಅಧಿಕಾರಿ ನೀಡಿದ ದೂರಿನ ಮೇರೆಗೆ ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆಯಲ್ಲಿ ಕಾರ್ಯಕ್ರಮ ಆಯೋಜಕರ ವಿರುದ್ಧ ಗಂಭೀರವಲ್ಲದ ಅಪರಾಧ ಪ್ರಕರಣ (ಎನ್‌ಸಿಆರ್) ದಾಖಲಾಗಿದೆ.

ಅನುಮತಿ ಪಡೆಯದೆ ರೋಡ್ ಷೋ ಕಾರ್ಯಕ್ರಮಕ್ಕೆ ವಿವಿಧ ಭಾಗಗಳಿಂದ ಸುಮಾರು 96 ಖಾಸಗಿ ಬಸ್‌ಗಳಲ್ಲಿ ಜನರನ್ನು ಕರೆತರಲಾಗಿತ್ತು. ಹಾಗಾಗಿ, ಆಯೋಜಕರು ಹಾಗೂ ಬಸ್‌ಗಳ ಮಾಲೀಕರಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಜೊತೆಗೆ ಪೊಲೀಸ್ ಠಾಣೆಗೂ ದೂರು ಕೊಡಲಾಗಿದೆ ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ.

ನೀತಿ ಸಂಹಿತೆ ಉಲ್ಲಂಘನೆ ಕುರಿತು ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಎನ್‌ಸಿಆರ್ ಮಾಡಿಕೊಳ್ಳಲಾಗಿದೆ. ನ್ಯಾಯಾಲಯದ ಅನುಮತಿ ಪಡೆದು ಸಂಬಂಧಪಟ್ಟವರ ಮೇಲೆ ಪ್ರಕರಣ ದಾಖಲಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಯೋಗೇಶ್ವರ್ ಕಾರು ತಪಾಸಣೆ: ತಾಲ್ಲೂಕಿನ ತಿಟ್ಟಮಾರನಹಳ್ಳಿಯಲ್ಲಿ ಶನಿವಾರ ನಡೆಯುತ್ತಿದ್ದ ಕಾಂಗ್ರೆಸ್ ಸಮನ್ವಯ ಸಭೆಯ ಸ್ಥಳಕ್ಕೆ ಬಂದ ಚುನಾವಣಾ ಅಧಿಕಾರಿಗಳು, ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಕಾರನ್ನು ತಪಾಸಣೆ ಮಾಡಿದರು.


ಚನ್ನಪಟ್ಟಣದಲ್ಲಿ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ ಕಾರ್ಯಕ್ರಮಕ್ಕೆ ಜನರನ್ನು ಕರೆತಂದಿದ್ದ ಬಸ್‌ಗಳು

'ಕುಮಾರಸ್ವಾಮಿಗೆ ಸಾಮಾನ್ಯಜ್ಞಾನ ಇಲ್ಲವೆ?'

ನೀತಿ ಸಂಹಿತೆ ಉಲ್ಲಂಘನೆಯ ನೋಟಿಸ್ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ, 'ಕಾಂಗ್ರೆಸ್ ಸರ್ಕಾರದಿಂದ ನಮ್ಮ ಮೇಲೆ ದಬ್ಬಾಳಿಕೆ ನಡೆಯುತ್ತಿದೆ' ಎಂದು ಬೆಂಗಳೂರಿನಲ್ಲಿ ಟೀಕಿಸಿದ್ದಾರೆ.

ಅದಕ್ಕೆ ತಿರುಗೇಟು ನೀಡಿರುವ ಮಾಜಿ ಸಂಸದ ಡಿ.ಕೆ. ಸುರೇಶ್, 'ಬಸ್‌ಗಳಲ್ಲಿ ಜನರನ್ನು ಕರೆದುಕೊಂಡು ಬರಲು ಚುನಾವಣಾ ಅಧಿಕಾರಿಗಳಿಂದ ಅನುಮತಿ ಪಡೆದು, ಲೆಕ್ಕ ಕೊಡಬೇಕು ಎಂಬ ಸಾಮಾನ್ಯ ಜ್ಞಾನ ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಇಲ್ಲವೆ? ಅಷ್ಟೂ ಗೊತ್ತಿಲ್ಲದೆ ಹೇಗೆ ಕೇಂದ್ರ ಸಚಿವರಾದರು? ' ಎಂದರು. 'ಚುನಾವಣಾ ಅಧಿಕಾರಿಗಳು ಅವರ ಕರ್ತವ್ಯ ಮಾಡುತ್ತಾರೆ. ಅದಕ್ಕೂ ನಮಗೂ ಸಂಬಂಧವಿಲ್ಲ. ಆದರೆ, ಕುಮಾರಸ್ವಾಮಿ ಮಾತ್ರ ದಿನವೂ ಕಾಂಗ್ರೆಸ್ ವಿರುದ್ಧ ಆರೋಪ ಮಾಡುತ್ತಾರೆ' ಎಂದರು.

'ವಿಪಕ್ಷಗಳ ಮೇಲೆ ದಬ್ಬಾಳಿಕೆ'



> **ಜನರ ಕಷ್ಟ ನೋಡಿ ಕಣ್ಣೀರು ಹಾಕುತ್ತಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವತ್ತೂ ಜನರ ಎದುರು ಕಣ್ಣೀರಿಟ್ಟಿಲ್ಲವೇ?**
> **ಎಚ್‌.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಬೆಂಗಳೂರು: 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವು ವಿರೋಧ ಪಕ್ಷಗಳ ಮೇಲೆ ದಬ್ಬಾಳಿಕೆ ನಡೆಸುತ್ತಿದೆ' ಎಂದು ಕೇಂದ್ರ ಸಚಿವ ಎಚ್‌. ಡಿ.ಕುಮಾರಸ್ವಾಮಿ ಶನಿವಾರ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಚನ್ನಪಟ್ಟಣದಲ್ಲಿ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ ವೇಳೆ ಸಾವಿರಾರು ಮಂದಿ ಕಾರ್ಯಕರ್ತರು ಮತ್ತು ಸಾರ್ವಜನಿಕರು ಸೇರಿದ್ದರು. ಎನ್‌ಡಿಎ ನಾಯಕರೂ ಇದ್ದರು. ಇದರಿಂದ ಕಾಂಗ್ರೆಸ್‌ಗೆ ಕಣ್ಣು ಕುಕ್ಕಿದ್ದು, ಸಭೆಗೆ ಬಂದಿದ್ದವರಿಗೆ ನೋಟಿಸ್ ನೀಡಿದ್ದಾರೆ' ಎಂದು ಆರೋಪಿಸಿದರು.

'ಕಾರ್ಯಕ್ರಮಕ್ಕೆ ಬಂದ ಜನರಿಗೆ, ವಾಹನಗಳಿಗೆ, ಕ್ಷೇತ್ರದ ಜೆಡಿಎಸ್ ಅಧ್ಯಕ್ಷರಿಗೆ ನೋಟಿಸ್ ನೀಡಿದ್ದಾರೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರೂ ಚನ್ನಪಟ್ಟಣಕ್ಕೆ ಬಂದಿದ್ದರು. ಆಗ ನೂರಾರು ವಾಹನಗಳು ಬಂದಿದ್ದವು. ಅವಕ್ಕೆಲ್ಲಾ ನೋಟಿಸ್ ನೀಡಿದ್ದಾರೆಯೇ' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್, ದಬ್ಬಾಳಿಕೆ ಮೂಲಕ ಚುನಾವಣೆ ಎದುರಿಸುತ್ತಿದೆ. ಇದಕ್ಕೆಲ್ಲಾ ನಾವು ಹೆದರುವುದಿಲ್ಲ. ಜನರ ಬಳಿ ಮತ ಕೇಳುತ್ತೇವೆ. ಜನರೇ ತೀರ್ಪು ನೀಡುತ್ತಾರೆ' ಎಂದರು.

'ತಾವು ಮೂರೂ ಕ್ಷೇತ್ರ ಗೆದ್ದಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಅಧಿಕಾರ, ಹಣದ ದುರ್ಬಳಕೆಯಿಂದ ಗೆದ್ದಾಗಿದೆ ಎಂದು ಬೀಗುತ್ತಿದ್ದಾರೆ. ಚನ್ನಪಟ್ಟಣದಲ್ಲಿ ನಿಲ್ಲಿಸೋಕೆ ಕಾಂಗ್ರೆಸ್‌ನಲ್ಲಿ ಅಭ್ಯರ್ಥಿ ಇರಲಿಲ್ಲ. ಹೀಗಾಗಿಯೇ ಬಿಜೆಪಿ ಅಭ್ಯರ್ಥಿಯನ್ನು ಹೈಜಾಕ್ ಮಾಡಿದರು' ಎಂದು ಹೇಳಿದರು.

ಬದಲಾದ ಮರಾಠವಾಡ; ಕಾಣುತ್ತಿದೆ ಜಾತಿ ಸಂಘರ್ಷ

ಪ್ರಜಾವಾಣಿ ವಾರ್ತೆ



ಛತ್ರಪತಿ ಸಂಭಾಜಿನಗರ: ಕರ್ನಾಟಕ ಮತ್ತು ತೆಲಂಗಾಣದ ಗಡಿಯಲ್ಲಿರುವ ಮರಾಠವಾಡ ಒಂದು ದಶಕದ ಅವಧಿಯಲ್ಲಿ ಬಹಳಷ್ಟು ಬದಲಾಗಿದೆ. ಮರಾಠರು ಮತ್ತು ಇತರೆ ಹಿಂದುಳಿದ ವರ್ಗಗಳ (ಒಬಿಸಿ) ನಡುವೆ ಮೀಸಲಾತಿ ಕುರಿತ ಜಾತಿ ಸಂಘರ್ಷ ಉದ್ಭವಿಸಿರುವುದು ಈ ನೆಲದಲ್ಲಿ ಈಗ ಸ್ಪಷ್ಟವಾಗಿ ಗೋಚರಿಸುತ್ತಿದೆ.

'ಇದು ಈಗ ಹಳೆಯ ಮರಾಠವಾಡವಲ್ಲ. ಮೀಸಲಾತಿ ವಿಷಯದಲ್ಲಿ ಮರಾಠರು ಮತ್ತು ಒಬಿಸಿಗಳ ನಡುವೆ ಭಿನ್ನಾಭಿಪ್ರಾಯ ಉಂಟಾಗಿರುವುದನ್ನು ನಾವು ಇಲ್ಲಿ ಕಾಣುತ್ತಿದ್ದೇವೆ' ಎಂದು ಛತ್ರಪತಿ ಸಂಭಾಜಿನಗರದ ಪಾಚೋಡ್‌ನ ರೈತ ನಾನಾಸಾಹೇಬ್ ನರ್ವಾಡೆ ಹೇಳುತ್ತಾರೆ.

ಹತ್ತಿ, ಮೂಸಂಬಿ, ಕೇಸರ–ಮಾವಿನ ಕೃಷಿಯಲ್ಲಿ ತೊಡಗಿರುವ ರೈತ ಮರಾಠಾದ ನರ್ವಾಡೆ, 'ಜನರಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಿವೆ. ಎರಡು ಜಾತಿಗಳಲ್ಲಿ ಪರಸ್ಪರ ಪ್ರೀತಿ ಕಡಿಮೆಯಾಗಿದೆ' ಎಂದು ಹೇಳಿದರು.

ಛತ್ರಪತಿ ಸಂಭಾಜಿನಗರವು ಮರಾಠವಾಡ ಪ್ರದೇಶದ ವಿಭಾಗೀಯ ಕೇಂದ್ರವಾಗಿದೆ. ಇದು ಛತ್ರಪತಿ ಸಂಭಾಜಿನಗರ (ಹಿಂದಿನ ಹೆಸರು ಔರಂಗಾಬಾದ್) ಬೀಡ್, ಹಿಂಗೋಲಿ, ಜಾಲ್ನಾ, ಲಾತೂರ್, ನಾಂದೇಡ್, ಧಾರಾಶಿವ್ (ಹಿಂದಿನ ಹೆಸರು ಒಸ್ಮಾನಾಬಾದ್) ಮತ್ತು ಪರ್ಭಾನಿ ಈ ಎಂಟು ಜಿಲ್ಲೆಗಳನ್ನು ಹೊಂದಿದೆ. ಕಳೆದ 14 ತಿಂಗಳಲ್ಲಿ ಈ ಪ್ರದೇಶವು ಹಲವು ಪ್ರತಿಭಟನೆಗಳಿಗೂ ಸಾಕ್ಷಿಯಾಗಿದೆ.

ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜಾರಂಗೆ ಅವರು ಕಳೆದ 14 ತಿಂಗಳಿನಿಂದ ಅಂತರವಾಲಿ ಸರಾಟಿಯಲ್ಲಿ ಏಳು ಬಾರಿ ಉಪವಾಸ ಸತ್ಯಾಗ್ರಹಗಳನ್ನು ನಡೆಸಿದ್ದಾರೆ.

ಜಾರಂಗೆ ಅವರ ಹೋರಾಟಕ್ಕೆ ಪ್ರತಿಯಾಗಿ ಒಬಿಸಿ ಸಂಘರ್ಷ ಸೇನಾ ಸಂಸ್ಥಾಪಕ ಲಕ್ಷ್ಮಣ್ ಹಕೆ ಅವರು ಅಂತರವಾಲಿ ಸರಾಟಿಗೆ ಕೇವಲ ಆರು ಕಿ.ಮೀ. ದೂರದಲ್ಲಿರುವ ವಾಡಿಗೋದ್ರಿಯಲ್ಲಿ ಮೂರು ತಿಂಗಳಿಂದ ಧರಣಿ ನಡೆಸುತ್ತಿದ್ದಾರೆ.

'ನಾವು ಒಂದು ಸಕಾರಣಕ್ಕಾಗಿ ಹೋರಾಟ ನಡೆಸುತ್ತಿದ್ದೇವೆ' ಎನ್ನುವುದು ಅಂತರವಾಲಿ ಸರಾಟಿ ಗ್ರಾಮದ ಸುರೇಶ ಪಾಟೀಲ ಅವರ ಸ್ಪಷ್ಟ ನುಡಿ.

'ನಾವು ಚಿಕ್ಕವರಿದ್ದಾಗ, ಎಲ್ಲ ಸಮುದಾಯದಲ್ಲೂ ನಮಗೆ ಸ್ನೇಹಿತರಿದ್ದರು. ಆದರೆ, ಈಗ ಆ ಪರಿಸ್ಥಿತಿ ಇಲ್ಲ. ಮರಾಠರು ಮತ್ತು ನಮ್ಮ ನಡುವೆ ಆ ಸ್ನೇಹದ ಕೊಂಡಿ ತಪ್ಪಿದಂತೆ ತೋರುತ್ತಿದೆ. ಆದರೆ, ನಮ್ಮ ನಡುವೆ ಯಾವುದೇ ದ್ವೇಷವಿಲ್ಲ. ಕೆಲವು ಭಿನ್ನಾಭಿಪ್ರಾಯಗಳಷ್ಟೇ ಇವೆ' ಎಂದು ವಾಡಿಗೋದ್ರಿಯಲ್ಲಿ ಕೆಲಸ ಮಾಡುವ ಒಬಿಸಿ ಸಮುದಾಯದ ಸುರೇಶ್ ಪಾಟ್ಕರ್ ಹೇಳಿದರು.

'ಮನೋಜ್ ದಾದಾ ಯುವಕರಲ್ಲಿ ಬಹಳ ಜನಪ್ರಿಯರು. ಜನರು ಅವರನ್ನು ತಮ್ಮ ರಕ್ಷಕ ಎಂದೇ ಪರಿಗಣಿಸುತ್ತಾರೆ. ಅವರು ಮರಾಠ ಸಮುದಾಯಕ್ಕೆ ಮೀಸಲಾತಿ ಸಿಗುವಂತೆ ನೋಡಿಕೊಳ್ಳುತ್ತಾರೆ. ಅವರು ತುಂಬಾ ಸರಳರು. ತಮ್ಮ ಅಭಿಪ್ರಾಯವನ್ನು ಅಷ್ಟೇ ಪ್ರಬಲವಾಗಿ ವ್ಯಕ್ತಪಡಿಸುತ್ತಾರೆ' ಎಂದು ಮರಾಠವಾಡ ಪ್ರದೇಶದಲ್ಲಿ ವ್ಯಾಪಕವಾಗಿ ಸುತ್ತಾಡುವ ಪ್ರವಾಸಿ ಕ್ಯಾಬ್ ಚಾಲಕ ವಿಷ್ಣು ಪಾಟೀಲ್ ಹೇಳಿದರು.

'ಸಮಸ್ಯೆ ಸಂಕೀರ್ಣವಾಗಿದೆ. ಲೋಕಸಭೆ ಚುನಾವಣೆಯಲ್ಲಿ ಇದರ ಪರಿಣಾಮ ಕಂಡುಬಂದಿದೆ. ವಿಧಾನಸಭಾ ಚುನಾವಣೆಯಲ್ಲಿ ಅದು ಇನ್ನಷ್ಟು ಸ್ಪಷ್ಟವಾಗಿ ಗೋಚರಿಸುತ್ತದೆ. ಜಾರಂಗೆ ಪಾಟೀಲರು ಚುನಾವಣೆಗೆ ಸ್ಪರ್ಧಿಸಿಲ್ಲ. ಆದರೆ ಅವರ ಜನರು ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ. ಇದು ಪ್ರತಿಪಕ್ಷದ ಮಹಾ ವಿಕಾಸ್ ಅಘಾಡಿಗಿಂತ ಆಡಳಿತಾರೂಢ ಮಹಾಯುತಿಯ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ' ಎಂದು ಬೀಡ್‌ನಿಂದ ಬಂದು, ಛತ್ರಪತಿ ಸಂಭಾಜಿನಗರದಲ್ಲಿ ನೆಲೆಸಿರುವ ಪತ್ರಕರ್ತ ಮತ್ತು ರಾಜಕೀಯ ವಿಶ್ಲೇಷಕ ನಿಸಾರ್ ಅಹ್ಮದ್ ಖಾನ್ ಹೇಳಿದ್ದಾರೆ.

ಮಹಾರಾಷ್ಟ್ರ: ಬಿಜೆಪಿ 2ನೇ ಪಟ್ಟಿ ಪ್ರಕಟ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನ ಸಭೆಗೆ ಸ್ಪರ್ಧಿಸುವ 22 ಅಭ್ಯರ್ಥಿಗಳ 2ನೇ ಪಟ್ಟಿಯನ್ನು ಬಿಜೆಪಿ ಶನಿವಾರ ಬಿಡುಗಡೆ ಮಾಡಿದೆ.

ಹಾಲಿ ಶಾಸಕರ ಪೈಕಿ ಆರು ಜನರಿಗೆ ಮತ್ತೊಮ್ಮೆ ಅವಕಾಶ ನೀಡಿದೆ ಮತ್ತು ಇಬ್ಬರಿಗೆ ಟಿಕೆಟ್ ನಿರಾಕರಿಸಿದೆ. ವಿಧಾನ ಪರಿಷತ್‌ನ ಇಬ್ಬರು ಸದಸ್ಯರಿಗೆ ಟಿಕೆಟ್ ನೀಡಲಾಗಿದೆ.

ಸಾಂಗ್ಲಿ ಜಿಲ್ಲೆಯ ಜಾಟ್ ಕ್ಷೇತ್ರದಿಂದ ಗೋಪಿಚಂದ್ ಪಾಡಲ್ಕರ್ ಅವರನ್ನು ಕಣಕ್ಕಿಳಿಸಿದೆ. ಬಿಜೆಪಿಯು ಈವರೆಗೆ 121 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ.

'ಎಎಪಿ ಸ್ಪರ್ಧೆ ಇಲ್ಲ'

ನವದೆಹಲಿ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) ಸ್ಪರ್ಧಿಸುವುದಿಲ್ಲ. ಪಕ್ಷದ ಮುಖ್ಯಸ್ಥರಾದ ಅರವಿಂದ ಕೇಜ್ರಿವಾಲ್ ಅವರು ಮಹಾ ವಿಕಾಸ್ ಆಘಾಡಿ (ಎಂವಿಎ) ಪರ ಪ್ರಚಾರ ಮಾಡಲಿದ್ದಾರೆ ಎಂದು ಪಕ್ಷದ ನಾಯಕ ಸಂಜಯ್ ಸಿಂಗ್ ಶನಿವಾರ ತಿಳಿಸಿದರು. ಶಿವಸೇನೆ (ಉದ್ಧವ್ ಬಣ) ಎನ್‌ಸಿಪಿ (ಶರದ್ ಪವಾರ್ ಬಣ) ಎಎಪಿಯನ್ನು ಸಂಪರ್ಕಿಸಿ ಕೇಜ್ರಿವಾಲ್ ಅವರು ಪ್ರಚಾರದಲ್ಲಿ ಭಾಗಿಯಾಗುವ ಬಗ್ಗೆ ಚರ್ಚಿಸಿದ್ದವು ಎಂದು ಮೂಲಗಳು ತಿಳಿಸಿವೆ.

2ನೇ ಪಟ್ಟಿ ಬಿಡುಗಡೆ ಮಾಡಿದ ಕಾಂಗ್ರೆಸ್

ಮುಂಬೈ/ನವದೆಹಲಿ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ 23 ಅಭ್ಯರ್ಥಿಗಳ ಹೆಸರನ್ನು ಒಳಗೊಂಡ ಎರಡನೇ ಪಟ್ಟಿಯನ್ನು ಕಾಂಗ್ರೆಸ್ ಶನಿವಾರ ಬಿಡುಗಡೆ ಮಾಡಿದೆ.

ಶಾಸಕ ಕೈಲಾಶ್ ಗೋರಂಟ್ಯಾಲ್ ಅವರನ್ನು ಜಲನಾದಿಂದ ಮತ್ತು ಪಕ್ಷದ ನಾಯಕ ಸುನಿಲ್ ಕೇದಾರ್ ಅವರ ಪತ್ನಿ ಅನುಜಾ ಅವರನ್ನು ಸಾವನೇರ್ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಸುನಿಲ್ ಕೇದಾರ್ ಅವರು ಸಾವನೇರ್ ಕ್ಷೇತ್ರದಿಂದ ಐದು ಬಾರಿ ಶಾಸಕರಾಗಿದ್ದರು. ಸಹಕಾರ ಬ್ಯಾಂಕ್‌ನಲ್ಲಿ ನಡೆದ ₹150 ಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಸುನಿಲ್ ಅವರು ದೋಷಿ ಎಂದು ಕೋರ್ಟ್ ೯2023ರಲ್ಲಿ ತೀರ್ಪು ನೀಡಿದ ನಂತರ ಇವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಲಾಗಿತ್ತು. ಸುನಿಲ್ ಕೇದಾರ್ ಅವರು ಗಾಂಧಿ ಕುಟುಂಬಕ್ಕೆ ನಿಕಟವರ್ತಿಗಳು ಎಂದು ಹೇಳಲಾಗಿದೆ.

ಪಕ್ಷದ ಚುನಾವಣಾ ಸಮಿತಿಯು ಅಭ್ಯರ್ಥಿಗಳನ್ನು ಭೇಟಿ ಮಾಡಿ, ಚರ್ಚಿಸಿದ ನಂತರ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ಕಾಂಗ್ರೆಸ್ ಮೊದಲ ಪಟ್ಟಿಯಲ್ಲಿ 48 ಮಂದಿಗೆ ಟಿಕೆಟ್ ನೀಡಿತ್ತು. ಎರಡನೇ ಪಟ್ಟಿ ಸೇರಿದಂತೆ ಒಟ್ಟು 71 ಮಂದಿಗೆ ಟಿಕೆಟ್ ಘೋಷಿಸಲಾಗಿದೆ.

ಏನಾದರೂ ಸಂಭವಿಸಿದರೆ ಬಿಜೆಪಿಯೇ ಹೊಣೆ: ಎಎಪಿ

'ಅರವಿಂದ ಕೇಜ್ರಿವಾಲ್ ಕೊಲೆಗೆ ಸಂಚು'


ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷದ (ಎಎಪಿ) ಸಂಚಾಲಕ ಅರವಿಂದ ಕೇಜ್ರಿವಾಲ್ ಅವರ ಕೊಲೆಗೆ 'ದೊಡ್ಡ ಸಂಚು' ರೂಪಿಸಲಾಗಿದೆ ಎಂದು ಆರೋಪಿಸಿರುವ ಎಎಪಿ, 'ಅವರಿಗೆ ಏನಾದರೂ ಸಂಭವಿಸಿದರೆ ಅದಕ್ಕೆ ಬಿಜೆಪಿಯೇ ಹೊಣೆ' ಎಂದಿದೆ.

ನವದೆಹಲಿಯ ವಿಕಾಸಪುರಿಯಲ್ಲಿ ಶುಕ್ರವಾರ ಪಾದಯಾತ್ರೆ ವೇಳೆ ಬಿಜೆಪಿ ಗೂಂಡಾಗಳು ಕೇಜ್ರಿವಾಲ್ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಎಎಪಿ ನಾಯಕರು ಆರೋಪಿಸಿದ್ದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್, 'ಘಟನೆಯಲ್ಲಿ ಪೊಲೀಸರು ಭಾಗಿಯಾಗಿರುವುದು ಕೇಜ್ರಿವಾಲ್ ಅವರ ಹತ್ಯೆಗೆ ಪಿತೂರಿ ನಡೆದಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅವರ ಜೀವಕ್ಕೆ ಬಿಜೆಪಿಯಿಂದ ಅಪಾಯವಿದೆ' ಎಂದು ಟೀಕಿಸಿದ್ದಾರೆ.

ಮುಖ್ಯಾಂಶಗಳು

- **ಪಾದಯಾತ್ರೆ ವೇಳೆ ಕೇಜ್ರಿವಾಲ್ ಮೇಲೆ ಹಲ್ಲೆ ಆರೋಪ**
- **ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಸುದ್ದಿಗೋಷ್ಠಿ**
- **ಆರೋಪ ತಳ್ಳಿಹಾಕಿದ ಬಿಜೆಪಿ ನಾಯಕರು**

ವಿಕಾಸಪುರಿ ಘಟನೆಯ ಹೊರತಾಗಿಯೂ ಕೇಜ್ರಿವಾಲ್ ಅವರು ತಮ್ಮ ಪಾದಯಾತ್ರೆ ಮುಂದುವರಿಸಲಿದ್ದಾರೆ ಎಂದು ಅವರು ಹೇಳಿದರು.

ಹಲ್ಲೆ ಘಟನೆ ಬಗ್ಗೆ ಏಕೆ ದೂರು ನೀಡಿಲ್ಲ ಎಂಬ ಪ್ರಶ್ನೆಗೆ, ಪೊಲೀಸರು ನಿಷ್ಪಕ್ಷಪಾತವಾಗಿ ತಮ್ಮ ಕೆಲಸ ನಿರ್ವಹಿಸಿದ್ದರೆ ಈ ಘಟನೆಯೇ ನಡೆಯುತ್ತಿರಲಿಲ್ಲ. ಬಿಜೆಪಿ ಯುವ ಮೋರ್ಚಾಗೆ ಸೇರಿದ ದಾಳಿಕೋರರನ್ನು ತಡೆಯಲು ಅಧಿಕಾರಿಗಳು ಮುಂದಾಗಲಿಲ್ಲ' ಎಂದು ದೂರಿದರು.

'ಬಿಜೆಪಿ ನಾಯಕರು ಕೇಜ್ರಿವಾಲ್ ಮೇಲೆ ಹಲ್ಲೆ ನಡೆಸಿದವರ ಬೆಂಬಲಕ್ಕೆ ನಿಂತಿದ್ದಾರೆ. ಪೊಲೀಸರು ಘಟನೆ ಬಗ್ಗೆ ಸ್ವಯಂಪ್ರೇರಿತ ದೂರು ದಾಖಲಿಸಿ ತನಿಖೆ ನಡೆಸಬೇಕು. ಎಎಪಿಯು ಕಾನೂನು ತಜ್ಞರ ಅಭಿಪ್ರಾಯ ಪಡೆದು ಮುಂದಿನ ಹೆಜ್ಜೆ ಇಡಲಿದೆ' ಎಂದರು.

ಎಎಪಿ ಆರೋಪವನ್ನು ಬಿಜೆಪಿ ನಾಯಕರು ತಳ್ಳಿಹಾಕಿದ್ದು, 'ಮನೆಗಳಿಗೆ ಕಲುಷಿತ ನೀರು ಪೂರೈಕೆಯಾಗಿರುವುದಕ್ಕೆ ಸ್ಥಳೀಯರು ತಮ್ಮ ಆಕ್ರೋಶ ಹೊರಹಾಕಿದ್ದಾರೆ' ಎಂದಿದ್ದಾರೆ.

ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರಿಂದ ಹಲ್ಲೆ: ಶನಿವಾರ ಪ್ರತ್ಯೇಕ ಸುದ್ದಿಗೋಷ್ಠಿ ನಡೆಸಿದ ದೆಹಲಿ ಸಚಿವ ಸೌರಭ್ ಭಾರದ್ವಾಜ್, 'ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಕೇಜ್ರಿವಾಲ್ ಮೇಲೆ ಹಲ್ಲೆ ನಡೆಸಿದ್ದಾರೆ. ಬಿಜೆಪಿ ಯುವ ಮೋರ್ಚಾ ದೆಹಲಿ ಘಟಕದ ಉಪಾಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಯೂ ದಾಳಿಕೋರರಲ್ಲಿ ಸೇರಿದ್ದಾರೆ' ಎಂದು ಆರೋಪಿಸಿದರು.

'ರೈತರು, ಬುಡಕಟ್ಟು ಜನರ ಪರ ಕೆಲಸ'

ಪ್ರಜಾವಾಣಿ ವಾರ್ತೆ


ಪ್ರಿಯಾಂಕಾ ಗಾಂಧಿ

ತಿರುವನಂತಪುರ: ವಯನಾಡಿನ ರೈತರು ಮತ್ತು ಬುಡಕಟ್ಟು ಸಮುದಾಯದವರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಅವರೊಂದಿಗೆ ನಿಕಟವಾಗಿ ಕೆಲಸ ಮಾಡುವುದಾಗಿ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕಾ ಗಾಂಧಿ ವಾದ್ರಾ ಭರವಸೆ ನೀಡಿದ್ದಾರೆ.

ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ನಡೆಯುವ ಉಪಚುನಾವಣೆಯಲ್ಲಿ ಕಣಕ್ಕಿಳಿದಿರುವ ಅವರು ಶನಿವಾರ ಕ್ಷೇತ್ರದ ಜನರಿಗೆ ಬಹಿರಂಗ ಪತ್ರ ಬರೆದಿದ್ದಾರೆ. 'ಈಚೆಗಿನ ಭೂಕುಸಿತದ ಸಂದರ್ಭದಲ್ಲಿ ವಯನಾಡಿನ ಜನರಲ್ಲಿ ಕಂಡಿರುವ ಮಾನವೀಯತೆ ಮತ್ತು ಸಹಕಾರ ಮನೋಭಾವ ನನ್ನ ಮೇಲೆ ಗಾಢ ಪರಿಣಾಮ ಬೀರಿದೆ' ಎಂದಿದ್ದಾರೆ.

'ಆದ್ದರಿಂದ ಇಲ್ಲಿನ ಜನರನ್ನು ಸಂಸತ್ತಿನಲ್ಲಿ ಪ್ರತಿನಿಧಿಸುವುದು ಬಲುದೊಡ್ಡ ಗೌರವ ಎಂದು ಭಾವಿಸಿದ್ದೇನೆ' ಎಂದು ಹೇಳಿದ್ದಾರೆ.

ತನ್ನ ಸಹೋದರ ಹಾಗೂ ವಯನಾಡ್ ಕ್ಷೇತ್ರದ ಮಾಜಿ ಸಂಸದ ರಾಹುಲ್ ಗಾಂಧಿ ಅವರು ಕ್ಷೇತ್ರದ ಜನರ ಜೊತೆಗೆ ಹೊಂದಿರುವ ಬಾಂಧವ್ಯವನ್ನು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ವಯನಾಡ್‌ನಿಂದ ಸ್ಪರ್ಧಿಸುವಂತೆ ನನ್ನನ್ನು ಕೇಳಿದಾಗ ರಾಹುಲ್ ಅವರಿಗೆ ಹೆಮ್ಮೆ ಹಾಗೂ ದುಃಖ ಉಂಟಾಗಿತ್ತು. ನೀವು ಎತ್ತಿಹಿಡಿದಿರುವ ಮೌಲ್ಯಗಳು, ನಿಮ್ಮ ಸಂಸ್ಕೃತಿ, ನಿಮ್ಮೊಂದಿಗಿನ ಆಳವಾದ ಬಾಂಧವ್ಯದ ಬಗ್ಗೆ ಅವರಲ್ಲಿ ಹೆಮ್ಮೆಯಿದೆ.

ನಿಮ್ಮನ್ನು ಬಿಟ್ಟುಹೋಗಬೇಕಾಗಿ ಬಂದ ದುಃಖವೂ ಅವರಲ್ಲಿದೆ. ವಯನಾಡ್ ಕ್ಷೇತ್ರದ ಜನರೊಂದಿಗಿನ ನಿಮ್ಮ ಬಾಂಧವ್ಯವನ್ನು ಇನ್ನಷ್ಟು ಬಲಪಡಿಸಲು ಬೇಕಾದ ಎಲ್ಲ ಕೆಲಸವನ್ನೂ ನಾನು ಮಾಡುತ್ತೇನೆ ಎಂದು ಭರವಸೆ ನೀಡಿದ್ದೇನೆ' ಎಂದಿದ್ದಾರೆ.

ಸಿಐಡಿ ಅಧೀನದಲ್ಲಿ ಐದು ವಿಶೇಷ ತನಿಖಾ ತಂಡ ● ಮತ್ತಷ್ಟು ಹೊಸ ತಂಡ ರಚನೆಗೆ ಪ್ರಸ್ತಾವ

ಹೆಜ್ಜೆ ಹೆಜ್ಜೆಗೂ ಎಸ್‌ಐಟಿ ತನಿಖೆ

● ವಿ.ಎಸ್. ಸುಬ್ರಹ್ಮಣ್ಯ



ಎಐ ಚಿತ್ರ: ಕಣಕಾಲಮಠ

ಬೆಂಗಳೂರು: ಕಳೆದ ಒಂದೂವರೆ ವರ್ಷದಲ್ಲಿ ರಾಜ್ಯದಲ್ಲಿ ಅತ್ಯಾಚಾರದ ಆರೋಪ, ಭ್ರಷ್ಟಾಚಾರ, ನೇಮಕಾತಿ ಅಕ್ರಮ, ಬಹುಕೋಟಿ ಲೂಟಿಯ ಪ್ರಕರಣಗಳು ದೊಡ್ಡ ಮಟ್ಟದಲ್ಲಿ ಸುದ್ದಿಯಾಗುತ್ತಲೇ ಇವೆ. ಯಾವುದೇ ದಿಕ್ಕಿನಿಂದ ಇಂತಹ ಸದ್ದು ಎದ್ದು ಅದು ಗದ್ದಲದ ಸ್ವರೂಪ ಪಡೆಯುತ್ತಿದ್ದಂತೆ, ಅದರ ಸಮಗ್ರ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವ ಹೊಸ ಮಾದರಿಯೊಂದನ್ನು ರಾಜ್ಯ ಸರ್ಕಾರ ಚಾಲ್ತಿಯಲ್ಲಿಟ್ಟಿದೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಗಂಭೀರ ಆರೋಪ ಎದುರಾಗಿತ್ತು. ಆಡಳಿತ ನಡೆಸಿದವರ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿದ್ದ ಅಂದಿನ ವಿರೋಧ ಪಕ್ಷ ಕಾಂಗ್ರೆಸ್, ಬೃಹತ್ ಆಂದೋಲನವನ್ನೇ ನಡೆಸಿತ್ತು. ಪಿಎಸ್‌ಐ ಪ್ರಕರಣದ ತನಿಖೆಗೆ ಮಾತ್ರ ಎಸ್‌ಐಟಿ ರಚಿಸಿದ್ದ ಬಿಜೆಪಿ ಸರ್ಕಾರ, ಉಳಿದ ಪ್ರಕರಣಗಳ ಗೊಡವೆಗೆ ಹೋಗಿರಲಿಲ್ಲ.

ಈಚಿನ ತಿಂಗಳುಗಳಲ್ಲಿ ನಾಡಿನಲ್ಲಿ ಅಡಿಗಡಿಗೂ ಎಸ್‌ಐಟಿಗಳ 'ಕಾರ್ಯಭಾರ'ವೇ ಪ್ರಧಾನ ಚರ್ಚೆಯಲ್ಲಿದೆ. ಎಸ್‌ಐಟಿ ನಡೆಸುತ್ತಿರುವ ತನಿಖೆಗಳಲ್ಲಾಗುವ ಶೋಧ, ಆಸ್ತಿ–ಹಣ ವಶ, ಬಂಧನ ಇವೇ ಸಾರ್ವಜನಿಕ ವಲಯದಲ್ಲಿ ಚರ್ಚೆಯ ಕೇಂದ್ರವಾಗಿವೆ. ಬಿಜೆಪಿ–ಜೆಡಿಎಸ್‌ನವರ ವಿರುದ್ಧದ ಪ್ರಕರಣಗಳನ್ನು ಎಸ್‌ಐಟಿ ಮುಟ್ಟಿದಾಗ, ಆ ಪಕ್ಷದ ನಾಯಕರು 'ಇದು ರಾಜಕೀಯ ಪ್ರೇರಿತ; ವಿರೋಧ ಪಕ್ಷದವರನ್ನು ಬಾಯಿ ಮುಚ್ಚಿಸುವ ಯತ್ನ' ಎಂದು ಆಪಾದಿಸುವುದು ಉಂಟು. ಆದರೆ, ತನಿಖೆ ನಡೆಸುವವರು ರಾಜಕಾರಣಿಗಳಲ್ಲ; ಯಾವುದೇ ಪಕ್ಷದ ಸರ್ಕಾರ ಇದ್ದಾಗಲೂ ಆಳ್ವಿಕೆ ನಡೆಸುವ ಪೊಲೀಸ್ ಅಧಿಕಾರಿಗಳು ಎಂಬುದನ್ನು ಮರೆಯಾಗದು. ಒಂದಂತೂ ಸತ್ಯ; ಪ್ರಕರಣ–ಹಗರಣವನ್ನು ಮುಚ್ಚಿ ಹಾಕುವ ಬದಲು ಅದರ ಮೂಲ ಬಗೆದು, ಆರೋಪಿಗಳನ್ನು ಕಾನೂನಿಗೆ ಕುಣಿಗೆ ಸಿಲುಕಿಸುವ ಮಾರ್ಗವನ್ನು ತಪ್ಪೆನ್ನಲಾಗದು. ರಾಜಕೀಯ ಪ್ರೇರಿತವಾಗಿ ಏನೇ ಮಾಡಿದರೂ ಕೊನೆಗೆ ಈ ನೆಲದ ನ್ಯಾಯವೇ ಸರ್ವವನ್ನೂ ನಿರ್ಧರಿಸಿರುವುದರಿಂದ ಎಸ್‌ಐಟಿ ರಚನೆ ಉದ್ದೇಶವನ್ನೇ ಕುಹಕವಾಡುವುದು ಋಜು ಮಾರ್ಗವೂ ಅಲ್ಲ.

ಹಿಂದಿನ ವರ್ಷಗಳಲ್ಲಿ ತೀವ್ರ ಕೋಲಾಹಲ ಸೃಷ್ಟಿಸಿದ ಅಪರಾಧ ಪ್ರಕರಣಗಳು, ಬೃಹತ್ ಹಗರಣಗಳ ತನಿಖೆಗಷ್ಟೇ ಎಸ್‌ಐಟಿ ರಚಿಸಲಾಗುತ್ತಿತ್ತು. ಈಗ ರಾಜಕೀಯ ನಂಟಿನ ಪ್ರಕರಣಗಳು ಮತ್ತು ಹಗರಣಗಳ ತನಿಖೆಗೆ ಸರಣಿಯೋಪಾದಿಯಲ್ಲಿ ಎಸ್‌ಐಟಿಗಳನ್ನು ರಚಿಸುವ ಹೊಸ ಮಾರ್ಗವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹಿಡಿದಿದೆ.

2013ರಿಂದ 2018ರವರೆಗೆ ಆಡಳಿತದ ನಡೆಸಿದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮೂರು ಎಸ್‌ಐಟಿಗಳನ್ನು ರಚಿಸಿತ್ತು. 2015ರಲ್ಲಿ ಆಗಿನ ಲೋಕಾಯುಕ್ತ ವೈ. ಭಾಸ್ಕರ್ ರಾವ್ ಮತ್ತು ಅವರ ಮಗನ ವಿರುದ್ಧ ಭ್ರಷ್ಟಾಚಾರದ ಆರೋಪಗಳ ಕುರಿತು ತನಿಖೆ ನಡೆಸಲು ಐಪಿಎಸ್ ಅಧಿಕಾರಿ ಕಮಲ್ ಪಂತ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿತ್ತು. ಇದು ರಾಷ್ಟ್ರದಲ್ಲೇ ಸಂಚಲನ ಮೂಡಿಸಿದ್ದ ಪ್ರಕರಣವಾಗಿತ್ತು. ಆಳಕ್ಕಿಳಿದು ತನಿಖೆ ನಡೆಸಿದ್ದ ಎಸ್‌ಐಟಿ, ಅಂದಿನ ಲೋಕಾಯುಕ್ತರ ಮಗ ಅಶ್ವಿನ್ ರಾವ್ ಸೇರಿದಂತೆ ಹಲವರನ್ನು ಬಂಧಿಸಿತ್ತು. ಬಳಿಕ ಭಾಸ್ಕರ್ ರಾವ್ ಲೋಕಾಯುಕ್ತರ ಹುದ್ದೆಯಿಂದ ಕೆಳಗಿಳಿದಿದ್ದರು.

2017ರ ಸೆಪ್ಟೆಂಬರ್‌ನಲ್ಲಿ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ನಡೆದಿತ್ತು. ಆ ಪ್ರಕರಣದ ತನಿಖೆಗೆ ಐಪಿಎಸ್ ಅಧಿಕಾರಿ ಬಿ.ಕೆ. ಸಿಂಗ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿತ್ತು. 2019ರಲ್ಲಿ ಐ ಮಾನಿಟರಿ ಅಡ್ವೈಸರಿ ಹೆಸರಿನ ಕಂಪನಿಯಿಂದ ಸಾವಿರಾರು ಕೋಟಿ ರೂಪಾಯಿ ಮೊತ್ತದ ವಂಚನೆ ಪ್ರಕರಣ ನಡೆದಿತ್ತು. ಅದರ ತನಿಖೆಗೆ ಐಪಿಎಸ್ ಅಧಿಕಾರಿ ಬಿ.ಆರ್. ರವಿಕಾಂತೇಗೌಡ ನೇತೃತ್ವದಲ್ಲಿ ಮತ್ತೊಂದು ಎಸ್‌ಐಟಿ ರಚಿಸಲಾಗಿತ್ತು. ಗೌರಿ ಲಂಕೇಶ್ ಕೊಲೆ ಪ್ರಕರಣದ ಆಳಕ್ಕಿಳಿದು ಆರೋಪಿಗಳನ್ನು ಬಂಧಿಸುವಲ್ಲಿ ಬಿ.ಕೆ. ಸಿಂಗ್ ನೇತೃತ್ವದ ಎಸ್‌ಐಟಿ ಯಶಸ್ವಿಯಾದರೆ, ಐಎಂಎ ಪ್ರಕರಣದ ತನಿಖೆ ಅರ್ಧದಲ್ಲೇ ಸಿಬಿಐಗೆ ವರ್ಗಾವಣೆ ಆಗಿತ್ತು.

2018ರಿಂದ 2023ರ ಅವಧಿಯಲ್ಲಿ ಜೆಡಿಎಸ್- ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಮತ್ತು ಬಿಜೆಪಿ ಸರ್ಕಾರದ ಅವಧಿಯಲ್ಲಿ ಯಾವುದೇ ಪ್ರಕರಣಗಳ ತನಿಖೆಗೂ ಎಸ್‌ಐಟಿ ರಚಿಸಿರಲಿಲ್ಲ. 2023ರ ಮೇ ತಿಂಗಳಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬಂತು. ಆಗಿನಿಂದ ರಾಜ್ಯದಲ್ಲಿ ಮತ್ತೆ ಎಸ್‌ಐಟಿಗಳು ಸದ್ದು ಮಾಡುತ್ತಿವೆ. ರಾಜ್ಯದಲ್ಲಿ ಶಾಶ್ವತ ಎಸ್‌ಐಟಿ ಸ್ವರೂಪದಲ್ಲೇ ಕೆಲಸ ಮಾಡುತ್ತಿರುವ ಸಿಐಡಿ ಅಧೀನದಲ್ಲಿ ಈಗ ಐದು ವಿಶೇಷ ತನಿಖಾ ತಂಡಗಳು ಇವೆ. ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ನಡೆದಿದೆ ಎನ್ನಲಾಗಿರುವ ಭ್ರಷ್ಟಾಚಾರ, ಅಕ್ರಮಗಳ ತನಿಖೆಗೂ ಹೊಸತೊಂದು ಎಸ್‌ಐಟಿ ರಚಿಸುವ ತೀರ್ಮಾನವನ್ನು ರಾಜ್ಯ ಸರ್ಕಾರ ಮಾಡಿದೆ.

ರಾಜಕೀಯದ ನಂಟು: ರಾಜ್ಯದಲ್ಲಿ ಈಗ ಇರುವ ಐದು ಎಸ್‌ಐಟಿಗಳೆಲ್ಲವೂ ರಾಜಕಾರಣಿಗಳು ಆರೋಪಿಗಳಾಗಿರುವ ಮತ್ತು ರಾಜಕಾರಣದ ಜೊತೆ ತಳಕು ಹಾಕಿಕೊಂಡಿರುವ ಪ್ರಕರಣಗಳ ತನಿಖೆಯನ್ನೇ ನಡೆಸುತ್ತಿವೆ. ಅವುಗಳಲ್ಲಿ ನಾಲ್ಕು ಪ್ರಕರಣಗಳು ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ನಾಯಕರ ವಿರುದ್ಧ ಇದ್ದರೆ, ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವ ಪ್ರಕರಣ ಕಾಂಗ್ರೆಸ್ ನಾಯಕರಿಗೆ ಸಂಬಂಧಿಸಿದ್ದು.

ಹಿಂದೆಲ್ಲ ದೇಶದ ಗಮನವನ್ನೇ ಸೆಳೆಯುವಂತಹ, ಹಿರಿಯ ಅಧಿಕಾರಿಗಳ ಮೇಲುಸ್ತುವಾರಿಯಲ್ಲೇ ತನಿಖೆ ನಡೆಸಬೇಕಾದಂತಹ ಅಗತ್ಯ ಇರುವ ಪ್ರಕರಣಗಳಲ್ಲಿ ಮಾತ್ರವೇ ಎಸ್‌ಐಟಿ ರಚಿಸಲಾಗುತ್ತಿತ್ತು. ಸಾಮಾನ್ಯ ಪೊಲೀಸ್ ಠಾಣೆಗಳಲ್ಲೇ ತನಿಖೆ ನಡೆಸಬಹುದಾದ ಪ್ರಕರಣಗಳ ತನಿಖೆಗೂ ಎಸ್‌ಐಟಿ ರಚಿಸುವುದರಿಂದ ಗಂಭೀರತೆಯೇ ಕುಸಿಯುತ್ತದೆ. ಹಾಗೆ ಆಗದಂತೆ ಎಚ್ಚರ ವಹಿಸಬೇಕು ಎನ್ನುತ್ತಾರೆ ನಿವೃತ್ತ ಐಪಿಎಸ್ ಅಧಿಕಾರಿಗಳು.

ಕೆಲವು ಅಧಿಕಾರಿಗಳಿಗೆ ಬಹುಪಾತ್ರ: ಗಂಭೀರ ಸ್ವರೂಪದ ಮತ್ತು ಹಿರಿಯ ಅಧಿಕಾರಿಗಳ ಮೇಲುಸ್ತುವಾರಿಯಲ್ಲೇ ತನಿಖೆ ನಡೆಸಬೇಕಾದಂತಹ ಪ್ರಕರಣಗಳಿಗಾಗಿಯೇ ರಾಜ್ಯದಲ್ಲಿ ಸಿಐಡಿ ಪೊಲೀಸ್ ವಿಭಾಗದ ಅಸ್ತಿತ್ವದಲ್ಲಿದೆ. ಈಗ ಅದೇ ಸಿಐಡಿ ಅಧೀನದಲ್ಲಿ ಎಸ್‌ಐಟಿಗಳನ್ನು ರಚಿಸಲಾಗುತ್ತಿದೆ. ಒಬ್ಬ ಅಧಿಕಾರಿಯೇ ಒಂದಕ್ಕಿಂತ ಹೆಚ್ಚು ಎಸ್‌ಐಟಿಗಳ ಮುಖ್ಯಸ್ಥರಾಗುತ್ತಿದ್ದಾರೆ. ಒಂದು ಎಸ್‌ಐಟಿಯಲ್ಲಿರುವ ಅಧಿಕಾರಿಗಳನ್ನೇ ಇನ್ನಷ್ಟು ತಂಡಗಳಿಗೂ ನಿಯೋಜಿಸಲಾಗುತ್ತಿದೆ. ಈ ರೀತಿ ಆದರೆ ಎಸ್‌ಐಟಿ ಎಂಬ ಪರಿಕಲ್ಪನೆಯೇ ಅರ್ಥ ಕಳೆದುಕೊಳ್ಳುತ್ತಿದೆ ಎನ್ನುತ್ತಾರೆ ಹೆಸರು ಬಹಿರಂಗಪಡಿಸಲು ಇಚ್ಛಿಸದ ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರು.

ಹಿಂದೆ ಎಡಿಜಿಪಿ ದರ್ಜೆಯ ಹಿರಿಯ ಅಧಿಕಾರಿಗಳು ಎಸ್‌ಐಟಿ ಮುಖ್ಯಸ್ಥರಾದರೆ, ಎಸ್‌ಪಿ ದರ್ಜೆಯ ಅಧಿಕಾರಿಗಳೇ ತನಿಖಾಧಿಕಾರಿಗಳಾಗಿರುತ್ತಿದ್ದರು. ಆದರೆ, ಈಗ ಕಿರಿಯ ಅಧಿಕಾರಿಗಳನ್ನೇ ತನಿಖಾಧಿಕಾರಿಗಳನ್ನಾಗಿ ಮಾಡಲಾಗುತ್ತಿದೆ. ಹೀಗಾದರೆ ಎಸ್‌ಐಟಿ ಮತ್ತು ಪೊಲೀಸ್ ಠಾಣೆಗಳ ಮಧ್ಯೆ ಯಾವ ವ್ಯತ್ಯಾಸ ಇರುತ್ತದೆ ಎಂಬುದು ಕೆಲವು ಪೊಲೀಸ್ ಅಧಿಕಾರಿಗಳ ಪ್ರಶ್ನೆ.

ಹತ್ತು ವರ್ಷವಾದರೂ ಮುಗಿಯದ ತನಿಖೆ

ರಾಜ್ಯದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ನಡೆದಿದ್ದ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆಗಾಗಿ ಸುಪ್ರೀಂ ಕೋರ್ಟ್ ಆದೇಶದಂತೆ ಲೋಕಾಯುಕ್ತ ಪೊಲೀಸ್ ವಿಭಾಗದ ಅಡಿಯಲ್ಲಿ ರಚಿಸಿದ್ದ ವಿಶೇಷ ತನಿಖಾ ತಂಡ ಹತ್ತು ವರ್ಷಗಳು ಕಳೆದರೂ ತನ್ನ ಕೆಲಸವನ್ನು ಪೂರ್ಣಗೊಳಿಸಿಲ್ಲ. ಈವರೆಗೆ 72 ಎಫ್‌ಐಆರ್‌ಗಳನ್ನು ದಾಖಲಿಸಿ ತನಿಖೆ ನಡೆಸಲಾಗಿದೆ. ಇನ್ನೂ ತನಿಖೆ ಬಾಕಿ ಇರುವುದರಿಂದ ಎಸ್‌ಐಟಿಯ ಅವಧಿಯನ್ನು ಒಂದು ವರ್ಷ ವಿಸ್ತರಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟ ಇತ್ತೀಚೆಗಷ್ಟೇ ಅನುಮೋದನೆ ನೀಡಿದೆ.

50,000 ಟನ್‌ಗಿಂತ ಹೆಚ್ಚು ಪ್ರಮಾಣದ ಅದಿರನ್ನು ಅಕ್ರಮವಾಗಿ ಸಾಗಿಸಿದ್ದ ಪ್ರಕರಣಗಳನ್ನು ಸಿಬಿಐ ತನಿಖೆ ನಡೆಸಿತ್ತು. 50,000 ಟನ್‌ಗಿಂತ ಕಡಿಮೆ ಪ್ರಮಾಣದ ಕಬ್ಬಿಣದ ಅದಿರಿನ ಅಕ್ರಮ ಗಣಿಗಾರಿಕೆ ಮತ್ತು ಕಳ್ಳಸಾಗಣೆ ಪ್ರಕರಣಗಳ ತನಿಖೆಗಾಗಿ ಈ ಎಸ್‌ಐಟಿಯನ್ನು 2014ರಲ್ಲಿ ರಚಿಸಲಾಗಿತ್ತು. ಹತ್ತು ವರ್ಷಗಳಿಂದಲೂ ತನಿಖೆ ನಡೆಯುತ್ತಲೇ ಇದೆ. ಇನ್ನೂ ಹೊಸ ಹೊಸ ಪ್ರಕರಣಗಳ ಸೇರ್ಪಡೆ ಆಗುತ್ತಲೇ ಇದೆ.

ಈಗ ಆಂತರಿಕ ಭದ್ರತಾ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರೂ ಆಗಿರುವ ಐಪಿಎಸ್ ಅಧಿಕಾರಿ ಎಂ. ಚಂದ್ರಶೇಖರ್ ಗಣಿಗಾರಿಕೆ ಪ್ರಕರಣಗಳ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸ್ ಎಸ್‌ಐಟಿಯ ಮುಖ್ಯಸ್ಥರಾಗಿದ್ದಾರೆ.

ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್. ಡಿ. ಕುಮಾರಸ್ವಾಮಿ, ಶಾಸಕರಾಗಿರುವ ಜಿ. ಜನಾರ್ದನ ರೆಡ್ಡಿ, ಬಿ. ನಾಗೇಂದ್ರ ಸೇರಿದಂತೆ ಹಲವು ಘಟಾನುಘಟಿ ರಾಜಕಾರಣಿಗಳು ಆರೋಪಿಗಳಾಗಿರುವ ಪ್ರಕರಣಗಳು ಈ ಎಸ್‌ಐಟಿ ಮುಂದಿವೆ.

'ವಿಶೇಷ ಪ್ರಕರಣ: ಎಸ್‌ಐಟಿ ಅಗತ್ಯ'



ದೊಡ್ಡ ಅಪರಾಧ ಪ್ರಕರಣಗಳು ಘಟಿಸಿದಾಗ, ಹಿರಿಯ ಅಧಿಕಾರಿಗಳ ನೇತೃತ್ವದಲ್ಲೇ ತನಿಖೆ ನಡೆಯಬೇಕಾದ ಅನಿವಾರ್ಯ ಇದ್ದಾಗ ಎಸ್‌ಐಟಿ ರಚಿಸಲಾಗುತ್ತದೆ. ಎಸ್‌ಐಟಿಗಳಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳೇ ಖುದ್ದಾಗಿ ತನಿಖೆಯ ಮೇಲುಸ್ತುವಾರಿ ನಡೆಸುತ್ತಾರೆ. ತಜ್ಞರನ್ನು ತನಿಖೆಗೆ ನಿಯೋಜಿಸಲಾಗುತ್ತದೆ. ವಿಶೇಷವಾದ ಪ್ರಕರಣಗಳಲ್ಲಿ ಎಸ್‌ಐಟಿ ನೇಮಕ ಅಗತ್ಯ.

ಕಮಲ್ ಪಂತ್, ನಿವೃತ್ತ ಐಪಿಎಸ್ ಅಧಿಕಾರಿ


'ತಾರ್ಕಿಕ ಅಂತ್ಯಕ್ಕೆ ಒಯ್ಯುವುದೇ ಗುರಿ'



ಯಾವುದೇ ಆರೋಪವಿದ್ದರೂ ಅದರ ಸತ್ಯಾಸತ್ಯತೆ ತಿಳಿಯಲು ತನಿಖೆ ಅಗತ್ಯ. ಜನರ ತೆರಿಗೆ ಹಣದ ಲೂಟಿ ಮತ್ತು ಸಾರ್ವಜನಿಕರಿಗೆ ವಂಚಿಸಿದ ಪ್ರಕರಣಗಳಲ್ಲಿ ತನಿಖೆಯನ್ನು ತಾರ್ಕಿಕ ಅಂತ್ಯಕ್ಕೆ ಒಯ್ದು, ಅಪರಾಧಿಗಳನ್ನು ಕಾನೂನು ವ್ಯಾಪ್ತಿಯಲ್ಲಿ ಕ್ರಮಕ್ಕೆ ಒಳಪಡಿಸುವುದು ನಮ್ಮ ಸರ್ಕಾರದ ಗುರಿ. ಬಿಟ್ ಕಾಯಿನ್ ಅಕ್ರಮ ವರ್ಗಾವಣೆಯಂತಹ ಪ್ರಕರಣಗಳಲ್ಲಿ ತನಿಖೆ ನಡೆಸುವುದೇ ದೊಡ್ಡ ಸವಾಲು. ಎಲ್ಲ ಎಸ್‌ಐಟಿಗಳನ್ನೂ ಒಂದೇ ರೀತಿ ನೋಡಲಾಗದು. ಎಸ್‌ಐಟಿಗಳಿಂದ ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಕೆಲಸ ಆಗಿದೆ. ತನಿಖೆಗೆ ಚುರುಕು ನೀಡುತ್ತೇವೆ.

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ


'ನಿಷ್ಪಕ್ಷಪಾತ ತನಿಖೆ ನಿರೀಕ್ಷಿಸುವಂತಿಲ್ಲ'



ಎಸ್‌ಐಟಿ ಎಂದರೆ ಸರ್ಕಾರದ ಅಡಿಯಾಳಾಗಿರುವ ಒಂದು ತನಿಖಾ ತಂಡ. ಈ ಹಿಂದೆ ಲೋಕಾಯುಕ್ತವನ್ನು ಮುಚ್ಚಿಹಾಕಲು ಎಸಿಬಿ ರಚಿಸಲಾಗಿತ್ತು. ಇದೇ ರೀತಿ ಎಸ್‌ಐಟಿ ಕೂಡ ಸ್ವತಂತ್ರ ತನಿಖೆಯ ಅವಕಾಶವನ್ನು ಕ್ಷೀಣಿಸಲು ಹುಟ್ಟಿಕೊಳ್ಳುವ ತಂಡ. ಅಧಿಕಾರದಲ್ಲಿರುವವರ ನಿರ್ದೇಶನದಂತೆ ಕಲಸ ಮಾಡುವ ಎಸ್‌ಐಟಿಯಿಂದ ನಿಷ್ಪಕ್ಷಪಾತ ತನಿಖೆ ನಡೆಯುತ್ತಿದೆ ಎಂದು ನಂಬಿದರೆ ಮೂರ್ಖತನವಾದೀತು. ಯಾವುದೇ ತನಿಖೆ ನಡೆಯುವಾಗಲೂ ಆರೋಪಿಗಳು ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲರೂ ಮೊದಲು ರಾಜೀನಾಮೆ ನೀಡಬೇಕು. ಆದರೆ ಇದನ್ನು ಕೂಡ ರಾಜ್ಯದಲ್ಲೀಗ ನಿರೀಕ್ಷಿಸುವಂತಿಲ್ಲ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

'ಅಪರಾಧಿಗಳನ್ನು ರಕ್ಷಿಸುವ ಹುನ್ನಾರ'



ಪ್ರಭಾವಿ ವ್ಯಕ್ತಿಗಳು ಮಾಡಿದ ಅಪರಾಧಗಳನ್ನ ಮುಚ್ಚಿಹಾಕಿ, ಅವರನ್ನು ಕಾನೂನು ಕ್ರಮದಿಂದ ಪಾರುಮಾಡಲು ಎಸ್‌ಐಟಿ ರಚಿಸಲಾಗುತ್ತಿದೆ. ರಾಜ್ಯದಲ್ಲಿ 30 ವರ್ಷಗಳಿಂದ ಈಚೆಗೆ ಬಹುತೇಕ ಎಸ್‌ಐಟಿಗಳು ನಡೆಸಿದ ತನಿಖೆಯಿಂದ ಅಪರಾಧಿಗಳಿಗೆ ಶಿಕ್ಷೆಯಾಗಿಲ್ಲ. ಅಪರಾಧಿಗಳನ್ನು ರಕ್ಷಿಸುವುದನ್ನು ಮೊದಲೇ ನಿರ್ಧರಿಸಿಕೊಂಡು ಎಸ್‌ಐಟಿ ನೇಮಿಸಲಾಗುತ್ತದೆ. ರಾಜ್ಯದ ಜನರನ್ನು ದಿಕ್ಕುತಪ್ಪಿಸುವ ಹುನ್ನಾರ ಇದರ ಹಿಂದಿದೆ.

ರವಿಕೃಷ್ಣಾ ರೆಡ್ಡಿ, ಕರ್ನಾಟಕ ರಾಷ್ಟ್ರ ಸಮಿತಿ ಅಧ್ಯಕ್ಷ

ಯಾವೆಲ್ಲ ಎಸ್‌ಐಟಿ: ಏನಿದರ ಉದ್ದೇಶ



ಬಿಟ್ ಕಾಯಿನ್: ಕೋಟಿ ವ್ಯವಹಾರ

ಬಿಟ್ ಕಾಯಿನ್ ಹ್ಯಾಕಿಂಗ್‌ಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ದಾಖಲಾದ ಪ್ರಕರಣ ತನಿಖೆಗಾಗಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮನೀಶ್ ಖರ್ಬೀಕರ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ 2023ರ ಜೂನ್ 6ರಂದು ಆದೇಶ ಹೊರಡಿಸಲಾಗಿದೆ. ಸಿಐಡಿ ಡಿಐಜಿ ಸಿ. ವಂಶಿಕೃಷ್ಣ ಮತ್ತು ಡಿಸಿಪಿ ಅನೂಪ್ ಶೆಟ್ಟಿ ತಂಡದಲ್ಲಿದ್ದಾರೆ.

ಹ್ಯಾಕರ್ ಶ್ರೀಕಿ ಅಲಿಯಾಸ್ ಶ್ರೀಕೃಷ್ಣ ಪೊಲೀಸ್ ಕಸ್ಟಡಿಯಲ್ಲಿದ್ದಾಗ ಆತನನ್ನು ದುರ್ಬಳಕೆ ಮಾಡಿಕೊಂಡು ಅಧಿಕಾರಿಗಳು, ಪ್ರಭಾವಿ ರಾಜಕಾರಣಿಗಳು ಅಕ್ರಮವಾಗಿ ಯಾರದ್ದೋ ಕ್ರಿಪ್ಟೋ ಕರೆನ್ಸಿಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಸಿಕೊಂಡಿದ್ದಾರೆ ಎಂಬ ಆರೋಪವೂ ಸೇರಿದಂತೆ ಏಳು ಪ್ರಕರಣಗಳ ತನಿಖೆಯನ್ನು ಈ ಎಸ್‌ಐಟಿ ನಡೆಸುತ್ತಿದೆ. ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ದಾಖಲಾದ ಆರು, ಸಿಐಡಿಯಲ್ಲಿ ದಾಖಲಿಸಿದ ಎರಡು ಮತ್ತು ತುಮಕೂರಿನಲ್ಲಿ ದಾಖಲಾದ ಒಂದು ಪ್ರಕರಣವನ್ನು ಈ ವಿಶೇಷ ತನಿಖಾ ತಂಡಕ್ಕೆ ವರ್ಗಾಯಿಸಲಾಗಿದೆ.

ಬಿಟ್ ಕಾಯಿನ್ ಹ್ಯಾಕಿಂಗ್‌ಗೆ ಸಂಬಂಧಿಸಿದಂತೆ ಹಿಂದೆ ತನಿಖೆ ನಡೆಸಿದ್ದ ಸಿಸಿಬಿಯ ಕೆಲವು ಪೊಲೀಸ್ ಅಧಿಕಾರಿಗಳನ್ನು ಸಾಕ್ಷ್ಯನಾಶ ಮತ್ತು ಸಾಕ್ಷ್ಯ ತಿರುಚಿದ ಆರೋಪದಡಿ ಎಸ್‌ಐಟಿ ಬಂಧಿಸಿದೆ. ಆದರೆ, ಬಿಟ್ ಕಾಯಿನ್‌ಗಳ ಅಕ್ರಮ ವರ್ಗಾವಣೆ ಕುರಿತು ಅಂತರರಾಷ್ಟ್ರೀಯ ಮಟ್ಟದ ಕ್ರಿಪ್ಟೋ ಕರೆನ್ಸಿ ಎಕ್ಸ್‌ಚೇಂಜ್‌ಗಳು ತನಿಖಾ ತಂಡಕ್ಕೆ ಅಗತ್ಯ ಮಾಹಿತಿ ಹಂಚಿಕೊಳ್ಳುತ್ತಿಲ್ಲ. ಹೀಗಾಗಿ ತನಿಖೆ ವೇಗವಾಗಿ ಮುಂದಕ್ಕೆ ಸಾಗುತ್ತಿಲ್ಲ.

ಅತ್ಯಾಚಾರ: ಪ್ರಜ್ವಲ್, ಸೂರಜ್, ರೇವಣ್ಣ ಪ್ರಕರಣ

ಹಾಸನದ ಮಾಜಿ ಸಂಸದ ಜೆಡಿಎಸ್‌ನ ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿ, ವಿಡಿಯೊ ಚಿತ್ರೀಕರಿಸಿಕೊಳ್ಳುತ್ತಿದ್ದರು ಎಂಬ ಆರೋಪ, ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ಶಾಸಕರೂ ಆಗಿರುವ ಎಚ್. ಡಿ. ರೇವಣ್ಣ (ಪ್ರಜ್ವಲ್ ಅವರ ತಂದೆ) ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದ್ದರು ಎಂಬ ಆರೋಪ, ಪ್ರಜ್ವಲ್ ಅವರ ಅಣ್ಣ, ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸೂರಜ್, ಯುವಕರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದರು ಎಂಬ ಆರೋಪ ಹಾಗೂ ಅವರ ತಾಯಿ ಕೃತ್ಯಕ್ಕೆ ಸಹಕಾರ ನೀಡಿದ್ದರು ಎಂಬ ಆರೋಪ ಕುರಿತು ತನಿಖೆಗೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಬಿ.ಕೆ. ಸಿಂಗ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ ಏಪ್ರಿಲ್ 24ರಂದು ಆದೇಶ ಹೊರಡಿಸಲಾಗಿತ್ತು. ಐಪಿಎಸ್ ಅಧಿಕಾರಿಗಳಾದ ಸುಮನ್ ಡಿ. ಪೆನ್ನೇಕರ್ ಮತ್ತು ಸೀಮಾ ಲಾಟ್ಕರ್ ಈ ಎಸ್‌ಐಟಿಯ ಸದಸ್ಯರು. ಹಾಸನ ಜಿಲ್ಲೆ ಹೊಳೆನರಸೀಪುರ ಪೊಲೀಸ್ ಠಾಣೆ ಹಾಗೂ ಮಂಡ್ಯ ಜಿಲ್ಲೆಯ ಕೆ.ಆರ್. ನಗರ ಪೊಲೀಸ್ ಠಾಣೆಗಳಲ್ಲಿ ದಾಖಲಾದ ತಲಾ ಒಂದು ಮತ್ತು ಸಿಐಡಿ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ದಾಖಲಾದ ಮೂರು ಪ್ರಕರಣಗಳ ತನಿಖೆಯನ್ನು ಈ ಎಸ್‌ಐಟಿ ನಡೆಸುತ್ತಿದೆ. ಪ್ರಜ್ವಲ್ ರೇವಣ್ಣ, ಎಚ್.ಡಿ. ರೇವಣ್ಣ ಮತ್ತು ಸೂರಜ್ ರೇವಣ್ಣ ಅವರನ್ನು ಬಂಧಿಸಲಾಗಿತ್ತು. ಎಚ್.ಡಿ. ರೇವಣ್ಣ ಮತ್ತು ಸೂರಜ್ ರೇವಣ್ಣ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಪ್ರಜ್ವಲ್ ರೇವಣ್ಣ ನ್ಯಾಯಾಂಗ ಬಂಧನ ಮುಂದುವರಿದಿದೆ.

ವಾಲ್ಮೀಕಿ ನಿಗಮದ ಬಹುಕೋಟಿ ಲೂಟಿ

ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ ಮಾಡಿ, ವಂಚಿಸಿದ ಪ್ರಕರಣದ ತನಿಖೆಗಾಗಿ ಎಡಿಜಿಪಿ ಮನೀಶ್ ಖರ್ಬೀಕರ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ ಮೇ 31ರಂದು ಆದೇಶ ಹೊರಡಿಸಲಾಗಿದೆ. ಐಪಿಎಸ್ ಅಧಿಕಾರಿಗಳಾದ ಶಿವಪ್ರಕಾಶ್ ದೇವರಾಜು, ಹರಿರಾಂ ಶಂಕರ್ ಮತ್ತು ಸಿಐಡಿ ಎಸ್‌ಪಿ ರಾಘವೇಂದ್ರ ಹೆಗ್ಡೆ ಈ ತಂಡದ ಸದಸ್ಯರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಲೆಕ್ಕಾಧೀಕ್ಷಕ ಪಿ. ಚಂದ್ರಶೇಖರನ್ ಆತ್ಮಹತ್ಯೆ ಸಂಬಂಧ ಶಿವಮೊಗ್ಗದ ವಿನೋಬನಗರ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣ ಮತ್ತು ವಂಚನೆಗೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ದಾಖಲಾದ ಏಳು ಪ್ರಕರಣಗಳ ತನಿಖೆಯನ್ನು ಈ ಎಸ್‌ಐಟಿ ನಡೆಸುತ್ತಿದೆ.

ಈ ಪ್ರಕರಣದಲ್ಲಿ ಎಸ್‌ಐಟಿ 12 ಆರೋಪಿಗಳನ್ನು ಬಂಧಿಸಿದ್ದು, ಅವರ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ. ಇದೇ ಪ್ರಕರಣದಲ್ಲಿ ಮಾಜಿ ಸಚಿವ ಬಿ. ನಾಗೇಂದ್ರ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿತ್ತು. ಆದರೆ, ಎಸ್‌ಐಟಿ ಆರೋಪಪಟ್ಟಿಯಲ್ಲಿ ಅವರನ್ನು ಆರೋಪಿ ಎಂದು ಹೆಸರಿಸಿಲ್ಲ.

ಪಿಎಸ್‌ಐ ನೇಮಕಾತಿ ಅಕ್ರಮ

545 ಪೊಲೀಸ್ ಸಬ್‌ಇನ್‌ಸ್ಪೆಕ್ಟರ್‌ಗಳ ಹುದ್ದೆ ಭರ್ತಿಗೆ 2021ರಲ್ಲಿ ನಡೆಸಿದ್ದ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ಬಹಿರಂಗವಾಗಿತ್ತು. ಈ ಕುರಿತು ಸಿಐಡಿ ಪೊಲೀಸರು ತನಿಖೆ ನಡೆಸಿ, ಎಡಿಜಿಪಿ ಅಮೃತ್ ಪಾಲ್ ಸೇರಿದಂತೆ 110 ಮಂದಿಯನ್ನು ಬಂಧಿಸಿದ್ದರು. ಈ ಪ್ರಕರಣದಲ್ಲಿನ ಅಕ್ರಮಗಳು ಹಾಗೂ ಚುನಾಯಿತ ಪ್ರತಿನಿಧಿಗಳ ಹೇಳಿಕೆಗಳ ಕುರಿತು ತನಿಖೆ ನಡೆಸಲು ಎಡಿಜಿಪಿ ಮನೀಶ್ ಖರ್ಬೀಕರ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ ಜೂನ್ 12ರಂದು ಎಸ್‌ಐಟಿ ರಚಿಸಲಾಗಿದೆ. ಐಪಿಎಸ್ ಅಧಿಕಾರಿಗಳಾದ ಸಿ. ವಂಶಿಕೃಷ್ಣ, ಪೃಥ್ವಿಶಂಕರ್ ಮತ್ತು ಸಿಐಡಿ ಎಸ್‌ಪಿ ರಾಘವೇಂದ್ರ ಹೆಗ್ಡೆ ಸದಸ್ಯರಾಗಿದ್ದಾರೆ.

ಮುನಿರತ್ನ ವಿರುದ್ಧದ ಅತ್ಯಾಚಾರ ಪ್ರಕರಣ

ಬಿಜೆಪಿ ಶಾಸಕ ಮುನಿರತ್ನ ಅವರು ಗುತ್ತಿಗೆದಾರರೊಬ್ಬರಿಗೆ ಜೀವಬೆದರಿಕೆ ಹಾಕಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು, ವ್ಯಕ್ತಿಯೊಬ್ಬರ ಜಾತಿನಿಂದನೆ ಮಾಡಿದ್ದರು ಮತ್ತು ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆಸಿದ್ದರು ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳ ತನಿಖೆಗೆ ಎಡಿಜಿಪಿ ಬಿ.ಕೆ. ಸಿಂಗ್ ನೇತೃತ್ವದಲ್ಲಿ ಸೆಪ್ಟೆಂಬರ್ 21ರಂದು ಎಸ್‌ಐಟಿ ರಚಿಸಲಾಗಿದೆ. ಐಜಿಪಿ ಲಾಭುರಾಮ್, ಐಪಿಎಸ್ ಅಧಿಕಾರಿ ಸೌಮ್ಯಲತಾ ಮತ್ತು ಸಿಐಡಿ ಎಸ್‌ಪಿ ಸಿ.ಎ. ಸೈಮನ್ ತಂಡದ ಸದಸ್ಯರಾಗಿದ್ದಾರೆ.

ಬೆಂಗಳೂರಿನ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಎರಡು ಮತ್ತು ರಾಮನಗರ ಜಿಲ್ಲೆಯ ಕಗ್ಗಲೀಪುರ ಠಾಣೆಯಲ್ಲಿ ದಾಖಲಾದ ಒಂದು ಪ್ರಕರಣದ ತನಿಖೆಯನ್ನು ಈ ಎಸ್‌ಐಟಿ ನಡೆಸುತ್ತಿದೆ. ಮುನಿರತ್ನ ಅವರನ್ನು ವೈಯಾಲಿಕಾವಲ್ ಠಾಣೆ ಪೊಲೀಸರು ಬಂಧಿಸಿದ್ದರು. ಬಳಿಕ ಎಸ್‌ಐಟಿ ಕೂಡ ಬಂಧಿಸಿ, ವಿಚಾರಣೆ ನಡೆಸಿತ್ತು. ನ್ಯಾಯಾಂಗ ಬಂಧನದಲ್ಲಿದ್ದ ಅವರು, ಜಾಮೀನಿನ ಮೇಲೆ ಹೊರ ಬಂದಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 27-10-1999

● **ರಾಜೀವ್ ಹೆಸರು ಕೈಬಿಡಲು ಕಾಂಗ್ರೆಸ್ ಪಕ್ಷದ ಪಟ್ಟು**

ನವದೆಹಲಿ, ಅ. 26– ಬೊಫೋರ್ಸ್ ಫಿರಂಗಿ ಖರೀದಿ ಹಗರಣ ದಲ್ಲಿನ ಆರೋಪ ಪಟ್ಟಿಯಿಂದ ರಾಜೀವ್ ಗಾಂಧಿ ಹೆಸರನ್ನು ಕೈಬಿಡಬೇಕೆಂಬ ಒತ್ತಾಯವನ್ನು ಸರ್ಕಾರ ಇಂದು ಹೆಚ್ಚು ಕಡಿಮೆ ತಿರಸ್ಕರಿಸಿದ್ದನ್ನು ಪ್ರತಿಭಟಿಸಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷ ಎಐಎಡಿಎಂಕೆ ಸದಸ್ಯರು ಇಂದು ಲೋಕಸಭೆಯಲ್ಲಿ ಸಭಾತ್ಯಾಗ ಮಾಡಿದರು. ಡೀಸೆಲ್ ಬೆಲೆ ಏರಿಕೆ ಹಿಂತೆಗೆದುಕೊಳ್ಳುವ ಬಗ್ಗೆ ಸರ್ಕಾರ ಭರವಸೆ ನೀಡುವಲ್ಲಿ ವಿಫಲ ವಾದುದನ್ನು ಪ್ರತಿಭಟಿಸಿ ಪ್ರತಿಪಕ್ಷದ ಸದಸ್ಯರೆಲ್ಲರೂ ಕೂಡ ಸಭಾತ್ಯಾಗ ಮಾಡಿದ ಘಟನೆಯು ನಡೆಯಿತು.

50 ವರ್ಷಗಳ ಹಿಂದೆ

ಭಾನುವಾರ, 27-10-1974

● **ಎಲ್ಲಾ ಜಿಲ್ಲೆಗಳಿಗೂ ಪ್ರಾತಿನಿಧ್ಯ**

ಹುಬ್ಬಳ್ಳಿ, ಅ. 26– 'ಹೊಸ ಸಂಪುಟದಲ್ಲಿ ಹೆಚ್ಚು ಕಡಿಮೆ ಎಲ್ಲ ಜಿಲ್ಲೆಗಳಿಗೂ ಪ್ರಾತಿನಿಧ್ಯ ಕೊಡಲಾಗುವುದು' ಎಂದು ಮುಖ್ಯಮಂತ್ರಿ ಡಿ. ದೇವರಾಜ ಅರಸು ಈ ರಾತ್ರಿ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಹೊಸ ಸಂಪುಟದಲ್ಲಿ ಎಲ್ಲಾ ಜಿಲ್ಲೆಗಳಿಗೆ ಪ್ರಾತಿನಿಧ್ಯ ಕೊಡಲಾಗುವುದೇ ಎಂದು ಸುದ್ದಿಗಾರರು ಮುಖ್ಯಮಂತ್ರಿ ಅವರನ್ನ ಪ್ರಶ್ನಿಸಿದರು.

ಮಹಿಳೆಯರಿಗೂ ಪ್ರಾತಿನಿಧ್ಯ ಕೊಡಲಾಗುವುದೇ ಎಂಬ ಪತ್ರಕರ್ತರ ಪ್ರಶ್ನೆಗೆ ಅರಸು ಅವರು 'ಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವಿದೆ' ಎಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಅಕ್ಟೋಬರ್ 27, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿಜ ಕೃಷ್ಣ ಏಕಾದಶಿ ಅಹೋರಾತ್ರ ನಕ್ಷತ್ರ: ಮಘ ಗಂ. 12-24 ಯೋಗ: ಬ್ರಹ್ಮ ಅಹೋರಾತ್ರ ಕರಣ: ಬವ ಗಂ. 18-35, ತುಲಾ ಮಾಸದ 10 ನೇ ದಿನ, ಮಳೆನಕ್ಷತ್ರ: ಸ್ವಾತಿ 2.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06 27, **ಸೂರ್ಯಾಸ್ತ:** 06-02
ಮುಸ್ಲಿಂ ದಿನಾಂಕ: 23 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ: 3, 6

ಮೇಷ: ಒಳ್ಳೆಯ ಮಿತ್ರರಿಂದ ಕಂಪನಿಯ ಮುಖ್ಯವಾದ ವ್ಯಕ್ತಿಯ ಪರಿಚಯ ಹಾಗೂ ಅಭಿವೃದ್ಧಿಯ ಮಾಹಿತಿ ನಿಮಗೆ ಈ ದಿನ ದೊರಯುತ್ತದೆ. ಹೆಚ್ಚಿನ ಇಷ್ಟಾರ್ಥ ಸಿದ್ಧಿಯೋಗ ನಿಮ್ಮ ಪಾಲಿಗಿರುತ್ತದೆ. ಹಣದ ಬಗ್ಗೆ ಚಿಂತೆ ಬೇಡ.

ವೃಷಭ: ದೈಹಿಕ ಕೆಲಸವನ್ನು ಮಾಡಿ ದುಡಿಮೆ ಮಾಡುತ್ತಿರುವವರು ದೇಹಕ್ಕೆ ಸ್ವಲ್ಪ ಮಟ್ಟನ ವಿಶ್ರಾಂತಿ ನೀಡಬೇಕಾಗುತ್ತದೆ. ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಉನ್ನತವಾದ ಸ್ಥಾನಮಾನ ಪ್ರಾಪ್ತಿಯಾಗಲಿದೆ.

ಮಿಥುನ: ಸಾಂಸಾರಿಕವಾಗಿ ಸಮಸ್ಯೆಗಳನ್ನು ಪರಿಹಾರಿಸುತ್ತಿದ್ದಂತೆ ಇನ್ನೊಂದು ಮತ್ತೊಂದು ಎಂಬಂತೆ ಒಂದೊಂದೇ ಸಮಸ್ಯೆಗಳು ಬರುತ್ತಿವೆ. ಶಿವನ ಆರಾಧನೆಯಿಂದಾಗಿ ಅಭೀಷ್ಟ ಪ್ರಾಪ್ತಿಯಾಗಿ ಶುಭವಾಗಲಿದೆ.

ಕರ್ಕಾಟಕ: ಹಿರಿಯ ಅಧಿಕಾರಿಗಳ ಸಹಾಯ ಪಡೆದು ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಮನೋರಂಜನೆಗಾಗಿ ಹಣ ವ್ಯಯ ಮಾಡುವುದು ಸರಿಯಲ್ಲ. ಕೃಷಿಕರಿಗೆ ಕೆಲಸ ಕಾರ್ಯಗಳು ಹೆಚ್ಚಲಿದೆ.

ಸಿಂಹ: ನಿಮ್ಮ ಚಾಣಾಕ್ಷತನ ಮತ್ತು ಸರಳತೆಗೆ ಹಿರಿಯರಿಂದ ಮೆಚ್ಚುಗೆ ದೊರೆಯಲಿದೆ. ಸಂಸ್ಥೆಯೊಂದರ ಸಲಹೆಗಾರರಾಗಿರುವ ನಿಮಗೆ ಹೆಚ್ಚಿನ ಒತ್ತಡ ಮತ್ತು ಸಂದಿಗ್ಧ ಪರಿಸ್ಥಿತಿ ಎದುರಾಗುತ್ತದೆ. ಮಕ್ಕಳ ಬಗ್ಗೆ ಹೆಚ್ಚಿನ ನಿಗಾ ಇರಲಿ.

ಕನ್ಯಾ: ಅಪರಿಚಿತ ಜಾಗದಲ್ಲಿ, ಅಪರಿಚಿತ ವ್ಯಕ್ತಿಗಳೊಂದಿಗೆ ಉದ್ವೇಗಗೊಳ್ಳದೆ ತಾಳ್ಮೆಯಿಂದಿದ್ದರೆ, ನಿಮ್ಮ ಹಾದಿ ಸುಗಮವಾಗಿ ಸಾಗುತ್ತದೆ. ತರಕಾರಿ ವ್ಯಾಪಾರಸ್ಥರಿಗೆ ಲಾಭ ಕಡಿಮೆಯಿದೆ.

ತುಲಾ: ನೀವು ಬಯಸಿದ ಪ್ರಗತಿಯು ದೇವತಾನುಗ್ರಹದಿಂದ ಪ್ರಾಪ್ತಿಯಾಗಲಿದೆ. ಕೌಟುಂಬಿಕವಾಗಿ ಎಷ್ಟೇ ಕಷ್ಟ ಬಂದರೂ ಹಿಡಿದ ದಾರಿಯನ್ನು ಬಿಡಬಾರದೆಂಬ ನಿಮ್ಮ ಮನೋಭಾವ ದೇಹಾಯಾಸ ಮೂಲಕ ಗುರಿ ತಲುಪಲಿದೆ.

ವೃಶ್ಚಿಕ: ಧೈರ್ಯ ಮತ್ತು ಪ್ರೇರಣಾ ಶಕ್ತಿಯ ಭಾವವನ್ನು ಹೊಂದುವುದರಿಂದ ಸಮಸ್ಯೆಯನ್ನು ಸುಲಭವಾಗಿ ಎದುರಿಸಬಹುದು. ಚಿತ್ರ ವಿತರಕರಿಗೆ ಹೆಚ್ಚಿನ ವರಮಾನ ಅಥವಾ ಪ್ರಶಸ್ತಿ ಹಾಗೂ ಪುರಸ್ಕಾರ ದೊರೆಯಲಿದೆ.

ಧನು: ನೀವೇ ನಡೆಸಬೇಕಾದ ವಿವಾಹದಂತಹ ಸಮಾರಂಭದ ವಿಚಾರದಲ್ಲಿ ನಿಮ್ಮ ಬಹುದಿನದ ಪ್ರಯತ್ನಗಳು ನಿಷ್ಫಲವೆನಿಸುವುದಿಲ್ಲ. ವೃತ್ತಿಯಲ್ಲಿ ಉನ್ನತ ಸ್ಥಾನಕ್ಕೆ ಏರಲು ಬೇಕಾದ ತಯಾರಿಯನ್ನು ಮಾಡಿಕೊಳ್ಳಿ.

ಮಕರ: ಶತ್ರುಗಳ ಉಪಟಳವನ್ನು ಎದುರಿಸುವ ಸಾಮರ್ಥ್ಯ ನಿಮಗೆ ಭಗವಂತ ನೀಡಲಿದ್ದಾನೆ. ಕಿರುತೆರೆ ಕಲಾವಿದರಿಗೆ ವಿಪುಲ ಅವಕಾಶಗಳು ಒದಗಲಿದೆ. ನ್ಯಾಯವಾದಿಗಳಿಗೆ ಜಯ ಪ್ರಾಪ್ತಿಯಾಗಲು ಸತ್ಯ ಮಾರ್ಗದಲ್ಲಿದ್ದರಷ್ಟೇ ಸಾಧ್ಯ.

ಕುಂಭ: ಧಾರ್ಮಿಕ ಕೆಲಸ ಕಾರ್ಯಗಳನ್ನು ಮಾಡುವ ಅವಕಾಶ ಸಿಗುವುದು. ಅದರ ಫಲವಾಗಿ ಪುಣ್ಯ ಸಂಪಾದನೆ ಆಗುತ್ತದೆ. ಶಾರೀರಿಕ ಆಯಾಸ ಇತ್ಯಾದಿ ತೋರಿ ಬಂದರೂ ದಿನಾಂತ್ಯದಲ್ಲಿ ಹಂತಹಂತವಾಗಿ ಪ್ರಗತಿ ದೊರೆಯಲಿದೆ.


ಮೀನ: ಮಕ್ಕಳ ಜೊತೆ ಸಂತೋಷದಿಂದ ಕಾಲ ಕಳೆಯಲು ಕೆಲ ನಿರ್ಧಾರಗಳನ್ನು ಕೈಗೊಳ್ಳಬೇಕಾಗುವುದು. ನಿಮ್ಮ ದೈನಂದಿನ ಬದುಕಿಗೆ ವಿಶ್ರಾಂತಿ ಮಾಡ ಬೇಕಾಗುತ್ತದೆ. ಲಲಿತ ಕಲೆಗಳಲ್ಲಿ ಸಫಲತೆಯ ದಾರಿಗಳು ಒದಗಲಿವೆ.

ಪದಬಂಧ 5844

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಮುನಿಸು ಮಾಡಿಕೊಂಡಾಗ ತಪಸ್ವಿ ಕಾಣುವನೇ? (2)
3.ಕಚೇರಿಯ ನೌಕರ ವರ್ಗ ಉಲ್ಟಾ ಕಾಣುತ್ತಿದ್ದಾರೆ (3)
5.ಹೂವಿನಲ್ಲಿರುವ ಸಿಹಿ ರಸ (4)
7.ನೀರವತೆಗೊಂದು ಪರ್ಯಾಯ ಪದ (2)
9.ಜನರು ಆಡುವ ಮಾತು (4)
10.ಅಲೆಯುತ್ತಿರುವಾಗ ಕಾಣಿಸಿದ ತರಂಗ (2)
11.ನಿಧಾನ ಎಂದು ಹೀಗೆ ಹೇಳಿ (2)
12.ಅರಗಿನ ಮನೆಯಿದು (4)
13.ಅರಳೆ ತುಂಬಿದ ಮೆತ್ತನೆಯ ದಿಂಬು (2)
14.ರಾಮನ ಚರಿತ್ರೆಯನ್ನು ಕುರಿತ ಮಹಾಕಾವ್ಯ (4)
16.ವಾಚಾಳಿ ಇಲ್ಲಿದ್ದಾನೆ (3)
17.ಹೆರಿಗೆಯ ಸೆತ್ತೆ (2)

ಮೇಲಿಂದ ಕೆಳಕ್ಕೆ
1.ಪ್ರೀತಿ ಈ ರೀತಿ ಬಂದಿದೆ (2)
2.ಮುನಿದವನಲ್ಲಿಸಂತೋಷ ಕಾಣುತ್ತಿದೆಯೇ? (2)
3.ಸೂರ್ಯನನ್ನು ಹೀಗೂ ಕರೆಯುತ್ತಾರೆ (4)
4.ಸಂಪದ್ಯುಕ್ತವಾದ ಕನ್ನಡ ಭಾಷೆ (5)
6.ಕಲೆಯಿಂದ ಕೂಡಿರುವ ಆಹ್ವಾನ (4)
8.ಜನಸಾಮಾನ್ಯರಲ್ಲಿ ಉಂಟಾಗುವ ಎಚ್ಚರ (5)
10.ಒಂದನ್ನೊಂದು ಅಗಲದೇ ಇರುವಿಕೆ (5)
11.ಬುನಾದಿಯನ್ನು ಹೀಗೂ ಹೇಳುವರು (4)
12.ಜತೆಯಲ್ಲಿರುವವನು (4)
14.ಸುರಾಸುರರ ಹತ್ತಿರವಿರುವ ಜಾನುವಾರು (2)
15.ಶರವಿಲಿ ಉಲಾ ಆಗಿದೆ (2))



5843ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವನಮಹೋತ್ಸವ 4.ಸಾಧಕ
7.ಪರಪಂಚ 8.ತುಮುಲ
10.ಜರಡಿ 12.ಭ್ರಷ್ಟಾಚಾರ
14.ಕನ್ನಡಿ
15.ಕಿರೀಟಧಾರಣೆ

ಮೇಲಿಂದ ಕೆಳಕ್ಕೆ:
2.ನಕ್ತಂಚರ 3.ವಸಾಹತು
5.ಕಲಿಲ 6.ವಚನಭ್ರಷ್ಟ
7.ಪಗಾರ 9.ಮುಷ್ಕರ
10.ಜಟಕ 11.ಡಿಗೇಡಿಕಿ
13.ಚಾಡಿಕೋರ

ಸುಡೊಕು 6229

	7	5		9			6	
1		9	6	4				
	6		5		2		9	
9		2				3		6
	4			5			7	
8		7	2		4	1		9
7			4		5		2	
				2		7		4
		4	1		9		3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6228 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಂಕ್ಷಿಪ್ತ ಸುದ್ದಿ

ಸಂವಿಧಾನ ಅಂಗೀಕರಿಸಿ 75 ವರ್ಷ ಜಂಟಿ ಅಧಿವೇಶನ

ನವದೆಹಲಿ (ಪಿಟಿಐ): 'ಸಂವಿಧಾನವನ್ನು ಅಂಗೀಕರಿಸಿ ನವೆಂಬರ್ 26ಕ್ಕೆ 75 ವರ್ಷ ತುಂಬುತ್ತದೆ. ಇದೇ ದಿನದಂದು 75ನೇ ವರ್ಷಾಚರಣೆ ಅಂಗವಾಗಿ ಸಂಸತ್ತಿನ ಜಂಟಿ ಅಧಿವೇಶನ ನಡೆಯಲಿದೆ' ಎಂದು ಅಧಿಕಾರಿಗಳು ಶನಿವಾರ ತಿಳಿಸಿದರು.




ಸಂಸತ್ತಿನ 'ಸಂವಿಧಾನ ಸದನ'ದ ಸಭಾಂಗಣದಲ್ಲಿ ಅಧಿವೇಶನ ನಡೆಯಲಿದೆ. 1949ರ ನವೆಂಬರ್ 26ರಂದು ಅಂದಿನ ಸಂಸತ್ತು ಇದೇ ಸಭಾಂಗಣದಲ್ಲಿಯೇ ಸಂವಿಧಾನವನ್ನು ಅಂಗೀಕರಿಸಿತ್ತು.

ನ.26 ಅನ್ನು ಪ್ರತಿ ವರ್ಷ ಕಾನೂನು ದಿನವನ್ನಾಗಿ ಆಚರಿಸಲಾ ಗುತ್ತಿತ್ತು. ಆದರೆ, ಡಾ.ಬಿ.ಆರ್. ಅಂಬೇಡ್ಕರ್ ಅವರ 125ನೇ ಜಯಂತಿ (2015) ಸಂದರ್ಭದಿಂದ ಈ ದಿನವನ್ನು ಸಂವಿಧಾನ ದಿನವನ್ನಾಗಿ ಆಚರಿಸಲಾಗುತ್ತಿದೆ.

ಬಿಷ್ಣೋಯಿ ಸಂದರ್ಶನಕ್ಕೆ ಅವಕಾಶ 7 ಮಂದಿ ಅಮಾನತು

ಚಂಡೀಗಢ (ಪಿಟಿಐ): ಪೊಲೀಸರ ವಶದಲ್ಲಿದ್ದ ಗ್ಯಾಂಗ್‌ಸ್ಟಾರ್ ಲಾರೆನ್ಸ್ ಬಿಷ್ಣೋಯಿ ಅವರನ್ನು ಸಂದರ್ಶನ ಮಾಡಲು ಅವಕಾಶ ಮಾಡಿಕೊಟ್ಟ



ಆರೋಪದ ಮೇಲೆ ಇಬ್ಬರು ಡಿಎಸ್‌ಪಿಗಳು ಸೇರಿದಂತೆ ಏಳು ಮಂದಿ ಪೊಲೀಸರನ್ನು ಪಂಜಾಬ್ ಪೊಲೀಸ್ ಇಲಾಖೆ ಅಮಾನತುಗೊಳಿಸಿದೆ.

ಈ ಕುರಿತು ತನಿಖೆ ನಡೆಸಲು ವಿಶೇಷ ಡಿಜಿಪಿ (ಮಾನವ ಹಕ್ಕು) ನೇತೃತ್ವದಲ್ಲಿ ಪೊಲೀಸ್ ಇಲಾಖೆಯು ಎಸ್‌ಐಟಿ ರಚಿಸಿತ್ತು. ಪಂಜಾಬ್ ಪೊಲೀಸ್ ವಶದಲ್ಲಿದ್ದ ವೇಳೆ ಮೊಹಾಲಿಯ ಕರಾರ್‌ನಲ್ಲಿ ಮೊದಲ ಸಂದರ್ಶನ ನೀಡಲಾಗಿತ್ತು. ರಾಜಸ್ಥಾನದಲ್ಲಿ ಎರಡನೇ ಬಾರಿ ಸಂದರ್ಶನ ನಡೆಸಲಾಗಿತ್ತು. ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಆರೋಪದ ಅಡಿಯಲ್ಲಿ ಅಮಾನತು ಆದೇಶ ಹೊರಡಿಸಿದೆ.

ಎಸ್ಪಿ ಗುರ್ಶೇರ್ ಸಿಂಗ್ ಸಂಧು, ಡಿಎಸ್‌ಪಿ ಸಮ್ಮರ್ ವನೀತ್, ಸಬ್ ಇನ್‌ಸ್ಪೆಕ್ಟರ್‌ಗಳಾದ ರೀನಾ, ಜಗತ್‌ಪಾಲ್ ಜಂಗು, ಸಂಗಜಿತ್ ಸಿಂಗ್, ಎಎಸ್‌ಐ ಮುಕ್ತಿಯಾರ್ ಸಿಂಗ್, ಹೆಡ್ ಕಾನ್‌ಸ್ಟೆಬಲ್ ಓಂಪ್ರಕಾಶ್ ಅವರನ್ನು ಅಮಾನತುಗೊಳಿಸಿ ಪಂಜಾಬ್ ಗೃಹ ಸಚಿವಾಲಯವು ಶುಕ್ರವಾರ ಆದೇಶ ಹೊರಡಿಸಿದೆ. ಅತ್ಯಂತ ಸೂಕ್ಷ್ಮ ಪ್ರಕರಣವಾಗಿರುವ ಕಾರಣ, ಎಲ್ಲರನ್ನೂ ಅಮಾನತುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

2022ರ ಸೆ.3 ಹಾಗೂ 4ರಂದು ಖಾಸಗಿ ಸುದ್ದಿ ವಾಹಿನಿಯೊಂದು ಬಿಷ್ಣೋಯಿಯನ್ನು ಸಂದರ್ಶನ ನಡೆಸಿತ್ತು. ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಅದು ಪ್ರಸಾರಗೊಂಡಿತ್ತು.

ಮೊಬೈಲ್ ಕದ್ದ ಆರೋಪ: ಥಳಿಸಿ ವ್ಯಕ್ತಿಯ ಕೊಲೆ

ಠಾಣೆ (ಪಿಟಿಐ): ಮೊಬೈಲ್ ಕಳ್ಳತನ ಮಾಡಲಾಗಿದೆ ಎಂದು ಆರೋಪಿಸಿ ಮಹಾರಾಷ್ಟ್ರದ ಠಾಣೆ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬರನ್ನು ಥಳಿಸಿ ಕೊಲೆ ಮಾಡಲಾಗಿದ್ದು, ಘಟನೆ ಸಂಬಂಧ ಏಳು ಆರೋಪಿಗಳನ್ನು ಬಂಧಿಸಲಾಗಿದೆ.

ಪಶ್ಚಿಮ ಬಂಗಾಳ ಮೂಲದ ಮೊಹಮ್ಮದ್ ರಹ್ಮತ್ ಸಹಾ ಆಲಂ ಅವರನ್ನು ಕಳ್ಳ ಎಂದು ಆರೋಪಿಸಿ ಭಿವಂಡಿಯಲ್ಲಿ ಗುಂಪೊಂದು ಥಳಿಸಿ ಹತ್ಯೆ ಮಾಡಿದ ಘಟನೆ ಬುಧವಾರ ನಡೆದಿದೆ. 7 ಆರೋಪಿಗಳನ್ನು ಬಂಧಿಸಲಾಗಿದ್ದು, ಪರಾರಿಯಾಗಿರುವ ಉಳಿದವರಿಗಾಗಿ ಬಿಹಾರ ಹಾಗೂ ಉತ್ತರ ಪ್ರದೇಶದಲ್ಲಿ ಪೊಲೀಸರ ತಂಡಗಳು ಶೋಧ ನಡೆಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊಹಮ್ಮದ್ 6 ತಿಂಗಳ ಹಿಂದೆ ಭಿವಂಡಿಗೆ ಬಂದು ನೆಲೆಸಿದ್ದರು ಎಂದು ಅವರು ಮಾಹಿತಿ ನೀಡಿದರು.

ಅತ್ಯಾಚಾರ: ಎಂಟು ಜನರ ಬಂಧನ

ರೇವಾ (ಪಿಟಿಐ): ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿ ಪತಿ ಜತೆ ವಿಹಾರಕ್ಕೆ ಬಂದಿದ್ದ ಮಹಿಳೆ ಮೇಲೆ ದುಷ್ಕರ್ಮಿಗಳು ಸಾಮೂಹಿಕ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಶನಿವಾರ ಎಂಟು ಜನ ಆರೋಪಿಗಳನ್ನು ಬಂಧಿಸಿದ್ದಾರೆ.



ಗುಢ್ ತಾಲ್ಲೂಕಿನ ಪ್ರವಾಸಿ ತಾಣದಲ್ಲಿ ಅ.21ರಂದು ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಐವರು ದುಷ್ಕರ್ಮಿಗಳು ಹಾಗೂ ಇದನ್ನು ವಿಡಿಯೊ ಚಿತ್ರೀಕರಣ ಮಾಡಿದ ಮೂವರು ಕಿಡಿಗೇಡಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಬಂಧಿತರು 20 ವಯಸ್ಸಿನ ಆಸುಪಾಸಿನವರು. ಐವರು ಅತ್ಯಾಚಾರಿಗಳ ಪೈಕಿ ಒಬ್ಬರನ್ನು ಛತ್ತೀಸಗಢದ ರಾಯಪುರದಲ್ಲಿ ಬಂಧಿಸಲಾಗಿದೆ' ಎಂದು ರೇವಾ ಪೊಲೀಸ್ ವರಿಷ್ಠಾಧಿಕಾರಿ ವಿವೇಕ್ ಸಿಂಗ್ ಸುದ್ದಿಸಂಸ್ಥೆಗೆ ತಿಳಿಸಿದರು.

ಸೇನಾ ವಾಹನದ ಮೇಲಿನ ದಾಳಿ ಪ್ರಕರಣ: 3–4 ಮಂದಿ ಭಾಗಿಯಾದ ಶಂಕೆ

ಉಗ್ರರ ಪತ್ತೆಗೆ ತೀವ್ರ ಶೋಧ

ಪ್ರಜಾವಾಣಿ ವಾರ್ತೆ

ಶ್ರೀನಗರ: ಸೇನಾ ವಾಹನದ ಮೇಲೆ ದಾಳಿ ನಡೆಸಿದ ಉಗ್ರರ ಪತ್ತೆಗಾಗಿ, ಉತ್ತರ ಕಾಶ್ಮೀರದ ಗುಲ್ಮಾರ್ಗ್ ಮತ್ತು ಬೋಟಾ ಪತ್ರಿ ಪ್ರದೇಶಗಳ ಅರಣ್ಯದಲ್ಲಿ ಭದ್ರತಾ ಪಡೆಗಳು ನಿರಂತರ ಶೋಧ ಕಾರ್ಯಾಚರಣೆ ನಡೆಸುತ್ತಿವೆ.

ಸೇನಾ ವಾಹನದ ಮೇಲೆ ಗುರುವಾರ ನಡೆದ ದಾಳಿಯಲ್ಲಿ ಮೂವರು ಸೈನಿಕರು ಸೇರಿ ಐವರು ಮೃತಪಟ್ಟಿದ್ದರು.

ದಟ್ಟ ಅರಣ್ಯಗಳಲ್ಲಿ ಉಗ್ರರು ಮತ್ತು ಶಸ್ತ್ರಾಸ್ತ್ರಗಳ ಪತ್ತೆಗಾಗಿ ಅತ್ಯಾಧುನಿಕ ವೈಮಾನಿಕ ಕಣ್ಗಾವಲು ತಂತ್ರಜ್ಞಾನವನ್ನು ಬಳಸಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ದಾಳಿ ಬಳಿಕ ಭಯೋತ್ಪಾದಕರು ಅರಣ್ಯ ಹೊಕ್ಕಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಶೋಧ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.


'ಲಭ್ಯವಾಗಿರುವ ಸಾಕ್ಷ್ಯಗಳನ್ನು ಗಮನಿಸಿದರೆ 3-4 ಉಗ್ರರು ಕೃತ್ಯದಲ್ಲಿ ಭಾಗಿಯಾಗಿರುವ ಸಾಧ್ಯತೆ ಇದೆ' ಎಂದು ಬಾರಮುಲ್ಲಾದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಜೈದ್ ಮಲಿಕ್ ತಿಳಿಸಿದ್ದಾರೆ.

ಪೀಪಲ್ಸ್ ಆ್ಯಂಟಿ ಫ್ಯಾಸಿಸ್ಟ್ ಫ್ರಂಟ್ (ಪಿಎಎಫ್‌ಎಫ್) ಎಂಬ ಸಂಘಟನೆಯು ದಾಳಿಯ ಹೊಣೆ ಹೊತ್ತುಕೊಂಡಿದೆ. ಈ ಸಂಘಟನೆಯು ಪಾಕಿಸ್ತಾನ ಮೂಲದ ಜೈಶ್–ಇ–ಮೊಹಮ್ಮದ್ ಗುಂಪಿನ ಭಾಗವೆಂದು ಹೇಳಲಾಗಿದೆ.

ಸೇನಾ ವಾಹನ ಪಲ್ಟಿ, ಯೋಧ ಸಾವು: ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಸೇನಾ ವಾಹನ ಪಲ್ಟಿ ಹೊಡೆದ ಪರಿಣಾಮ ಯೋಧರೊಬ್ಬರು ಮೃತಪಟ್ಟಿದ್ದು, 13 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ ಕಾರ್ಯಾಚರಣೆ ನಡೆಸುವ ವೇಳೆ ಅಪಘಾತ ಸಂಭವಿಸಿದ್ದು, ಸೇನೆಯ 9 ಸಿಬ್ಬಂದಿ ಮತ್ತು ನಾಲ್ವರು ನಾಗರಿಕರು ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಆರೋಗ್ಯ ಸ್ಥಿರವಾಗಿದೆ ಎಂದು ಸೇನೆಯ ಮೂಲಗಳು ತಿಳಿಸಿವೆ.

ಪ್ರತಿ ಹನಿ ರಕ್ತಕ್ಕೂ ಪ್ರತ್ಯುತ್ತರ: ಎಲ್.ಜಿ ಮಿಶ್ರಾ



ಶ್ರೀನಗರ: ಕೇಂದ್ರಾಡಳಿತ ಪ್ರದೇಶದ ನೆಲದ ಮೇಲೆ ಬಿದ್ದ ಮುಗ್ಧರ ಪ್ರತಿ ಹನಿ ರಕ್ತಕ್ಕೂ ಪ್ರತ್ಯುತ್ತರ ನೀಡುತ್ತೇವೆ ಎಂದು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಮಿಶ್ರಾ ಆಕ್ರೋಶ ವ್ಯಕ್ತಪಡಿಸಿದರು.

ಶ್ರೀನಗರದ ಹೊರವಲಯದಲ್ಲಿ ನಡೆದ, ಗಡಿ ಭದ್ರತಾ ಪಡೆಗೆ ನೇಮಕವಾದ 629 ಸೈನಿಕರ ನಿರ್ಗಮನ ಪಥಸಂಚಲನ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಭಯೋತ್ಪಾದನೆಯ ಬೆದರಿಕೆಯನ್ನು ಮಟ್ಟಹಾಕಲು ನೂತನ ಕಾರ್ಯತಂತ್ರವನ್ನು ಹೆಣೆಯಲಾಗಿದೆ. ನೆಲದ ಮೇಲೆ ಬಿದ್ದ ಪ್ರತಿ ಹನಿ ರಕ್ತಕ್ಕೂ ಭದ್ರತಾ ಪಡೆಗಳು ತಕ್ಕ ಪ್ರತ್ಯುತ್ತರ ನೀಡಲಿವೆ' ಎಂದು ಎಚ್ಚರಿಕೆ ನೀಡಿದರು.

ಪಾಕಿಸ್ತಾನವನ್ನು ಪರೋಕ್ಷವಾಗಿ ಉಲ್ಲೇಖಿಸಿ, 'ಭಾರತವು ನೆರೆಯ ರಾಷ್ಟ್ರಗಳಿಂದ ಶಾಂತಿ ಬಯಸುತ್ತದೆ. ಆದರೆ, ದುರದೃಷ್ಟವಶಾತ್ ಬಡತನ ತಾಂಡವವಾಡುತ್ತಿದ್ದರೂ ಯಾವಾಗಲೂ ಶಾಂತಿ ಕದಡಲು ಯತ್ನಿಸುವ ದೇಶವನ್ನು ಪಕ್ಕದಲ್ಲಿ ಹೊಂದಿದ್ದೇವೆ' ಎಂದು ಹೇಳಿದರು.

ಡ್ರೋನ್‌ಗಳ ಮೂಲಕ ಮಾದಕ ವಸ್ತುಗಳು ಮತ್ತು ಶಸ್ತ್ರಾಸ್ತ್ರ ಕಳ್ಳಸಾಗಣೆಯಂತಹ ಪ್ರಮುಖ ಸವಾಲುಗಳ ವಿರುದ್ಧ ಹೋರಾಡಲು ಸೇನೆಯು ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕಿದೆ. ನಮ್ಮ ಯುವ ಜನರನ್ನು ಡ್ರಗ್ಸ್ ವ್ಯಸನಿಗಳನ್ನಾಗಿ ಮಾಡಲಾಗುತ್ತಿದೆ. ಅದರಲ್ಲಿ ಸಂಗ್ರಹವಾದ ಹಣವನ್ನು ಭಯೋತ್ಪಾದನೆಗೆ ಮೀಸಲಿಡಲಾಗುತ್ತಿದೆ ಎಂದು ಹೇಳಿದರು.

ಪೂಂಛ್: ಉಗ್ರರ ಅಡಗುದಾಣ ಧ್ವಂಸ

ಮೇಂಧರ್/ ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಪತ್ತೆಯಾದ ಉಗ್ರರ ಶಂಕಿತ ಅಡಗುದಾಣವನ್ನು ಭದ್ರತಾ ಪಡೆ ಶನಿವಾರ ಧ್ವಂಸ ಮಾಡಿದವು. ಸ್ಥಳದಿಂದ ಗ್ರೆನೇಡ್ ಮತ್ತು ಸ್ಫೋಟಕಗಳನ್ನು ವಶಕ್ಕೆ ಪಡೆಯಲಾಗಿದೆ. ಮೇಂಧರ್ ಉಪ ವಿಭಾಗದ ಬಲನೋಯ್ ಸೆಕ್ಟರ್‌ನಲ್ಲಿ ಶೋಧ ನಡೆಸುತ್ತಿದ್ದ ಸಂದರ್ಭದಲ್ಲಿ ಅಡಗುದಾಣ ಪತ್ತೆಯಾಗಿತ್ತು ಎಂದು ಅಧಿಕಾರಿಗಳು ತಿಳಿಸಿದರು.

ಈ ಮಧ್ಯೆ, ಭದ್ರತಾ ಸಿಬ್ಬಂದಿ ಮನ್‌ಕೋಟೆ ಸೆಕ್ಟರ್ ಸಮೀಪ ಗಸ್ತು ತಿರುಗುವ ವೇಳೆ ತುಕ್ಕು ಹಿಡಿದ ಮೋರ್ಟರ್ ಶೆಲ್ ಪತ್ತೆಯಾಗಿದೆ. ನಂತರ ಅದನ್ನು ಸುರಕ್ಷಿತ ಸ್ಥಳದಲ್ಲಿ ಸ್ಫೋಟಗೊಳಿಸಲಾಗಿದೆ ಎಂದು ಹೇಳಿದರು.

ಹುಸಿ ಬಾಂಬ್ ಬೆದರಿಕೆ: ಸಾಮಾಜಿಕ ಮಾಧ್ಯಮ ವೇದಿಕೆಗಳಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಾಂಬ್ ಬೆದರಿಕೆಯಂತಹ ಸಂದೇಶಗಳ ಪ್ರವೇಶವನ್ನು ನಿರ್ಬಂಧಿಸುವಂತೆ ಸಾಮಾಜಿಕ ಮಾಧ್ಯಮ ವೇದಿಕೆಗಳಿಗೆ ಶನಿವಾರ ಸೂಚಿಸಿರುವ ಕೇಂದ್ರ ಸರ್ಕಾರ, ತಪ್ಪಿದಲ್ಲಿ ಅನ್ಯವ್ಯಕ್ತಿಗಳು ಕಳುಹಿಸುವ ಸಂದೇಶಗಳಿಗೆ ಇದ್ದ ಕಾನೂನು ರಕ್ಷಣೆಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದೆ.

ಕೆಲ ದಿನಗಳಿಂದ ಭಾರತೀಯ ವಿಮಾನಯಾನ ಸಂಸ್ಥೆಗಳ ಹಲವು ವಿಮಾನಗಳಿಗೆ ಬಾಂಬ್ ಬೆದರಿಕೆ ಸಂದೇಶಗಳು ಬಂದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಕುರಿತು ಎಚ್ಚರಿಕೆ ರವಾನಿಸಿದೆ.

'ಫೇಸ್‌ಬುಕ್' ಮತ್ತು 'ಎಕ್ಸ್'ನಂತಹ ಸಾಮಾಜಿಕ ಮಾಧ್ಯಮ ವೇದಿಕೆಗಳಿಗೆ ಸಲಹೆ ನೀಡಿರುವ ಮಾಹಿತಿ ತಂತ್ರಜ್ಞಾನ ಮತ್ತು ಎಲೆಕ್ಟ್ರಾನಿಕ್ಸ್ ಸಚಿವಾಲಯವು, 'ಸಾಮಾಜಿಕ ಮಾಧ್ಯಮಗಳು ತಮ್ಮ ವೇದಿಕೆಗಳಲ್ಲಿ, ಹುಸಿ ಬಾಂಬ್ ಬೆದರಿಕೆ ಸೇರಿದಂತೆ ದುರುದ್ದೇಶಪೂರಿತ ಕೃತ್ಯಗಳ ಸಂದೇಶಗಳ ತಡೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಹೇಳಿದೆ.

ಬಾಂಬ್ ಬೆದರಿಕೆ ಸೇರಿದಂತೆ ಕಾನೂನುಬಾಹಿರ ಕೃತ್ಯಗಳ ಕುರಿತ ಸಂದೇಶಗಳನ್ನು ಈ ವೇದಿಕೆಗಳು 2021ರ ಐಟಿ ನಿಯಮಗಳ ಅನ್ವಯ ತ್ವರಿತವಾಗಿ ತೆಗೆದುಹಾಕಬೇಕು ಮತ್ತು ಅವುಗಳ ಪ್ರವೇಶವನ್ನು ನಿಷ್ಕ್ರಿಯಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರ ತಿಳಿಸಿದೆ.

72 ಗಂಟೆಗಳಲ್ಲಿ ಮಾಹಿತಿ ನೀಡಿ: ತನಿಖಾ ಉದ್ದೇಶಗಳಿಗಾಗಿ, ಈ ರೀತಿಯ ಪೋಸ್ಟ್‌ಗಳು ಮತ್ತು ಅದರ ಬಳಕೆದಾರರ ಬಗ್ಗೆ 72 ಗಂಟೆಗಳೊಳಗೆ ಸಾಮಾಜಿಕ ಮಾಧ್ಯಮ ವೇದಿಕೆಗಳು ಸರ್ಕಾರದ ಜತೆ ಮಾಹಿತಿ ಹಂಚಿಕೊಳ್ಳಬೇಕು ಎಂದೂ ಸೂಚಿಸಿದೆ.

ಇವುಗಳ ಜತೆಗೆ, ಭಾರತದ ಏಕತೆ, ಸಮಗ್ರತೆ, ಸಾರ್ವಭೌಮತ್ವ, ಭದ್ರತೆ ಅಥವಾ ಆರ್ಥಿಕ ಭದ್ರತೆಗೆ ಬೆದರಿಕೆ ಉಂಟುಮಾಡುವ ಉದ್ದೇಶದ ಸಂದೇಶಗಳ ಕುರಿತು ಕಡ್ಡಾಯವಾಗಿ ಸರ್ಕಾರಕ್ಕೆ ವರದಿ ಮಾಡಬೇಕು ಎಂದೂ ಸರ್ಕಾರ ತಿಳಿಸಿದೆ.

ಯಾವುದೇ ಕಾನೂನುಬಾಹಿರ ಅಥವಾ ಸುಳ್ಳು ಮಾಹಿತಿಯನ್ನು ಬಳಕೆದಾರರು ಪೋಸ್ಟ್ ಮಾಡದಂತೆ, ಅದನ್ನು ಹಂಚಿಕೊಳ್ಳದಂತೆ ಮತ್ತು ಮಾರ್ಪಡಿಸದಂತೆ ಎಚ್ಚರವಹಿಸಬೇಕು. ಅಲ್ಲದೆ ಅವುಗಳನ್ನು ಸಂಗ್ರಹಿಸುವ, ಅಪ್‌ಡೇಟ್ ಮಾಡುವ ಬಳಕೆದಾರರ ವಿರುದ್ಧವೂ 2021ರ ಐಟಿ ನಿಯಮಗಳ ಅನ್ವಯ ಸಾಮಾಜಿಕ ಮಾಧ್ಯಮ ವೇದಿಕೆಗಳು ಅಗತ್ಯ ಕ್ರಮಗಳನ್ನು ತ್ವರಿತವಾಗಿ ತೆಗೆದುಕೊಳ್ಳಬೇಕು ಎಂದು ಸರ್ಕಾರ ಹೇಳಿದೆ.

ಬೆದರಿಕೆ ಸಂದೇಶ: ಯುವಕನ ಬಂಧನ

ನವದೆಹಲಿ (ಪಿಟಿಐ): ಬಾಂಬ್ ಬೆದರಿಕೆಯ ಇ-ಮೇಲ್ ಸಂದೇಶ ಕಳಿಸಿದ ಆರೋಪದಡಿ ಯುವಕನೊಬ್ಬನನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ರಾಷ್ಟ್ರ ರಾಜಧಾನಿಯ ಉತ್ತಮ್ ನಗರದ ನಿವಾಸಿ ಶುಭಂ ಉಪಾಧ್ಯಾಯ (25) ಬಂಧಿತ.

ವಿಮಾನಗಳಿಗೆ ಬಾಂಬ್ ಬೆದರಿಕೆಯ ಸುದ್ದಿಗಳನ್ನು ಟಿ.ವಿ.ಯಲ್ಲಿ ನೋಡಿದ್ದ ಈತ, ಗಮನ ಸೆಳೆಯಲಿಕ್ಕಾಗಿಯೇ ಇಂತಹ ಎರಡು ಸಂದೇಶಗಳನ್ನು ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ವಿಮಾನವೊಂದಕ್ಕೆ ಕಳಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.



ತಗ್ಗಿದ 'ಡಾನಾ' ಚಂಡಮಾರುತ ತೀವ್ರತೆ

'ಡಾನಾ' ಚಂಡಮಾರುತದಿಂದಾಗಿ ಪಶ್ಚಿಮ ಬಂಗಾಳದಲ್ಲಿ ಶನಿವಾರ ಇನ್ನೂ ಇಬ್ಬರು ಮೃತಪಟ್ಟಿದ್ದಾರೆ. ಒಡಿಶಾ ಹಾಗೂ ಪಶ್ಚಿಮ ಬಂಗಾಳದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಗಳು ನಾಶವಾಗಿವೆ. ಒಡಿಶಾದ ಬಾಲೇಶ್ವರ ಜಿಲ್ಲೆಯಲ್ಲಿ ಅತಿ ಹೆಚ್ಚು ಹಾನಿಯಾಗಿದೆ. ಇಲ್ಲಿನ ಕೆಲವು ನದಿಗಳು ಅಪಾಯಮಟ್ಟ ಮೀರಿ ಹರಿಯುತ್ತಿವೆ. ನೂರಾರು ಮನೆಗಳ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಎರಡು ರಾಜ್ಯಗಳಲ್ಲಿ ಮಳೆ ಸುರಿಯುತ್ತಿದ್ದರೂ 'ಡಾನಾ'ದ ಪ್ರಭಾವ ತಗ್ಗಿದೆ. ಪರಿಹಾರ ಕಾರ್ಯಗಳು ಚುರುಕು ಪಡೆದಿವೆ.

ಬೆಳೆ ನಷ್ಟ

1.75 ಲಕ್ಷ ಎಕರೆ ಬೆಳೆಗಳು ನಷ್ಟವಾಗಿರುವ ಕೃಷಿ ಭೂಮಿಯ ವಿಸ್ತೀರ್ಣ

2.80 ಲಕ್ಷ ಎಕರೆ ಮಳೆ ನೀರಿನಲ್ಲಿ ಮುಳುಗಿದ ಕೃಷಿ ಭೂಮಿಯ ವಿಸ್ತೀಣ

ವಿದ್ಯುತ್ ಸಂಪರ್ಕ ಕಡಿತ

22.42 ಲಕ್ಷ ವಿದ್ಯುತ್ ಸಂಪರ್ಕ ಕಳೆದುಕೊಂಡ ಮನೆಗಳ ಸಂಖ್ಯೆ

14.8 ಲಕ್ಷ ವಿದ್ಯುತ್ ಸಂಪರ್ಕ ಮರುಸ್ಥಾಪಿಸಿದ ಮನೆಗಳ ಸಂಖ್ಯೆ

ಒಡಿಶಾ: 4 ಪ್ರದೇಶಗಳಲ್ಲಿ 20 ಸೆಂ.ಮೀಗೂ ಅಧಿಕ ಮಳೆ

'ಡಾನಾ'ದ ತೀವ್ರತೆಯು ಕಡಿಮೆಯಾಗಿದ್ದು, ಒಡಿಶಾದ ಉತ್ತರ ಭಾಗದಿಂದ ಪಶ್ಚಿಮ ದಿಕ್ಕಿಗೆ ಚಂಡಮಾರುತ ಸಾಗುತ್ತಿದೆ. ಹೀಗೆ ಸಾಗುತ್ತ ಮುಂದಿನ 12 ಗಂಟೆಗಳಲ್ಲಿ ಚಂಡಮಾರುತದ ತೀವ್ರತೆಯು ಇನ್ನಷ್ಟು ತಗ್ಗಲಿದೆ' ಎಂದು ಭಾರತೀಯ ಹವಾಮಾನ ಇಲಾಖೆ ಶನಿವಾರ ಮಾಹಿತಿ ನೀಡಿದೆ. ಚಂಡಮಾರುತದ ಕಾರಣದಿಂದ ಶುಕ್ರವಾರ ಒಡಿಶಾದ ಬಾಲೇಶ್ವರ ಜಿಲ್ಲೆಯ ಔಪದಾ ಪ್ರದೇಶದಲ್ಲಿ 24 ಸೆಂ.ಮೀನಷ್ಟು ಮಳೆ ಸುರಿದಿದೆ. ಭದ್ರಕ್ ಜಿಲ್ಲೆ ಧಮ್‌ನಗರದಲ್ಲಿ 21.5 ಸೆಂ.ಮೀ, ಬಾಲೇಶ್ವರದ ಖೈರಾದಲ್ಲಿ 20.9 ಸೆಂ.ಮೀ, ಭದ್ರಕ್‌ನ ಬೋಂಟ್‌ನಲ್ಲಿ 18.7 ಸೆಂ.ಮೀನಷ್ಟು ಮಳೆಯಾಗಿದೆ. ಹವಾಮಾನ ಇಲಾಖೆಯ ಪ್ರಕಾರ, ರಾಜ್ಯದ ಸುಮಾರು 16 ಸ್ಥಳಗಳಲ್ಲಿ 10 ಸೆಂ.ಮೀಗಿಂತ ಅಧಿಕ ಮಳೆಯಾಗಿದ್ದರೆ, ನಾಲ್ಕು ಪ್ರದೇಶಗಳಲ್ಲಿ 20 ಸೆಂ.ಮೀಗಿಂತ ಅಧಿಕ ಮಳೆ ಸುರಿದಿದೆ.

- ಪಾರ್ಶ್ವವಾಯು ಬಾಧಿತ ಮಹಿಳೆಯೊಬ್ಬರನ್ನು ಒಂದೂವರೆ ಕೀ.ಮೀ ದೂರದ ನಿರಾಶ್ರಿತ ಶಿಬಿರಕ್ಕೆ ತನ್ನ ಬೆನ್ನ ಮೇಲೆ ಹೊತ್ತೊಯ್ದ ಆರೋಗ್ಯ ಕಾರ್ಯಕರ್ತೆ ಸಿಬಾನಿ ಮಂಡಲ್ ಅವರ ಕಾರ್ಯಕ್ಕೆ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಮೆಚ್ಚುಗೆ ಸೂಚಿಸಿದ್ದಾರೆ. ಸಿಬಾನಿ ಅವರಿಗೆ ಮನೆಯೊಂದನ್ನು ಕಟ್ಟಿಸಿಕೊಡುವ ಬಗ್ಗೆ ಸ್ಥಳೀಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ

ಆಧಾರ: ಪಿಟಿಐ



'ಡಾನಾ' ಆರ್ಭಟಕ್ಕೆ ಪಶ್ಚಿಮ ಬಂಗಾಳದ ಬೀರ್‌ಭೂಮ್ ಜಿಲ್ಲೆಯಲ್ಲಿ ಭತ್ತದ ಗದ್ದೆಯು ಜಲಾವೃತವಾಗಿದೆ —ಪಿಟಿಐ ಚಿತ್ರ

2,201 ಗರ್ಭಿಣಿಯರಿಗೆ ಹೆರಿಗೆ

'ಡಾನಾ' ಚಂಡಮಾರುತ ಅಪ್ಪಳಿಸುವ ಮುನ್ಸೂಚನೆ ಸಿಕ್ಕ ಬಳಿಕ ಒಡಿಶಾ ಸರ್ಕಾರವು 4,859 ತುಂಬು ಗರ್ಭಿಣಿಯರನ್ನು ಸುರಕ್ಷಿತ ಸ್ಥಳಗಳಲ್ಲಿನ ಆಸ್ಪತ್ರೆಗೆ ದಾಖಲು ಮಾಡಿತ್ತು. ಈ ವಿಪತ್ತಿನ ಅವಧಿಯಲ್ಲಿ 4,859 ಮಂದಿಯ ಪೈಕಿ 2,201 ಗರ್ಭಿಣಿಯರಿಗೆ ಹೆರಿಗೆಯಾಗಿದೆ. ಒಟ್ಟು 18 ಅವಳಿ ಮಕ್ಕಳು ಜನಿಸಿವೆ. ಚಂಡಮಾರುತ ಅಪ್ಪಳಿಸಿದ ದಿನ ಊರ್ವಶಿ ಎಂಬುವವರು ಅವಳಿ ಮಕ್ಕಳಿಗೆ ಜನ್ಮ ನೀಡಿದ್ದಾರೆ. ಅವರು ತಮ್ಮ ಮಕ್ಕಳಿಗೆ 'ಡಾನಾ', 'ಡಾನಾಬತಿ' ಎಂದು ನಾಮಕರಣ ಮಾಡಿದ್ದಾರೆ.

ಬಂಗಾಳ: ಸಾವಿನ ಸಂಖ್ಯೆ ನಾಲ್ಕಕ್ಕೆ ಏರಿಕೆ

ಪಶ್ಚಿಮ ಬಂಗಾಳದಲ್ಲಿ ಚಂಡಮಾರುತದಿಂದಾಗಿ ಮೃತಪಟ್ಟವರ ಒಟ್ಟು ಸಂಖ್ಯೆ ನಾಲ್ಕಕ್ಕೆ ಏರಿದೆ. ರಾಜ್ಯದಲ್ಲಿ 'ಡಾನಾ' ಪ್ರಭಾವ ತಗ್ಗಿದೆ. ಶುಕ್ರವಾರದಿಂದ ಶನಿವಾರ ಬೆಳಿಗ್ಗೆವರೆಗಿನ ಅವಧಿಯಲ್ಲಿ ಕೋಲ್ಕತ್ತದಲ್ಲಿ 15.28 ಸೆಂ.ಮೀನಷ್ಟು ಮಳೆಯಾಗಿದೆ. ಆದರೆ ಹೂಗ್ಲಿ, ಪೂರ್ಬಾ ಹಾಗೂ ಮೇಧಿನಿಪುರ, ಝರ್‌ಗ್ರಾಮ್ ಜಿಲ್ಲೆಗಳಲ್ಲಿ ಪ್ರವಾಹ ಸ್ಥಿತಿ ಮುಂದುವರಿದಿದೆ. ಈ ಜಿಲ್ಲೆಗಳಲ್ಲಿ ಮಳೆ ಮುಂದುವರಿಯಲಿದ್ದು, ಭಾನುವಾರದ ಹೊತ್ತಿಗೆ ಪರಿಸ್ಥಿತಿ ಸುಧಾರಿಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಾಳಸಂತೆಯಲ್ಲಿ ಟಿಕೆಟ್ ಮಾರಾಟ: ಇ.ಡಿ ದಾಳಿ

ನವದೆಹಲಿ (ಪಿಟಿಐ): ಬ್ರಿಟಿಷ್ ರಾಕ್‌ಬ್ಯಾಂಡ್ 'ಕೋಲ್ಡ್‌ಪ್ಲೇ' ಮತ್ತು ನಟ–ಗಾಯಕ ದಿಲ್ಜಿತ್ ದೊಸಾಂಝ್ ಅವರ ಸಂಗೀತ ಕಾರ್ಯಕ್ರಮಗಳ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿದ್ದಕ್ಕೆ ಸಂಬಂಧಿಸಿದ ಹಣದ ಅಕ್ರಮ ವಹಿವಾಟು ಪ್ರಕರಣದ ಕುರಿತಾಗಿ ನಡೆದ ದಾಳಿ ಸಂದರ್ಭದಲ್ಲಿ ಶಂಕಿತ ಅಕ್ರಮಗಳು ಪತ್ತೆಯಾಗಿವೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ಹೇಳಿದೆ.

ಹಣದ ಅಕ್ರಮ ವಹಿವಾಟು ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ ಇ.ಡಿ. ಐದು ರಾಜ್ಯಗಳ 13 ಸ್ಥಳಗಳಲ್ಲಿ ಶುಕ್ರವಾರ ದಾಳಿ ನಡೆಸಿದೆ. ದೆಹಲಿ, ಮುಂಬೈ, ಜೈಪುರ, ಬೆಂಗಳೂರು, ಚಂಡೀಗಢದಲ್ಲಿ ದಾಳಿ ನಡೆದಿದೆ.

ದೊಸಾಂಝ್ ಅವರ 'ದಿಲ್–ಲುಮಿನಾತಿ' ಸಂಗೀತ ಕಾರ್ಯಕ್ರಮವು ದೆಹಲಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಶನಿವಾರ ಮತ್ತು ಭಾನುವಾರ ನಡೆಯಲಿದೆ. ಕೋಲ್ಡ್‌ಪ್ಲೇ ಕಾರ್ಯಕ್ರಮವು ನವಿ ಮುಂಬೈನಲ್ಲಿ ಜನವರಿಯಲ್ಲಿ ನಡೆಯಲಿದೆ.

ಕಾರ್ಯಕ್ರಮಗಳ ಪ್ರವೇಶ ಟಿಕೆಟ್ ಬಹಳ ಬೇಗ ಮಾರಾಟವಾದ ನಂತರ, ಈ ಕಾರ್ಯಕ್ರಮಗಳ ಟಿಕೆಟ್‌ಗಳನ್ನು ತಾವು ಮಾರಾಟ ಮಾಡುತ್ತಿರುವುದಾಗಿ ಹೇಳಿ ವಂಚಕರು ಜನರಿಗೆ ಮೋಸ ಎಸಗಿದ್ದಾರೆ ಎಂಬ ವರದಿಗಳನ್ನು ಗಮನಿಸಿ ತನಿಖೆ ಆರಂಭಿಸಲಾಯಿತು ಎಂದು ಇ.ಡಿ. ಹೇಳಿದೆ. ಈ ಕಾರ್ಯಕ್ರಮಗಳಿಗೆ ಹೋಗಲು ಬಯಸಿರುವವರನ್ನು ಕೆಲವರು ವಂಚಿಸುತ್ತಿದ್ದಾರೆ ಎಂಬ ಹಲವಾರು ದೂರುಗಳು ಪೊಲೀಸರಿಗೆ ಬಂದಿವೆ. ಟಿಕೆಟ್ ಕಾಯ್ದಿರಿಸುವ ಸೇವೆ ಒದಗಿಸುವ ಬುಕ್‌ಮೈಶೋ ಕೂಡ ದೂರು ನೀಡಿದೆ. ಈ ದೂರುಗಳನ್ನು ಇ.ಡಿ. ಪರಿಗಣನೆಗೆ ತೆಗೆದುಕೊಂಡಿದೆ.

ವಂಚಕರು ನಕಲಿ ಟಿಕೆಟ್‌ಗಳನ್ನು ಭಾರಿ ಬೆಲೆಗೆ ಮಾರಾಟ ಮಾಡುವ ಕೆಲಸದಲ್ಲಿ ತೊಡಗಿದ್ದಾರೆ ಎಂದು ಇ.ಡಿ ಆರೋಪಿಸಿದೆ. ಬಹುನಿರೀಕ್ಷಿತವಾದ ಈ ಕಾರ್ಯಕ್ರಮಗಳ ಟಿಕೆಟ್‌ಗಳು ಕೆಲವೇ ನಿಮಿಷಗಳಲ್ಲಿ ಮಾರಾಟವಾಗಿವೆ ಎಂದು ಬುಕ್‌ಮೈಶೋ ಮತ್ತು ಜೊಮಾಟೊ ಲೈವ್ ಹೇಳಿವೆ.

ಕಿರುಕುಳ: ಮಹಿಳೆಯ ನೆರವಿಗೆ 'ಶಿ-ಬಾಕ್ಸ್'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಲಸ ಮಾಡುವ ಸ್ಥಳದಲ್ಲಿ ಲೈಂಗಿಕ ಕಿರುಕುಳ ಎದುರಿಸಿರುವ ಮಹಿಳೆಯರಿಗೆ ನೆರವು ಒದಗಿಸಬೇಕು ಎಂದು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಮತ್ತು ಇತರರಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ನ್ಯಾಯ ಪಡೆಯಲು ಅವಕಾಶ ಕಲ್ಪಿಸುವುದು ನ್ಯಾಯದಾನದಷ್ಟೇ ಮುಖ್ಯ ಎಂದು ಕೋರ್ಟ್ ಹೇಳಿದೆ.

ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಎದುರಾದಲ್ಲಿ ಅದರ ಬಗ್ಗೆ ಆನ್‌ಲೈನ್ ಮೂಲಕ ದೂರು ನೀಡಲು ಸೌಲಭ್ಯ ಕಲ್ಪಿಸುವ 'ಶಿ–ಬಾಕ್ಸ್'ಅನ್ನು ಆಗಸ್ಟ್‌ನಲ್ಲಿ ಪರಿಷ್ಕೃತ ರೂಪದಲ್ಲಿ ಆರಂಭಿಸಲಾಗಿದೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಹೇಳಿದೆಯಾದರೂ, ಕೆಲವು ನಿರ್ದೇಶನಗಳನ್ನು ನೀಡಬೇಕಾಗಿದೆ ಎಂದು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಎನ್.ಕೋಟೀಶ್ವರ ಸಿಂಗ್ ಅವರು ಇರುವ ಪೀಠವು ಹೇಳಿತು.

ಮಹಿಳೆಯರಿಗೆ ಕೆಲಸದ ಸ್ಥಳಗಳು ಸುರಕ್ಷಿತವಾಗುವಂತೆ ಮಾಡಲು ಹಾಗೂ ದೂರು ನೀಡುವ ವ್ಯವಸ್ಥೆ ಲಭ್ಯವಾಗುವಂತೆ ಮಾಡಲು 'ಶಿ–ಬಾಕ್ಸ್' ಪ್ರಮುಖ ಹೆಜ್ಜೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ವಿವರಿಸಿದರು.









ಆಧುನಿಕ ಸ್ಪರ್ಶದ ರಕ್ತರಾತ್ರಿ
11



ವೈವಿಧ್ಯಮಯ ದೀಪಾವಳಿ



ಗ್ರಾಮಸ್ಥರಿಂದ ಹುಲಿದೇವರಿಗೆ ಪೂಜೆ ಸಲ್ಲಿಕೆ

ಮಾಲತಿ ಹೆಗಡೆ

ಕಾಲಚಕ್ರದಲ್ಲಿ ಮಳೆ ಅಬ್ಬರವಿಳಿದು ಹಗಲು ಕಿರಿದಾಗಿ ರಾತ್ರಿ ಹಿರಿದಾಗುವ ಚಳಿಗಾಲದ ಆರಂಭದಲ್ಲಿ ಬರುವ ಹಬ್ಬ ದೀಪಾವಳಿ. ಗೋಪೂಜೆ, ಹುಲಿದೇವರ ಪೂಜೆ ಮಾಡುವ ಪರಿಸರಸ್ನೇಹಿಯಾದ ಹಬ್ಬ. ಇದನ್ನು ಮಲೆನಾಡಿನ ಕೆಲ ಭಾಗಗಳಲ್ಲಿ ದೊಡ್ಡ ಹಬ್ಬ ಎಂದೇ ಕರೆಯುತ್ತಾರೆ.

ಈಗ ವಾಸಿಸುತ್ತಿರುವ ನಗರದಲ್ಲಿನ ಹಬ್ಬವೆಂದರೆ ಬಂಗಾರ, ಬಟ್ಟೆ, ಸಿಹಿ ತಿನಿಸು, ಪಟಾಕಿ...ಹೀಗೆ ಖರೀದಿ ಆಧಾರಿತವಾದ ಸಂತೋಷದ್ದು. ಹಬ್ಬ ಮುಗಿದಾಗ ಹಾದಿ ಬೀದಿಯಲ್ಲೆಲ್ಲ ಕಸದ ರಾಶಿ ಎನ್ನುವ ಬೇಸರ ಬೇರೆ. ಕಣ್ಣಿಗೆ ಕಾಣದ ದೇವರನ್ನು ಮಾತ್ರವಲ್ಲ, ನಮ್ಮ ಜೊತೆಗಿರುವ ಸಹಜೀವಿಗಳನ್ನೂ ಪೂಜಿಸುವ ಮಲೆನಾಡಿನ ಸರಳ ಸುಂದರ ದೊಡ್ಡ ಹಬ್ಬ.

ಮಳೆಗಾಲದ ಆರಂಭದಲ್ಲಿ ಅಂಗಳದಲ್ಲಿ ಓಳಿ ಹೊಯ್ದ ಮಣ್ಣಿನಲ್ಲಿ ಗೊಂಡೆರು ಹೂವಿನ (ಚೆಂಡು ಹೂವಿನ) ಬೀಜ ಹಾಕಿದರೆ ದೀಪಾವಳಿಯಲ್ಲಿ ಹೂವು ಸಿಗುತ್ತದೆ ಎಂಬ ಕರಾರುವಾಕ್ಕಾದ ಲೆಕ್ಕಾಚಾರದಲ್ಲಿ ದೊಡ್ಡ ಹಬ್ಬದ ತಯಾರಿ ಶುರುವಾಗುತ್ತಿತ್ತು. ಬೀಜ ಮೊಳೆತು ಹಸಿರು ಚಿತ್ತಾರದೆಲೆಯ ಗಿಡದಲ್ಲಿ ದೀಪ ಬೆಳಗಿದಂತೆ ಹೂವರಳುತ್ತಿತ್ತು. ನವರಾತ್ರಿ ಮುಗಿದು ವಾರ ಕಳೆದರೆ ಸಾಕು ದೀಪಾವಳಿ ಸ್ವಚ್ಛತಾ ಸಂಭ್ರಮ. ಮನೆಯ ಹೊರ ಗೋಡೆಗೆ ಹಳದಿ ಮಣ್ಣು, ಅಡುಗೆ ಮನೆಗೆ ಕೆಮ್ಮಣ್ಣು, ಕಟ್ಟಿಗೆ ಒಲೆ ಇರುವೆಡೆಗೆ ಕಪ್ಪು ಮಸಿಯನ್ನೆ ಸಾರಣೆ ಮಾಡುತ್ತಿದ್ದರು. ಅಣಲೆಕಾಯಿ ಮಸಿ, ಕೆಮ್ಮಣ್ಣು, ಹಳದಿ ಮಣ್ಣು ಎಲ್ಲಾ ನೀರಿನಲ್ಲಿ ಕದಡಿ ಹತ್ತಿಯ ಬಟ್ಟೆ ಮುಳುಗಿಸಿ ಮಣ್ಣಿನ ಗೋಡೆಗೆ ಬರೆಸುತ್ತಾ ಹೋಗುವ ಕೆಲಸದಲ್ಲಿ ಹಿರಿಯರೊಂದಿಗೆ ಕಿರಿಯರೂ ಭಾಗಿ. ಕೊಟ್ಟಿಗೆ ಎದುರಿನ ಗೋಡೆಗೆ, ಬಾವಿಕಟ್ಟೆಗೆ, ತುಳಸಿಕಟ್ಟೆಗೆ ಕೆಮ್ಮಣ್ಣು ಬಳಿದು ಶೇಡಿಯಲ್ಲಿ (ಬಿಳಿಯ ಮಣ್ಣು) ಹಸೆಚಿತ್ರವನ್ನೋ, ರಂಗೋಲಿಯನ್ನೋ ಬಿಡಿಸುವ ಅಮ್ಮಂದಿರು ಹೆಣ್ಣುಮಕ್ಕಳಿಗೂ ಇದನ್ನು ಕಲಿಸುತ್ತಿದ್ದರು.

ಬೂರ್ಗಳವೆಂಬ ಮೋಜು

'ಬಲಿವೇಂದ್ರನ ರಾಜ್ಯದಲಿ ಮಗೆಯ ಹಣ್ಣಿನ ತ್ವಾರಣವೇ ಮಗೆಯ ಹಣ್ಣನು ಮೆಟ್ಟಿ ಇಳಿದು ಬಂದನೆ ಬಲಿವೇಂದ್ರ' ಎನ್ನುತ್ತಾ ಹಾಡು ಹೇಳಿ ಬಾವಿಯ ನೀರು ಸೇದಿ ಕಲಶ ತುಂಬಿ ದೇವರ ಮನೆಯಲ್ಲಿ ಮಣೆಯ ಮೇಲೆ ತಂದಿಟ್ಟಾಗ ಭೂರೆ ಹಬ್ಬ ಶುರುವಾಗುತ್ತಿತ್ತು. ಉದ್ದದ ಮುಳ್ಳು ಸೌತೆಕಾಯಿಗೂ ಚಿತ್ತಾರ ಬರೆದು ಪೂಜೆಗಿಟ್ಟು ಮೇಲೊಂದು ಅಡಿಕೆ ಸಿಂಗಾರ ಮುಡಿಸುತ್ತಿದ್ದರು. ಮಕ್ಕಳಿಗೆ ತಲೆಗೆ ಎಣ್ಣೆ ಹಾಕಿ ಆರತಿ ಎತ್ತುತ್ತಿದ್ದರು. ಎಣ್ಣೆ ಹಚ್ಚಿದ ಮೈಗೆ ಹಂಡೆಯಲ್ಲಿ ಕಾಸಿದ ಬಿಸಿನೀರಿನ ಸ್ನಾನ. ಅಂದು ಗೋವೆಕಾಯಿ ಕಡುಬಿನೂಟ. ಹಿರಿಯರೆಲ್ಲ 'ಒಂದ್ಗಳಿಗೆ ಆರಾಮ್ ಮಾಡನ' ಎಂದು ಹಾಸಿಗೆಗೆ ತಲೆ ಕೊಟ್ಟರೆ 'ಈ ಸಮಯಾ ಆನಂದಮಯಾ' ಎನ್ನುತ್ತ ನಾವು ಎಲ್ಲರ ಮನೆಯ ಹಿತ್ತಿಲು, ತೋಟದಲ್ಲಿ ಕಳ್ಳ ಹೆಜ್ಜೆಯನ್ನಿಟ್ಟು ಸರ್ಕೀಟು ಹೊಡೆದು, ಕಣ್ಣಿನ ಕ್ಯಾಮೆರಾದಲ್ಲಿ ಎಳೆ ಸೌತೆಕಾಯಿ, ಸೇವಂತಿಗೆ ಹೂವು, ಡೇರೆ ಹೂವು, ಪೇರಲೆ ಹಣ್ಣಿನ ಫೋಟೊ ಹೊಡೆದುಕೊಂಡು ರಾತ್ರಿಯ ಬೂರ್ಗಳವಿಗೆ ಸ್ಕೆಚ್ ಹಾಕುತ್ತಿದ್ದೆವು.

ಸಂಜೆಯೊಳಗೆ ಚೆಂಡು ಹೂವು, ಪಚ್ಚೆತೆನೆ, ಹಣ್ಣಡಿಕೆ, ವೀಳ್ಯದೆಲೆಗಳನ್ನು ಬುಟ್ಟಿಯಲ್ಲಿ ತಂದಿಡುತ್ತಿದ್ದರು. ರಾತ್ರಿ ಬಚ್ಚಲು ಬಳ್ಳಿಗೆ ದಬ್ಬಣ ಸುರಿದು ಹೂವಿನ ಮಾಲೆಯನ್ನು, ಅಡಿಕೆ ಮಾಲೆಯನ್ನೂ ಬೇರೆಬೇರೆಯಾಗಿ ಕಟ್ಟುವ ಕೆಲಸ, ಹಿರಿಯರು ಕಲಿಸಲೆತ್ನಿಸಿದರೆ ಕಲಿಯುವ ನಮಗೋ ಕೆಲಸ ಮಾಡಲಾರದಷ್ಟು ಸುಸ್ತು! ಸಣ್ಣ 'ಕೂ' ಎನ್ನುವ ಸದ್ದಿಗಾಗಿ ಕಾಯುವ ಕಿವಿ. ಮೆಲ್ಲನೆ ಹೊರಗೆ ಹೋಗಿ ನೋಡಿದರೆ ಗೆಳತಿಯರ ದಂಡು. ಬೂರ್ಗಳವು ಮಾಡಲಾರಂಭಿಸುತ್ತಿದ್ದೆವು. ಕುರುಡು ಟಾರ್ಚ್ ಬೆಳಕಿನಲ್ಲಿ ಹಗಲಿನಲ್ಲಿ ನೋಡಿಟ್ಟುಕೊಂಡಿದ್ದ ಎಳೆ ಸೌತೆಕಾಯನ್ನು ಕೊಯ್ದು ಲಂಗದಲ್ಲಿ ತಿಕ್ಕಿ ಮುಳ್ಳುದುರಿಸಿ ಮುರಿದು 'ಎಷ್ಟು ರುಚಿ ಇದ್ದು' ಎನ್ನುತ್ತಾ ಮುಕ್ಕುತ್ತಿದ್ದೆವು. ಕೈಗೆ ಸಿಕ್ಕ ಸಿಕ್ಕ ಹೂವು ಹಣ್ಣು ಎಲ್ಲವನ್ನು ಕದಿಯುವಾಗ ಹಿರಿಯರ ಕೈಯಲ್ಲಿ ಸಿಕ್ಕಿಬಿದ್ದರೂ 'ಮರ್ಯಾದಿಲ್ಯನ್ರ ಕದಿಯಲ್ಲೆ ಬಂಜ್ರಿ' ಎಂದು ತುಸುವೆ ಬೈದು ಹುಡುಗಿಯರಾದ್ದರಿಂದ ಶಿಕ್ಷೆಯಲ್ಲಿ ರಿಯಾಯಿತಿ ತೋರುತ್ತಿದ್ದರು. ತಪ್ಪು ಮಾಡಿದರೂ ಅಪರಾಧ ಪ್ರಜ್ಞೆ ಕಾಡದ, ಸಾಹಸ ಮೆರೆದ ಸಂದರ್ಭ ಬೂರ್ಗಳವು!. ಬಳ್ಳಿ ಎಂದು ಹಾವು ಹಿಡಿದವರದ್ದು, ಎಳನೀರು ಕದಿಯಲು ಹೋದವರು ಗಂಟೆಗಟ್ಟಲೇ ಮರದ ಮೇಲೆಯೇ ಕುಳಿತವರದ್ದು, ಗದ್ದೆಯಲ್ಲಿ ಜಾರಿಬಿದ್ದು ಮೈ ಕೈ ಕೆಸರಾಗಿಸಿಕೊಂಡವರದ್ದು...ಹೀಗೆ ಅಮಾವಾಸ್ಯೆಯಂದು ರಾತ್ರಿ ಲಕ್ಷ್ಮಿಪೂಜೆಯ ನೆಪದಲ್ಲಿ ನಾಲ್ಕಾರು ಜನ ಸೇರಿದಲ್ಲೆಲ್ಲ ಬೂರ್ಗಳವಿನ ರಂಜನೀಯ ಕಥೆಗಳು.

ಪಾಡ್ಯದ ದಿನ ಗೋಪೂಜೆಯೇ ಪ್ರಧಾನವಾದದ್ದು. ಕೊಟ್ಟಿಗೆಯಲ್ಲಿರುವ ಗಂಗೆ, ಗೌರಿ, ಸೀತೆ, ಪುಣ್ಯಕೋಟಿ.. ಹಂಡಿ, ಮುಂತಾದ ದನ ಕರುಗಳಿಗೆಲ್ಲ ಅಂದು ಸ್ನಾನ ಭಾಗ್ಯ.. ಕರುಗಳಿಗೆ ಬಿಸಿನೀರು ದನಗಳಿಗೆ ತಣ್ಣೀರು ಎರಚಿ ತೊಳೆಯುತ್ತಿದ್ದರು. ಅವುಗಳೋ ಕಟ್ಟಿದಲ್ಲಿಯೇ ಜಿಗಿದಾಡಿ ಪ್ರತಿಭಟನೆ ತೋರಿ, ಬಾಲ ಬೀಸಿ ನೀರು ತೊಳೆಯುವ ಗಂಡಸರ ಮೈಯನ್ನೇ ನೆನೆಸುವ ಪರಿ ನೋಡಿದಾಗ ನಮಗೆ ಭರ್ಜರಿ ಮೋಜು. 'ಮಕ್ಕಳೇ, ಈ ಹಬ್ಬದಲ್ಲಿ ಮಾಡುವ ಅಡುಗೆ ನಿಮಗಾಗಿ ಮಾಡಿದ್ದಲ್ಲ. ದನಕರುಗಳಿಗೆ' ಎಂದು ಆಯಿ ಹೇಳಿದರೆ, ಮೂತಿ ಉಬ್ಬಿಸುವ ನಮಗಂದು ದನಕರುಗಳ ಯೋಗದ ಬಗ್ಗೆ ಅಷ್ಟಿಷ್ಟು ಹೊಟ್ಟೆಕಿಚ್ಚು. ಬಾಳೆಕಾಯಿ, ತೊಂಡೆಕಾಯಿ ಸೇರಿಸಿ ಮಾಡಿದ ಅರಿಸಿನದ ದೋಸೆ, ಘಮಘಮಿಸುವ ಕಡ್ಲೆಬೇಳೆ ಹೋಳಿಗೆ... ನೋಡುತ್ತಾ ನೈವೇದ್ಯವಾಗುವವರೆಗೆ ತಿನ್ನದೇ ಇರುವುದು ಸಂಯಮದ ಪಾಠ!.

ಮೇಯಲು ಬಿಟ್ಟ ದನಕರುಗಳು ಸುರಕ್ಷಿತವಾಗಿ ಹಿಂದೆ ಬರಲಿ ಎಂಬ ಆಶಯದೊಂದಿಗೆ ಬೆಟ್ಟದಲ್ಲಿರುವ ವಿಷ್ಣು ಸ್ವರೂಪಿಯಾದ ಹುಲಿದೇವರ ಮುಂದೆ ಹೊಸ ದಾಬಿನ ಕಣ್ಣಿಗಳನ್ನಿಟ್ಟು ಊರಿನವರೆಲ್ಲ ಸೇರಿ ತೆಂಗಿನಕಾಯಿ ಒಡೆದು ಪೂಜೆ ಸಲ್ಲಿಸಿದ ನಂತರ ಕೊಟ್ಟಿಗೆಯಲ್ಲಿ ಗೋಪೂಜೆ. ಅಪ್ಪನ ಮಂತ್ರ ಶುರುವಾದಾಗ ಅಮ್ಮ 'ತಂದಳೆ ಗೋಗ್ರಾಸವಾ ದ್ರೌಪತಾ ದೇವಿ ಚೆಂದದ ಹೆಜ್ಜೆಯನಿಡುತಾ..' ಎಂದು ಹಾಡು ಹೇಳುವುದರ ಜೊತೆಗೆ ನಮ್ಮ ಜಾಗಟೆಯ ನಾದ. ಗಲಾಟೆಯಿಂದ ಗಾಬರಿಯಾಗುತ್ತಿದ್ದ ದನಕರುಗಳನ್ನು ಮೈ ಮುಟ್ಟಿ ಕೊರಳು ತಬ್ಬಿ ಸಂತೈಸುತ್ತಿದ್ದೆವು. ಶೇಡಿ ಕೆಮ್ಮಣ್ಣುಗಳನ್ನು ಬೇರೆ ಬೇರೆಯಾಗಿ ನೀರಿನಲ್ಲಿ ಕದಡಿ ದನಕರುಗಳ ಮೈಮೇಲೆ ಸಿದ್ದೆಯ ಹಿಂಭಾಗದಿಂದ ಬೆಚ್ಚು ಹೊಯ್ಯುತ್ತಿದ್ದೆವು (ಅಚ್ಚು ಹಾಕುತ್ತಿದ್ದೆವು). ಪ್ರತಿ ಗೋವಿನ ಕೊರಳಿಗೂ ಚೆಂಡು ಹೂವಿನ, ಅಡಿಕೆಯ ಮಾಲೆಗಳ ಅಲಂಕಾರ.

11ನೇ ಪುಟಕ್ಕೆ...

ಮಲೆನಾಡಿನ ಕೆಲವು ಭಾಗಗಳಲ್ಲಿ ದೊಡ್ಡ ಹಬ್ಬ ಎಂದು ಕರೆಸಿಕೊಳ್ಳುವ ದೀಪಾವಳಿ ಆಚರಣೆಯೇ ವಿಶಿಷ್ಟ. ಉತ್ತರ ಕರ್ನಾಟಕದಲ್ಲಿ ದೀವಳಿ ಎಂದರೆ ಫಳಾರದ ಹಬ್ಬ ಎನ್ನುವ ಮಾತಿದೆ. ಈ ಹಬ್ಬದ ತಯಾರಿ ಬಲು ಸಂಭ್ರಮದ್ದು. ಎರಡೂ ಆಚರಣೆಗಳ ಅಕ್ಷರದೌತಣ ಇಲ್ಲಿದೆ...

ದೀವಳಿಗೆಯೂ.. ಫಳಾರ ಸವಿಯೂ..

ರಶ್ಮಿ ಎಸ್

ದೀಪಾವಳಿ ಅಂದ್ರೆ ಸಾಕು, ನಮಗೆಲ್ಲ ಫಳಾರದ ಹಬ್ಬ. ಫಲಾಹಾರದ ಅಪಭ್ರಂಶ ಫಳಾರ. ಆದರೆ ಇಲ್ಲಿ ಪದಗಳಷ್ಟೇ ಅಲ್ಲ, ಆಹಾರವೂ ಪಲ್ಲಟವಾಗಿರುತ್ತದೆ. ಫಲಾಹಾರದಲ್ಲಿ ಫಲಗಳೇ ಹೆಚ್ಚು ಇದ್ದರೆ, ಫಳಾರದಲ್ಲಿ ಎಲ್ಲ ಕುರುಕಲುಗಳದ್ದೇ ಮೇಲುಗೈ.

ಫಳಾರ ಮಾಡಾಕತ್ತೀವಿ. ಕರದೊಡಿ, ಹುರಕ್ಕಿಹೋಳಗಿ, ಗುಳ್ಳಡಕಿ ಉಂಡಿ, ಹಚ್ಚಿದವಲಕ್ಕಿ, ಕರದವಲಕ್ಕಿಗೆ ಅವಲಕ್ಕಿ ಬಿಸಿಲಿಗೆ ಇಟ್ಟೇವಿ.. ಎನ್ನುವುದರೊಂದಿಗೆ ಫಳಾರದ ತಯಾರಿ ಆರಂಭವಾಗುತ್ತದೆ.

ಫಳಾರೆಂದರೆ ಒಂದು ತಟ್ಟೆಯಲ್ಲಿ ಒಂದೆಡೆ ತಿಳಿ ಹಳದಿ ಅಥವಾ ನಿಂಬೆ ಹಸಿರಿನ ಬಣ್ಣದ ಅವಲಕ್ಕಿ, ಅದರೊಳಗೆ ಕೆಂಬಣ್ಣದ ಕಡಲೆಬೀಜ, ಹೊಟ್ಟೆಯುಬ್ಬಿಸಿಕೊಂಡ ಬಿಳಿಎಳ್ಳು, ಕರುಕುರು ಎನ್ನುವ ಹವೇಜು (ಧನಿಯಾ ಕಾಳು), ತೆಳುಸಿಪ್ಪೆಯಂತೆ ಸೀಳಿದ ಒಣಕೊಬ್ಬರಿ, ಕಂದು ಬಣ್ಣಕ್ಕೆ ತಿರುಗಿರುತ್ತದೆ. ಮೆಂತ್ಯ ಮೆಣಸಿನಕಾಯಿ ಘಮ್ ಅನ್ನುವಂತೆ ಎಣ್ಣೆಯಲ್ಲಿ ಕರಿದು ಹಾಕಿದ್ದರೆ, ಕರಿಬೇವು ಸಹ ಗರಿಗರಿ. ಬಾಯಿಗೆ ಹಾಕಿಕೊಂಡಾಗ ಆಗಾಗ ಸಿಗುವ ಸಕ್ಕರೆ ಕಣ. ಆಹಹಾ.. ಅದಕ್ಕೆ ಶ್ರೀಕೃಷ್ಣ ಸುಧಾಮನಿಗೆ ಅವಲಕ್ಕಿ ತಿಂದಮೇಲೆ ಏನೆಲ್ಲ ಸಂಪತ್ತು ಕೊಟ್ಟ ಅಂತನಿಸದೇ ಇರದು.

ಅವಲಕ್ಕಿ ತಿಂದ ಕೂಡಲೇ ಕೊಟ್ಟವ ಲಕ್ಕಿ ಆಗುತ್ತಾನೆ ಅನ್ನವುದೊಂದು ನಂಬಿಕೆಯೂ ಇದೆ. ಇಂಥ ಅವಲಕ್ಕಿ ಅರ್ಧ ತಟ್ಟೆಯಲ್ಲಿ ಬೀಚಿನಲ್ಲಿ ಮರಳು ಬಿದ್ದಂತೆ ಗೆರೆ ಕೊರೆದಿಟ್ಟುಕೊಳ್ಳುತ್ತದೆ. ಬದಿಯಲ್ಲಿ ಹಚ್ಚಹಸಿರಿನ ಹೆಸರುಂಡೆ, ಪಕ್ಕದಲ್ಲಿ ನಸು ಹಳದಿಯ ಗೋಧಿ ಉಂಡೆ. ಪಕ್ಕಕ್ಕೆ ಖಡ್ಗವಿರಿಸಿದಂತೆ ಎರಡು ಕರಜಿಕಾಯಿಗಳು. ಒಂದೆಡೆ ಬೆಲ್ಲ ಕೊಬ್ಬರಿ, ಹುರಿಗಡಲೆ ಪುಡಿಯ ಮಿಶ್ರಣವಿದ್ದರೆ, ಇನ್ನೊಂದರಲ್ಲಿ ಸಕ್ಕರೆ, ಒಣಕೊಬ್ಬರಿಯ ಮಿಶ್ರಣ ತುಂಬಿ ಮಾಡಿರುತ್ತಾರೆ.

ಈ ಫಳಾರ ತಟ್ಟೆಯಲ್ಲಿ ಚಕ್ರವ್ಯೂಹದಂತಹ ಚಕ್ಕುಲಿಯೂ, ಕೋಡುಬಳೆಯೆಂದು ಕರೆಯಲಾಗುವ ಕೂಡುಬಳೆಗಳೂ ಜಾಗ ಪಡೆದಿರುತ್ತವೆ. ಈಗಲೂ ಪಾರಂಪರಿಕವಾಗಿ ಫಳಾರದ ತಟ್ಟೆ ಕೊಡಬೇಕೆಂದರೆ ಇವುಗಳ ಮೇಲೆ ಹುರಕ್ಕಿ ಹೋಳಗಿ ಜೊತೆಗೆ ಕರದೊಡಿ ಇರಲೇಬೇಕು.

ಏನಿದು ಕರದೊಡಿ.. ಹೆಂಗಿದು ಹುರಕ್ಕಿ ಹೋಳಗಿ ಅಂತ ಹುಬ್ಬು ಗಂಟಿಕ್ಕಿ ಯೋಚಿಸುತ್ತಿರಬಹುದು. ಕರದೊಡಿ ಅಂದ್ರ ಬಾ ನನ್ನ ತಿನ್ನಬಾ ಅಂತ ಕರಿಯುವ ವಡಿ. ಖಾಕ್ರಾದ್ದಂಗೇ ಕನ್ನಡದ ಜಾಯಮಾನಕ್ಕೆ ಒಗ್ಗಿಕೊಂಡಿರುವ ತಿಂಡಿ ಇದು. ಈರುಳ್ಳಿ ಹೆಚ್ಚಿ, ಕೊತ್ತಂಬರಿ ಕೊಚ್ಚಿ, ಕಣಕಣದಂತೆ ಕಾಣುವಾಗ, ಹಸಿಮೆಣಸು ಹುರಿದು, ಮೆಂತ್ಯ ಸೊಪ್ಪು ಅಥವಾ ಈಗೀಗ ಸಿಗುವ ಕಸೂರಿ ಮೇಥಿ, ಉಪ್ಪು, ಜೀರಿಗೆ ಮಿಕ್ಸಿಯಲ್ಲಿ ಜುಂಯ್ ಎನಿಸಿ, ಕಡಲೆಹಿಟ್ಟಿಗೆ ಕಲಿಸಬೇಕು. ನಾದಬೇಕು. ಬಿಸಿಎಣ್ಣೆ ಹಾಕಿ ಮಿದ್ದಬೇಕು. ನಸುಹಳದಿಯಲ್ಲಿ ಈ ಹಚ್ಚಹಸಿರ ಮಿಶ್ರಣ ಅದೆಂಥ ಚಂದದ ಕಲಾಕೃತಿ ಇದು, ಅಂತನಿಸುವಾಗ ಅವನ್ನು ಮೈದಾ ಹಿಟ್ಟಿನ ಉಂಡೆ ಮಾಡಿಕೊಳ್ಳಬೇಕು. ಪೂರಿಯಂತೆ ಲಟ್ಟಿಸಿ, ಈ ಕಡಲೆಹಿಟ್ಟಿನ ಮಿಶ್ರಣದ ಸಣ್ಣ ಉಂಡೆ ತುಂಬಿ ಮತ್ತೆ ಹೋಳಿಗೆಯಂತೆ ಲಟ್ಟಿಸಬೇಕು. ಹೀಗೆ ಲಟ್ಟಿಸಿದ ಪೂರಿಯನ್ನು ಬಿಸಿಎಣ್ಣೆಯಲ್ಲಿ ಕರೆಯಬೇಕು. ಹಾಗೆ ಕರೆದಾಗಲೆಲ್ಲ, ಅಕ್ಕಪಕ್ಕದವರಿಗೆ, ಬಂಧು ಬಾಂಧವರಿಗೆ.. ನಾನೀಗ ತಿನ್ನಲು ರೆಡಿ ಎಂದು ಮನೆತುಂಬ ಘಮವೆಬ್ಬಿಸುವ ತಿಂಡಿಯೇ ಕರದೊಡಿ.

ಬಂಧು ಬಾಂಧವರಿಗೆಲ್ಲ ಕರೆಯುವುದಷ್ಟೇ ಅಲ್ಲ, ಅವರವರ ಮನೆಗೆ ಹೋಗಲು ಸಿದ್ಧವಾಗುವ ಬಹುಮುಖ್ಯ ತಿಂಡಿ. ಎಷ್ಟು ಕರದೊಡಿ ಕೊಟ್ರು ಎನ್ನುವುದರ ಮೇಲೆ ಅವರಿಬ್ಬರು ಅದೆಷ್ಟು ಆಪ್ತರು ಎಂಬ ಲೆಕ್ಕಾಚಾರವೂ ನಡೆಯುತ್ತದೆ. ಒಂದಿಟ್ಟರೆ ಶಾಸ್ತ್ರಕ್ಕೆ, ಎರಡಿಟ್ಟರೆ ಕಾಟಾಚಾರಕ್ಕೆ, ಐದಿಟ್ಟರೆ ಸ್ನೇಹಕ್ಕೆ, ಹತ್ತಿಟ್ಟರೆ ಬಾಂಧವ್ಯಕ್ಕೆ, ಹತ್ತಕ್ಕೂ ಜಾಸ್ತಿ ಇಟ್ಟರೆ ಅದು ಬೀಗರ ಮನೆಗೆ ಎಂಬಂತೆ ಲೆಕ್ಕಾಚಾರವೂ ಇದೆ. ಸಿಹಿಪೂರಿಯಂತೆ ಕಾಣುವ ಹುರಕ್ಕಿ ಹೋಳಿಗೆಗೂ, ದೀಪಾವಳಿಗೂ ಬಿಡದ ನಂಟು. ನವಣಕ್ಕಿಯನ್ನು, ತುಸು ಅಕ್ಕಿಯೊಂದಿಗೆ ಹುರಿದು, ಬೆಲ್ಲದೊಂದಿಗೆ ಮಿಶ್ರಣ ಮಾಡಿ, ಕರದೊಡೆಯಂತೆಯೇ ಕರಿದು ಮಾಡುವ ಹುರಕ್ಕಿ ಹೋಳಿಗೆ ಪೌಷ್ಟಿಕಾಂಶದ ಆಗರ.

ಇದೀಗ ಇದು ಫಳಾರದ ತಟ್ಟೆಯಿಂದ ಮಾಯವಾಗಿದೆ. ಹುಬ್ಬಳ್ಳಿ-ಧಾರವಾಡದ ರೊಟ್ಟಿಯಂಗಡಿಗಳಲ್ಲಿ ಅಪರೂಪಕ್ಕೆ ಸಿಗುವ ಹುರಕ್ಕಿ ಹೋಳಿಗೆಗೆ ಹೆರ್ತಿದ್ದ ತುಪ್ಪ (ಹರಳು ಹರಳಾಗಿರುವ ತುಪ್ಪ), ಹಾಲಿನೊಂದಿಗೆ ಸವಿದರೆ ಸ್ವರ್ಗವೇ ಪ್ರತಿ ತುತ್ತಿನಲ್ಲಿಯೂ ಎನ್ನುವಂತಿರುತ್ತದೆ.



ರುಚಿ ರುಚಿಯಾದ ಖಾರದವಲಕ್ಕಿ...

ಫಳಾರ ಏಕೆ ಕೊಡುತ್ತಾರೆ?

ದೀಪಾವಳಿಯ ದೀಪಗಳೊಂದಿಗೆ, ಚಳಿಗಾಲವೂ ಅಂಗಳದಿಂದ, ಹೊಸಿಲು ದಾಟಿ ಮನೆಯೊಳಗೆ ಕಾಲಿಡುತ್ತದೆ. ಅಂಗಾಲಿನಿಂದ ಆರಂಭವಾಗಿ ಕೆನ್ನೆಯವರೆಗೂ ಚರ್ಮ ಬಿರುಕುಬಿಡುವ ಸಮಯವಿದು. ಇಂಥ ಸಂದರ್ಭದಲ್ಲಿ ದೇಹಕ್ಕೆ ಅಗತ್ಯವಿರುವ ತೈಲಾಂಶದ ಖಾದ್ಯಗಳು ತಿನ್ನಲಿ ಎಂಬ ಕಾರಣಕ್ಕೆ ಈ ಫಳಾರವನ್ನು ಕೊಡು ಕೊಳ್ಳುವ ಸಂಪ್ರದಾಯ ಆರಂಭವಾಗಿರಬೇಕು.

ಲಕ್ಷ್ಮಿ ಪೂಜೆ ಮಾಡಿದವರು ಈ ದಿನ ಮನೆಯಿಂದಾಚೆ ಏನೂ ನೀಡುವುದಿಲ್ಲ. ಪ್ರಸಾದಕ್ಕೂ ಕೇವಲ ಚುರುಮುರಿ, ಬತ್ತಾಸು ನೀಡುತ್ತಾರೆ. ಯಾವ ಖರ್ಚೂ ಮಾಡುವುದಿಲ್ಲ. ಆ ಕೊರತೆ ನೀಗಿಸಲು ಪಂಚ ಭಕ್ಷ್ಯಗಳನ್ನು ನೀಡಬೇಕು ಎಂಬ ಸಂಪ್ರದಾಯವಿದೆ. ಖಾರದ ತಿಂಡಿಗಳಲ್ಲಿ ಅವಲಕ್ಕಿ, ಕೂಡುಬಳೆ, ಚಕ್ಕುಲಿ, ಖಾರಾಕಡ್ಡಿ, ಕರದೊಡಿ, ಸಿಹಿ ತಿಂಡಿಗಳಲ್ಲಿ ಶಂಕರಪೋಳಿ, ಹೆಸರುಂಡೆ, ಗೋಧಿಯುಂಡೆ, ಲಡಕಿಲಾಡು, ಹುರಕ್ಕಿ ಹೋಳಗಿ ಇರಲೇಬೇಕಾದುದು ಕಾಯಂ.

11ನೇ ಪುಟಕ್ಕೆ...

ಟಾಂಗ ಏರಿ ಮೈಸೂರು ನೋಡಿ...

ಅವಿನಾಶ್ ದಮ್ಮಳ್ಳಿ

'ಟಕ್.. ಟಕ್.. ಟಕ್.. ಟಕ್...' ಎಂದು ಸದ್ದು ಮಾಡುತ್ತಾ ಸಾಗುವ ಟಾಂಗ ಮೇಲೆ ಕುಳಿತು ಮೈಸೂರಿನ ಅರಮನೆಯ ವೈಭವವನ್ನು ಕಣ್ತುಂಬಿಕೊಳ್ಳುವುದೇ ಮಜಾ! ದಸರಾ ಸಮಯದಲ್ಲಿ ಈ ಖುಷಿ ದುಪ್ಪಟ್ಟಾಗುತ್ತದೆ. ಇದಕ್ಕೆ ಕಾರಣ ನಗರವನ್ನು ಮದುವಣಗಿತ್ತಿಯಂತೆ ಸಿಂಗರಿಸಿರುವ ಬಗೆ ಬಗೆಯ ದೀಪಾಲಂಕಾರ...

ಪ್ರವಾಸಿಗರು ಮೈಸೂರನ್ನು ಕಾರಿನಲ್ಲಿ ಕುಳಿತು ನೋಡಬಹುದು, ಇಲ್ಲವೇ ಬೈಕ್, ಆಟೊ ಏರಿ ನಗರ ದರ್ಶನ ಮಾಡಬಹುದು. ಇದೂ ಬೇಡ ಎಂದರೆ, 'ಟ್ರಿನ್.. ಟ್ರಿನ್..' ಸೈಕಲ್ ಹತ್ತಿ ಸುತ್ತಬಹುದು. ಆದರೆ, ಇವೆಲ್ಲವನ್ನೂ ಮೀರಿ ವಿಶೇಷ ಅನುಭವ ನೀಡುವುದು ಟಾಂಗ ಸವಾರಿ!

ಹೌದು, ಮೈಸೂರಿನ ಇತಿಹಾಸದೊಂದಿಗೆ ಮಿಳಿತವಾಗಿರುವ ಟಾಂಗ ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಬದಲಾದ ಕಾಲಮಾನಕ್ಕೆ ತಕ್ಕಂತೆ ತನ್ನನ್ನು ಒಂದಷ್ಟು ಆಕರ್ಷಕವಾಗಿಸಿಕೊಂಡು ನಗರ ನೋಡಲು ಬರುವ ಪ್ರವಾಸಿಗರಿಗೆ ವಿಶೇಷ ಅನುಭವ ನೀಡುತ್ತಿದೆ.

ಪ್ರವಾಸಿಗರನ್ನು ತಮ್ಮತ್ತ ಸೆಳೆದು ನಗರ ಸುತ್ತಿಸುವ ಸಲುವಾಗಿ ಟಾಂಗಗಳಿಗೆ ಟಾಂಗವಾಲಾಗಳು ಹೊಸ ಸ್ಪರ್ಶ ನೀಡಿದ್ದಾರೆ. ಅಂದರೆ, ಬಣ್ಣ ಬಣ್ಣದ ದೀಪಾಲಂಕಾರ ಮಾಡಿದ್ದಾರೆ. ಝಗಮಗಿಸುವ ಟಾಂಗಗಳಲ್ಲಿ ಕುಳಿತು ನಗರ ಸುತ್ತುವುದನ್ನು ಪ್ರವಾಸಿಗರು ಇಷ್ಟಪಡುತ್ತಾರೆ. ಮಕ್ಕಳಿಗಂತೂ ಟಾಂಗ ಸವಾರಿ ದುಪ್ಪಟ್ಟು ಖುಷಿ ನೀಡುತ್ತದೆ. 'ಮೈಸೂರಿಗೆ ಬರುವ ಪ್ರವಾಸಿಗರು ಅದರಲ್ಲೂ ಕೇರಳ, ಮಹಾರಾಷ್ಟ್ರ ಹಾಗೂ ಉತ್ತರ ಭಾರತದವರಿಗೆ ಟಾಂಗ ಸವಾರಿ ಎಂದರೆ ಅಚ್ಚುಮೆಚ್ಚು ಎನ್ನುತ್ತಾರೆ' ಟಾಂಗವಾಲಾ ವೆಂಕಟೇಶ್.

'ಟಾಂಗದಲ್ಲಿ ಕುಳಿತು ನಗರವನ್ನು ಸುತ್ತುವಂತಹ ಅನುಭವ ಮೈಸೂರಿನಲ್ಲಿ ಸಿಗುತ್ತಿದೆ. ಮಕ್ಕಳು-ಪತ್ನಿಯೊಂದಿಗೆ ಟಾಂಗದಲ್ಲಿ ಕುಳಿತು ನಗರ ಪ್ರದಕ್ಷಿಣೆ ಹಾಕಿದ್ದು ಮರೆಯಲಾಗದ ಕ್ಷಣಗಳು. ಅದರಲ್ಲೂ ದಸರಾ ವೇಳೆ ಮೈಸೂರಿಗೆ ಬಂದು ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ರಸ್ತೆಗಳು, ಕಟ್ಟಡಗಳು, ಸರ್ಕಲ್‌ಗಳು ಹಾಗೂ ಅರಮನೆಯನ್ನು ನೋಡಿ ಮಕ್ಕಳು ತುಂಬಾ ಖುಷಿಪಟ್ಟರು' ಎಂದು ಕೇರಳದ ಪ್ರವಾಸಿ ದೀಪಕ್ ಹೇಳಿದರು.

ಈಗ ಟಾಂಗ ಮೈಸೂರು ಪ್ರವಾಸೋದ್ಯಮದ ಭಾಗವಾಗಿ ಬದಲಾಗಿದೆ. ವರ್ಷದಿಂದ ವರ್ಷಕ್ಕೆ ಟಾಂಗಗಳ ಸಂಖ್ಯೆ ಕಡಿಮೆಯಾಗುತ್ತಿದ್ದರೂ ಇದರ ಸವಾರಿ ಕುರಿತಾದ ಪ್ರವಾಸಿಗರ ಆಸಕ್ತಿ ಮಾತ್ರ ಕಡಿಮೆಯಾಗಿಲ್ಲ. ಮೈಸೂರಿಗೆ ಬರುವ ಪ್ರವಾಸಿಗರು ಟಾಂಗದಲ್ಲಿ ಕುಳಿತು ಅರಮನೆ ಸುತ್ತು ಹಾಕುವುದನ್ನು ಮಿಸ್ ಮಾಡುವುದಿಲ್ಲ. ಟಾಂಗಗಳ ಜತೆಗೆ ಸಾರೋಟ್ ಕೂಡ ಸೇರಿಕೊಂಡಿವೆ. ಸಾಕಷ್ಟು ಕುಟುಂಬಗಳು ತಮ್ಮ ಜೀವನ ನಿರ್ವಹಣೆಗೆ ಟಾಂಗಗಳನ್ನೇ ನಂಬಿಕೊಂಡಿವೆ. ಟಾಂಗವಾಲಾಗಳಿಗೆ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ಕೂಡ ಪ್ರೋತ್ಸಾಹ ನೀಡುತ್ತಿದೆ. ದಸರಾ ಸಂದರ್ಭದಲ್ಲಿ ಟಾಂಗ ಸವಾರಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿ ವರ್ಷ ಕಾರ್ಯಕ್ರಮವನ್ನೂ ಆಯೋಜಿಸುತ್ತಿದೆ.

ಇತಿಹಾಸದ ನಂಟು

ಒಂದು ಕಾಲದಲ್ಲಿ ಟಾಂಗಗಳು ಮೈಸೂರು ನಗರದ ಸಂಚಾರ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದ್ದವು. ದೂರದಿಂದ ಬರುವ ಪ್ರವಾಸಿಗರನ್ನು ಹೊತ್ತು ನಗರ ಮಾತ್ರವಲ್ಲದೆ, ದೂರದ ಊರುಗಳಿಗೂ ಸಾಗುತ್ತಿದ್ದವು.

11ನೇ ಪುಟಕ್ಕೆ...

ಮೈಸೂರನ್ನು ಟಾಂಗದಲ್ಲಿ ನೋಡುವುದೇ ಬಲು ಚೆಂದ...





'ಮೈಸೂರು ಟಾಂಗ' ಹೆಸರಿನ ಸಿನಿಮಾ

1968ರಲ್ಲಿ ಜಿ.ವಿ. ಅಯ್ಯರ್ ನಿರ್ದೇಶನದಲ್ಲಿ 'ಮೈಸೂರು ಟಾಂಗ' ಹೆಸರಿನ ಸಿನಿಮಾ ನಿರ್ಮಾಣವಾಗಿದೆ. ಕಲ್ಯಾಣ್‌ಕುಮಾರ್, ಬಿ.ವಿಜಯಲಕ್ಷ್ಮಿ, ಉದಯಕುಮಾರ್ ಮತ್ತು ಬಾಲಕೃಷ್ಣ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಇದು ಮೈಸೂರು ಟಾಂಗ ಎಷ್ಟು ಪ್ರಸಿದ್ಧ ಎಂಬುದಕ್ಕೆ ನಿದರ್ಶನ.

ಆಧುನಿಕ ಸ್ಪರ್ಶದ ರಕ್ತರಾತ್ರಿ



ಸುಬ್ರಾಯ ಮತ್ತೀಹಳ್ಳಿ

ಕಂದಗಲ್ ಹನಮಂತರಾಯರು 'ರಕ್ತರಾತ್ರಿ' ನಾಟಕವನ್ನು ರಚಿಸಿ ಶತಮಾನವೇ ಕಳೆದರೂ ಅದರ ಜನಪ್ರಿಯತೆ ಕೊಂಚವೂ ಕಡಿಮೆಯಾಗಿಲ್ಲ. ಈ ಅವಧಿಯಲ್ಲಿ ಸಾವಿರಾರು ಪ್ರಯೋಗಗಳನ್ನು ಕಂಡ ಹೆಗ್ಗಳಿಕೆ ಈ ನಾಟಕಕ್ಕಿದೆ. ಪಾರಂಪರಿಕ ರಂಗಭೂಮಿ ತನ್ನ ಉಚ್ಛ್ರಾಯ ಕಾಲವನ್ನು ಕಂಡಿದ್ದೇ ಕಂದಗಲ್ ಅವರಂತಹ ನಾಟಕಕಾರರಿಂದ. ಗುಬ್ಬಿ ವೀರಣ್ಣ, ಹುಲಿಮನೆ ಸೀತಾರಾಮ ಶಾಸ್ತ್ರಿ ಅವರಂಥ ಮಹಾನ್ ಕಲಾವಿದರಿಂದ. ಅವರೇ ಸೃಷ್ಟಿಸಿಕೊಂಡ ಅಸಂಖ್ಯಾತ ಸಹೃದಯ ಪ್ರೇಕ್ಷಕರಿಂದ.

ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ರಂಗಸೌಗಂಧ ಕಲಾ ಸಂಘಟನೆಯ ಆಶ್ರಯದಲ್ಲಿ ಸ್ಥಳೀಯ ಕಲಾವಿದರರು ಮೂರನೇ ಬಾರಿಗೆ 'ರಕ್ತರಾತ್ರಿ' ನಾಟವನ್ನು ಕಿಕ್ಕಿರಿದ ಪ್ರೇಕ್ಷಕರ ಸಮ್ಮುಖದಲ್ಲಿ ಅಭಿನಯಿಸಿದರು.

> ಕಂದಗಲ್ ಹನಮಂತರಾಯರ 'ರಕ್ತರಾತ್ರಿ' ನಾಟಕ ಶತಮಾನಗಳ ಬಳಿಕವೂ ರಂಗಭೂಮಿಯಲ್ಲಿ ಅದೇ ಛಾಪು ಉಳಿಸಿಕೊಂಡಿದೆ. ಇತ್ತೀಚೆಗಷ್ಟೇ ನಾಟಕದ ಪ್ರದರ್ಶನ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ರಂಗಸೌಗಂಧ ಕಲಾ ಸಂಘಟನೆಯ ಆಶ್ರಯದಲ್ಲಿ ನಡೆಯಿತು...

'ರಕ್ತರಾತ್ರಿ' ನಾಟಕ 'ಕುರುಕ್ಷೇತ್ರ'ದ ಕೊನೆಯ ಒಂದೆರಡು ದಿನಗಳ ರಕ್ತ ರಂಜಿತ ಕ್ಷಣಗಳ ಗುಚ್ಛ. ಕರ್ಣ ಸೇನಾಧಿಪತ್ಯದಿಂದ, ದುರ್ಯೋಧನ ವಧೆ ಮತ್ತು ಉಪ ಪಾಂಡವರ ಹತ್ಯೆಯವರೆಗಿನ ಘಟನೆಗಳು ಸಂಸ್ಕೃತಭೂಯಿಷ್ಠ ಸುದೀರ್ಘ ಸಂಭಾಷಣೆಗಳ ವಿಜ್ರಂಭಣೆಯಲ್ಲಿ, ರೌದ್ರ ಕರುಣೆ, ದೈವಿಕತೆ ತಾತ್ವಿಕತೆ, ದ್ವೇಷ ತಿರಸ್ಕಾರಗಳ ತೀವ್ರ ಸಂಘರ್ಷದಲ್ಲಿ ಸಾಗುವ ದೃಶ್ಯಗಳು ಪ್ರೇಕ್ಷಕರನ್ನು ನವರಸಗಳ ಸಿಂಚನದಿಂದ ಪುಳಕಿತಗೊಳಿಸಿದವು.

ನಡು ನಡುವೆ ಸುಶ್ರಾವ್ಯ ರಂಗ ಸಂಗೀತ, ಸಂಭಾಷಣೆಗಳ ನಡುವಣ ಧ್ವನಿ ನೀಡಿಕೆ, ಅದಕ್ಕೆ ತಕ್ಕ ನೆರಳು ಬೆಳಕಿನ ತಾಂತ್ರಿಕತೆ, ನಾಟಕದ ಸಶಕ್ತ ಹರಿವಿಗೆ ಸಹಕರಿಸಿತು.

ಆ ಕಾಲದ ಭಾರವಾದ ಅದ್ದೂರಿ ರಂಗ ಪರಿಕರಗಳ ಬದಲು, ಬಿಳಿ ಪರದೆಯ ಮೇಲೆ ಮೂಡಿಸಿದ ವೈವಿಧ್ಯಮಯ ವರ್ಣರಂಚಿತ ದೃಶ್ಯ ಚಿತ್ರಗಳು, ನಾಟಕವನ್ನು ಮತ್ತಷ್ಟು ಶ್ರೀಮಂತಗೊಳಿಸಿತು. ಮನಸೆಳೆಯುವ ಆಭರಣಗಳು, ಅದ್ದೂರಿ ವಸ್ತ್ರವೈವಿಧ್ಯ, ಆಯುಧಗಳನ್ನು ಸ್ಥಳೀಯ ಕಲಾವಿದರಿಂದಲೇ ಸಿದ್ಧಗೊಳಿಸಿ ಅಳವಡಿಸಿದ ಸಂಘಟನೆಯ ಆಸಕ್ತಿ ಶ್ಲಾಘನೀಯ.

ವರ್ತಮಾನದ ರಂಗ ಪ್ರವಾಹ ಸಾಕಷ್ಟು ದೂರ ಹರಿದು ಬಂದಿದೆ. ಆಧುನಿಕ ಬದುಕು, ಜೀವನ ವಿಧಾನ, ವರ್ತನೆ, ಪ್ರವೃತ್ತಿ ಆಸಕ್ತಿ, ಅಭಿರುಚಿಗಳನ್ನೆಲ್ಲ ಕಲಸು ಮೇಲೋಗರವಾಗಿಸಿದೆ. ಪರಂಪರೆಯ ಸ್ಮೃತಿ ತೆಳುವಾಗಿದೆ. ಶತಮಾನಗಳಷ್ಟು ಹಿಂದಿನ ಭಾಷಾವೈಭವ, ಅಭಿನಯ ವೈವಿಧ್ಯ, ಭಾವತೀವ್ರತೆಗಳೆಲ್ಲ ಮರವೆಗೆ ಸರಿಸುತ್ತಿರುವ ವಿಚಿತ್ರ ಸನ್ನಿವೇಶದಲ್ಲಿ ವಾಸ್ತವಿಕ ರಂಗಭೂಮಿಗೆ ನಿರ್ದಿಷ್ಟ ಆಶಯ, ಆಕೃತಿ, ಧೋರಣೆಗಳೇ ರೂಪುಗೊಳ್ಳದ ಅಥವಾ ವಿವಿಧ ಸಿದ್ಧಾಂತಗಳ ಗೊಂದಲದ ಗೂಡಾಗಿರುವ ಆಧುನಿಕ ರಂಗಭೂಮಿಯ ನಡುವೆ ಇಂಥ ಅಪರೂಪದ ಪ್ರಯೋಗ ಸಾಂಸ್ಕೃತಿಕ ಚಟುವಟಿಕೆಗಳಿಗೊಂದು ಎಚ್ಚರದ ಸಂದೇಶ ನೀಡಬಲ್ಲಷ್ಟು ಶಕ್ತಿಯನ್ನು ಇನ್ನೂ ಕಾಯ್ದುಕೊಂಡಿದೆ.

ರಂಗಸೌಗಂಧ ಪಾರಂಪರಿಕ ರಂಗಭೂಮಿಯ ದಿಗ್ಗಜ ಹುಲಿಮನೆ ಸೀತಾರಾಮ ಶಾಸ್ತ್ರಿಯವರ ನೆನಪಿನಲ್ಲಿ ಜನ್ಮತಾಳಿ, ಸಾಂಪ್ರದಾಯಿಕ ರಂಗದ ಪುನರ್ಮನನಕ್ಕೆ ತನ್ನನ್ನು ಅರ್ಪಿಸಿಕೊಂಡು, ಗತವೈಭವವನ್ನು ಪುನಃಸೃಷ್ಟಿಸಲು ಹೆಣಗುತ್ತಿರುವುದು ಮಹತ್ವದ ಬೆಳವಣಿಗೆ. ಇಲ್ಲಿಯ ನಟರು ಮೂಲತಃ ಕೃಷಿಕರು. ಕಳೆ ಕೊಳೆ ಮಳೆಯ ಅತ್ಯಧಿಕ ಸವಾಲುಗಳ ನಡುವೆಯೂ ತಿಂಗಳು ಕಾಲ ಅಭ್ಯಸಿಸುತ್ತ, ಪರಂಪರೆಯ ಪರಿಮಳ ಬೀರುವ ಮಹತ್ವಾಕಾಂಕ್ಷೆಯಲ್ಲಿ, ತಮ್ಮದೇ ಹಣ ಖರ್ಚು ಮಾಡಿ ಉಚಿತ ಪ್ರಯೋಗ ನೀಡುತ್ತಿರುವುದು ಅನನ್ಯ.

ಈ ನಾಟಕವು ದ್ವೇಷ, ಕಪಟ, ಶೋಷಣೆ, ಅನ್ಯಾಯ, ಯುದ್ಧ, ಹತ್ಯೆಯಂಥ ಭಯಾನಕ ಕ್ಷಣಗಳನ್ನು ಸೃಷ್ಟಿಸುತ್ತಲೇ ತಾಯ್ತನದ ಮಾರ್ದವ, ಮಾನವತೆಯ ಮಹತ್ವ ಮತ್ತು ದೈವಿಕತೆಯ ಮಿಂಚುಗಳನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತದೆ. ದ್ವೇಷ ಮತ್ತು ಪಶ್ಚಾತ್ತಾಪಗಳ ನಡುವೆ ಹೊಯ್ದಾಡುತ್ತದೆ. ಇಲ್ಲಿ ಯಾವ ಪಾತ್ರಧಾರಿಗಳೂ ವೃತ್ತಿ ನಟರಲ್ಲ. ಶ್ರಮ ಆಸಕ್ತಿ ಉತ್ಸಾಹ, ಪರಂಪರಾನಿಷ್ಠೆಯ ಬಲದಲ್ಲಿ ಧೈರ್ಯದಿಂದ ರಂಗ ಪ್ರವೇಶ ಮಾಡಿದ್ದಾರೆ.

ನಾಟಕದ ಸಂಭಾಷಣೆಗಳು ದೀರ್ಘವಾದರೂ ಕಾವ್ಯಾತ್ಮಕ ತಾತ್ವಿಕ ಆಧ್ಯಾತ್ಮಿಕ ಸತ್ವವನ್ನು ಮೈಗೂಡಿಸಿಕೊಂಡಿರುವುದರಿಂದ ಕುತೂಹಲ ಕೆರಳಿಸುತ್ತವೆ. ನವರಸಪೂರ್ಣ ನುಡಿಗಟ್ಟು, ಭಾವಾಭಿನಯ, ಅಂಗಾಭಿನಯ, ವಿವಿಧ ರಸಗಳ ಅಭಿವ್ಯಕ್ತಿಗೆ ಸಾಕಷ್ಟು ಅವಕಾಶವನ್ನೊದಗಿಸಿವೆ.

ಇಲ್ಲಿಯೂ ಸಹ ಸಂಭಾಷಣೆಯ ಪ್ರಸ್ತುತಿಯಲ್ಲಿ ಇನ್ನಷ್ಟು ಭಾವ ವೈವಿಧ್ಯ ಏರಿಳಿತಗಳ ಕೊರತೆ ಎದ್ದು ತೋರಿತು. ಭಾವಕ್ಕೆ ತಕ್ಕ ಅಂಗಭಾಷೆ ಮತ್ತು ಚಲನೆಯೊದಗಿದ್ದರೆ ಇನ್ನಷ್ಟು ಅರ್ಥಪೂರ್ಣತೆ ಒದಗುತ್ತಿತ್ತು. ಪ್ರತೀ ದೃಶ್ಯದ ನಡುವಣ ಕತ್ತಲೆಯ ದೃಶ್ಯಗಳನ್ನು ಇನ್ನೂ ಅರ್ಥಪೂರ್ಣವಾಗಿ ದೃಶ್ಯದ ವೈವಿಧ್ಯಮಯ, ದುರಂತ, ಸಂಘರ್ಷಗಳ ಸಂಕೇತವಾಗಿ ದುಡಿಸಿಕೊಳ್ಳಬಹುದು. ಗಣಪತಿ ಹೆಗಡೆ (ನಿರ್ದೇಶನ), ರಾಜೇಂದ್ರ ಕೊಳಗಿ (ಸಂಗೀತ ನಿರ್ದೇಶನ), ಸಂಗೀತ ಮತ್ತು ಧ್ವನಿ (ಜಯರಾಮ ಭಟ್ ಹೆಗ್ಗಾರಳ್ಳಿ) ಕಸಬುದಾರಿಕೆ ಶ್ಲಾಘನೀಯ.

ಗಣಪತಿ, ಗುಂಜಗೋಡ, ಪ್ರವೀಣಾ ಹೆಗಡೆ, ಪೂರ್ಣಚಂದ್ರ ಹೆಗಡೆ, ಶ್ರೀಪಾದ ಕೋಡನಮನೆ, ನಾಗಪತಿ ಭಟ್ ವಡ್ಡಿನಗದ್ದೆ, ಅಜಿತ ಭಟ್ ಹೆಗ್ಗಾರಳ್ಳಿ, ಶಮಂತ ಹೆಗಡೆ, ಶುಭಾ ರಮೇಶ ಮುಂತಾದವರ ರಂಗಪ್ರಜ್ಞೆಯುಳ್ಳ ಭಾವಾಭಿವ್ಯಕ್ತಿ ಖುಷಿ ನೀಡಿತು.



ಹೋರಿ ತಡೆಯುವ ಸ್ಪರ್ಧೆ
ಚಿತ್ರ: ನಾಗೇಂದ್ರ ಮುತ್ಮುರ್ಡು

ವೈವಿಧ್ಯಮಯ ದೀಪಾವಳಿ

10ನೇ ಪುಟದಿಂದ...

ಪೂಜೆಯ ಅಂತ್ಯದಲ್ಲಿ ಹೋಳಿಗೆ, ದೋಸೆ, ಚರುವುಗಳನ್ನು ಒಂದೊಂದು ಬುಟ್ಟಿಯಲ್ಲಿ ತುಂಬಿ ಪ್ರತಿ ಹಸುವಿನ ಮುಂದಿಟ್ಟಾಗ ಸಿಟ್ಟಿನಿಂದ ಬುಸುಗುಡುವ ಹಸುಗಳೂ ಶಾಂತವಾಗುತ್ತಿದ್ದವು. ಗೋಪೂಜೆ ಮುಗಿದ ಮೇಲೆ ಸುತ್ತು ಪೂಜೆ. ಬಾವಿ, ಹೊಸ್ತಿಲು, ಕೃಷಿ ಪರಿಕರಗಳು, ಪಣತ, ತುಳಸಿಕಟ್ಟೆ, ವಾಹನಗಳು, ಒಲೆ... ಹೀಗೆ ಎಲ್ಲವುಗಳನ್ನೂ ಪೂಜಿಸುತ್ತಿದ್ದರು. ಅಂದು ಕುಡಿಬಾಳೆಲೆಯಲ್ಲಿ ಬಡಿಸಿದ ಹೋಳಿಗೆಯೂಟ ಸವಿಯುವ ಯೋಗ.

ಸಂಜೆ ಊರ ಹೊರಗಿರುವ ಶಿವನ ದೇವಸ್ಥಾನದಲ್ಲಿ ಸಾಮೂಹಿಕವಾಗಿ ಊರಿನವರೆಲ್ಲ ಪೂಜೆ ಸಲ್ಲಿಸುವ ಕ್ರಮ ಇತ್ತು. ದೇವಸ್ಥಾನದ ಎದುರಿನ ಬಯಲಿನಲ್ಲಿ ಊರಿನಲ್ಲಿರುವ ಎಲ್ಲರ ಮನೆಯ ಹೋರಿ, ಎತ್ತುಗಳಿಗೆ ಚೌಲ ಕಟ್ಟಿ ಅಲಂಕರಿಸಿ ಬಿಡುತ್ತಿದ್ದರು. ಗೋವಳ ಸಡಿಲವಾಗಿ ಹಿಡಿದ ಹಗ್ಗವನ್ನು ಲೆಕ್ಕಿಸದೇ ಅವು ಚಂಗು ಚಂಗೆಂದು ಜಿಗಿದಾಡುತ್ತಿದ್ದವು. ಸಾಹಸಿ ಯುವಕರು ಅವುಗಳ ಕೊರಳಿನಲ್ಲಿರುವ ಹಣ್ಣಡಿಕೆ ಮಾಲೆಗಳನ್ನು ಹರಿಯುತ್ತಿದ್ದರು. ಹೆಚ್ಚು ಮಾಲೆಗಳನ್ನು ಹರಿದವ ಎಲ್ಲರ ಕಣ್ಣಿನಲ್ಲಂದು ಪರಾಕ್ರಮಿ.

ಸಂಜೆ ಗದ್ದೆಯಿಂದ ತಂದ ಭತ್ತದ ತೆನೆಗಳನ್ನು ಮನೆ ದೇವರ ಮಂದಿಟ್ಟು ಪೂಜಿಸಿ 'ಕದಿರ ತಂದ ಸುಗುಣಬಾಲ ಭರದಿ ನೋಡಿರೆ....' ಎಂದು ಹಾಡುತ್ತಿದ್ದರು. ಸಿಂಡ್ಲೆಕಾಯಿ ಆರತಿ ಮಾಡುತ್ತಿದ್ದರು. ಭತ್ತದ ಕದಿರು, ಮಾವಿನೆಲೆಗಳನ್ನು ನಾರಿನಲ್ಲಿ ಕಟ್ಟಿ ಹೊಸ್ತಿಲಿಗೆ ತೋರಣ ಕಟ್ಟುತ್ತಿದ್ದರು. ಮೊಳ ಉದ್ದದ ಕೋಲುಗಳಿಗೆ ಬಟ್ಟೆ ಸುತ್ತಿ ಎಣ್ಣೆಯಲ್ಲಿ ಅದ್ದಿ ದೊಂದಿಗಳನ್ನು ತಯಾರಿಸಿ, ಬೆಳಗಿಸಿ, ಸಮೃದ್ಧಿಯ ಸಂಕೇತವಾದ ಗೊಬ್ಬರ ಗುಂಡಿ ಅಂಚಿನಲ್ಲಿ, ಹೊಸ್ತಿಲ ಮುಂದೆ ತುಳಸಿಯ ಮುಂದೆ ಚುಚ್ಚಿಡುತ್ತಿದ್ದರು. ರಾತ್ರಿ ಮನೆಯ ಮುಂದೆ ತುಳಸಿಕಟ್ಟೆಯೆದುರು, ದೇವರ ಮುಂದೆ ಸಾಲಾಗಿ ಹಣತೆಗಳನ್ನು ಬೆಳಗಿ, ತಮವನ್ನು ಕಳೆದು ಬಾಳು ಬೆಳಕಾಗಲಿ ಎಂದು ಪ್ರಾರ್ಥಿಸುತ್ತಿದ್ದರು. ಬಲಿವೇಂದ್ರನನ್ನು (ಪೂಜೆಗೆ ಬಳಸಿದ ಅಡಿಕೆ ಸಿಂಗಾರ) 'ಮುಂದಿನ ವರ್ಷ ಬಾರೋ' ಎಂದು ಮನೆ ಮಾಡಿಗೆ ಒಗೆದರೆ ಹಬ್ಬಕ್ಕೆ ಮಂಗಳ ಹಾಡಿದಂತಾಗುತ್ತಿತ್ತು. ಪೂಜೆಗೆ ಬಳಕೆಯಾದ ಬಾಳೆಕಂದು, ಮಾವಿನೆಲೆ, ಹೂವುಗಳೆಲ್ಲ ಮರುದಿನಗೊಬ್ಬರ ಗುಂಡಿಗೆ ಸೇರಿ ನಿಧಾನವಾಗಿ ಕಳಿತು ತೋಟದ ಮರಗಳನ್ನು ಕಸುವಾಗಿಸಲು ನೆರವಾಗುತ್ತಿತ್ತು.

ಹಲವು ಊರುಗಳಲ್ಲಿ ಇಂದಿಗೂ ಸರಿ ಸುಮಾರಾಗಿ ಹೀಗೆಯೇ ಹಬ್ಬದ ಆಚರಣೆ ನಡೆಯುತ್ತಿದೆಯಾದರೂ, ಇತ್ತೀಚೆಗೆ ಮಲೆನಾಡಿನ ಕೃಷಿಕರ ಮನೆಯ ಅವಿಭಾಜ್ಯ ಅಂಗವಾಗಿದ್ದ ಕೊಟ್ಟಿಗೆಗಳೇ ಕಾಲನ ಕಾಲ್ತುಳಿತಕ್ಕೆ ಸಿಕ್ಕು ನಶಿಸುತ್ತಿವೆ. ಗೋವುಗಳಿಲ್ಲದ, ಗೋಪೂಜೆ ಮಾಡದ ಮನೆಗಳಲ್ಲೀಗ ದೊಡ್ಡ ಹಬ್ಬ ದೀಪಾವಳಿಯಾಗಿ ರೂಪಾಂತರಗೊಳ್ಳುತ್ತಿರಬಹುದು. ಕಾಲಾಯ ತಸ್ಮೈ ನಮಃ. ಜ್ಞಾನದ ಸಂಕೇತವಾದ ಬೆಳಕು ನಿತ್ಯದ ಹಂಬಲವಾಗಲಿ.

ದೀವಳಿಗೆಯೂ.. ಫಳಾರ ಸವಿಯೂ..

10ನೇ ಪುಟದಿಂದ...

ಈ ದ್ವಿದಳ ಧಾನ್ಯ, ಎಣ್ಣೆಕಾಳು ಕೊಡುವುದರಿಂದ ಆರೋಗ್ಯ, ಆಯಸ್ಸು ಸಮೃದ್ಧವಾಗುವುದು. ಕೊಟ್ಟವರಿಗೂ, ಪಡೆದವರಿಗೂ, ಸೇವಿಸಿದವರಿಗೂ ಒಳಿತಾಗುವುದು ಎಂಬ ನಂಬಿಕೆ ಇದೆ.

ಫಳಾರ ಹಂಚುವುದಲ್ಲ, ಬೀರುವುದು

ಫಳಾರವನ್ನು ನೀಡಲೂ ಒಂದು ಪದ್ಧತಿ ಇದೆ. ತಟ್ಟೆಯಲ್ಲಿ ಎಲ್ಲವನ್ನೂ ಜೋಡಿಸಿಟ್ಟುಕೊಂಡು, ಮೇಲುವಸ್ತ್ರದಿಂದ ಅದನ್ನು ಮುಚ್ಚುತ್ತಾರೆ. ಈ ಮೇಲುವಸ್ತ್ರವನ್ನು ಬಣ್ಣ ಬಣ್ಣದ ಉಣ್ಣೆಯಿಂದ ನೇಯ್ದಿರುತ್ತಾರೆ. ಚೌಕಾಕಾರ, ವೃತ್ತಾಕಾರ, ಅಂಡಾಕಾರದಲ್ಲಿ. ಅಕ್ಟೋಬರ್ ರಜೆಗೆ ಬರುವ ಮಕ್ಕಳಿಗೆಲ್ಲ ಇದನ್ನು ನೇಯುವುದನ್ನೂ ಕಲಿಸಿರುತ್ತಾರೆ. ಚೌಕಾಕಾರದಲ್ಲಿದ್ದರೆ ಚೌಕ ಅಂತಲೇ ಕರೆಯೋದು. ಬಿಳಿ ಬಣ್ಣದ್ದಿದ್ದರಂತೂ ಒಂದ್ಹತ್ತು ಸಲ ಹೇಳ್ತಾರೆ. ಬೀಳಿಸಿಕೊಂಡು ಬರಬೇಡಿ ಅಂತ. ಆ ಮೇಲುವಸ್ತ್ರ ಐದಾರು ಮನೆ ಓಡಾಡುವುದರಲ್ಲಿ ಅದನ್ನು ಮುಟ್ಟಿದರೂ ಅವಲಕ್ಕಿ, ಉಂಡೆಯ ವಾಸನೆ ಬೀರುವಂತಾಗಿರುತ್ತದೆ. ಐದಾರು ಮನೆಗಳಿಗೆ ಈ ಫಳಾರವನ್ನು ಮನೆ ಮಗಳು, ಹೊಸದಾಗಿ ಬಂದಿರುವ ಸೊಸೆಯ ಕೈಲಿ ಬೀರಿಸುತ್ತಾರೆ. ಹಬ್ಬಗಳಿರುವುದೇ ಹಂಚಿ ಉಣ್ಣಲು. ಹೀಗೆ ಹಂಚಿ ತಿನ್ನುವ ಸುಖದಲ್ಲಿ ಕೆಲವು ಖಾದ್ಯಗಳು ಕಣ್ಮರೆಯಾಗಿವೆ. ಹೊಸ ಖಾದ್ಯಗಳು ಸ್ಥಳ ಪಡೆದಿವೆ. ಆದರೆ ಬಾಂಧವ್ಯ ಬೆಸೆಯುವಲ್ಲಿ ಈ ಫಳಾರ ಈಗಲೂ ಬದುಕು ಸವಿಯುವಂತೆ ಮಾಡುತ್ತದೆ.



ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಅಚಿನ್ನಿದ್ರೆ

ಅಚಿನ್ನಿದ್ರೆ (ನಾ). ಜಡತೆ ತುಂಬಿದ ನಿದ್ದೆ; ಎಚ್ಚರಗೊಳಿಸಲಾಗದ ನಿದ್ದೆ.
(ಸಂ. ಅಚಿತ್ + ನಿದ್ರಾ)

ಗುರು ವಿಶ್ವಾಮಿತ್ರರೊಡನೆ ಕಾಡಿನಲ್ಲಿ ರಾಮ ಲಕ್ಷ್ಮಣರು ಸಾಗುವಾಗ ಗೌತಮ ಮಹಾಮುನಿಯ ಶಾಪದಿಂದ ಅಹಲ್ಯೆ ಬಂಡೆಯಾಗಿರುವ ಪ್ರದೇಶಕ್ಕೆ ಬರುತ್ತಾರೆ. ಅವಳ ಸ್ಥಿತಿಯನ್ನು ಕುವೆಂಪು ಅವರು ಹೀಗೆ ಚಿತ್ರಿಸಿದ್ದಾರೆ.

ಕನಿಕರದ
ಕಣ್ಗೆ ಬಾಹಿರೆಯಾಗಿ, ಜಗದ ನಿರ್ದಾಕ್ಷಿಣ್ಯ
ವಿಸ್ಮೃತಿಗೆ ತುತ್ತಾಗಿ, ವಜ್ರಮೌನದ ಅಚಿನ್
ನಿದ್ರೆಯಿಂದೆಳ್ಚರುವ ಬಯಕೆಯಿಂದೊರಗಿರ್ದ
ಸುಕ್ಷೇತ್ರಮಂ ಪ್ರವೇಶಿಸಿದುದೆ ತಡಂ, ಮರುಗಿ
ಕರಗಿದುದು ರಾಮಾತ್ಮವನಿಮಿತ್ತ ಶೋಕದಿಂ

ಅಹಲ್ಯೆಯಲ್ಲಿ ಚೈತನ್ಯ ಮರೆಯಾಗಿದೆ. ಅವಳು ಜಡತ್ವಕ್ಕೆ ಒಳಗಾಗಿದ್ದಾಳೆ. ಅದು ಅಚಿನಿದ್ರೆ. ಆ ಸುಕ್ಷೇತ್ರ ಪ್ರವೇಶಿಸಿದ ತಕ್ಷಣ ರಾಮನ ಆತ್ಮ ಮರುಗಿ ಕರಗಿತು.

ಇದೇ ಪದವನ್ನು ಅವರು 'ಅಗ್ನಿಹಂಸ' ಕವನ ಸಂಕಲನದ 'ಋತ ಚಿನ್ಮಯೀ ಜಗನ್ಮಾತೆಗೆ' ಕವನದಲ್ಲಿ ಆ ಜಗನ್ಮಾತೆಯನ್ನು ಪ್ರಾರ್ಥಿಸುವಾಗ ಹೀಗೆ ಬಳಸಿದ್ದಾರೆ:

ಎಲ್ಲವನು ಮಾಡಿ ಎಲ್ಲರೊಳಗೂಡಿ
ನೀನೆಯೆಲ್ಲವಾದೆ
ಜ್ಯೋತಿಯಾದರೂ ತಮೋಲೀಲೆಯಲಿ ಜಡದ
ಮದ್ರೆಯಾದೆ.
ಎನಿತು ಕರೆದರೂ ಓಕೊಳ್ಳದಿರುವೆ
ಅಚಿನ್ನಿದ್ರೆಯಾದೆ;
ಬೆಳಗಿ ನನ್ನಾತ್ಮಕಿಳಿದು ಬಾ, ತಾಯಿ, ನೀನೆ
ಬ್ರಹ್ಮಬೋಧೆ.

ಕುರಂಗತನು

ಕುರಂಗತನು (ಗು). ಜಿಂಕೆಯ ಶರೀರವನ್ನು ತಾಳಿದ; ಜಿಂಕೆಯಂತೆ ವೇಷವನ್ನು ಹೊಂದಿದ

ಮಾರೀಚನು ಕಾಮರೂಪದಿಂದ ಜಿಂಕೆಯ ಶರೀರವನ್ನು ಹೊಂದಿ ಸೀತೆಯ ಮುಂದೆ ಸುಳಿದಾಡಿದನು ಎನ್ನುವುದನ್ನು ವರ್ಣಿಸುವಾಗ ಕುವೆಂಪು 'ಕುರಂಗತನು' ಪದ ರೂಪಿಸಿದ್ದಾರೆ.

ಕೊಂಕಿಸುತೆ
ಕೊರಳ ಬಿಂಕವನಕ್ಷಿಯಕ್ಷಿಣಿಯ ಬೇಟದಿಂ
ಬನಮೆಲ್ಲಮಂ ಗೋರಿಗೊಳ್ಳುತೆ ಕುರಂಗತನು
ಮಾರೀಚನಭಿನಯಿಸಿದನು ತನ್ನ
ಪಾತ್ರಮಂ.

ಟಾಂಗ ಏರಿ ಮೈಸೂರು ನೋಡಿ...



10ನೇ ಪುಟದಿಂದ...

ವಾಹನ ಸೌಲಭ್ಯವಿಲ್ಲದ ಆ ದಿನಗಳಲ್ಲಿ ಟಾಂಗಗಳೇ ಸಾರ್ವಜನಿಕ ಸಾರಿಗೆಯಾಗಿದ್ದವು. ನಗರ ಸೇರಿದಂತೆ ವಿವಿಧ ಬಡಾವಣೆಗಳಿಗೆ ಪ್ರಯಾಣಿಕರನ್ನು ಕರೆದೊಯ್ಯುವ ಪ್ರಮುಖ ಸಾಧನವಾಗಿದ್ದವು. ಹೀಗಾಗಿಯೇ ಮೈಸೂರು ಎಂದಾಕ್ಷಣ 'ಟಕ.. ಟಕ...' ಸದ್ದು ಮಾಡುತ್ತಾ ಓಡುವ ಟಾಂಗಗಳ ಚಿತ್ರಣ ಹಿರೀಕರ ಕಣ್ಮುಂದೆ ಹಾದು ಹೋಗುತ್ತದೆ.

ಮೈಸೂರಿನಲ್ಲಿ ವಾಹನ ಸೌಲಭ್ಯವಿಲ್ಲದ ದಿನಗಳಲ್ಲಿ ಎತ್ತಿನಗಾಡಿಯಲ್ಲಿ ಜನರು ಸಾಗುತ್ತಿದ್ದರಾದರೂ ಟಾಂಗಗಳು ಬಂದಿದ್ದು ಮಹಾರಾಜರ ಕಾಲದಲ್ಲಿ. ಅಂದರೆ 1897 ಎಂದು ಹೇಳಲಾಗಿದೆ. ಅಂದಿನ ದಿನಗಳಲ್ಲಿ ಟಾಂಗಗಳು ಜನಪ್ರಿಯತೆ ಪಡೆದಿದ್ದವು. ಜತೆಗೆ ಟಾಂಗಗಳಲ್ಲಿ ತೆರಳುವುದೆಂದರೆ ಪ್ರತಿಷ್ಠೆಯ ಸಂಕೇತವೂ ಆಗಿತ್ತು. ಇದರ ಉಸ್ತುವಾರಿಯನ್ನು ಮುನ್ಸಿಪಾಲಿಟಿ ವಹಿಸಿಕೊಂಡಿತ್ತು. ದೂರದ ಊರುಗಳಿಗೆ ತೆರಳುವವರು ಮುನ್ಸಿಪಾಲಿಟಿಗೆ ಬಾಡಿಗೆ ನೀಡಿ ಟಾಂಗದಲ್ಲಿ ಹೋಗಬೇಕಿತ್ತು.

ಮೈಸೂರು ನಗರದಲ್ಲಿ ಕೆಲ ವರ್ಷಗಳ ಹಿಂದೆ 600ಕ್ಕೂ ಹೆಚ್ಚು ಟಾಂಗಗಳು ಓಡಾಡುತ್ತಿದ್ದವು. ಈಗ ಅವುಗಳ ಸಂಖ್ಯೆ ಕಡಿಮೆಯಾಗಿದೆ. ಕೇವಲ 60-80 ಟಾಂಗವಾಲಾಗಳು ಕೆಲಸ ಮಾಡುತ್ತಿದ್ದಾರೆ. ದಸರಾ ಸಮಯದಲ್ಲಿ ಇವರಿಗೆ ಒಳ್ಳೆಯ ಸಂಪಾದನೆ ಆಗುತ್ತದೆ. ಆಮೇಲೆ ವಾರಾಂತ್ಯ ಹಾಗೂ ರಜಾದಿನಗಳಲ್ಲಿ ಜೇಬು ತುಂಬುತ್ತದೆ. ಉಳಿದ ಸಮಯದಲ್ಲಿ ಇದೇ ಮಾತನ್ನು ಹೇಳಲು ಬರುವುದಿಲ್ಲ. ಹೀಗಿದ್ದರೂ ಮೈಸೂರು ಪರಂಪರೆಯ ಭಾಗವಾಗಿ ಟಾಂಗ ಸಂಸ್ಕೃತಿ ಇನ್ನೂ ಉಸಿರಾಡುತ್ತಿದೆ ಎನ್ನುವುದೇ ಸಮಾಧಾನ.

ಮುನ್ನೋಟ 27-10-2024 ರಿಂದ 02-11-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆದಾಯ ಉತ್ತಮವಾಗಿರುತ್ತದೆ. ಬಂಧುಗಳ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ನಿಮಗೆ ಅನುಕೂಲವಿದ್ದರೂ ಕೆಲವು ಬಂಧುಗಳು ಅದನ್ನು ವಿರೋಧಿಸುವರು. ಕೃಷಿಯಿಂದ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಕೆಲವು ಉದರ ಸಂಬಂಧಿ ದೋಷಗಳು ಕಾಣಿಸಬಹುದು, ಎಚ್ಚರವಹಿಸಿ. ಸಂಗಾತಿ ಕಡೆಯವರು ನಿಮ್ಮನ್ನು ವಿರೋಧಿಸಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮ ಒಳ್ಳೆಯ ಕೆಲಸಗಳಿಗೆ ಸಮಾಜದಿಂದ ಗೌರವ ದೊರೆಯುವ ಸಾಧ್ಯತೆ ಇದೆ. ಆದಾಯವು ಸಾಮಾನ್ಯ ಸ್ಥಿತಿಯಲ್ಲಿರುತ್ತದೆ. ಕೆಲಸ ಕಾರ್ಯಗಳಿಗೆ ಬಂಧುಗಳ ಅಥವಾ ಸ್ನೇಹಿತರಿಂದ ಅಡ್ಡಿಯಾಗಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಇರುತ್ತದೆ. ಸರ್ಕಾರಿ ಸಾಲಗಳನ್ನು ಈಗ ತೀರಿಸಬಹುದು ಅಥವಾ ಪರಿವರ್ತನೆ ಮಾಡಿಕೊಳ್ಳಬಹುದು. ಸಂಗಾತಿಯಿಂದ ಆರ್ಥಿಕ ಸಹಕಾರ ನಿರೀಕ್ಷೆ ಮಾಡಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಬುದ್ಧಿವಂತಿಕೆ ನಿಮ್ಮಲ್ಲಿ ಮನೆ ಮಾಡಿರುತ್ತದೆ. ಆದಾಯವು ಕಡಿಮೆ ಇದ್ದರೂ ಅದರ ನಿರ್ವಹಣೆಯನ್ನು ಸರಿಯಾಗಿ ಮಾಡುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಕಾಲ. ಅದರಲ್ಲೂ ಗಣಿತ ವಿದ್ಯಾರ್ಥಿಗಳಿಗೆ ಬಹಳ ಅಭಿವೃದ್ಧಿ ಇರುತ್ತದೆ. ಮಹಿಳೆಯರು ನಡೆಸುವ ಹಣಕಾಸಿನ ವ್ಯವಹಾರಗಳಲ್ಲಿ ಅಷ್ಟು ಅಭಿವೃದ್ಧಿ ಇರುವುದಿಲ್ಲ. ಸಂಗಾತಿಯ ಸಂತೋಷಕ್ಕಾಗಿ ಹಣ ಖರ್ಚಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಸಮಾಧಾನದಿಂದ ಇರುವುದು ನಿಮಗೆ ಒಳ್ಳೆಯದು. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ನಿಮ್ಮ ಧರ್ಮಕಾರ್ಯಗಳಿಗೆ ಹಿರಿಯರಿಂದ ಸಹಾಯ ದೊರೆಯುತ್ತದೆ. ಸರ್ಕಾರ ಅಥವಾ ಸಂಘ ಸಂಸ್ಥೆಗಳಿಂದ ಆಸ್ತಿ ಪಡೆಯುವ ಯೋಗವಿದೆ. ಫ್ಯಾಶನ್ ಡಿಸೈನ್ ಓದುತ್ತಿರುವವರಿಗೆ ಬಹಳ ಅಭಿವೃದ್ಧಿ ಇರುತ್ತದೆ. ಹಳೆಯ ಸಾಲಗಳನ್ನು ಈಗ ತೀರಿಸಿಕೊಳ್ಳಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಈ ವಾರದ ಆರಂಭ ಬಹಳ ಆನಂದದಾಯಕವಾಗಿರುತ್ತದೆ. ಆದಾಯವು ಕಡಿಮೆ ಇದ್ದರೂ ಬೇರೆ ಮೂಲಗಳಿಂದ ಸ್ವಲ್ಪ ಆದಾಯ ಬರುತ್ತದೆ. ಭೂ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆಯುತ್ತದೆ. ಸಂಗಾತಿ ಆರೋಗ್ಯದ ಬಗ್ಗೆ ಹೆಚ್ಚು ಗಮನ ಕೊಡುವುದು ಒಳ್ಳೆಯದು. ಹಿರಿಯರಿಂದ ಕೃಷಿ ಭೂಮಿ ಲಭಿಸುವ ಸಾಧ್ಯತೆ ಇದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಸ್ತ್ರೀಯರು ವಿರೋಧಿಗಳಾಗುವರು. ಆಸ್ತಿ ಖರೀದಿ ಬಗ್ಗೆ ಆಲೋಚನೆ ಆರಂಭಿಸಬಹುದು. ಮಕ್ಕಳು ನಿಮ್ಮ ಮಾತನ್ನು ಕೇಳದಿರಬಹುದು. ಕೆಲವರ ಮಕ್ಕಳಿಗೆ ವಿದ್ಯೆಯಲ್ಲಿ ಆಸಕ್ತಿ ಕಡಿಮೆಯಾಗುತ್ತದೆ. ಹಳೆಯ ನೋವುಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಹುಂಬತನ ನಿಮ್ಮನ್ನು ಚಿಂತೆಗೀಡು ಮಾಡುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಆದಾಯವು ಸ್ವಲ್ಪ ಚೇತರಿಕೆಯತ್ತ ತಿರುಗುತ್ತದೆ. ನಿಮ್ಮ ಧಾರ್ಮಿಕತೆಯ ಸೊಗನ್ನು ಕೆಲವರು ವಿರೋಧಿಸುವರು. ಆಸ್ತಿ ವಿಚಾರಗಳಲ್ಲಿ ಅತಿಯಾದ ಆತುರ ಬೇಡ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಚರ್ಮರೋಗಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಸಹಾಯದಿಂದ ಉದ್ಯೋಗದಲ್ಲಿ ಸ್ಥಿರತೆಯನ್ನು ಕಾಣಬಹುದು. ಅದಿರು ಮಾರಾಟಗಾರರಿಗೆ ಅನಿರೀಕ್ಷಿತ ಲಾಭವಿರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಸಂಗೀತಗಾರರಿಗೆ ವಿಶೇಷವಾದ ಗೌರವ ದೊರೆಯುತ್ತದೆ. ಆದಾಯವು ನಿರೀಕ್ಷಿತ ಹಂತಕ್ಕೆ ಬಂದು ತಲುಪುತ್ತದೆ. ಉತ್ತಮವಾಗಿ ಮಾತನಾಡಿ ಜನರನ್ನು ಗೆಲ್ಲುವಿರಿ. ನಿಮ್ಮ ಶತ್ರುಗಳು ಅವರಾಗಿಯೇ ಸುಮ್ಮನಾಗುವರು. ಆಸ್ತಿ ವಿಚಾರದಲ್ಲಿ ಸಾಕಷ್ಟು ತಾಳ್ಮೆಯಿಂದಿರಿ ಮತ್ತು ದಾಖಲೆಗಳ ಪರಿಶೀಲನೆ ಅತಿ ಅಗತ್ಯ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಆದಾಯ ಕಡಿಮೆ ಇದ್ದು ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ವಾಹನ ರಿಪೇರಿ ಮಾಡುವವರಿಗೆ ಹೆಚ್ಚು ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ವಿದೇಶದಲ್ಲಿರುವವರಿಗೆ ಅವರ ನಿರೀಕ್ಷೆಯ ಆಸ್ತಿ ಕಡಿಮೆ ಬೆಲೆಗೆ ದೊರೆಯಬಹುದು. ವಿದ್ಯಾರ್ಥಿಗಳು ಹೆಚ್ಚು ಶ್ರಮವಹಿಸಿದ್ದಲ್ಲಿ ಮಾತ್ರ ಸೂಕ್ತ ಫಲಿತಾಂಶ ಸಿಗುತ್ತದೆ. ಲೇವಾದೇವಿ ಮಾಡುವವರಿಗೆ ಹಿನ್ನಡೆಯಾಗುವ ಸಂದರ್ಭವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಶ್ರಮದಿಂದ ನೀವು ಹಣ ಗಳಿಕೆ ಮಾಡುವಿರಿ. ನಿಮ್ಮ ಸಂಬಂಧಿಗಳೇ ನಿಮ್ಮ ಕೆಲಸ ಕಾರ್ಯಗಳಲ್ಲಿ ಅಡ್ಡಿ ಬರುವರು. ಭೂಮಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಸಂಸಾರದಲ್ಲಿ ಸಾಕಷ್ಟು ನೆಮ್ಮದಿಯನ್ನು ಕಾಣಬಹುದು. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಂಡು ಮೇಲ್ದರ್ಜೆಗೆ ಏರಬಹುದು. ವಂಶವಾಹಿಯಾಗಿ ಬಂದ ಕಾಯಿಲೆಗಳು ಕೆಲವರನ್ನು ಕಾಡುತ್ತವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಶ್ರಮಪಟ್ಟು ದುಡಿಯಲೇಬೇಕಾದ ಅನಿವಾರ್ಯತೆ ಇರುತ್ತದೆ. ಆದಾಯವು ಕಡಿಮೆ ಇದ್ದರೂ ವಿದೇಶಿ ಮೂಲಗಳಿಂದ ಆದಾಯ ಹೆಚ್ಚಿಸಿಕೊಳ್ಳಬಹುದು. ಬಂಧುಗಳಲ್ಲಿ ಕೆಲವರು ನಿಮ್ಮ ಕೆಲ ಸಕಾರ್ಯಗಳಿಗೆ ಪೂರಕವಾಗುವಂತೆ ಕಂಡರೂ ಒಳಗೊಳಗೆ ಅಡ್ಡಿಮಾಡುವರು. ಹಿರಿಯರನ್ನು ಓಲೈಸಿದಲ್ಲಿ ನಮ್ಮ ಕೆಲಸ ಕಾರ್ಯಗಳು ಸರಾಗವಾಗಿ ಆಗುವುವು. ಪಾಲುದಾರಿಕೆ ವ್ಯವಹಾರಗಳಲ್ಲಿ ಎಚ್ಚರವಾಗಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವಾಹನ ವಿತರಣೆ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಹರಿತವಾದ ಮಾತಿನಿಂದ ಎಲ್ಲರನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಪ್ರಯತ್ನ ಪಡುವಿರಿ. ಹಿರಿಯರನ್ನು ಓಲೈಸಿಕೊಂಡು ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ಆಸ್ತಿ ವ್ಯವಹಾರಗಳಲ್ಲಿ ಅಂತಹ ಲಾಭವಿರುವುದಿಲ್ಲ. ಕೃಷಿ ವಿಜ್ಞಾನವನ್ನು ಓದುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇದೆ. ತಾಯಿಗಾಗಿ ನೀವು ಹಣ ಖರ್ಚು ಮಾಡಬೇಕಾಗುತ್ತದೆ.

ಪದಬಂಧ 2864



ಮೇಲಿನಿಂದ ಕೆಳಕ್ಕೆ

1. ನೀನಿಲ್ಲದೆ ಹುಲ್ಲುಕೂಡ ಚಲಿಸದು ಎಂಬ ಹಾಡಿನಾರಂಭ 4
2. ಶುಚಿತ್ವದ ಆಚಾರ: ಸಾಹಿತ್ಯದಲ್ಲಿ ಕೂಡದು ಎಂದು ಹಲವರ ವಾದ 5
3. ಹೃದಯಂಗಮ ದೃಶ್ಯ ಮತ್ತು ವಿಷಯಗಳಿಂದ ಉಂಟಾಗುವ ಅಂತರ್ಯದ ಅಲುಗಾಟ 5
4. ತಾಪದ ಬೇಗೆಯಲ್ಲಿ ಸಿಟ್ಟು 4
8. ಕರಂ-ಕುರಂ ಎಂದು ಬಾಯಾಡಿಸುವ ತಿನಿಸು 5
10. ಹೀನ ಸ್ಥಿತಿಯಿಂದ ಮಾತುಮೂಕವಾದ ಶೋಷಿತ 5
11. ಅನುಕಂಪದಿಂದಲೂ ಉಂಟಾಗಬಹುದಾದ ನಡುಕ 3
13. ಅಲ್ಪ ಪ್ರಾಣದ ಅಚ್ಚ ಬಿಳಿ 3
14. ಚಾಕುವಿನಿಂದ ಹರಿಯಲು ಬೇಕಾಗುವ ಮೊನಚು 3
17. ಒಳಗಿನಿಂದ ಬರುವ ತಾಯಿಯ ನಂಟಿನ ಕೂಗು 5
18. ಸರಿಸಿಜಾಕ್ಷ ಪಡೆದ ಬಲ ಈ ಎಲ್ಲಾ ಒಂಭತ್ತು ಆಕಾಶಕಾಯಗಳದ್ದು 5
19. ದಿವ್ಯ ಪದಗಳನ್ನು ಉಚ್ಚರಿಸಿ ಮಾಯಮಾಡುವವ 4
21. ನವೋದಯ ಸಾಹಿತ್ಯದ ಕೂಸಾಗಿ ಹೊಸಮನೆಯಲ್ಲಿ ಹುಟ್ಟಿದ್ದು 4

ಎಡದಿಂದ ಬಲಕ್ಕೆ

1. ಉತ್ತಮ ಅಧಮರ ನಡುವೆ ನಿಂತವ 3
5. ಹಾಡುಗಾರಿಕೆಯಿಂದ ಮೋಡಿ ಮಾಡುವವನಿಗೆ ನೀಡಬಹುದಾದ ಬಿರುದು 5
6. ನೈಸಾಗಿ ನಿರ್ವಹಿಸುವ ಚಾಕಚಕ್ಯತೆ 5
7. ಬೇಂದ್ರೆ ವೈಣಿಕರಾಗಿ ಮೀಟಿದ ಕಾವ್ಯ ಸಂಕಲನ 4
9. ನೂರು ಸಾವಿರ ಹಣತೆಯ ಬೆಳಗು 4
12. ಹಳೆಯದನ್ನು ಮತ್ತೆ ಹೊರತೆಗೆದು ಪ್ರಚೋದಿಸು 3
15. ರಾಜ ಮತ್ತು ರಾಜಕಾರಣಿಗಳು ಬಯಸುವ ಹೊಗಳಿಕೆಯ ಉದ್ಘೋಷ 3
16. ಉರಿಯುತ್ತಿರುವ ಬೆಂಕಿ 3
17. ತುತ್ತತುದಿಯಲ್ಲಿ ಶೋಭಿಸುವ ಪೂರ್ಣ ಕುಂಭ 3
19. ಕಾಲು ಮಡಿಸಿ ಮೊಣಕಾಲಿನ ಮೇಲೆ ಕೂರು 4
20. ಸಾಹಿತ್ಯದಲ್ಲಿ ಮತ್ತು ನಗರಗಳಲ್ಲಿ ನಡೆವ ಚೌರ್ಯ 4
22. ಅ-ಉ-ಮ ಸಂಗಮದಿಂದ ಉಗಮಿಸಿದ ಪವಿತ್ರ ಬೀಜಾಕ್ಷರದ ಸ್ವರ ಗಾನ 5
23. ರಾಹು-ಕೇತುಗಳು ಸೂರ್ಯ-ಚಂದ್ರರನ್ನುಭೂಮಿಗೆ ಕಾಣದಂತೆ ಹಿಡಿದಿಡುವ ಸಮಯ 5
24. ಮನಸ್ಸು ಮತ್ತು ಇಂದ್ರಿಯಗಳ ಸಂಯಮ 3

ಪದಬಂಧ ಉತ್ತರ -2863

ಮೇಲಿಂದ ಕೆಳಕ್ಕೆ

1.ಮಳೆಗಾಲ 2.ವಿರಾಟರೂಪ 3.ಹರಶಂಕರ 4.ನವದಳ 9.ಸಹಾಯ 11.ತರಲೇ 12.ಹರಪಾರ್ವತಿ 13.ವಸಂತಮಾಸ 14.ಲಕ್ಷ್ಮೀಸಾಗರ 15.ಶರೀರವಾಣಿ

ಎಡದಿಂದ ಬಲಕ್ಕೆ

1. ಮಹಾದೇವಿ 3.ಹರಿದಿನ 5.ರಾಜೋಪಚಾರ 6.ಗಾಳಿಪಟ 7.ಶಂಖನಾದ 8.ರೂಪವರ್ಧಕ 9.ಸಮೀಪ 10.ರಜತ 12.ಹಯಗ್ರೀವ 14.ಲವಲೇಶ 16.ಸಂತಾನಲಕ್ಷ್ಮೀ 17.ಪಾರಿಜಾತ 18.ಸಾಲಗಾರ 19.ಮಾಧುರ್ಯರಾಗ 21.ತಿಮ್ಮರಸ 22.ರಮಾಮಣಿ



ಅರಮನೆ ಹೊರಗಿನ ನೋಟ

ಕೊಡಗಿನ ಅರಸನ ನಾಲ್ಕುನಾಡು ಅರಮನೆ

ಸಹನಾ ಕಾಂತಬೈಲು

ಮಡಿಕೇರಿ ಸಮೀಪವಿರುವ ಕಕ್ಕಬೆಯಲ್ಲಿರುವ ನಾಲ್ಕುನಾಡು ಅರಮನೆ ಅದರ ಸೌಂದರ್ಯದಿಂದ ಗಮನಸೆಳೆಯುತ್ತದೆ. ಕೊಡಗಿನ ಅರಸ ದೊಡ್ಡವೀರ ರಾಜೇಂದ್ರ ಈ ಅರಮನೆಯನ್ನು ನಿರ್ಮಿಸಿದನು. ಕೊಡಗು ಜಿಲ್ಲೆಯ ಪ್ರಮುಖ ಸ್ಮಾರಕಗಳಲ್ಲಿ ಇದೂ ಒಂದು.

ಮಡಿಕೇರಿಯಿಂದ ಮೂರ್ನಾಡು ರಸ್ತೆಯಲ್ಲಿ 40 ಕಿಲೊಮೀಟರ್ ಕ್ರಮಿಸಿದರೆ ಕಕ್ಕಬೆ ಎನ್ನುವ ಗ್ರಾಮ ಸಿಗುತ್ತದೆ. ಅಲ್ಲಿ ಇತಿಹಾಸ ಪ್ರಸಿದ್ಧ ನಾಲ್ಕುನಾಡು ಅರಮನೆ ಇದೆ. ಕೊಡಗಿನ ಅರಸ ದೊಡ್ಡವೀರ ರಾಜೇಂದ್ರ ಈ ಅರಮನೆಯನ್ನು ಕ್ರಿ.ಶ. 1792ರಲ್ಲಿ ನಿರ್ಮಿಸಿದನು. ಕೊಡಗು ಜಿಲ್ಲೆಯ ಮಹತ್ವದ ಕೆಲವೇ ಕೆಲವು ಸ್ಮಾರಕಗಳಲ್ಲಿ ಇದೂ ಒಂದು. ಅದರೊಳಗೆ ಸುತ್ತಾಡಿದಾಗ...

ಅರಮನೆ ಪ್ರವೇಶಕ್ಕೂ ಮೊದಲು ಸುಂದರ ಕೆತ್ತನೆಗಳಿರುವ ಎರಡಾಳೆತ್ತರದ ಬಾಗಿಲನ್ನು ಹೊಂದಿರುವ ಸಣ್ಣ ಕಟ್ಟಡವಿದ್ದು, ಈ ಮುಖ್ಯದ್ವಾರವನ್ನು ಹಾದು ಹೋದರೆ ಅಂಗಳ ಸಿಗುತ್ತದೆ. ಎದುರಿಗೆ ಮೋಹಕ ಅರಮನೆ ಕಾಣುತ್ತದೆ. ಅರಮನೆ ಕರ್ಗಲ್ಲಿನ ಅಡಿಪಾಯವನ್ನು ಹೊಂದಿದ್ದು ಸಂಪೂರ್ಣ ಮಣ್ಣು ಮತ್ತು ಸಾಗುವಾನಿ ಮರದಿಂದ ನಿರ್ಮಿಸಲಾಗಿದೆ. ಅರಮನೆಯ ಮುಂಭಾಗದಲ್ಲಿ ಚೌಕಾಕಾರದ ಆಕರ್ಷಕ ಕೆತ್ತನೆಗಳಿಂದ ಕೂಡಿದ ಸುಂದರ ಮಂಟಪವಿದೆ. ದೊಡ್ಡವೀರ ರಾಜೇಂದ್ರನ ಎರಡನೆಯ ಮದುವೆ ಈ ಮಂಟಪದಲ್ಲೇ ನಡೆಯಿತಂತೆ. ಅರಮನೆಯ ಪ್ರವೇಶದ್ವಾರದ ಮೆಟ್ಟಿಲಿನಲ್ಲಿ ದೊಡ್ಡವೀರ ರಾಜೇಂದ್ರ ಹಾಗೂ ರಾಣಿ ಚೆನ್ನಮ್ಮಳ ಪಾದದ ಅಚ್ಚನ್ನು ನೋಡಬಹುದು.

ಅರಮನೆ ಎರಡು ಅಂತಸ್ತುಗಳನ್ನು ಹೊಂದಿದೆ. ಅರಮನೆಯ ಕೆಳಭಾಗದ ಮೂಲೆಯಲ್ಲಿರುವ ಮೆಟ್ಟಿಲುಗಳ ಮೂಲಕ ಏರಿದರೆ ಮೊದಲ ಅಂತಸ್ತು ಸಿಗುತ್ತದೆ. ಈ ಅಂತಸ್ತು ಮೂರು ಹಾಲ್‌ಗಳಿಂದ ಕೂಡಿದ್ದು ಮರದ ಹಲಗೆಗಳನ್ನು ಜೋಡಿಸಿದ ಇಲ್ಲಿನ ನೆಲದಲ್ಲಿ ನಡೆಯುವುದೇ ಖುಷಿ. ಗಾಳಿ, ಬೆಳಕು ಹಾಗೂ ಗೋಡೆಗಳಲ್ಲಿ ಸುಂದರ ಚಿತ್ರಗಳಿಂದ ಕೂಡಿದ ಮೊದಲ ಹಾಲ್ ಅದ್ಭುತವಾಗಿದೆ. ಇದನ್ನು ಸಭಾಂಗಣ ಎಂದೂ ಕರೆಯುತ್ತಾರೆ. ಈ ಹಾಲ್‌ನ ತುದಿಯಲ್ಲಿ ಎತ್ತರದ ಕಟ್ಟೆ ಇದೆ. ಇಲ್ಲಿ ಕೂತು ರಾಜ ಸಭೆ ನಡೆಸುತ್ತಿದ್ದನಂತೆ. ಇದರ ಮೇಲ್ಚಾವಣಿಯಲ್ಲಿ ಸಾವಯವ ಬಣ್ಣ ಬಳಸಿ ರಚಿಸಿದ ಚಿತ್ತಾರಗಳು, ಮರದ ಕೆತ್ತನೆಗಳು ನೋಡುಗರನ್ನು ಭಾವಪರವಶಗೊಳಿಸುತ್ತವೆ. ಹಾಲ್‌ನ ಎರಡೂ ಬದಿಯಲ್ಲಿ ಇರುವ ಸರಳ ಕೆತ್ತನೆಯ ಕಂಬಗಳು ಅರಮನೆಯ ಚೆಲುವನ್ನು ಹೆಚ್ಚಿಸಿವೆ. ಇಡೀ ಅರಮನೆಯೇ ಇಂತಹ ಹಲವು ಕಂಬಗಳಿಂದ ಕೂಡಿದೆ. ಮೀಟಿಂಗ್ ಹಾಲ್‌ನಲ್ಲಿ ನಿಂತು ಹೊರಗೆ ಕಣ್ಣು ಹಾಯಿಸಿದರೆ ಪ್ರಕೃತಿಯ ವಿಹಂಗಮ ನೋಟ ಮನಸೆಳೆಯುತ್ತದೆ.



ಅರಮನೆಯ ಒಳಾಂಗಣ

ಅರಮನೆ ನೋಡಲು ಶುಲ್ಕ ಇಲ್ಲ. ಬೆಳಗ್ಗೆ 8 ರಿಂದ ಸಂಜೆ 6 ಗಂಟೆ ತನಕ ವಾರದ ಎಲ್ಲಾ ದಿನವೂ ತೆರೆದಿರುತ್ತದೆ. ಅರಮನೆಯನ್ನು ತೋರಿಸಲು ಪ್ರಾಚ್ಯ ವಸ್ತು ಸಂರಕ್ಷಣಾ ಇಲಾಖೆಯವರು ನೇಮಿಸಿದ ಒಬ್ಬರು ಗೈಡ್ ಇದ್ದಾರೆ.

ಮಧ್ಯದ ಹಾಲ್‌ನ ಎರಡೂ ತುದಿಯಲ್ಲಿ ಒಂದೊಂದು ಕೋಣೆಯಿದೆ. ಅದರಲ್ಲಿ ಒಂದು ರಾಜನ ಕೋಣೆ, ಇನ್ನೊಂದು ರಾಣಿಯ ಕೋಣೆ ಎಂದು ಗೈಡ್ ಹೇಳಿದರು. ರಾಜನ ಕೋಣೆಗೆ ಮೂರು ಬಾಗಿಲು ಇದ್ದರೆ, ರಾಣಿಯ ಕೋಣೆಗೆ ಒಂದು ಬಾಗಿಲು. ಬಾಗಿಲಿನ ಚೌಕಟ್ಟು ಆಕರ್ಷಕ ಕೆತ್ತನೆ ಕೆಲಸಗಳಿಂದ ಕೂಡಿದೆ. ರಾಜನ ಕೋಣೆಯಿಂದಲೇ ಎರಡನೆಯ ಅಂತಸ್ತಿಗೆ ಏರಬೇಕು. ಆದರೆ ರಾಜನ ಕೋಣೆ ಮತ್ತು ಎರಡನೆಯ ಅಂತಸ್ತನ್ನು ಏರಲು ಅನುಮತಿ ಇಲ್ಲ. ಈಗ ರಾಜರು ಬಳಸುತ್ತಿದ್ದ ಯಾವ ವಸ್ತುವೂ ಇಲ್ಲಿಲ್ಲ. ಅವನ್ನೆಲ್ಲ ಮಡಿಕೇರಿಯ ಮ್ಯೂಸಿಯಂಗೆ ಸ್ಥಳಾಂತರಿಸಲಾಗಿದೆ.

ಇಲ್ಲಿನ ಗೋಡೆಯಲ್ಲಿ ಸುಂದರ ಸ್ತ್ರೀಯ ಮೂರು ಚಿತ್ರಗಳನ್ನು ಕಾಣಬಹುದು. ರಾಣಿ, ರಾಜರ ಕೋಣೆಯ ಹಿಂಭಾಗದಲ್ಲಿ ಅಂದರೆ ಕೊನೆಯ ಹಾಲ್‌ನ ಎರಡೂ ತುದಿಯಲ್ಲಿ ಸ್ನಾನದ ಕೋಣೆಯಿದೆ. ರಾಜನ ಕೋಣೆಯ ಹಿಂದೆ ಇರುವ ಸ್ನಾನದ ಕೋಣೆಯ ಹಿಂಭಾಗದಲ್ಲಿ ಸಣ್ಣ ಚೌಕಾಕಾರದ ಎಡೆಯಿದ್ದು, ಅದಕ್ಕೆ ಏಣಿಯನ್ನು ಆನಿಸಲಾಗಿದೆ. ಇದರ ಮೂಲಕ ಇಳಿದರೆ ನೆಲಮಾಳಿಗೆ ಸಿಗುತ್ತದೆ.

ನೆಲಮಾಳಿಗೆಯಲ್ಲಿ ಎರಡು ಕತ್ತಲೆಯ ಕೋಣೆ ಇವೆ. ಒಂದು ಭಯ ಹುಟ್ಟಿಸುವ ಅತ್ಯಂತ ಕಗ್ಗತ್ತಲೆಯ ಕೋಣೆ. ಇಲ್ಲಿ ಬಾಗಿಲು ತೆರೆದೇ ಇದ್ದರೂ ಏನೇನೂ ಕಾಣಿಸುವುದಿಲ್ಲ. ಟಾರ್ಚ್ ಉರಿಸಿಯೇ ಒಳಗೆ ಏನಿದೆ ಎಂದು ನೋಡಬೇಕಷ್ಟೆ. ಇಲ್ಲಿ ಕೈದಿಗಳನ್ನು ಕೂಡಿಹಾಕುತ್ತಿದ್ದರು. ನೆಲಮಾಳಿಗೆಯ ಮಧ್ಯಭಾಗದ ಗೋಡೆಯಲ್ಲಿ ಒಂದು ರಂಧ್ರ ಕೊರೆದಿದ್ದಾರೆ. ಇಲ್ಲಿಂದ ನೋಡಿದರೆ ಅರಮನೆಯ ಹೊರಭಾಗ ತುಂಬ ದೂರದವರೆಗೆ ಕಾಣಿಸುತ್ತದೆ. ಬಂದೂಕಿನಿಂದ ಈ ರಂಧ್ರದ ಮೂಲಕ ಗುರಿಯಿಟ್ಟು ಹೊಡೆದರೆ ಮುಖ್ಯದ್ವಾರದಲ್ಲಿ ಪ್ರವೇಶಿಸುವ ಯಾವುದೇ ವ್ಯಕ್ತಿಯ ಎದೆಗೆ ನೇರ ಗುಂಡು ತಗಲುವ ತಾಂತ್ರಿಕತೆ ಇದರ ವಿಶೇಷತೆಯಂತೆ. ಶತ್ರುಗಳ ದಾಳಿಯಾದರೆ ತಪ್ಪಿಸಿಕೊಳ್ಳಲು ನೆಲಮಾಳಿಗೆಯಿಂದ ಸುಮಾರು ಅರ್ಧ ಕಿಲೊಮೀಟರ್ ದೂರದವರೆಗೆ ಸುರಂಗ ಮಾರ್ಗವೂ ಇತ್ತು. ಅದನ್ನು ಈಗ ಮುಚ್ಚಲಾಗಿದೆ ಎಂದು ಬಲ್ಲವರು ಹೇಳುತ್ತಾರೆ.

ಇದು ರಾಜರ ಕಾಯಂ ನಿವಾಸವಲ್ಲ. ಬ್ರಿಟಿಷರು ಮತ್ತು ಟಿಪ್ಪುವಿನ ದಾಳಿಯಿಂದ ಅಡಗಲು ನಿರ್ಮಿಸಿದ ತಾಣ. ಆದರೂ ಮಡಿಕೇರಿಯ ಅರಮನೆ ಬೇಸರ ತರಿಸಿದರೆ ರಾಜ ಇಲ್ಲಿ ಬಂದು ಉಳಿಯುತ್ತಿದ್ದದ್ದೂ ಉಂಟಂತೆ. ಅರಮನೆ ಸುತ್ತಲೂ ದಟ್ಟ ಅರಣ್ಯದಿಂದ ಆವೃತವಾಗಿರುವುದರಿಂದ ವೈರಿಗಳು ಇಲ್ಲಿಗೆ ಬರುವುದು ಕಷ್ಟ. ಕ್ರಿ.ಶ. 1834ರಲ್ಲಿ ಬ್ರಿಟಿಷರಿಗೆ ಶರಣಾಗುವುದಕ್ಕೆ ಮುಂಚೆ, ಈ ಅರಮನೆ ಚಿಕ್ಕವೀರ ರಾಜೇಂದ್ರನಿಗೆ ಕಡೆಯ ಅಡಗುದಾಣವಾಗಿತ್ತು. ಮೊದಲು ಈ ಅರಮನೆಗೆ ಹುಲ್ಲಿನ ಚಾವಣಿ ಇತ್ತು. 1883ರಲ್ಲಿ ಬ್ರಿಟಿಷರು ಇದಕ್ಕೆ ಹೆಂಚು ಹೊದೆಸಿದರು ಎಂದು ಇತಿಹಾಸ ಹೇಳುತ್ತದೆ. 'ಇಲ್ಲಿಂದ ಆರು ಕಿಲೊಮೀಟರ್ ಸಾಗಿದರೆ ಕೊಡಗಿನ ಅತ್ಯಂತ ಎತ್ತರದ ಶಿಖರ ತಡಿಯಂಡಮೋಳ್ ಬೆಟ್ಟದ ತುದಿ ಸಿಗುತ್ತದೆ' ಎಂದರು ಗೈಡ್.


ಇತಿಹಾಸ, ವಾಸ್ತುಶಿಲ್ಪ ಕುರಿತು ಆಸಕ್ತಿ ಹೊಂದಿರುವವರು ಈ ಅರಮನೆಗೆ ಭೇಟಿ ಕೊಡಬಹುದು.

ಮೊದಲ ಓದು

ಸೌಹಾರ್ದ ಪ್ರತಿಬಿಂಬಿಸುವ ಕಥೆಗಳು

ತಮ್ಮ ಐವತ್ತನೇ ವಯಸ್ಸಿನಲ್ಲಿ ಬರವಣಿಗೆಗೆ ಅಡಿಯಿಟ್ಟ ಡಾ.ಮಿರ್ಜಾ ಬಶೀರರಿಗೆ ಭಾವಿ ಸಮಾಜದ ಬಗ್ಗೆ ಇರುವ ಆತಂಕ, ಭಯ, ದಿನಂಪ್ರತಿ ಕಣ್ಣಿಗೆ ರಾಚುವ ದ್ವೇಷ, ಬಡತನ, ಶೋಷಣೆ, ಮಾನವ ದೌರ್ಬಲ್ಯದಿಂದ ಘಟಿಸುವ ಅನ್ಯಾಯಗಳು, ಅವೆಲ್ಲವನ್ನೂ ಮೀರಿ ಸಮಾಜದಲ್ಲಿ ಅಡಗಿರುವ ಉತ್ಕಟ ಮಾನವ ಪ್ರೀತಿ, ಪ್ರಾಮಾಣಿಕತೆ, ಸಹಬಾಳ್ವೆ, ಆಶಾಭಾವನೆ, ಕಳಕಳಿಯ ಪ್ರತೀಕವೇ 'ಅಬ್ರಕಡಬ್ರ'.

ಪುಸ್ತಕದಲ್ಲಿರುವ 9 ಕಥೆಗಳೂ ದೇಶದ ಸಾಮರಸ್ಯವನ್ನು ಬಿಂಬಿಸುವ, ಧರ್ಮಗಳ ಗೋಡೆ ಮೀರಿ ಜನರ ಮನಸಿನಲ್ಲಿ ಹಾಸುಹೊಕ್ಕಿರುವ ಸೌಹಾರ್ದವನ್ನು ಪ್ರತಿಬಿಂಬಿಸುತ್ತವೆ. ಜೊತೆಗೆ ಧರ್ಮ ಕಲಹ, ದೇಶ ಎಷ್ಟೇ ಮುಂದುವರಿದರೂ ಕೋಮುವಾದದ ವಿಷ ಇನ್ನೂ ಜನರ ಮನಸಿನಲ್ಲಿ ಆಳವಾಗಿ ಬೇರೂರಿರುವುದು, ಅದು ಮಾನವೀಯತೆಯನ್ನೂ ಮೀರಿ ದೊಡ್ಡ ಭೂತವಾಗಿ ಕಾಡುತ್ತಿರುವುದರ ಬಗೆಗಿನ ವಿಷಾದ, ನೋವು, ಸಂಕಟಗಳನ್ನು ಕಥೆಗಳಲ್ಲಿ ಕಾಣಬಹುದು. ಗಾಢ ಕತ್ತಲೆಯ ನಡುವೆ ಬೆಳಕು ಚೆಲ್ಲಿ ಹಾರಿ ಬರುವ ಮಿಂಚುಹುಳದಂತೆ ಕಥೆಗಾರ ಆಶಾವಾದಿಯಾಗಿಯೂ ಕಾಣುತ್ತಾರೆ.



ಪು: 110
₹150

ಅಬ್ರಕಡಬ್ರ

ಲೇ: ಡಾ. ಮಿರ್ಜಾ ಬಶೀರ್

ಪ್ರ: ಬಹುರೂಪಿ

ಸಂ: 7019182729

ಊರಲ್ಲಿ ನಿರ್ಮಾಣವಾಗುತ್ತಿರುವ ಹನುಮಂತನ ಗುಡಿಗೆ ದೇಣಿಗೆ ಕೊಡುವುದಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಚಂದ್ರಣ್ಣನಿಗೆ ವಾಗ್ದಾನ ಮಾಡಿ ತೆರಳಿದ ಮಸ್ತಾನ್ ಸಾಹೇಬರು, ಕೋಮುಗಲಭೆಯ ಬೆಂಕಿಗೆ ಸಿಲುಕಿ ಆಸ್ಪತ್ರೆ ಸೇರಿ ಹಲವು ಗಂಟೆಗಳ ಬಳಿಕ ಕಣ್ಣು ತೆರೆದಾಗ ಮೊದಲು ಕಂಡಿದ್ದು ಚಂದ್ರಣ್ಣನ ಮುಖವನ್ನೇ.... 'ಇರುವವನೊಬ್ಬನೇ ಚಂದಿರ' ಕಥೆಯಲ್ಲಿ ಬರುವ ಈ ಸನ್ನಿವೇಶವು ಮಾನವ ಸಂಬಂಧಗಳಿಗೆ ಯಾವುದೇ ಗೋಡೆಯಿಲ್ಲ ಎನ್ನುವುದನ್ನು ನಿರೂಪಿಸುತ್ತದೆಯಲ್ಲದೇ, ಅದಕ್ಕೆ ಅಳಿವಿಲ್ಲ ಎನ್ನುವುದನ್ನೂ ಸಾರುತ್ತದೆ. ಇಬ್ಬರ ಮುಖವನ್ನು ಯುಗಾದಿ ಹಾಗೂ ರಂಜಾನ್ ಚಂದಿರನಿಗೆ ಕಥೆಗಾರ ಹೋಲಿಸಿದ್ದು ಸಮಾಜ ತಾಳಮೇಳವನ್ನು ಪ್ರತಿಬಿಂಬಿಸುತ್ತದೆ.

'ಅದಲು-ಬದಲು' ಕಥೆಯಲ್ಲಿ ಭಿನ್ನ ಧರ್ಮಿಯರಿಬ್ಬರ ನಡುವ ಸಾಮರಸ್ಯ ಸಂಬಂಧ ಕಡಿದು, ಮತ್ತೆ ಹಿಂದಿನ ರೀತಿಯೇ ಸ್ನೇಹ ಚಿಗುರುವುದನ್ನು ಚಿತ್ರಿಸಿದ್ದಾರೆ. ಸಾಮರಸ್ಯಕ್ಕೆ ಕದಡುವ ಇಂಥ ವೈಮನಸ್ಸುಗಳು ತಾತ್ಕಾಲಿಕ ಎನ್ನುವುದನ್ನು ಲೇಖಕ ನಿರೂಪಿಸಿದ್ದಾರೆ.

ಈ ಕಥೆಗಳು ಹಿಂದೆ ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹಳತೆನಿಸದ, ಸರಾಗವಾಗಿ ಓದಿಸಿಕೊಂಡು ಹೋಗವ ಮನೋಜ್ಞ ನಿರೂಪಣೆ ಗಮನ ಸೆಳೆಯುತ್ತದೆ. ಸಮಾಜವನ್ನು ಒಳಗಣ್ಣಿನಿಂದ ನೋಡಿ ಅದನ್ನು ಕಥಾ ರೂಪಕ್ಕಿಳಿಸಿರುವುದು ಕಥೆಗಾರರ ಹೆಚ್ಚುಗಾರಿಕೆ. ಇಲ್ಲಿನ ಕಥೆಗಳು ಇಂದಿನ ದುರಿತ ಕಾಲದ ಬಗ್ಗೆ ಆತಂಕಿತರಾಗುವ ಪ್ರತಿಯೊಬ್ಬರ ಅಭಿವ್ಯಕ್ತಿಯೂ ಹೌದು.

ಕಥೆ

ಹೂವಿನಹಳ್ಳಿ ನಾಗರಾಜ ಅವರ **ಮಾರಿಜಾ**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ನಂದಿನಿ ಹೆದ್ದುರ್ಗ ಅವರ **ನಮ್ಮವರು**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry


ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ನೆ	ಪ	ಉ	ಚಂ
ಕೊ	ಕೂ	ಜೇ	ಗ
ಮಂ	ಪು	ಕ	ಸು

1

	ದಿ	ರ
	ದ	ರ

2

	ದಿ	ನ
	ದಿ	ನ

3

	ಳ	ಸು
	ಳ	ಸು

4

	ರ	ಡಿ
	ರ	ಡಿ

5

	ರಿ	ಗೆ
	ರಿ	ಗೆ

6

	ರ	ಳು
	ರ	ಳು

ದಶ್ಯ ಚುಕ್ಕು ಶ್ರೇಷ್ಠ ಕಥೆ — ಮೊಟ್ಟೆಯಿಂದ ಬಂದ ಕೋಳಿಮರಿ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಅಂಗಡಿಗೆ ಹೋಗಿ ಮೊಟ್ಟೆಗಳನ್ನು ಖರೀದಿಸಿದ. ಒಂದೇ ಬಾರಿಗೆ ಹತ್ತಾರು ಮೊಟ್ಟೆಗಳು ಇರುವ ಟ್ರೇಯನ್ನು ಕೈಯಲ್ಲೇ ಹಿಡಿದು ಮನೆಯತ್ತ ಹೆಜ್ಜೆ ಹಾಕಿದ. ಮನೆಯು ಅಂಗಡಿಯಿಂದ ಬಹಳ ದೂರವಿತ್ತು. ಅಂದು ಸುಡುಬಿಸಿಲಿತ್ತು. ಬಿಸಿಲಿನ ಶಾಖಕ್ಕೆ ಗುಂಡ ಜೋರಾಗಿ ಬೆವರತೊಡಗಿದ. ಕೆಲ ಹೊತ್ತಿನಲ್ಲೇ ಮೊಟ್ಟೆಗಳು ಒಡೆಯಲಾರಂಭಿಸಿತು. ಅದರೊಳಗಿನಿಂದ ಕೋಳಿ ಮರಿಗಳು ಹಾರುತ್ತಾ ಹೊರಹೋದವು!





'ಕ'ಕಾರ ಹಾಡು

ಕನ್ನಡ ನಾಡಿನ ಸೊಬಗಿದು ನೋಡು!
ಕಾಜಾಣದ ಬಳಗ ತುಂಬಿಹುದು
ಕಿಲ ಕಿಲ ಮಕ್ಕಳ ನಗೆಯ ಹಾಗೆ
ಕೀರಿನ ರುಚಿಯು ಇದಕಿಹುದು
ಕುಹೂ ಕುಹೂ ಕೂಗುವ ಕೋಗಿಲೆ
ಕೂಜನ ಕನ್ನಡ ನಾಡದಿ ಹಬ್ಬಿಹುದು
ಕೆಸರಲ್ಲವಿದು-ಮೊಸರಿನಗಡಿಗೆ
ಕೇಸರಿ ಸತ್ವ ಅಡಗಿಹುದು
ಕೈಲಾಸವದು ಕನ್ನಡನಾಡು
ಕೊಡುಗೆಯು ಅಪಾರ ಇದಕಿಹುದು
ಕೋವಿದ ಬಳಗವು ನಾಡಿನ ತುಂಬ
ಕೌಶಲದಿ ಭಾಷೆ ಬೆಳೆಸಿಹರು
ಕಂಪನು ಹರಡುತ ವಿಶ್ವಕೆ ತೋರುತ
ಕಃ ಕಃ ಎನ್ನುತ ಮೆರೆದಿಹುದು
ಕನ್ನಡ ನಾಡೇ ಸ್ವರ್ಗದ ತಾಣವು
ಆಡುತ ಹಾಡುತ ನುಡಿದಿಹೆವು

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ವರ' ಎಂಬ ಶಬ್ದಗಳ ಹಿಂದೆ ಅಕ್ಷರ ಪಟ್ಟಿಯಿಂದ ಎರಡು ಅಕ್ಷರ ತುಂಬಿ ನಾಲ್ಕಕ್ಷರದ ಪದ ಮಾಡಿ.

ಅಕ್ಷರ ಪಟ್ಟಿ			
ನ	ಜಾ	ಕಾಂ	ಸ್ವ
ಯಂ	ಆ	ಅ	ಟ
ಪೇ	ಜ್ಞಾ	ಸ	ಣಾ
ತಾ	ರೋ	ಬಾ	ಕ

1			ವರ
2			ವರ
3			ವರ
4			ವರ
5			ವರ
6			ವರ
7			ವರ
8			ವರ
9			ವರ
10			ವರ

ಒಗಟು-ಒಡಿ

1.ಅಣ್ಣ ಅತ್ತರೆ ತಮ್ಮನು ಅಳುತ್ತಾನೆ
....
2.ಸಾವಿರ ಮಕ್ಕಳಿಗೆ ಒಂದೇ ಉಡದಾರ
....
3.ಮಳೆಗೂ ಅರಳುತ್ತೆ; ಬಿಸಿಲಿಗೂ ಅರಳುತ್ತೆ
....
4.ಪ್ರಾಣವಿಲ್ಲ ಹಾರುತ್ತೆ; ಜೀವವಿಲ್ಲ ಕೂಗುತ್ತೆ
....
5.ಕಣ್ಣಿಗೆ ಕಾಣೋದಿಲ್ಲ, ಕೈಗೆ ಸಿಗೋದಿಲ್ಲ
....

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಸ್ವೇಚಿತ್ ಜಿ.ಎಲ್.
ಚಿಕ್ಕಮಗಳೂರು



ಶೈಲೇಶ್ ಕುಮಾರ್ ಡಿ.ಪಿ., ಬೆಂಗಳೂರು



ಹರಿಣಿ ಬಿ.ಟಿ.
ನಂದಿಬೇವೂರು



ಶಾಶ್ವತಿ ಎಸ್.ಯು.
ತುಮಕೂರು



ಪ್ರಾರ್ಥನ ಸಿ.ಬೂದಿಹಾಳ್
ದಾವಣಗೆರೆ



ಕೃತಿಕಾ ಪಿ.ಎಂ.
ರಾಯಚೂರು

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:


majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಕೊಳಕು-ಬೆಳಕು 2.ಶಯನ-ನಯನ 3.ವಿಕಾರ-ಪ್ರಕಾರ 4.ಗೋರಂಟಿ-ಗ್ಯಾರಂಟಿ 5.ಕಿಮ್ಮತ್ತು-ಗಮ್ಮತ್ತು 6.ವಚನ-ಪಚನ
ಜಾಣಪದ ಆಟ: 1.ನವಿಲುಗರಿ 2.ಸಮಾನಾಂತರ 3.ಶಿವಮಂದಿರ 4.ವಾರಸುದಾರ 5.ಮನುಜಕುಲ

ಸ್ವಿಡ್ಜರ್ಲೆಂಡ್ ರಾಯಭಾರಿ
ಯಶ್ ಚೋಪ್ರಾ!

ಬಾಲಿವುಡ್‌ನ ಖ್ಯಾತ ನಿರ್ದೇಶಕ ಯಶ್ ಚೋಪ್ರಾ ದೂರದ ಸ್ವಿಡ್ಜರ್ಲೆಂಡ್‌ನ ಇಂಟರ್‌ಲಾಕನ್ ಎಂಬ ಪಟ್ಟಣಕ್ಕೆ ರಾಯಭಾರಿ! ಯುರೋಪ್‌ನ ಈ ಪಟ್ಟಣಕ್ಕೆ ತಮ್ಮ ಸಿನಿಮಾಗಳ ಮೂಲಕ ಖ್ಯಾತಿ ತಂದುಕೊಟ್ಟ ನಿರ್ದೇಶಕನಿಗೆ ಅಲ್ಲಿನ ಸರ್ಕಾರ ನೀಡಿದ ಗೌರವ ಭಾರತೀಯರಿಗೂ ಹೆಮ್ಮೆ.



ಇಂಟರ್‌ಲಾಕನ್ ಪಟ್ಟಣದಲ್ಲಿರುವ ಯಶ್ ಚೋಪ್ರಾ ಕಂಚಿನ ಪ್ರತಿಮೆ

ವಿ.ಶ್ರೀನಿವಾಸ

ಸ್ವಿಡ್ಜರ್ಲೆಂಡ್‌ನ ಆಲ್ಪ್ಸ್ ಪರ್ವತಗಳ ಕಣಿವೆಯೊಂದರಲ್ಲಿ ಇಂಟರ್‌ಲಾಕನ್ ಎಂಬ ಪುಟ್ಟ ಪಟ್ಟಣವಿದೆ. ಸುತ್ತಲೂ ಹಚ್ಚಹಸಿರಿನ ಬೆಟ್ಟಗಳ ಸಾಲು. ಹಿನ್ನೆಲೆಯಲ್ಲಿ ಹಿಮಾಚ್ಛಾದಿತ ಪರ್ವತ ಶ್ರೇಣಿ. ಮಣ್ಣೇ ಕಾಣದ ಹಾಗೆ ನೆಲವೆಲ್ಲಾ ಹುಲ್ಲಿನ ಹಾಸು. ಆಹ್ಲಾದಕರ ವಾತಾವರಣದಲ್ಲಿ ಬೆಟ್ಟದ ಮೇಲಿನಿಂದ ತೇಲಿ ತೇಲಿ ಬರುತ್ತಿದ್ದ ಬಣ್ಣ ಬಣ್ಣದ ಪ್ಯಾರಾಗ್ಲೈಡಿಂಗ್ ಸಾಹಸಿಗಳು. ಎಲ್ಲವನ್ನೂ ಕಣ್ತುಂಬಿಕೊಳ್ಳುತ್ತಿರುವಾಗ 'ಬನ್ನಿ, ನಿಮಗೆಲ್ಲ ಅಚ್ಚರಿಯೊಂದನ್ನು ತೋರಿಸುತ್ತೇನೆ' ಎಂದು ಗೈಡ್ ಮೂರ್ತಿ ನಮ್ಮನ್ನೆಲ್ಲ ಕರೆದೊಯ್ದರು. ಆಳೆತ್ತರದ ಕಂಚಿನ ಪ್ರತಿಮೆಯೊಂದನ್ನು ತೋರಿಸಿ 'ಇವರ್‍ಯಾರು ಗೊತ್ತೇ?' ಎಂದು ಕೇಳಿದರು. ತಲೆಗೊಂದು ಟೊಪ್ಪಿ, ಸಿನಿಮಾ ಕ್ಯಾಮೆರಾಗೆ ಆತುಕೊಂಡು ನಿಂತಿರುವ ಇವರ್‍ಯಾರು ಎಂದು ನಾವು ತಲೆ ಕೆರೆದುಕೊಂಡು ಯೋಚಿಸುತ್ತಿದೆವು. ಯಾರಿಗೂ ಹೊಳೆಯಲಿಲ್ಲ. 'ಇದು ಬಾಲಿವುಡ್ ದಿಗ್ಗಜ ಯಶ್ ಚೋಪ್ರಾ ಅವರ ಪ್ರತಿಮೆ. 'ಇಂಟರ್‌ಲಾಕನ್ ಪಟ್ಟಣ ಇವರನ್ನು ರಾಯಭಾರಿಯೆಂದು ಗೌರವಿಸಿದೆ' ಎಂದು ವಿವರಣೆ ನೀಡಿದರು!. ಆನಂತರ ನಾವೆಲ್ಲ ಪಟಪಟನೆ ಆ ಪ್ರತಿಮೆ ಜೊತೆಯಲ್ಲಿ ಪಟ ತೆಗೆಸಿಕೊಂಡೆವು.

ಈ ಅಚ್ಚರಿ ನನ್ನನ್ನು ಅಷ್ಟಕ್ಕೆ ಬಿಡಲಿಲ್ಲ. ತನ್ನ ತಾಯ್ನಾಡು ಭಾರತದಲ್ಲಿ ಪದ್ಮಭೂಷಣ (2005) ದಾದಾ ಸಾಹೇಬ್ ಫಾಲ್ಕೆ (2001) ಮುಂತಾದ ಉನ್ನತ ಪ್ರಶಸ್ತಿಗಳಲ್ಲದೆ, ಅನೇಕ ಬಾರಿ ತಮ್ಮ ಸಿನಿಮಾಗಳಿಗೆ 'ಉತ್ತಮ ಚಿತ್ರ', 'ಫಿಲಂಫೇರ್' ಪ್ರಶಸ್ತಿಗಳನ್ನು ಪಡೆದಿರುವ ಯಶ್ ಚೋಪ್ರಾ, ದೂರದ ಸ್ವಿಡ್ಜರ್ಲೆಂಡ್‌ನಲ್ಲಿ ಈ ಪರಿಯ ಪ್ರೀತಿಯ ಗೌರವವನ್ನು ಗಳಿಸಿದ್ದಾದರೂ ಹೇಗೆ ಎಂದು ಮಾಹಿತಿ ಕಲೆ ಹಾಕಿದಾಗ ತಿಳಿದು ಬಂದಿದ್ದು ಇಷ್ಟು.

ಯಶ್ ರಾಜ್ ಚೋಪ್ರಾ ಪಂಜಾಬ್ ಪ್ರಾಂತ್ಯದ ಲಾಹೋರ್‌ನವರು. ಹಿಂದಿ ಸಿನಿಮಾಗಳ ನಿರ್ದೇಶಕ, ನಿರ್ಮಾಪಕ, ಪ್ರಖ್ಯಾತ 'ಯಶ್ ರಾಜ್ ಫಿಲಂಸ್' ಸಂಸ್ಥೆಯ ಸ್ಥಾಪಕ. ನಾಯಕಿ ಪ್ರಧಾನ ರೋಮ್ಯಾಂಟಿಕ್ ಸಿನಿಮಾಗಳ ಪಿತಾಮಹ ಎಂಬ ಹೆಸರು. ಇವರು ಹನಿಮೂನಿಗೆಂದು ಸ್ವಿಡ್ಜರ್ಲೆಂಡ್‌ಗೆ ಹೋಗಿದ್ದಾಗ ಅಲ್ಲಿಯ ಪ್ರಕೃತಿ ಸೌಂದರ್ಯಕ್ಕೆ ಮನಸೋತರು. ಆಮೇಲೆ ತಮ್ಮ 'ಡರ್' ಮತ್ತು 'ಚಾಂದಿನಿ' ಸೇರಿದಂತೆ ಕೆಲವು ಸೂಪರ್ ಹಿಟ್ ಸಿನಿಮಾಗಳನ್ನು ಅಲ್ಲಿ ಚಿತ್ರೀಕರಿಸಿದ್ದರು. ಯಶ್ ರಾಜ್ ಫಿಲಂಸ್ ಲಾಂಛನದಡಿ ಅವರ ಮಗ ಆದಿತ್ಯ ಚೋಪ್ರಾ ಸಾರ್ವಕಾಲಿಕ ದಾಖಲೆ ಬರೆದ ಚಿತ್ರ 'ದಿಲ್‌ವಾಲೆ ದುಲ್ಹನಿಯಾ ಲೇ ಜಾಯೆಂಗೆ' ಸಿನಿಮಾವನ್ನು ಸ್ವಿಡ್ಜರ್ಲೆಂಡ್‌ನ ಇಂಟರ್‌ಲಾಕನ್, ಟಾಪ್ ಆಫ್ ಯೂರೋಪ್ ಎಂದು ಖ್ಯಾತಿಗಳಿಸಿರುವ ಜುಂಗ್‌ಫ್ರೊ ಮುಂತಾದ ಸ್ಥಳಗಳಲ್ಲಿ ಚಿತ್ರೀಕರಿಸಿದ್ದಾರೆ. ಟಿಟ್ಲಿಸ್ ಶಿಖರಾಗ್ರದಲ್ಲಿ ಕಾಜೋಲ್-ಶಾರುಖ್ ಖಾನ್ ಅವರ 'ದಿಲ್‌ವಾಲೆ..,' ಚಿತ್ರದ ಕಟೌಟ್ ಈಗಲೂ ಇದೆ. ಇದರ ಜೊತೆ ವಿವಿಧ ಭಂಗಿಗಳಲ್ಲಿ ಫೋಟೊ ತೆಗೆಸಿಕೊಳ್ಳುವುದಕ್ಕೆ ಪ್ರವಾಸಿಗಳು ಮುಗಿಬೀಳುತ್ತಾರೆ. 'ಇಲ್ಲಿನ ಪ್ರಕೃತಿ ಸೌಂದರ್ಯವನ್ನು ಯಶ್ ಚೋಪ್ರಾ ತಮ್ಮ ಸಿನಿಮಾಗಳ ಮೂಲಕ ಭಾರತೀಯರು ಹಾಗೂ ಜಗತ್ತಿಗೆ ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೂ ಪರಿಚಯಿಸಿದ್ದಾರೆ' ಎಂದು ಅಲ್ಲಿನ ಸರ್ಕಾರ ಯಶ್ ಚೋಪ್ರಾ ಅವರನ್ನು ಐದು ವಿಧದಲ್ಲಿ ಪ್ರೀತಿಯಿಂದ ಗೌರವಿಸಿದೆ.

1. 'ಇಂಟರ್‌ಲಾಕನ್ ರಾಯಭಾರಿ' ಎಂದು ಸ್ವಿಸ್ ಸರ್ಕಾರ ಘೋಷಿಸಿದೆ. ಬೆಳ್ಳಿಫಲಕದ ಈ ಗೌರವವನ್ನು ಪಡೆದ ಮೊಟ್ಟ ಮೊದಲ ವ್ಯಕ್ತಿ ಯಶ್ ಚೋಪ್ರಾ. ಇವರನ್ನು 'ಸ್ವಿಸ್ ರಾಯಭಾರಿ' ಎಂದೂ ಸ್ವಿಡ್ಜರ್ಲೆಂಡ್‌ನ ಸರ್ಕಾರ ಗೌರವಿಸಿದೆ.
2. ಬರ್ನ್ ಪ್ರಾಂತ್ಯದ ಲಾನೆನ್ ಸರೋವರವು 'ಚೋಪ್ರಾ ಸರೋವರ'ವೆಂದೇ ಅಲ್ಲಿ ಜನಪ್ರಿಯವಾಗಿದೆ. ಯಶ್ ಚೋಪ್ರಾ ಅವರು ತಮ್ಮ ನೆಚ್ಚಿನ ಈ ತಾಣದಲ್ಲಿ ಅನೇಕ ಚಿತ್ರಗಳನ್ನು ಚಿತ್ರೀಕರಿಸಿದ್ದಾರೆ.
3. ವಿಕ್ಟೋರಿಯಾ-ಜುಂಗ್‌ಫ್ರೊ ಗ್ರ್ಯಾಂಡ್ ಹೋಟೆಲ್‌ನಲ್ಲಿ ಯಶ್ ಚೋಪ್ರಾ ಹೆಸರಿನ ಐಷಾರಾಮಿ ಕೊಠಡಿಯೊಂದು ಇದೆ. ಅವರ ಜನಪ್ರಿಯ ಸಿನಿಮಾಗಳ ಪೋಸ್ಟರ್‌ಗಳಿಂದ ಈ ಕೊಠಡಿಯನ್ನು ಅಲಂಕರಿಸಲಾಗಿದೆ. ಈ ದುಬಾರಿ ಕೋಣೆಯಲ್ಲಿ ಉಳಿಯುವುದು ಹೆಮ್ಮೆ ಎನ್ನುವ ಕಾರಣಕ್ಕೆ ಬಾಲಿವುಡ್ ಮಂದಿ ಹಾತೊರೆಯುತ್ತಾರೆ.
4. ಯಶ್ ರಾಜ್ ಫಿಲಂಸ್ ಸಂಸ್ಥೆಯ ಸಿನಿಮಾಗಳಲ್ಲಿ ಸ್ವಿಸ್ ಟ್ರೈನ್ ಅನ್ನು ಅನೇಕ ಬಾರಿ ಚಿತ್ರೀಕರಿಸಲಾಗಿದೆ. ಹಾಗಾಗಿ ಸ್ವಿಡ್ಜರ್ಲೆಂಡ್‌ನ ಜುಂಗ್‌ಫ್ರೊ ರೈಲ್ವೆಯು ಒಂದು ರೈಲಿಗೆ 'ಯಶ್ ರಾಜ್' ಹೆಸರನ್ನೆ ಇಟ್ಟಿದೆ. ಇವರ ಸಹಿ ಹಾಗೂ ಹೆಸರಿರುವ ಫಲಕವನ್ನು ಆ ರೈಲಿನಲ್ಲಿ ಹಾಕಲಾಗಿದೆ. ಅಲ್ಲಿಯ ರೈಲ್ವೆಯ ಸಂಸ್ಥಾಪಕರಾದ ಅಡಾಲ್ಫ್ ಗಯರ್ ಅವರ ಹೊರತಾಗಿ ಮತ್ತಾವ ವ್ಯಕ್ತಿಯೂ ಈ ಗೌರವಕ್ಕೆ ಪಾತ್ರರಾಗಿಲ್ಲ!
5. ಸ್ವಿಡ್ಜರ್ಲೆಂಡ್‌ನ ಸರ್ಕಾರವು 2016ರ ಮೇ ತಿಂಗಳಲ್ಲಿ ಯಶ್ ಚೋಪ್ರಾ ಅವರ ಗೌರವಾರ್ಥ ಸುಮಾರು 250 ಕೆ.ಜಿ. ತೂಕದ ಆಳೆತ್ತರದ ಕಂಚಿನ ಪ್ರತಿಮೆಯನ್ನು ಇಂಟರ್‌ಲಾಕನ್ ಪಟ್ಟಣದ ಕೇಂದ್ರ ಸ್ಥಳದಲ್ಲಿ ಸ್ಥಾಪಿಸಿತು. ಅವರ ಪತ್ನಿ ಪಮೇಲಾ ಚೋಪ್ರಾ ಹಾಗೂ ಸೊಸೆ ರಾಣಿ ಮುಖರ್ಜಿ ಇದನ್ನು ಅನಾವರಣಗೊಳಿಸಿದರು.



ಯುರೋಪ್‌ನ ಸ್ವಿಡ್ಜರ್ಲೆಂಡ್‌ನಲ್ಲಿರುವ ಜುಂಗ್‌ಫ್ರೊ ರೈಲು ನಿಲ್ದಾಣದಿಂದ ಬರುತ್ತಿರುವ ವಿದ್ಯುತ್ ಚಾಲಿತ ಪ್ರವಾಸಿ ರೈಲು



ಟಿಟ್ಲಿಸ್ ಶಿಖರಾಗ್ರದಲ್ಲಿ ನಟಿ ಕಾಜೋಲ್-ನಟ ಶಾರುಖ್ ಖಾನ್ ಅವರ 'ದಿಲ್‌ವಾಲೆ..,' ಚಿತ್ರದ ಕಟೌಟ್ ಮುಂದೆ ಪ್ರವಾಸಿಗರ ಪೋಸ್

ಕಣ್ಣುಗಳಿಗೆ ತಂಪನ್ನೀಯುವಂತೆ ಹಚ್ಚಹಸಿರನ್ನು ಹಾಸು ಹೊದ್ದ ಬೆಟ್ಟಗಳ ಸಾಲು, ಅವುಗಳ ಹಿನ್ನೆಲೆಯಲ್ಲಿ ಹಿಮಾಚ್ಛಾದಿತ ಪರ್ವತ ಶ್ರೇಣಿ, ನೆಲವೆಲ್ಲಾ ಸಮತಟ್ಟಾದ ಹುಲ್ಲಿನ ಹಾಸು, ಬಣ್ಣ ಬಣ್ಣದ ಹೂವಿನ ಗಿಡಗಳಿಂದೊಡಗೂಡಿ ಮನಸೂರೆಗೊಳ್ಳುವ ಪ್ರಕೃತಿಯ ಸೌಂದರ್ಯರಾಶಿ, ಅಲ್ಲಿಯ ಬೇಸಿಗೆ ದಿನಗಳಾದ್ದರಿಂದ ಆಹ್ಲಾದಕರ ವಾತಾವರಣ. ಆ ಕಾಲದಲ್ಲಿಯೇ ಪರ್ವತದ ತುದಿಗೆ ಕೇಬಲ್ ಕಾರುಗಳನ್ನು ಅಳವಡಿಸಿರುವುದು, ಪರ್ವತಾಗ್ರದಲ್ಲಿ ಎರಡು ಹಳಿಗಳಲ್ಲದೇ ಮಧ್ಯದಲ್ಲಿ ಇನ್ನೊಂದು ಹಲ್ಲಿನ ರೀತಿ ಹಳಿಯೂ ಇರುವ ಸುರಂಗದಲ್ಲಿ ಪರ್ವತದ ಮೇಲೇರುವ ರೈಲು.. ಇವುಗಳನ್ನು ಕಂಡು ನಿಬ್ಬೆರಗಾಗಿದ್ದ ನಾವು, ಭಾರತೀಯರೊಬ್ಬರು ಸ್ವಿಡ್ಜರ್ಲೆಂಡ್‌ನ ಪ್ರೀತಿ ಗೌರವವನ್ನು ಗಳಿಸಿರುವ ಪರಿ ಕಂಡು ನಮಗೂ ಆ ಸಾಧಕರ ಬಗ್ಗೆ ಅಭಿಮಾನ, ನಮ್ಮ ದೇಶದ ಬಗ್ಗೆ ಗೌರವ ಮೂಡಿತು.

'ನಮ್ಮ ದೇಶದಿಂದ ಹೊರಗೆ ಬಂದಾಗ ನಾವು ನಮ್ಮ ದೇಶದ ರಾಯಭಾರಿಗಳು. ಅಲ್ಲಿಯ ಜನ ನಮ್ಮ ದೇಶವನ್ನು ಕಂಡಿರುವುದಿಲ್ಲ. ನಮ್ಮನ್ನು ನೋಡಿ ನಮ್ಮ ದೇಶದ ಬಗ್ಗೆ ಅಭಿಪ್ರಾಯ ಹೊಂದುತ್ತಾರೆ. ಹಾಗಾಗಿ ನಾವು ವಿದೇಶ ಪ್ರವಾಸದಲ್ಲಿ ದೇಶದ ಘನತೆ ಕಾಪಾಡುವ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು' ಎಂದು ನಮ್ಮ ಪ್ರವಾಸಿ ಗೈಡ್ ತುಮಕೂರಿನ ಟಿ.ವಿ.ಎನ್.ಮೂರ್ತಿ ಹೇಳಿದ ಮಾತಿಗೆ ನಾವೆಲ್ಲ ಒಂದೇ ದನಿಯಲ್ಲಿ ಸಮ್ಮತಿ ಸೂಚಿಸಿದೆವು. ಏಕೆಂದರೆ, ನಮ್ಮ ಮುಂದೆ ಯಶ್ ಚೋಪ್ರಾ ಅವರು ಕಂಚಿನ ಪ್ರತಿಮೆ ಮಾದರಿಯಂತೆ ನಿಂತಿತ್ತು, ಭಾರತದ ಹೆಮ್ಮೆಯ ಸಂಕೇತವಾಗಿ!

ಯೋಗಿ ಮಾತಿನ ಆಶಯಕ್ಕೆ ಆರ್‌ಎಸ್‌ಎಸ್ ಸಹಮತ

ಮಥುರಾ (ಪಿಟಿಐ): ಹಿಂದೂಗಳು ಒಗ್ಗಟ್ಟಿನಿಂದ ಇರಬೇಕಾದುದು ಎಲ್ಲರ ಒಳಿತಿನ ದೃಷ್ಟಿಯಿಂದ ಮಹತ್ವದ್ದು, ಧರ್ಮ, ಜಾತಿ ಮತ್ತು ಸಿದ್ಧಾಂತದ ಹೆಸರಿನಲ್ಲಿ ವಿಭಜನೆ ಸೃಷ್ಟಿಸಲು ಯತ್ನಿಸುವ ಶಕ್ತಿಗಳ ವಿಚಾರವಾಗಿ ಎಚ್ಚರಿಕೆಯಿಂದ ಇರಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ.


ದತ್ತಾತ್ರೇಯ ಹೊಸಬಾಳೆ

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು 'ಒಗ್ಗಟ್ಟಿನಿಂದ ಇರದಿದ್ದರೆ ಉಳಿವಿಲ್ಲ' (ಬಟೇಂಗೆ ತೊ ಕಟೇಂಗೆ) ಎಂದು ಹೇಳಿದ್ದನ್ನು ಹೊಸಬಾಳೆ ಅವರು ಪರೋಕ್ಷವಾಗಿ ಅನುಮೋದಿಸಿದ್ದಾರೆ.

'ಭಾಷೆ, ರಾಜ್ಯ, ಮುಂದುವರಿದಿರುವ ಹಾಗೂ ಹಿಂದುಳಿದಿರುವ ಜಾತಿಗಳು ಎಂಬ ಆಧಾರದಲ್ಲಿ ತಾರತಮ್ಯ ಎಸಗಿದರೆ, ವಿಭಜನೆಗಳನ್ನು ಸೃಷ್ಟಿಸಿಕೊಂಡರೆ ನಾವು ನಾಶವಾಗುತ್ತೇವೆ' ಎಂದು ಅವರು ಸಂಘದ ರಾಷ್ಟ್ರೀಯ ಸಭೆಯೊಂದರ ಕೊನೆಯ ದಿನ ಸುದ್ದಿಗಾರರ ಬಳಿ ಹೇಳಿದ್ದಾರೆ.

ಆದಿತ್ಯನಾಥ ಅವರು 'ಬಟೇಂಗೆ ತೊ ಕಟೇಂಗೆ' ಎಂದು ಹೇಳಿದ್ದುದರ ಬಗ್ಗೆ ಹೊಸಬಾಳೆ ಅವರನ್ನು ಪ್ರಶ್ನಿಸಲಾಗಿತ್ತು. ಆದಿತ್ಯನಾಥ ಆಡಿದ್ದ ಮಾತನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ಮಹಾರಾಷ್ಟ್ರದ ಠಾಣೆಯಲ್ಲಿ ಅಕ್ಟೋಬರ್ 5ರಂದು ಸೂಚ್ಯವಾಗಿ ಹೇಳಿದ್ದರು.

ಈ ಹೇಳಿಕೆಯೇ ಆದ್ಯತೆ ಪಡೆಯಬಾರದು, ಮಾತಿನ ಹಿಂದಿನ ಆಶಯ ಮಹತ್ವ ಪಡೆಯಬೇಕು ಎಂದು ಹೊಸಬಾಳೆ ಹೇಳಿದ್ದಾರೆ. 'ವಿಷಯ ಇರುವುದು ಹಿಂದೂ ಒಗ್ಗಟ್ಟಿನ ಬಗ್ಗೆ. ಹಿಂದೂ ಆಲೋಚನೆಗಳನ್ನುಮರೆಯುವವರು ವಿನಾಶವನ್ನು ಆಹ್ವಾನಿಸಿಕೊಳ್ಳುತ್ತಾರೆ, ತಮ್ಮ ಕುಟುಂಬವನ್ನು, ನೆಲವನ್ನು, ಪೂಜಾ ಸ್ಥಳಗಳನ್ನು ಕಳೆದುಕೊಳ್ಳುತ್ತಾರೆ ಎಂದು ನಾವು ಬಹಳ ಸಲ ಹೇಳುತ್ತೇವೆ. ಇಲ್ಲಿ ಆಶಯ ಒಂದೇ. ವಿಷಯ ಇರುವುದು ಸಮಾಜದಲ್ಲಿ ಒಗ್ಗಟ್ಟಿನ ಬಗ್ಗೆ' ಎಂದು ಹೊಸಬಾಳೆ ವಿವರಿಸಿದ್ದಾರೆ.

ಯಾವುದೇ ದೇಶದ ಪಾಲಿಗೆ ಒಗ್ಗಟ್ಟು ಅಗತ್ಯ ಎಂದು ಹೇಳಿರುವ ಅವರು, ಈ ದಿಸೆಯಲ್ಲಿ ಭಾಷಣಗಳಷ್ಟೇ ಸಾಕಾಗುವುದಿಲ್ಲ, ನಿಜವಾದ ಪ್ರಯತ್ನಗಳ ಅಗತ್ಯವಿದೆ ಎಂದು ಹೇಳಿದ್ದಾರೆ. 'ನಾವು ಅದನ್ನು ನಮ್ಮ ವರ್ತನೆಯಲ್ಲಿ ಅಳವಡಿಸಿಕೊಳ್ಳಬೇಕು. ಹಲವು ಧಾರ್ಮಿಕ ಸಂಘಟನೆಗಳು ಹಾಗೂ ಇತರ ಸಂಘಟನೆಗಳು ಇದನ್ನು ಈಗ ಅರ್ಥ ಮಾಡಿಕೊಳ್ಳುತ್ತಿವೆ, ಇದಕ್ಕೆ ಬೆಂಬಲ ನೀಡುತ್ತಿವೆ. ಹಿಂದೂಗಳ ಒಗ್ಗಟ್ಟು ಆರ್‌ಎಸ್‌ಎಸ್‌ನ ಪ್ರತಿಜ್ಞೆ. ಸಂಘವು ಸಮಾಜದ ಮಾತನ್ನು ಪ್ರತಿಧ್ವನಿಸುತ್ತದೆ' ಎಂದಿದ್ದಾರೆ.

ಆದಿತ್ಯನಾಥ, ಭಾಗವತ್ ಭೇಟಿ: ಯೋಗಿ ಆದಿತ್ಯನಾಥ ಅವರು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರನ್ನು ಭೇಟಿ ಮಾಡಿದ ಕುರಿತ ಪ್ರಶ್ನೆಗೆ ಉತ್ತರವಾಗಿ ಹೊಸಬಾಳೆ ಅವರು, 'ಪ್ರಯಾಗರಾಜ್‌ನಲ್ಲಿ ನಡೆಯಲಿರುವ ಕುಂಭ ಮೇಳದ ಬಗ್ಗೆ ಚರ್ಚಿಸಲು ಅವರು ಬಂದಿದ್ದರು' ಎಂದರು.

'ಈ ವರ್ಷದ ಕುಂಭಮೇಳವನ್ನು ಹಿಂದಿನ ಬಾರಿಯದಕ್ಕಿಂತ ಯಶಸ್ವಿಯಾಗಿ ನಡೆಸಲು ಪ್ರಯತ್ನಿಸಲಾಗುವುದು ಎಂದು ಆದಿತ್ಯನಾಥ ಅವರು ಹೇಳಿದ್ದಾರೆ. ಈ ವಿಚಾರವಾಗಿ ಸಿದ್ಧಪಡಿಸಿರುವ ಯೋಜನೆಗಳನ್ನು ಅವರು ಸಂಘದ ಪದಾಧಿಕಾರಿಗಳಿಗೆ ತೋರಿಸಿದರು' ಎಂದರು.

'ಬಾಂಗ್ಲಾ ಹಿಂದೂಗಳು ಅಲ್ಲೇ ಇರಬೇಕು'

ಪ್ರಜಾವಾಣಿ ವಾರ್ತೆ

ನವದೆಹಲಿ: ಬಾಂಗ್ಲಾದೇಶದಲ್ಲಿ ಇರುವ ಹಿಂದೂಗಳು ಭಾರತಕ್ಕೆ ವಲಸೆ ಬರಬಾರದು ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಹೇಳಿದ್ದಾರೆ.

ಸಂಘದ ಎರಡು ದಿನಗಳ ಸಭೆಯ ಸಂದರ್ಭದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ವಕ್ಫ್ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ ಜೆಪಿಸಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಸರ್ಕಾರ ಬದ್ಧವಾಗಿರಬೇಕು ಎಂದು ಸಲಹೆ ನೀಡಿದ್ದಾರೆ.

'ಕೃಷ್ಣ ಜನ್ಮಭೂಮಿಗೆ ಸಂಬಂಧಿಸಿದ ವಿಚಾರವು ನ್ಯಾಯಾಲಯದ ಅಂಗಳದಲ್ಲಿದೆ. ಅದು ತೀರ್ಮಾನ ತೆಗೆದುಕೊಳ್ಳುತ್ತದೆ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ನಡೆದಂತಹ ಹೋರಾಟದ ಅಗತ್ಯ ಇಲ್ಲಿ ಇಲ್ಲ. ಸಮಾಜವು ತಿರ್ಮಾನಿಸುತ್ತದೆ, ನಾವು ಸಮಾಜದ ಜೊತೆ ಇದ್ದೇವೆ' ಎಂದಿದ್ದಾರೆ.

'ಹಿಂದೂ ಸಮಾಜವು ಬಾಂಗ್ಲಾದೇಶದಿಂದ ವಲಸೆ ಬರುವ ಅಗತ್ಯ ಇಲ್ಲ. ಅವರು ಅಲ್ಲೇ ಇರಬೇಕು. ಅದು ಅವರ ನೆಲ. ಬಾಂಗ್ಲಾದೇಶದಲ್ಲಿ ನಾವು ಶಕ್ತಿ ಪೀಠಗಳನ್ನು ಹೊಂದಿದ್ದೇವೆ. ಹಿಂದೂಗಳು ಜಗತ್ತಿನ ಎಲ್ಲೆಡೆ ಇದ್ದಾರೆ. ಬಿಕ್ಕಟ್ಟು ಎದುರಾದಾಗಲೆಲ್ಲ ಹಿಂದೂಗಳು ಭಾರತದ ಕಡೆ ನೋಡುತ್ತಾರೆ' ಎಂದು ಭಾಗವತ್ ಹೇಳಿದ್ದಾರೆ.

ಸ್ಕಿಲ್ಸ್ ವಿ.ವಿಗೆ ₹200 ಕೋಟಿ ದೇಣಿಗೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಯಂಗ್ ಇಂಡಿಯಾ ಸ್ಕಿಲ್ಸ್ ಯೂನಿವರ್ಸಿಟಿಗೆ ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನ (ಎಂಇಐಎಲ್) ಎಂಇಐಎಲ್ ಫೌಂಡೇಶನ್‌ನಿಂದ ₹200 ಕೋಟಿ ದೇಣಿಗೆ ನೀಡಲಾಗುತ್ತಿದೆ.

ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರ ಸಮ್ಮುಖದಲ್ಲಿ ಶನಿವಾರ ಈ ಕುರಿತ ತಿಳಿವಳಿಕೆ ಪತ್ರಕ್ಕೆ ಕಂಪನಿಯು ಸಹಿ ಹಾಕಿದೆ. ಈ ವೇಳೆ ಎಂಇಐಎಲ್ ನಿಯೋಗದ ನೇತೃತ್ವವಹಿಸಿದ್ದ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೃಷ್ಣರೆಡ್ಡಿ ಹಾಜರಿದ್ದರು.

ತೆಲಂಗಾಣ ಸರ್ಕಾರದ ಸಹಭಾಗಿತ್ವದಡಿ ಈ ವಿಶ್ವವಿದ್ಯಾಲಯದ ಕ್ಯಾಂಪಸ್ ಅನ್ನು ಅಭಿವೃದ್ಧಿಪಡಿಸಲಾಗುವುದು. ಕೌಶಲ ಮತ್ತು ಉದ್ಯಮಶೀಲತೆ ಕುರಿತ ತರಬೇತಿ ಮೂಲಕ ಯುವಜನರಿಗೆ ಉಜ್ವಲ ಭವಿಷ್ಯ ಕಲ್ಪಿಸುವ ಗುರಿ ಹೊಂದಲಾಗಿದೆ ಎಂದು ಕಂಪನಿ ತಿಳಿಸಿದೆ. ಆಗಸ್ಟ್‌ನಲ್ಲಿ ಹೈದರಾಬಾದ್ ಹೊರ ವಲಯದ ಮೀರ್ ಖಾನ್ ಪೇಟಾದ 57 ಎಕರೆ ಸ್ಥಳದಲ್ಲಿ ವಿ.ವಿಗೆ ಅಡಿಪಾಯ ಹಾಕಲಾಗಿದೆ.

ಸೇನಾ ನೆಲೆ ಮೇಲೆ ತೀವ್ರ ದಾಳಿ

ಇರಾನ್‌ನ ಇಬ್ಬರು ಯೋಧರ ಸಾವು: ಪ್ರತಿದಾಳಿ ನಡೆಸಿದರೆ ತಕ್ಕ ಪಾಠ– ಇಸ್ರೇಲ್

ಟೆಹ್ರಾನ್ (ಎಎಫ್‌ಪಿ/ಎ.ಪಿ): ಇರಾನ್‌ನ ಸೇನಾ ನೆಲೆಯನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ಶನಿವಾರ ತೀವ್ರ ದಾಳಿ ನಡೆಸಿದೆ. ಕನಿಷ್ಠ ಇಬ್ಬರು ಯೋಧರು ಮೃತಪಟ್ಟಿದ್ದಾರೆ ಎಂದು ವರದಿ ತಿಳಿಸಿದೆ.

'ಪ್ರತಿದಾಳಿ ನಡೆಸಿದರೆ ಅದಕ್ಕೆ ತಕ್ಕ ಬೆಲೆತೆರಬೇಕಾದಿತು' ಎಂದು ಇಸ್ರೇಲ್ ಎಚ್ಚರಿಸಿದೆ. ಇನ್ನೊಂದೆಡೆ, ಅಮೆರಿಕ ಮತ್ತು ಬ್ರಿಟನ್ ರಾಷ್ಟ್ರಗಳು 'ದಾಳಿ ಮುಂದುವರಿಸುವ ಮೂಲಕ ಇನ್ನಷ್ಟು ಬಿಕ್ಕಟ್ಟಿಗೆ ಕಾರಣವಾಗಬಾರದು' ಎಂದು ಇರಾನ್‌ಗೆ ಒತ್ತಾಯಿಸಿವೆ.

'ನನ್ನನ್ನು ರಕ್ಷಿಸಿಕೊಳ್ಳುವುದು ಹಕ್ಕು ಮತ್ತು ಕರ್ತವ್ಯ' ಎಂದು ಇರಾನ್ ಈ ದಾಳಿಗೆ ಕಟುವಾಗಿ ಪ್ರತಿಕ್ರಿಯಿಸಿದೆ. ಇರಾನ್‌ಗೆ ಬೆಂಬಲವಾಗಿರುವ ಲೆಬನಾನ್‌ನ ಹಿಜ್ಬುಲ್ಲಾ ಸಂಘಟನೆಯು, ಇಸ್ರೇಲ್‌ನ ಸೇನಾ ನೆಲೆ ಮತ್ತು ಗುಪ್ತದಳ ನೆಲೆ ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂದು ತಿಳಿಸಿದೆ.

ಇರಾನ್‌ನಲ್ಲಿ ಸೇನಾ ನೆಲೆಗಳನ್ನು ಗುರಿಯಾಗಿಸಿ ಕೈಗೊಂಡಿದ್ದ ವಾಯುದಾಳಿಯು ಪೂರ್ಣಗೊಂಡಿದೆ ಎಂದು ಇದೇ ವೇಳೆ ಇಸ್ರೇಲ್ ಪ್ರಕಟಿಸಿದೆ. 'ನಿರ್ದಿಷ್ಟ ಗುರಿಯಲ್ಲಿ ದಾಳಿ ನಡೆಸಿ ದೇಶದ ಯುದ್ಧ ವಿಮಾನಗಳು ಸುರಕ್ಷಿತವಾಗಿ ಮರಳಿವೆ' ಎಂದು ತಿಳಿಸಿದೆ.


ಲೆಬನಾನ್‌ನ ಟಾಯ್‌ಬೆಹ್ ಗ್ರಾಮದ ವ್ಯಾಪ್ತಿಯಲ್ಲಿ ಇಸ್ರೇಲ್ ಸೇನೆ ನಡೆಸಿದ್ದ ವಾಯುದಾಳಿಯಿಂದ ದಟ್ಟ ಹೊಗೆ ಆವರಿಸಿತ್ತು ಎಎಫ್‌ಪಿ ಚಿತ್ರ

ಯುದ್ಧ ವಿಮಾನಗಳು ಇರಾನ್‌ನಲ್ಲಿ ಕ್ಷಿಪಣಿ ತಯಾರಿಕಾ ಸ್ಥಾವರದ ಮೇಲೆ ದಾಳಿ ನಡೆಸಿದೆ. ಕಳೆದ ಒಂದು ವರ್ಷದಲ್ಲಿ ಇಸ್ರೇಲ್ ಮೇಲೆ ಪ್ರಯೋಗಿಸಿದ್ದ ಕ್ಷಿಪಣಿಗಳನ್ನು ನಿರ್ದಿಷ್ಟ ಸ್ಥಾವರದಲ್ಲೇ ತಯಾರಿಸಲಾಗಿತ್ತು ಎಂದು ಇಸ್ರೇಲ್ ಸೇನೆಯು ವಿವರಿಸಿದೆ.

ಈ ಕ್ಷಿಪಣಿಗಳ ದಾಳಿಯಿಂದ ಇಸ್ರೇಲ್‌ನ ಜನವಸತಿ ಪ್ರದೇಶದ ಮೇಲೆ ನೇರ ಮತ್ತು ತಕ್ಷಣದ ಪರಿಣಾಮ ಉಂಟು ಮಾಡುವಂತಿದ್ದವು ಎಂದು ಸೇನೆಯು ತಿಳಿಸಿದೆ.

ಭೂಮಿಯಿಂದ ಆಗಸದಲ್ಲಿನ ನಿರ್ದಿಷ್ಟ ಗುರಿಯತ್ತ ಪ್ರಯೋಗಿಸಬಹುದಾದ ಕ್ಷಿಪಣಿಗಳು, ವಾಯುದಾಳಿಗೆ ಪೂರಕವಾಗಿದ್ದ ಇರಾನ್‌ನ ಯುದ್ಧ ಶಸ್ತ್ರಾಸ್ತ್ರಗಳ ನೆಲೆ ಮೇಲೂ ದಾಳಿ ನಡೆಸಲಾಗಿದೆ ಎಂದು ತಿಳಿಸಿದೆ.

ಆದರೆ, ದಾಳಿಯಿಂದ ಆಗಿರುವ ನಷ್ಟದ ಅಂದಾಜನ್ನು ಇಸ್ರೇಲ್ ನೀಡಿಲ್ಲ. ಅಲ್ಲದೆ, ಇರಾನ್ ದಾಳಿಯಿಂದ ತನ್ನ ಸೇನಾ ನೆಲೆಗಳಿಗೆ ಯಾವುದೇ ರೀತಿಯ ಧಕ್ಕೆಯಾಗಿಲ್ಲ ಎಂದೂ ಪ್ರತಿಪಾದಿಸಿದೆ.

ಮೂರು ಪ್ರಾಂತ್ಯದಲ್ಲಿ ದಾಳಿ, ಸೀಮಿತ ಹಾನಿ– ಇರಾನ್: ಇರಾನ್‌ನಲ್ಲಿ ಇಲಾಂ, ಖುಜೆಸ್ತಾನ್ ಮತ್ತು ಟೆಹ್ರಾನ್ ಪ್ರಾಂತ್ಯದಲ್ಲಿದ್ದ ಸೇನಾ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ದಾಳಿ ನಡೆಸಿದ್ದು, 'ಸೀಮಿತ ನಷ್ಟವಾಗಿದೆ' ಎಂದು ಇರಾನ್ ಸೇನೆಯು ಪ್ರತಿಕ್ರಿಯಿಸಿದೆ.

ಈ ಕುರಿತು ಸೇನೆಯು ಹೇಳಿಕೆಯನ್ನು ಅಧಿಕೃತ ಟಿ.ವಿ. ಮಾಧ್ಯಮ ವರದಿ ಮಾಡಿದೆ. ದಾಳಿಯಿಂದ ಸೇನಾ ನೆಲೆಗಳ ಮೇಲೆ ಆಗಿರುವ ಹಾನಿಯ ಚಿತ್ರಗಳನ್ನೂ ಪ್ರಸಾರ ಮಾಡಿದೆ.

ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರರ ಹೇಳಿಕೆ

ಸೇನೆ ವಾಪಸಾತಿ 'ಸುಗಮ'

ಬೀಜಿಂಗ್ (ಪಿಟಿಐ): ಭಾರತ ಮತ್ತು ಚೀನಾ ನಡುವೆ ಇತ್ತೀಚೆಗೆ ಆಗಿರುವ ಒಪ್ಪಂದದ ಅನುಸಾರ, ಪೂರ್ವ ಲಡಾಖ್‌ನಲ್ಲಿ ವಾಸ್ತವ ಗಡಿ ನಿಯಂತ್ರಣ ರೇಖೆಯುದ್ದಕ್ಕೂ ನಿಯೋಜಿಸಿರುವ ಸೇನೆಗಳ ವಾಪಸಾತಿ ಪ್ರಕ್ರಿಯೆಯು 'ಸುಗಮವಾಗಿ' ನಡೆದಿದೆ ಎಂದು ಚೀನಾ ಹೇಳಿದೆ.

'ಗಡಿ ಪ್ರದೇಶಕ್ಕೆ ಸಂಬಂಧಿಸಿ ಉಭಯ ದೇಶಗಳು ಕೈಗೊಂಡಿದ್ದ ಒಪ್ಪಂದದ ಜಾರಿ ಪ್ರಕ್ರಿಯೆಯಲ್ಲಿ ಉಭಯ ದೇಶಗಳ ಸೇನೆಗಳು ತೊಡಗಿವೆ. ಪ್ರಸ್ತುತ ಈ ಕಾರ್ಯವು ಸುಗಮವಾಗಿ ನಡೆದಿದೆ' ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ತಿಳಿಸಿದರು.

ರಷ್ಯಾದ ಕಜಾನ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿ, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೂ ಸಭೆ ನಡೆಸಿ ಉಲ್ಲೇಖಿತ ಒಪ್ಪಂದವನ್ನು ಅನುಮೋದಿಸಿದ್ದರು.

ಒಪ್ಪಂದದಂತೆ ಉಭಯ ದೇಶಗಳು ಪೂರ್ವ ಲಡಾಖ್‌ನ ಡೆಮ್‌ಚೋಕ್ ಮತ್ತು ಡೆಪ್ಸಾಂಗ್ ಪ್ರದೇಶಗಳಲ್ಲಿ ನಿಯೋಜಿಸಿರುವ ಸೇನೆ ವಾಪಸು ಕರೆಸಲಿವೆ. ಈ ಪ್ರಕ್ರಿಯೆ ಅಕ್ಟೋಬರ್ 28–29ರ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಭಾರತೀಯ ಸೇನೆಯ ಮೂಲಗಳು ತಿಳಿಸಿವೆ.

ಈ ಎರಡೂ ತಾಣಗಳಿಗೆ ಸಂಬಂಧಿಸಿದಂತೆ ಮಾತ್ರ ಈಗ ಒಪ್ಪಂದಕ್ಕೆ ಬರಲಾಗಿದೆ. ಇತರೆ ತಾಣಗಳಿಗೆ ಸಂಬಂಧಿಸಿದಂತೆ ಮಾತುಕತೆ ಇನ್ನೂ ಪ್ರಗತಿಯಲ್ಲಿದೆ ಎಂದು ಆ ಮೂಲಗಳು ತಿಳಿಸಿವೆ.

ಗಡಿಯಲ್ಲಿ 2020ರ ಏಪ್ರಿಲ್‌ಗೂ ಹಿಂದೆ ಇದ್ದಂತೆ ಗಸ್ತು ವ್ಯವಸ್ಥೆಯನ್ನು ಮರುಸ್ಥಾಪಿಸುವುದು ಒಪ್ಪಂದದ ಉದ್ದೇಶ. ಗಾಲ್ವಾನ್ ಕಣಿವೆಯಲ್ಲಿ 2020ರ ಜೂನ್‌ನಲ್ಲಿ ಸೇನೆಗಳ ನಡುವೆ ಘರ್ಷಣೆ ಆರಂಭವಾದ ಬಳಿಕ ಇಲ್ಲಿ ಅನಿಶ್ಚಿತ ಪರಿಸ್ಥಿತಿ ನಿರ್ಮಾಣವಾಗಿತ್ತು.

ರಾಜತಾಂತ್ರಿಕ ಮತ್ತು ಸರ್ಕಾರದ ಹಂತದಲ್ಲಿ ನಡೆದ ವಿವಿಧ ಹಂತದ ಮಾತುಕತೆಗಳ ಪರಿಣಾಮ ಉಭಯ ದೇಶಗಳು ಒಪ್ಪಂದವನ್ನು ಅಂತಿಮಗೊಳಿಸಿವೆ ಎಂದು ಭಾರತ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಇತ್ತೀಚೆಗೆ ಪ್ರಕಟಿಸಿದ್ದರು.

ಬಲೂಚಿಸ್ತಾನ: 10 ಮಂದಿ ಸಾವು

ದುಬೈ (ಎ.ಪಿ): ಪೊಲೀಸ್ ಗಸ್ತು ವಾಹನಗಳನ್ನು ಗುರಿಯಾಗಿಸಿ ಸಿಸ್ತಾನ್ ಮತ್ತು ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ನಡೆದ ದಾಳಿಯಲ್ಲಿ ಕನಿಷ್ಠ 10 ಮಂದಿ ಅಧಿಕಾರಿಗಳು ಮೃತಪಟ್ಟಿದ್ದಾರೆ.

ರಾಜಧಾನಿಯಿಂದ 1,200 ಕಿ.ಮೀ. ದೂರದ ಗೋಹರ್ ಕುಹ್ ಬಳಿ ಕೃತ್ಯ ನಡೆದಿದೆ. ಅಧಿಕೃತ ಟಿ.ವಿ ಮಾಧ್ಯಮವು ಅಧಿಕಾರಿಗಳು ಸತ್ತಿದ್ದಾರೆ ಎಂದು ದೃಢಪಡಿಸಿದೆ.

ಅಫ್ಗಾನಿಸ್ತಾನ, ಇರಾನ್, ಪಾಕಿಸ್ತಾನ ಮೂಲದ ಬಲೂಚ್ ಸಮುದಾಯದ ಜನರ ಸಂಘಟನೆಯಾಗಿರುವ ಹಾಲ್‌ವಶ್ ಈ ದಾಳಿಗೆ ಸಂಬಂಧಿಸಿದ ಚಿತ್ರ, ವಿಡಿಯೊವನ್ನು ಜಾಲತಾಣದಲ್ಲಿ ಹಂಚಿಕೊಂಡಿದೆ.

ಎರಡು ವಾಹನ ಗುರಿಯಾಗಿಸಿ ದಾಳಿ ನಡೆದಿದೆ. ಘಟನೆ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದು ಸಚಿವ ಇಸ್ಕಂದರ್ ಮೊಮೆನಿ ತಿಳಿಸಿದ್ದಾರೆ.

ಕ್ರಾಂತಿಕಾರಿ ಬೆಳವಣಿಗೆ ಅಗತ್ಯ: ಸೋಮನಾಥ್

ನವದೆಹಲಿ (ಪಿಟಿಐ): ಅಭಿವೃದ್ಧಿ ಹೊಂದಿದ ಆರ್ಥಿಕತೆಯಾಗಿ ಬೆಳೆಯಲು ಭಾರತವು ಕ್ರಾಂತಿಕಾರಿ ರೀತಿಯಲ್ಲಿ ಬೆಳವಣಿಗೆ ಸಾಧಿಸಬೇಕು ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಪ್ರತಿಪಾದಿಸಿದರು.

ನವದೆಹಲಿಯ ಇಂದ್ರಪ್ರಸ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಐಐಐಟಿ) 13ನೇ ಘಟಿಕೋತ್ಸವ ಸಮಾರಂಭದಲ್ಲಿ ಶನಿವಾರ ಮಾತನಾಡಿದ ಅವರು, ಆರ್ಥಿಕ ಬೆಳವಣಿಗೆಯ ವೇಗ ಹೆಚ್ಚಿಸಲು ತಂತ್ರಜ್ಞಾನ ಕ್ಷೇತ್ರದ ಪ್ರಗತಿ ಮತ್ತು ಉತ್ಪನ್ನಗಳ ಅಭಿವೃದ್ಧಿಯ ಮಹತ್ವವನ್ನು ಒತ್ತಿ ಹೇಳಿದರು.

'ಭಾರತವು ಜಗತ್ತಿನ ಮೂರನೇ, ಎರಡನೇ ಅಥವಾ ಮೊದಲನೇ ಅತಿದೊಡ್ಡ ಆರ್ಥಿಕತೆಯಾಗಲು ಬಯಸಿದರೆ ಕ್ರಾಂತಿಕಾರಿ ಬದಲಾವಣೆಯ ಅಗತ್ಯವಿದೆ. ವ್ಯಾಪಾರ ಮತ್ತು ಲಭ್ಯವಿರುವ ಸಂಪನ್ಮೂಲಗಳಿಂದ ಮಾತ್ರ ಇಂತಹ ಬೆಳವಣಿಗೆ ಸಾಧ್ಯವಿಲ್ಲ. ಉತ್ಪನ್ನಗಳ ಅಭಿವೃದ್ಧಿಗೆ ಶಕ್ತಿ ತುಂಬುವಂತಹ ತಂತ್ರಜ್ಞಾನ ಬೆಳೆಸಲು ಒತ್ತು ನೀಡಬೇಕಿದೆ' ಎಂದು ಹೇಳಿದರು.


ಸೋಮನಾಥ್

ಬಾಹ್ಯಾಕಾಶ ಕ್ಷೇತ್ರದಲ್ಲಿನ ಹೊಸ ಅನ್ವೇಷಣೆಗಾಗಿ ಎಲಾನ್ ಮಸ್ಕ್ ಅವರನ್ನು ಶ್ಲಾಘಿಸಿದ ಇಸ್ರೊ ಅಧ್ಯಕ್ಷರು, 'ಮಸ್ಕ್ ಅವರ ಸಾಧನೆಗಳು ಇಸ್ರೊ ಸೇರಿದಂತೆ ಬಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜಾಗತಿಕವಾಗಿ ನಡೆಯುತ್ತಿರುವ ಅಧ್ಯಯನಗಳಿಗೆ ಸ್ಫೂರ್ತಿ ನೀಡಿವೆ' ಎಂದರು.

'ಮಸ್ಕ್ ಅವರು ರಾಕೆಟ್‌ಗಳನ್ನು ಅಭಿವೃದ್ಧಿಪಡಿಸುವ ಮೂಲಕ ಎಲ್ಲರ ಗಮನ ತಮ್ಮತ್ತ ಸೆಳೆಯುತ್ತಿದ್ದಾರೆ. ಯುರೋಪ್‌ನ ದೇಶಗಳು, ರಷ್ಯಾ ಮತ್ತು ಚೀನಾದವರೆಗೆ ಎಲ್ಲರೂ ಅವರ ಸಾಧನೆಯನ್ನು ಅಚ್ಚರಿಯಿಂದ ನೋಡುತ್ತಿದ್ದಾರೆ. ಅವರು ಅದ್ಭುತ ಕೆಲಸ ಮಾಡುವಂತಹ ವ್ಯಕ್ತಿ. ಅವರ ಸಾಧನೆ ನಮಗೆಲ್ಲರಿಗೂ ಪ್ರೇರಣೆ ನೀಡಿದೆ' ಎಂದಿದ್ದಾರೆ.

ಬೃಹತ್ ಗಾತ್ರದ ಲ್ಯಾಂಡರ್ ಅಭಿವೃದ್ಧಿಗೆ ಇಸ್ರೊ ಸಿದ್ಧತೆ

ಒಂದನೇ ಪುಟದಿಂದ...

ಅದಕ್ಕಾಗಿ ನಮಗೆ ಹೊಸ ಎಂಜಿನ್‌ಗಳು, ಪ್ರೊಪೆಲ್ಲಂಟ್ ಟ್ಯಾಂಕ್‌ಗಳು, ಸ್ಥಿರಿಯೊ ಕಂಟ್ರೋಲ್ ಮತ್ತು ಹೊಸ ಲ್ಯಾಂಡಿಂಗ್ ವ್ಯವಸ್ಥೆಗಳು ಬೇಕಾಗುತ್ತವೆ. ಇದರ ಉಡಾವಣೆ 2028ರ ಸುಮಾರಿಗೆ ನಡೆಯಲಿದೆ' ಎಂದು ಮಾಹಿತಿ ನೀಡಿದರು.

ಚಂದ್ರಯಾನ–3 ರಲ್ಲಿ ಬಳಸಿದ್ದ ಪ್ರಗ್ಯಾನ್ ರೋವರ್ 25 ಕೆ.ಜಿ ತೂಕವಿತ್ತು. ಅದಕ್ಕೆ ಹೋಲಿಸಿದರೆ ಚಂದ್ರಯಾನ–5 ಯೋಜನೆಗೆ ಅಭಿವೃದ್ಧಿಪಡಿಸಲಿರುವ ಲ್ಯಾಂಡರ್‌ನ ಸಾಮರ್ಥ್ಯದಲ್ಲಿ 'ಗಮನಾರ್ಹ ಸುಧಾರಣೆ' ಇರಲಿದೆ ಎಂದರು.

'ಚಂದ್ರಯಾನ–5 ಯೋಜನೆಯು ನಿಖರ ಲ್ಯಾಂಡಿಂಗ್, ಅಧಿಕ ತೂಕದ ರೋವರ್ ಅನ್ನು ಹೊತ್ತೊಯ್ಯುವ ಲ್ಯಾಂಡರ್‌ನ ಸಾಮರ್ಥ್ಯ ಪರೀಕ್ಷೆ ಸೇರಿದಂತೆ ಭವಿಷ್ಯದಲ್ಲಿ ಮಾನವನನ್ನು ಚಂದ್ರನಲ್ಲಿಗೆ ಕಳುಹಿಸಲು ಅಗತ್ಯವಿರುವ ನಿರ್ಣಾಯಕ ತಂತ್ರಜ್ಞಾನವನ್ನು ಇಸ್ರೊ ಅಭಿವೃದ್ಧಿಪಡಿಸಿದಂತೆ ಆಗಲಿದೆ' ಎಂದು ಹೇಳಿದರು.

ಭಾರತವು 2040ರ ವೇಳೆಗೆ ಚಂದ್ರನ ಮೇಲೆ ಮಾನವನನ್ನು ಕಳುಹಿಸುವ ಯೋಜನೆ ಹಾಕಿಕೊಂಡಿದೆ.

ಸಂಕ್ಷಿಪ್ತ ಸುದ್ದಿ

ಐಸಿಐಸಿಐ ಬ್ಯಾಂಕ್ ಲಾಭ ಏರಿಕೆ

ನವದೆಹಲಿ (ಪಿಟಿಐ): ಖಾಸಗಿ ವಲಯದ ಐಸಿಐಸಿಐ ಬ್ಯಾಂಕ್ 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ 11,746 ಕೋಟಿ ನಿವ್ವಳ ಲಾಭಗಳಿಸಿದೆ.

ಕಳೆದ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹10,261 ಕೋಟಿ ಲಾಭಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 14.5ರಷ್ಟು ಏರಿಕೆಯಾಗಿದೆ.

ಈ ತ್ರೈಮಾಸಿಕದಲ್ಲಿ ವರಮಾನ ಗಳಿಕೆಯಲ್ಲೂ ಏರಿಕೆಯಾಗಿದ್ದು, ₹47,714 ಕೋಟಿ ಗಳಿಸಿದೆ. ಬಡ್ಡಿ ವರಮಾನ ₹40,573 ಕೋಟಿ ಆಗಿದೆ. ನಿವ್ವಳ ಬಡ್ಡಿ ವರಮಾನದಲ್ಲಿ ಶೇ 9.55ರಷ್ಟು ಹೆಚ್ಚಳವಾಗಿದ್ದು, ಒಟ್ಟು ₹20,048 ಕೋಟಿ ಗಳಿಸಿದೆ.

ಇಎಸ್‌ಐಗೆ ಹೊಸ ಸದಸ್ಯರ ನೋಂದಣಿ ಏರಿಕೆ

ನವದೆಹಲಿ (ಪಿಟಿಐ): ಕಾರ್ಮಿಕರ ರಾಜ್ಯ ವಿಮಾ ನಿಗಮದ (ಇಎಸ್‌ಐಸಿ) ಇಎಸ್‌ಐ ಯೋಜನೆಯಡಿ ಆಗಸ್ಟ್ ತಿಂಗಳಿನಲ್ಲಿ ಹೊಸದಾಗಿ 20.74 ಲಕ್ಷ ಉದ್ಯೋಗಿಗಳು ನೋಂದಣಿಯಾಗಿದ್ದಾರೆ.

ಕಳೆದ ವರ್ಷದ ಇದೇ ತಿಂಗಳಿನಲ್ಲಿ 19.42 ಲಕ್ಷ ಉದ್ಯೋಗಿಗಳು ನೋಂದಣಿಯಾಗಿದ್ದರು. ಇದಕ್ಕೆ ಹೋಲಿಸಿದರೆ ಸದಸ್ಯರ ಸಂಖ್ಯೆಯಲ್ಲಿ ಶೇ 6.8ರಷ್ಟು ಏರಿಕೆಯಾಗಿದೆ. ಈ ಪೈಕಿ 25 ವಯೋಮಾನದವರ ಸಂಖ್ಯೆ 9.89 ಲಕ್ಷವಿದೆ. 60 ಲಿಂಗತ್ವ ಅಲ್ಪಸಂಖ್ಯಾತರು ಇಎಸ್‌ಐ ಯೋಜನೆಯಡಿ ನೋಂದಾಯಿಸಿಕೊಂಡಿದ್ದಾರೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹18000
ಎಸಿ	₹11390
ಆರ್‌ಪಿ	₹19000
ಆರ್‌ಸಿ	₹10000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹172
ಗುಡ್ ಲಾಟ್	₹168

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹255-466
ದ್ವಿತಳಿ (ಬಿ.ವಿ)	₹315-612

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹575

ಕುಗ್ಗಿದ ಹಣ್ಣಿನ ಗಾತ್ರ: ಹೊರರಾಜ್ಯದಲ್ಲಿ ಬೇಡಿಕೆ ಕುಸಿತ

ಅನಾನಸ್ ಇಳುವರಿ ಕುಂಠಿತ

• ರಾಜೇಂದ್ರ ಹೆಗಡೆ

ಶಿರಸಿ: ಪ್ರಸಕ್ತ ವರ್ಷ ಅತಿಯಾದ ಮಳೆಯಿಂದಾಗಿ ಅನಾನಸ್ ಇಳುವರಿ ತೀವ್ರವಾಗಿ ಕುಸಿದಿದೆ. ಹಣ್ಣಿನ ಗಾತ್ರವೂ ಕಡಿಮೆಯಾಗಿದೆ. ಇದರಿಂದ ಹೊರ ರಾಜ್ಯಗಳಲ್ಲಿ ಬೇಡಿಕೆ ಕುಗ್ಗಿದೆ. ಹೀಗಾಗಿ, ಬೆಳೆಗಾರರು ಸ್ಥಳೀಯ ಮಾರುಕಟ್ಟೆಯನ್ನೇ ಅವಲಂಬಿಸುವಂತಾಗಿದೆ.

ಶಿರಸಿ ತಾಲ್ಲೂಕಿನ ಬನವಾಸಿ ಹೋಬಳಿಯಲ್ಲಿ 250 ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಅನಾನಸ್ ಬೆಳೆಯಲಾಗುತ್ತದೆ. ಇಲ್ಲಿನ ಅನಾನಸ್ ದೆಹಲಿ, ಮುಂಬೈ, ಪಂಜಾಬ್, ಹರಿಯಾಣ ಸೇರಿ ಉತ್ತರ ಭಾರತಕ್ಕೆ ರವಾನೆಯಾಗುತ್ತದೆ.

'ಜೂನ್, ಜುಲೈನಲ್ಲಿ ಗಿಡಗಳಲ್ಲಿ ಹೂವು ಬಿಡಲು ಔಷಧ ಸಿಂಪಡಿಸುತ್ತಿದ್ದೆವು. ಧಾರಾಕಾರ ಮಳೆಯಿಂದ ಔಷಧ ಸಿಂಪಡಿಸದ ಕಾರಣಕ್ಕೆ ಕಾಯಿಗಳ ಗಾತ್ರ ಕಡಿಮೆಯಾಗಿದೆ. ಎರಡು ಕೆ.ಜಿ ತೂಗುವಷ್ಟು ಬೆಳೆದು 'ಎ' ಗ್ರೇಡ್ ಹಂತಕ್ಕೆ ಬರುತ್ತಿದ್ದ ಕಾಯಿಗಳೆಲ್ಲ ಒಂದು ಕೆ.ಜಿ ತೂಗುತ್ತಿವೆ. ಮಳೆಯಿಂದ ಅವು ಬೇಗ ಹಣ್ಣಾಗಿ ಕೊಳೆಯಲು ಆರಂಭಿಸಿವೆ' ಎಂದು ಬೆಳೆಗಾರ ಮಂಜುನಾಥಗೌಡ 'ಪ್ರಜಾವಾಣಿ'ಗೆ ತಿಳಿಸಿದರು.


ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ಹಣ್ಣಾದ ಅನಾನಸ್‌ಗಳನ್ನು ಮಾರುಕಟ್ಟೆಗೆ ಸಾಗಿಸಲು ಸಿದ್ಧತೆ ನಡೆದಿದೆ

'ಒಂದು ಲಕ್ಷ ಅನಾನಸ್ ಗಿಡ ನಾಟಿ ಮಾಡಿದ್ದು, 30 ಸಾವಿರ ಕಾಯಿಗಳು ಲಭಿಸಿವೆ. ಬಹುತೇಕ 'ಬಿ' ಗ್ರೇಡ್ ಗುಣಮಟ್ಟ ಹೊಂದಿವೆ. ಹಾಗಾಗಿ, ಈ ಬಾರಿ ಬನವಾಸಿಯ ಅನಾನಸ್‌ಗೆ ಹೊರರಾಜ್ಯದ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲ. ಉತ್ತಮ ಗುಣಮಟ್ಟದ ಕಾಯಿಗಳ ಸಂಖ್ಯೆ ತೀರಾ ಕಡಿಮೆಯಿದೆ. ಹೊರ ರಾಜ್ಯದ ಮಾರುಕಟ್ಟೆಗೆ ಒಯ್ದರೆ, ಸಾಗಣೆ ವೆಚ್ಚ ಕೂಡ ಸಿಗುವುದಿಲ್ಲ. ಹೀಗಾಗಿ, ಸ್ಥಳೀಯವಾಗಿ ಮಾರುವುದು ಅನಿವಾರ್ಯವಾಗಿದೆ' ಎಂದು ತಿಳಿಸಿದರು.

> ಮಳೆಯಿಂದಾಗಿ ಹೂವು ಕಚ್ಚುವ ವೇಳೆ ಮತ್ತು ಕಾಯಿ ಬಲಿಯುವ ಹಂತದಲ್ಲಿ ಔಷಧ ಸಿಂಪಡಣೆ ಸಾಧ್ಯವಾಗಿಲ್ಲ. ಇದರಿಂದ ಕಾಯಿಯ ಗಾತ್ರ ಅರ್ಧದಷ್ಟು ಇಳಿದಿದೆ
>
> **ಗಣೇಶ ಹೆಗಡೆ,** ಸಹಾಯಕ ನಿರ್ದೇಶಕ ತೋಟಗಾರಿಕಾ ಇಲಾಖೆ, ಶಿರಸಿ

'ಕಳೆದ ವರ್ಷ ಉತ್ತಮ ಗುಣಮಟ್ಟದ ಕಾಯಿಗೆ ಪ್ರತಿ ಕೆ.ಜಿಗೆ ಸರಾಸರಿ ₹15 ರಿಂದ ₹20 ದರವಿತ್ತು. ಈ ಬಾರಿ ಒಂದು ಕೆ.ಜಿಗೆ ₹25 ರ ವರೆಗೆ ಧಾರಣೆಯಿದೆ. ಒಂದು ಗಿಡಕ್ಕೆ ಮೂರು ಕೆ.ಜಿವರೆಗೆ ತೂಗುವ ಕಾಯಿ ಒಂದು ಕೆ.ಜಿ ತೂಗುತ್ತಿದೆ' ಎಂದು ಬೆಳೆಗಾರರು ತಿಳಿಸಿದರು.

ಸ್ಥಳೀಯ ಮಾರುಕಟ್ಟೆಯಲ್ಲಿ 'ಬಿ' ಗ್ರೇಡ್ ಕಾಯಿಗೆ ₹20 ದರ ಲಭಿಸುತ್ತಿದೆ. ಔಷಧ ಸಿಂಪಡಿಸಿದ 45 ದಿನದ ಬಳಿಕ ಹೂವು ಬಿಟ್ಟು 5 ತಿಂಗಳಿಗೆ ಬೆಳೆ ಕೈ ಸೇರುತ್ತಿತ್ತು. ಆದರೆ, ಅತಿಯಾದ ಮಳೆಯಿಂದಾಗಿ ಎಲ್ಲಾ ಲೆಕ್ಕಾಚಾರ ಬುಡಮೇಲಾಗಿದೆ' ಎಂದು ನೋವು ತೋಡಿಕೊಂಡರು.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅಭಿಮತ

'ಆರ್ಥಿಕ ಸ್ಥಿರತೆಗೆ ಕ್ರಿಪ್ಟೊ ಕಂಟಕ'

ವಾಷಿಂಗ್ಟನ್ (ಪಿಟಿಐ/ ರಾಯಿಟರ್ಸ್): 'ಕ್ರಿಪ್ಟೊ ಕರೆನ್ಸಿಗಳು ಆರ್ಥಿಕ ಹಾಗೂ ವಿತ್ತೀಯ ಸ್ಥಿರತೆಗೆ ಬಹುದೊಡ್ಡ ಅಪಾಯವನ್ನು ಉಂಟು ಮಾಡುತ್ತವೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಅಮೆರಿಕದ ಪೀಟರ್ಸನ್ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಎಕನಾಮಿಕ್ಸ್‌ನಿಂದ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಈ ಕರೆನ್ಸಿಗಳ ಬಳಕೆಯಿಂದಾಗಿ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಹಣದ ಪೂರೈಕೆ ಮೇಲೆ ಹೊಂದಿರುವ ನಿಯಂತ್ರಣವನ್ನು ಕೇಂದ್ರೀಯ ಬ್ಯಾಂಕ್ ಕಳೆದುಕೊಳ್ಳುವ ಪರಿಸ್ಥಿತಿ ಸೃಷ್ಟಿಯಾಗಲಿದೆ. ಹಾಗಾಗಿ, ಹಣಕಾಸಿನ ವ್ಯವಸ್ಥೆಯಲ್ಲಿ ಕ್ರಿಪ್ಟೊ ಕರೆನ್ಸಿಗಳು ಪ್ರಾಬಲ್ಯ ಸಾಧಿಸಲು ಅನುಮತಿ ನೀಡಬಾರದು ಎಂಬುದು ನನ್ನ ಸಲಹೆಯಾಗಿದೆ' ಎಂದರು.


ಶಕ್ತಿಕಾಂತ ದಾಸ್

ಹಣಕಾಸು ಹಾಗೂ ವಿತ್ತೀಯ ಸ್ಥಿರತೆಗೆ ಅಪಾಯ ಎದುರಾದರೆ ಬ್ಯಾಂಕಿಂಗ್ ವ್ಯವಸ್ಥೆಯು ಆಪತ್ತಿಗೆ ಸಿಲುಕಲಿದೆ. ಆರ್ಥಿಕತೆಗೆ ಹಣದ ಪೂರೈಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ಬ್ಯಾಂಕ್ ಹೊಂದಿರುವ ಅಧಿಕಾರವು ಮೊಟಕಾಗುವುದು ಒಳ್ಳೆಯದಲ್ಲ ಎಂದು ಹೇಳಿದರು.

ಈ ಅಧಿಕಾರ ಕಳೆದುಕೊಂಡರೆ ಆರ್ಥಿಕ ವ್ಯವಸ್ಥೆಯಲ್ಲಿನ ನಗದು ಲಭ್ಯತೆಯನ್ನು ಕೇಂದ್ರೀಯ ಬ್ಯಾಂಕ್ ಪರಿಶೀಲಿಸಲು ಹಾಗೂ ಹಣದುಬ್ಬರವನ್ನು ನಿಯಂತ್ರಿಸಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಕ್ರಿಪ್ಟೊ ಕರೆನ್ಸಿಗಳ ವ್ಯವಹಾರವು ದೇಶಗಳ ನಡುವೆ ನಡೆಯುತ್ತದೆ. ಹಾಗಾಗಿ, ಅಂತರರಾಷ್ಟ್ರೀಯಮಟ್ಟದಲ್ಲಿ ಈ ಬಗ್ಗೆ ತಿಳಿವಳಿಕೆ ಮೂಡಬೇಕಿದೆ ಎಂದರು.

'ಕ್ರಿಪ್ಟೊ ಕರೆನ್ಸಿ ಬಳಕೆಯಿಂದ ಎದುರಾಗುವ ದೊಡ್ಡ ಅಪಾಯಗಳ ಕುರಿತು ಗಮನಹರಿಸುವ ಬಗ್ಗೆ ಅಂತರರಾಷ್ಟ್ರೀಯಮಟ್ಟದಲ್ಲಿ ತಿಳಿವಳಿಕೆ ರೂಪಿಸಬೇಕಿದೆ. ಹಾಗಾಗಿ, ಇದರ ಬಳಕೆಗೆ ನಾನು ಪ್ರೋತ್ಸಾಹ ನೀಡುವುದಿಲ್ಲ' ಎಂದು ತಿಳಿಸಿದರು.

'ಭಾರತವು ಕ್ರಿಪ್ಟೊ ಕರೆನ್ಸಿ ವಿರುದ್ಧ ಧ್ವನಿ ಎತ್ತಿದ ಮೊದಲ ದೇಶವಾಗಿದೆ. ಜಿ20 ಶೃಂಗಸಭೆಯಲ್ಲಿ ಈ ಕರೆನ್ಸಿ ವ್ಯವಸ್ಥೆಯನ್ನು ಹೇಗೆ ನಿಭಾಯಿಸಬೇಕು ಎಂಬ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ನಿಯಮಾವಳಿ ರೂಪಿಸುವ ಕುರಿತು ಒಪ್ಪಂದವಾಗಿದೆ. ಈ ನಿಟ್ಟಿನಲ್ಲಿ ಕೆಲವು ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದರು.

ವಿಮಾನದಲ್ಲಿ ತೆಂಗಿನಕಾಯಿ ಕೊಂಡೊಯ್ಯಲು ಅಸ್ತು

ನವದೆಹಲಿ (ಪಿಟಿಐ): ಕೇರಳದ ಶಬರಿಮಲೆಗೆ ತೆರಳುವ ಅಯ್ಯಪ್ಪ ಸ್ವಾಮಿ ಭಕ್ತರು ವಿಮಾನಗಳಲ್ಲಿ ತೆಂಗಿನಕಾಯಿ ತೆಗೆದುಕೊಂಡು ಹೋಗಲು ನಾಗರಿಕ ವಿಮಾನಯಾನ ಭದ್ರತಾ ಸಂಸ್ಥೆ (ಬಿಸಿಎಎಸ್) ಅನುಮತಿ ನೀಡಿದೆ.

ಮುಂದಿನ ವರ್ಷದ ಜನವರಿ 20ರ ವರೆಗೆ ಈ ಅನುಮತಿಯು ಜಾರಿಯಲ್ಲಿ ಇರಲಿದೆ. ಸದ್ಯದ ನಿಯಮಾವಳಿ ಅನ್ವಯ ಕ್ಯಾಬಿನ್ ಬ್ಯಾಗೇಜ್‌ನಲ್ಲಿ ತೆಂಗಿನಕಾಯಿ ಕೊಂಡೊಯ್ಯಲು ಅವಕಾಶವಿಲ್ಲ. ತೆಂಗಿನಕಾಯಿ ಹೊತ್ತಿ ಉರಿಯುವ ಗುಣ ಹೊಂದಿರುವುದರಿಂದ ಇದಕ್ಕೆ ನಿರ್ಬಂಧ ಹೇರಲಾಗಿದೆ.

ನಿಲ್ದಾಣದಲ್ಲಿ ಎಕ್ಸ್ ರೇ ಮತ್ತು ಸ್ಫೋಟಕ ಪತ್ತೆ ಶೋಧಕದಿಂದ ಪರಿಶೀಲಿಸಿದ ಬಳಿಕವೇ ತೆಂಗಿನಕಾಯಿ ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗುತ್ತದೆ ಎಂದು ಬಿಸಿಎಎಸ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನವೆಂಬರ್ ಮಧ್ಯಭಾಗದಿಂದ ಜನವರಿವರೆಗೆ ಶಬರಿಮಲೆಯು ಭಕ್ತರಿಗೆ ತೆರೆದಿರುತ್ತದೆ. ಈ ಅವಧಿಯಲ್ಲಿ ಭಕ್ತರು ಅಯ್ಯಪ್ಪ ಸ್ವಾಮಿಯ ದರ್ಶನಕ್ಕೆ 'ಇಡುಮುಡಿ ಕಟ್ಟು' ಸಹಿತ ತೆರಳುತ್ತಾರೆ. ಇದರಲ್ಲಿ ಪೂಜಾ ಸಾಮಗ್ರಿಗಳು ಮತ್ತು ತುಪ್ಪ ತುಂಬಿದ ತೆಂಗಿನಕಾಯಿ ಇರುತ್ತದೆ.

ಐಟಿಆರ್ ಸಲ್ಲಿಕೆ: ನ.15ರವರೆಗೆ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): 2024–25ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ಕಾರ್ಪೊರೇಟ್ ಸಂಸ್ಥೆಗಳಿಗೆ ಆದಾಯ ತೆರಿಗೆ ವಿವರ ಸಲ್ಲಿಕೆ ಅವಧಿಯನ್ನು ನವೆಂಬರ್ 15ರ ವರೆಗೆ ವಿಸ್ತರಿಸಲಾಗಿದೆ.

ಅಕ್ಟೋಬರ್ 31ರ ವರೆಗೆ ಐಟಿಆರ್ ಸಲ್ಲಿಕೆಗೆ ಗಡುವು ನಿಗದಿಯಾಗಿತ್ತು ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ತಿಳಿಸಿದೆ.

'ಆದರೆ, ಈ ವಿಸ್ತರಣೆ ಅವಧಿಯು ತೆರಿಗೆ ಲೆಕ್ಕಪತ್ರ ವರದಿ ಸಲ್ಲಿಕೆಗೆ ಅನ್ವಯಿಸುವುದಿಲ್ಲ. ಈ ತಿಂಗಳ ಅಂತ್ಯದೊಳಗೆ ಸಲ್ಲಿಸಬೇಕಿದೆ' ಎಂದು ತೆರಿಗೆ ತಜ್ಞರು ಹೇಳಿದ್ದಾರೆ.





12 ವರ್ಷ ನಂತರ ತವರಿನಲ್ಲಿ ಭಾರತಕ್ಕೆ ಸರಣಿ ಸೋಲು ● ಸ್ಯಾಂಟನರ್‌ಗೆ 6 ವಿಕೆಟ್ ● ಕಿವೀಸ್‌ಗೆ 113 ರನ್‌ಗಳ ಜಯ

ಸ್ಪಿನ್ ಖೆಡ್ಡಕ್ಕೆ ಬಿದ್ದ ರೋಹಿತ್ ಪಡೆ

ಪ್ರಜಾವಾಣಿ ವಾರ್ತೆ

ಪುಣೆ: ಭಾರತ ಮತ್ತು ನ್ಯೂಜಿಲೆಂಡ್ ತಂಡಗಳ ನಡುವಣ ಎರಡನೇ ಟೆಸ್ಟ್‌ನ ಮೂರನೇ ದಿನವು ಪಂದ್ಯದ ಕೊನೆಯ ದಿನವಾಗಬಹುದೆಂದು ಭಾವಿಸಿ ಸುಮಾರು 30 ಸಾವಿರ ಮಂದಿ ಶನಿವಾರ ಇಲ್ಲಿನ ಎಂಸಿಎ ಕ್ರೀಡಾಂಗಣಕ್ಕೆ ಬಂದಿದ್ದರು.

ಇತಿಹಾಸದ ಭಾಗವಾಗಬೇಕೆಂದು ಬಯಸಿ ಈ 'ಕ್ರಿಕೆಟ್ ಪೋಷಕರು' ಬಿಸಿಲನ್ನೂ ಲೆಕ್ಕಿಸಲಿಲ್ಲ. ಭಾರತ ನಾಲ್ಕನೇ ಇನಿಂಗ್ಸ್‌ನಲ್ಲಿ 359 ರನ್‌ಗಳನ್ನು ಬೆನ್ನಟ್ಟಬಹುದೆಂಬ ಪ್ರಲೋಭನೆ ಅವರನ್ನು ಇಲ್ಲಿಗೆ ಸೆಳೆದಿತ್ತು. 2008ರಲ್ಲಿ ಭಾರತ, ಇಂಗ್ಲೆಂಡ್ ವಿರುದ್ಧ ಚೆನ್ನೈನಲ್ಲಿ 387 ರನ್‌ಗಳ ಬೃಹತ್ ಗುರಿಯನ್ನು ತಲುಪಿದ್ದು, ಈ ಎರಡನೇ ಅತಿ ದೊಡ್ಡ ಗುರಿಯನ್ನೂ ತಲುಪಬಹುದೆಂಬ ಆಸೆ ಅವರಲ್ಲಿತ್ತು.

ಆದರೆ ಪ್ರೇಕ್ಷಕರು ಬಯಸದೇ ಇದ್ದ ಇತಿಹಾಸದ ಭಾಗವಾದರು. 'ಬೋನಸ್' ಎಂಬಂತೆ ಒಂದು ಯುಗದ ಅಂತ್ಯ ಕೂಡ ಕಾಣಬೇಕಾಯಿತು.

ಮಿಚೆಲ್ ಸ್ಯಾಂಟನರ್ (104ಕ್ಕೆ6) ಅವರ ಅಮೋಘ ದಾಳಿಗೆ ಸಿಲುಕಿ ಭಾರತ ಎರಡನೇ ಇನಿಂಗ್ಸ್‌ನಲ್ಲಿ 245 ರನ್‌ಗಳಿಗೆ ಆಲೌಟ್ ಆಯಿತು. ನ್ಯೂಜಿಲೆಂಡ್ ಮೂರೇ ದಿನದಲ್ಲಿ 113 ರನ್‌ಗಳ ಜಯಪಡೆಯಿತು. ಕ್ರೀಡಾಂಗಣದಲ್ಲಿದ್ದ ಬೃಹತ್ ಪರದೆಯಲ್ಲಿ ನ್ಯೂಜಿಲೆಂಡ್ ಸರಣಿಯನ್ನು 2–0 ಯಿಂದ ಗೆದ್ದಿತು ಎಂಬ ಸಾಲುಗಳು ಮೂಡಿದವು.

2012ರ ನಂತರ ಭಾರತ ಇದೇ ಮೊದಲ ಬಾರಿ ತವರಿನಲ್ಲಿ ಸರಣಿ ಸೋತಿತು. ನ್ಯೂಜಿಲೆಂಡ್, ಇದೇ ಮೊದಲ ಬಾರಿ ಭಾರತದ ನೆಲದಲ್ಲಿ ಸರಣಿ ಜಯದ ಸಂಭ್ರಮ ಆಚರಿಸಿತು.

ಭಾರತ ಆಡುತ್ತಿರುವ ರೀತಿ ನೋಡಿದರೆ, ಮುಂಬೈನಲ್ಲಿ ನವೆಂಬರ್ 1ರಿಂದ ನಡೆಯಲಿರುವ ಮೂರನೇ ಟೆಸ್ಟ್ ಕೂಡ ಅದರ ಪಾಲಿಗೆ ಕಠಿಣವಾಗುವಂತೆ ಕಾಣುತ್ತಿದೆ. ಈ ಹಿಂದೆಯೂ ನ್ಯೂಜಿಲೆಂಡ್ ಭಾರತಕ್ಕೆ ತಲೆನೋವಾಗಿದ್ದುದು ಇದೆ. ಆದರೆ ಈ ಬಾರಿ ಮೂರೂ ದಿನ ಅದು ಪ್ರಾಬಲ್ಯ ಮೆರೆಯಿತು.

ಮೊದಲನೆಯದಾಗಿ ಭಾರತ ಮಹತ್ವದ ಟಾಸ್ ಸೋತಿತು. ಆದರೆ ಅದು ಭಾರತದ ಕೈಲಿರಲಿಲ್ಲ. ಎರಡನೆಯದಾಗಿ ವಾಷಿಂಗ್ಟನ್ ಸುಂದರ್ ಅವರು ಏಳು ವಿಕೆಟ್‌ಗಳ ಗೊಂಚಲು ಪಡೆದಾಗ, ಇತರೆ ಬೌಲರ್‌ಗಳ ಬೆಂಬಲ ಸಾಲಲಿಲ್ಲ. ಹೀಗಾಗಿ ನ್ಯೂಜಿಲೆಂಡ್ ನೂರಕ್ಕಿಂತ ಹೆಚ್ಚು ರನ್‌ಗಳ ಮುನ್ನಡೆ ಪಡೆಯಿತು. ಮೂರನೆಯದಾಗಿ ನ್ಯೂಜಿಲೆಂಡ್‌ನ ಸಾಧಾರಣ ಸ್ಪಿನ್ ದಾಳಿಯ ಎದುರು ಭಾರತದ ಅನುಭವಿ ಆಟಗಾರರು ವೃತ್ತಿಪರರಂತೆ ಆಡಲಿಲ್ಲ. ಭಾರತ ಬರೇ 156ಕ್ಕೆ ಆಲೌಟ್ ಆಯಿತು.

ನಾಲ್ಕನೆಯದಾಗಿ ಎರಡನೇ ಇನಿಂಗ್ಸ್‌ನಲ್ಲೂ ಭಾರತದ ಬೌಲಿಂಗ್ ಬಿಗಿಯಾಗಿರಲಿಲ್ಲ. ಹೀಗಾಗಿ ಪ್ರವಾಸಿಗರು 255 ರನ್ ಗಳಿಸಿ ಆತಿಥೇಯರಿಗೆ 359 ರನ್‌ಗಳ ಕಠಿಣ ಸವಾಲೆಸೆದರು.

ಇವೆಲ್ಲದರ ನಂತರ ಭಾರತದ ಆಟಗಾರರು ಎರಡನೇ ಇನಿಂಗ್ಸ್‌ನಲ್ಲಿ ವಿಶ್ವಾಸದಿಂದ ಆಡಲಿಳಿದರು. ಪ್ರೇಕ್ಷಕರೂ ಬೆಂಬಲವೂ ಬೆನ್ನಿಗಿತ್ತು. ಅದಕ್ಕೆ ತಕ್ಕಂತೆ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ (77, 65ಎ, 93 ನಿ) ಉತ್ತಮ ಹೊಡೆತಗಳನ್ನು ಪ್ರದರ್ಶಿಸಿದರು. ಲಂಚ್ ವೇಳೆಗೆ ಭಾರತದ ಮೊತ್ತ 12 ಓವರುಗಳಲ್ಲಿ 1 ವಿಕೆಟ್‌ಗೆ 81 ರನ್.

ಆದರೆ ಈ ವಿಶ್ವಾಸ ಹೆಚ್ಚು ಹೊತ್ತು ಉಳಿಯಲಿಲ್ಲ. ಮುಂದಿನ 10 ಓವರುಗಳಲ್ಲಿ ಗಿಲ್ ಮತ್ತು ಜೈಸ್ವಾಲ್ ಅವರ ವಿಕೆಟ್‌ಗಳು ಉರುಳಿದವು. ಸ್ಯಾಂಟನರ್ ಬೌಲಿಂಗ್‌ನಲ್ಲಿ ಜೈಸ್ವಾಲ್, ಸ್ಲಿಪ್‌ನಲ್ಲಿದ್ದ ಡೇರಿಲ್ ಮಿಚೆಲ್‌ಗೆ ಕ್ಯಾಚ್ ನೀಡಿದರು. ಇದು ಅವರಿಗೆ ಇನಿಂಗ್ಸ್‌ನ ಮೂರನೇ ವಿಕೆಟ್ ಆಯಿತು.

ಹೀಗಾಗಿ ತಂಡದ ಅನುಭವಿ ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ತಮ್ಮ ಸಾಮರ್ಥ್ಯ ತೋರಲು ವೇದಿಕೆ ಸಿದ್ಧವಾಗಿತ್ತು. ಆದರೆ ಅವರ ಆಟದಲ್ಲಿ (17, 40ಎ) ವೈಭವ ಮರೆಯಾದಂತೆ ಇತ್ತು. ಸ್ಯಾಂಟನರ್ ಬೌಲಿಂಗ್‌ನಲ್ಲಿ ಅವರು ಎಲ್‌ಬಿ ಬಲೆಗೆ ಬಿದ್ದರು. ಇದರ ಮರುಪರಿಶೀಲನೆ ಕೇಳಿದರೂ ಪ್ರಯೋಜನವಾಗಲಿಲ್ಲ. ಅಲ್ಲಿಂದ ಗೆಲುವಿನ ಆಸೆ ಕರಗಿತು.

ಕೊಹ್ಲಿ ಅವರಂತೆ ಇಡೀ ತಂಡವೂ ಸ್ವಲ್ಪ 'ದಣಿದಂತೆ' ಕಾಣುತಿತ್ತು. ಅಜೇಯ ತಂಡವೆಂಬ ಭ್ರಮೆಯಿಂದ ಹೊರಬಂದು ಆತ್ಮಾವಲೋಕನ ಮಾಡಿಕೊಳ್ಳಲೂ ಇದು ಸಕಾಲ. ಈಗೇನೊ ಕೆಲವು ತಾರೆಗಳು ತಂಡದಲ್ಲಿದ್ದಾರೆ. ಆದರೆ ತವರಿನಲ್ಲಿ ನಡೆಯುವ ಮುಂಬರುವ ಸರಣಿಯಲ್ಲಿ ಅವರಲ್ಲಿ ಕೆಲವರು ಉಳಿದುಕೊಳ್ಳುವ ಸಾಧ್ಯತೆಗಳು ಕಡಿಮೆ. ಹೀಗಾಗಿ ಇದು ಯುಗದ ಅಂತ್ಯದಂತೆ ಭಾಸವಾಗುತ್ತಿದೆ.

ಮುಖ್ಯಾಂಶಗಳು

- ನ್ಯೂಜಿಲೆಂಡ್‌ಗೆ ಮೊದಲ ಬಾರಿ ಭಾರತದ ನೆಲದಲ್ಲಿ ಸರಣಿ ಜಯ
- 2012ರ ನಂತರ ಭಾರತಕ್ಕೆ ಮೊದಲ ಬಾರಿ ತವರಿನಲ್ಲಿ ಸರಣಿ ಸೋಲು

ಡಬ್ಲ್ಯುಟಿಸಿ: ಅಗ್ರಸ್ಥಾನದಲ್ಲಿದ್ದರೂ ಆತಂಕ...

ದುಬೈ (ಪಿಟಿಐ): ನ್ಯೂಜಿಲೆಂಡ್ ವಿರುದ್ಧ ಎರಡನೇ ಟೆಸ್ಟ್ ಪಂದ್ಯದಲ್ಲಿ ಹೀನಾಯ ಸೋಲಿನ ಹೊರತಾಗಿಯೂ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಆದರೆ ಈ ಸೋಲು, ತಂಡದ ಶೇಕಡಾವಾರು ಅಂಕದ (ಪಿಸಿಟಿ) ಮೇಲೆ ಪರಿಣಾಮ ಬೀರಿದೆ.

ಭಾರತಕ್ಕೆ ಹಾಲಿ ಡಬ್ಲ್ಯುಟಿಸಿ ವರ್ಷದಲ್ಲಿ ಇದು ನಾಲ್ಕನೇ ಸೋಲು. ಪಿಸಿಟಿ ಪ್ರಮಾಣ ಶೇ 68.06 ರಿಂದ 62.82ಕ್ಕೆ ಇಳಿದಿದೆ. ಎರಡನೇ ಸ್ಥಾನದಲ್ಲಿರುವ ಆಸ್ಟ್ರೇಲಿಯಾಕ್ಕಿಂತ ರೋಹಿತ್ ಪಡೆ ಬರೇ 0.32 ಅಂಕಗಳಿಂದ ಮುಂದಿದೆ.

ಬೇರೆ ತಂಡಗಳ ಫಲಿತಾಂಶ ಅವಲಂಬಿಸದೇ, ಸತತ ಮೂರನೇ ಬಾರಿ ಡಬ್ಲ್ಯುಟಿಸಿ ಫೈನಲ್ ತಲುಪಬೇಕಾದರೆ, ಭಾರತ ಈಗ ಉಳಿದಿರುವ ಆರು ಟೆಸ್ಟ್ (ನ್ಯೂಜಿಲೆಂಡ್ ವಿರುದ್ಧ ಒಂದು, ಮತ್ತು ಆಸ್ಟ್ರೇಲಿಯಾ ವಿರುದ್ಧ ಐದು) ಪಂದ್ಯಗಳಲ್ಲಿ ನಾಲ್ಕನ್ನು ಗೆಲ್ಲಲೇಬೇಕಾಗುತ್ತದೆ

ಈ ಸರಣಿಗೆ ಮೊದಲು 18 ಸರಣಿಗಳನ್ನು ಸತತವಾಗಿ ಗೆದ್ದಿದ್ದ ಭಾರತ ಡಬ್ಲ್ಯುಟಿಸಿ ಫೈನಲ್ ತಲುಪುವ ನೆಚ್ಚಿನ ತಂಡವಾಗಿತ್ತು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್‌ಪಟ್ಟಿ

ಸ್ಥಾನ	ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಪಾಯಿಂಟ್ಸ್	ಶೇಕಡಾವಾರು
1	ಭಾರತ	13	8	4	1	98	62.82
2	ಆಸ್ಟ್ರೇಲಿಯಾ	12	8	3	1	90	62.50
3	ಶ್ರೀಲಂಕಾ	9	5	4	0	60	55.56
4	ನ್ಯೂಜಿಲೆಂಡ್	10	5	5	0	60	50
5	ದಕ್ಷಿಣ ಆಫ್ರಿಕಾ	7	3	3	1	40	47.62
6	ಇಂಗ್ಲೆಂಡ್	19	9	9	1	93	40.79
7	ಪಾಕಿಸ್ತಾನ	10	4	6	0	40	33.33
8	ಬಾಂಗ್ಲಾದೇಶ	9	3	6	0	33	30.56
9	ವೆಸ್ಟ್ ಇಂಡೀಸ್	9	1	6	2	20	18.52


ಸರ್ಫರಾಜ್ ಖಾನ್ ವಿಕೆಟ್ ಪಡೆದ ನ್ಯೂಜಿಲೆಂಡ್‌ನ ಮಿಚೆಲ್ ಸ್ಯಾಂಟನರ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪಿಟಿಐ ಚಿತ್ರ


ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್

ವರ್ಷದಲ್ಲಿ ಗರಿಷ್ಠ ರನ್ ಗಳಿಸಿದ ಭಾರತೀಯರು (ಟೆಸ್ಟ್)

ಆಟಗಾರ	ರನ್	ಪಂದ್ಯ	ವರ್ಷ
ಯಶಸ್ವಿ ಜೈಸ್ವಾಲ್	1056	9	2024
ಜಿ.ಆರ್.ವಿಶ್ವನಾಥ್	1047	13	1979
ವಿರಾಟ್ ಕೊಹ್ಲಿ	964	8	2016
ವಿರಾಟ್ ಕೊಹ್ಲಿ	898	7	2017

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 259 (79.1 ಓವರ್‌ಗಳಲ್ಲಿ)
ಭಾರತ: 156 (46.3 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 255 (69.4 ಓವರ್‌ಗಳಲ್ಲಿ)
(ಶುಕ್ರವಾರ: 53 ಓವರುಗಳಲ್ಲಿ 5ಕ್ಕೆ 198)
ಬ್ಲಂಡೆಲ್ ಬಿ ಜಡೇಜ 41 (83ಎ, 4x3)
ಫಿಲಿಪ್ಸ್ ಔಟಾಗದೇ 48 (82ಎ, 4x4, 6x2)
ಸ್ಯಾಂಟನರ್ ಸಿ ಬೂಮ್ರಾ ಬಿ ಜಡೇಜ 4 (16ಎ)
ಸೌಥಿ ಸಿ ಶರ್ಮಾ ಬಿ ಅಶ್ವಿನ್ 0 (3ಎ)
ಎಜಾಜ್ ಸಿ ಸುಂದರ್ ಬಿ ಜಡೇಜ 1 (12ಎ)
ರೂರ್ಕಿ ರನೌಟ್ (ಸುಂದರ್/ ಜಡೇಜ) 0 (3)
ಇತರೆ: 8 (ಲೆಗ್‌ಬೈ 5, ನೋಬಾಲ್ 3)
ವಿಕೆಟ್ ಪತನ: 6–231 (ಟಾಮ್ ಬ್ಲಂಡೆಲ್, 59.3), 7–237 (ಮಿಚೆಲ್ ಸ್ಯಾಂಟನರ್, 63.5), 8–238 (ಟಿಮ್ ಸೌಥಿ, 64.3), 9–241 (ಎಜಾಜ್ ಪಟೇಲ್, 67.3), 10–255 (ವಿಲಿಯಂ ಓ ರೂರ್ಕಿ, 69.4).
ಬೌಲಿಂಗ್: ರವಿಚಂದ್ರನ್ ಅಶ್ವಿನ್ 25–2–97–2; ವಾಷಿಂಗ್ಟನ್ ಸುಂದರ್ 19–0–56–4; ರವೀಂದ್ರ ಜಡೇಜ 19.4–3–72–3; ಜಸ್‌ಪ್ರೀತ್ ಬೂಮ್ರಾ 6–1–23–0.
ಭಾರತ: 245 (60.2 ಓವರುಗಳಲ್ಲಿ)
ಜೈಸ್ವಾಲ್ ಸಿ ಮಿಚೆಲ್ ಬಿ ಸ್ಯಾಂಟನರ್ 77 (65, 4x9, 6x3)
ರೋಹಿತ್ ಸಿ ಯಂಗ್ ಬಿ ಸ್ಯಾಂಟನರ್ 8 (16ಎ, 4x1)
ಶುಭಮನ್ ಸಿ ಮಿಚೆಲ್ ಬಿ ಸ್ಯಾಂಟನರ್ 23 (31ಎ, 4x4)
ಕೊಹ್ಲಿ ಎಲ್‌ಬಿಡಬ್ಲ್ಯು ಬಿ ಸ್ಯಾಂಟನರ್ 17 (40ಎ, 4x2)
ಪಂತ್ ರನ್‌ಔಟ್ (ಸ್ಯಾಂಟನರ್/ ಬ್ಲಂಡೆಲ್) 0 (3ಎ)
ಸುಂದರ್ ಸಿ ಯಂಗ್ ಬಿ ಫಿಲಿಪ್ಸ್ 21 (47ಎ, 4x2)
ಸರ್ಫರಾಜ್ ಬಿ ಸ್ಯಾಂಟನರ್ 9 (15ಎ, 4x1)
ಜಡೇಜ ಸಿ ಸೌಥಿ ಬಿ ಅಜಾಜ್ 42 (84ಎ, 4x2)
ಅಶ್ವಿನ್ ಸಿ ಮಿಚೆಲ್ ಬಿ ಸ್ಯಾಂಟನರ್ 18 (34ಎ, 4x2)
ಆಕಾಶ್ ದೀಪ್ ಸಿ ರಚಿನ್ ಬಿ ಅಜಾಜ್ 1 (24ಎ)
ಬೂಮ್ರಾ ಔಟಾಗದೇ 10 (4ಎ, 4x1, 6x1)
ಇತರೆ: 19 (ಬೈ 12, ಲೆಗ್‌ಬೈ 6, ನೋಬಾಲ್ 1)
ವಿಕೆಟ್ ಪತನ: 1–34 (ರೋಹಿತ್ ಶರ್ಮಾ, 5.4), 2–96 (ಶುಭಮನ್ ಗಿಲ್, 15.3), 3–127 (ಯಶಸ್ವಿ ಜೈಸ್ವಾಲ್, 21.3), 4–127 (ರಿಷಭ್ ಪಂತ್, 22.2), 5–147 (ವಿರಾಟ್ ಕೊಹ್ಲಿ, 29.6), 6–165 (ಸರ್ಫರಾಜ್ ಖಾನ್, 35.2), 7–167 (ವಾಷಿಂಗ್ಟನ್ ಸುಂದರ್, 36.6), 8–206 (ರವಿಚಂದ್ರನ್ ಅಶ್ವಿನ್, 49.3), 9–229 (ಆಕಾಶ್ ದೀಪ್, 58.5), 10–245 (ರವೀಂದ್ರ ಜಡೇಜ, 60.2).
ಬೌಲಿಂಗ್: ಟಿಮ್ ಸೌಥಿ 2–0–15–0; ವಿಲಿಯಂ ಓ ರೂರ್ಕಿ 1–0–5–0; ಮಿಚೆಲ್ ಸ್ಯಾಂಟನರ್ 29–2–104–6; ಅಜಾಜ್ ಪಟೇಲ್ 12.2–0–43–2; ಗ್ಲೆನ್ ಫಿಲಿಪ್ಸ್ 16–0–60–1
ಪಂದ್ಯದ ಆಟಗಾರ: ಮಿಚೆಲ್ ಸ್ಯಾಂಟನರ್ (13 ವಿಕೆಟ್)

ಫಲಿತಾಂಶ: ನ್ಯೂಜಿಲೆಂಡ್‌ಗೆ 113 ರನ್ ಜಯ, ಸರಣಿಯಲ್ಲಿ 2–0 ಮುನ್ನಡೆ

ಡಬ್ಲ್ಯುಟಿಟಿ: ಕ್ವಾರ್ಟರ್‌ಗೆ ಮಣಿಕಾ

ನವದೆಹಲಿ (ಪಿಟಿಐ): ಭಾರತದ ಟೇಬಲ್ ಟೆನಿಸ್ ತಾರೆ ಮಣಿಕಾ ಬಾತ್ರಾ ಅವರು ಫ್ರಾನ್ಸ್‌ನ ಮಾಂಟ್ ಪೆಲೀರ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಚಾಂಪಿಯನ್ಸ್ ಮಹಿಳೆಯರ ಸಿಂಗಲ್ಸ್‌ನಲ್ಲಿ ವಿಶ್ವದ 14ನೇ ಕ್ರಮಾಂಕದ ರೊಮೇನಿಯಾದ ಬರ್ನಾಡೆಟ್ ಸ್ಜೋಕ್ಸ್‌ಗೆ ಆಘಾತ ನೀಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಶುಕ್ರವಾರ ರಾತ್ರಿ ನಡೆದ 16ರ ಘಟ್ಟದ ಹಣಾಹಣಿಯಲ್ಲಿ ವಿಶ್ವದ 30ನೇ ರ‍್ಯಾಂಕ್‌ನ ಭಾರತದ ಆಟಗಾರ್ತಿ ಮಣಿಕಾ 3-1 (11-9, 6-11, 13-11, 11-9) ರಿಂದ ಎಂಟನೇ ಶ್ರೇಯಾಂಕದ ಸ್ಜೋಕ್ಸ್ ಅವರನ್ನು ಹಿಮ್ಮೆಟ್ಟಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಚೀನಾದ ಕಿಯಾನ್ ತಿಯಾನಿ ಅವರನ್ನು ಎದುರಿಸಲಿದ್ದಾರೆ.

29 ನಿಮಿಷ ನಡೆದ ಪಂದ್ಯದ ಮೊದಲ ಗೇಮ್‌ನಲ್ಲಿ ಮಣಿಕಾ ಮೇಲುಗೈ ಸಾಧಿಸಿದರೆ, ಎರಡನೇ ಗೇಮ್‌ನಲ್ಲಿ ಸ್ಜೋಕ್ಸ್ ತಿರುಗೇಟು ನೀಡಿದರು. ಸಮಬಲದ ಪೈಪೋಟಿ ಕಂಡ ಮೂರನೇ ಗೇಮ್‌ನಲ್ಲಿ ಮತ್ತೆ ಭಾರತದ ಆಟಗಾರ್ತಿ ಹಿಡಿತ ಸಾಧಿಸಿದರು. ಚುರುಕಿನ ಆಟ ಮುಂದುವರಿಸಿದ ಮಣಿಕಾ ನಾಲ್ಕನೇ ಗೇಮ್ ಅನ್ನು ವಶ ಪಡೆದು, ಮುಂದಿನ ಸುತ್ತು ಪ್ರವೇಶಿಸಿದರು.


ಮಣಿಕಾ ಬಾತ್ರಾ –ಪಿಟಿಐ ಚಿತ್ರ

ಭಾರತದ ಮತ್ತೊಬ್ಬ ಆಟಗಾರ್ತಿ ಶ್ರೀಜಾ ಅಕುಲಾ 2-3 (11-6, 7-11, 1-11, 11-8, 8-11) ರಿಂದ ವಿಶ್ವದ ವಿಶ್ವದ 13ನೇ ಕ್ರಮಾಂಕದ ಆ್ಯಡ್ರಿಯಾನಾ ಡಯಾಜ್ (ಪೋರ್ಟೊ ರಿಕೊ) ವಿರುದ್ಧ ಆರಂಭಿಕ ಸುತ್ತಿನಲ್ಲಿ ಸೋತು ಹೊರಬಿದ್ದಿದ್ದರು.


ಮುಂಬಾ ತಂಡದ ಆಟಗಾರರು ಬೆಂಗಾಲ್ ವಾರಿಯರ್ಸ್ ತಂಡದ ರೇಡರ್ ನಿತಿನ್ ಅವರನ್ನು ಯಶಸ್ವಿಯಾಗಿ ಕ್ಯಾಚ್ ಮಾಡಿದರು.

ಮುಂಬಾ – ಬೆಂಗಾಲ್ ಪಂದ್ಯ ಟೈ

PRO KABADDI

ಹೈದರಾಬಾದ್: ಪಂದ್ಯದ ಕೊನೆಯ ಕ್ಷಣದ ಒತ್ತಡವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಎಡವಿದ ಯು ಮುಂಬಾ ತಂಡ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ ವಿರುದ್ಧ ರೋಚಕ ಟೈ ಸಾಧಿಸಿತು. ಇದರಿಂದಾಗಿ ಉಭಯ ತಂಡಗಳು ತಲಾ 3 ಅಂಕ ಹಂಚಿಕೊಂಡವು.

ಇದು ಹಾಲಿ ಟೂರ್ನಿಯಲ್ಲಿ ಟೈ ಆದ ಮೊದಲ ಪಂದ್ಯ. ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಮೊದಲ ಪಂದ್ಯದಲ್ಲಿ ಎರಡೂ ತಂಡಗಳು 31-31ರಲ್ಲಿ ಸಮಬಲ ಸಾಧಿಸಿದವು.

ಪಂದ್ಯ ಮುಕ್ತಾಯಕ್ಕೆ 2 ನಿಮಿಷಗಳಿರುವಾಗ 31-29ರಲ್ಲಿ ಮುನ್ನಡೆ ಹೊಂದಿದ್ದ ಮುಂಬಾ ಇದರ ಲಾಭ ಪಡೆಯಲು ಸಾಧ್ಯವಾಗಲಿಲ್ಲ. ಮುಂಬಾ ತಂಡದ ಪರ ಮಂಜೀತ್ (7 ಅಂಕ), ಸೋಮವೀರ್ (5 ಅಂಕ), ರೋಹಿತ್ ರಾಘವ್ (4 ಅಂಕ) ಗಮನ ಸೆಳೆದರು.

ವಾರಿಯರ್ಸ್ ಪರ ಮಣಿಂದರ್ ಸಿಂಗ್ (8 ಅಂಕ), ಮಯೂರ್ ಕದಂ (6) ಉತ್ತಮ ಪ್ರದರ್ಶನ ನೀಡಿದರು. ವಿರಾಮದ ವೇಳೆಗೆ ಬೆಂಗಾಲ್ ಏಳು ಅಂಕಗಳಿಂದ ಮುಂದಿತ್ತು. ಆದರೆ ಚೇತರಿಸಿದ ಮುಂಬೈ ಸಮಬಲ ಮಾಡಿತಲ್ಲದೇ, ಎದುರಾಳಿಯನ್ನು ಒಮ್ಮೆ ಆಲೌಟ್ ಮಾಡಿ ಅಲ್ಪಮುನ್ನಡೆ ಪಡೆಯಿತು. ಆದರೆ ಕೊನೆಗಳಿಗೆಯಲ್ಲಿ ಒತ್ತಡಕ್ಕೀಡಾಗಿ ಟೈಗೆ ತೃಪ್ತಿಪಡಬೇಕಾಯಿತು.

ಡೆಲ್ಲಿ ದಬಾಂಗ್‌ಗೆ ಜಯ: ದಿನದ ಮತ್ತೊಂದು ಪಂದ್ಯದಲ್ಲಿ ಡೆಲ್ಲಿ ದಬಾಂಗ್ 41–37ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು. ಡೆಲ್ಲಿ ತಂಡಕ್ಕೆ ಇದು ಎರಡನೇ ಗೆಲುವಾದರೆ, ಟೈಟನ್ಸ್ ತಂಡಕ್ಕೆ ಹ್ಯಾಟ್ರಿಕ್ ಸೋಲಾಗಿದೆ.

ರಣಜಿ ಟ್ರೋಫಿ: ಕರ್ನಾಟಕ ವಿರುದ್ಧ 143 ರನ್‌ಗಳಿಗೆ ಉರುಳಿದ ಬಿಹಾರ

ಮಿಂಚಿದ ಶ್ರೇಯಸ್, ಮೊಹ್ಸಿನ್

ಪ್ರಜಾವಾಣಿ ವಾರ್ತೆ

ಪಟ್ನಾ: ಕರ್ನಾಟಕದ ಸ್ಪಿನ್ನರ್ ದ್ವಯರಾದ ಶ್ರೇಯಸ್ ಗೋಪಾಲ್ ಮತ್ತು ಮೊಹ್ಸಿನ್ ಖಾನ್ ಏಳು ವಿಕೆಟ್‌ಗಳನ್ನು ಹಂಚಿಕೊಂಡರು. ಇದರಿಂದ ಬಿಹಾರ ತಂಡ, ರಣಜಿ ಟ್ರೋಫಿ ಸಿ ಗುಂಪಿನ ಪಂದ್ಯದ ಮೊದಲ ದಿನವಾದ ಶನಿವಾರ 143 ರನ್‌ಗಳಿಗೆ ಉರುಳಿತು.

ಲೆಗ್ ಸ್ಪಿನ್ನರ್ ಶ್ರೇಯಸ್ ಗೋಪಾಲ್ 14 ಓವರುಗಳಲ್ಲಿ 28 ರನ್ನಿಗೆ 4 ವಿಕೆಟ್ ಪಡೆದು ಸ್ಫೂರ್ತಿಯುತ ಪ್ರದರ್ಶನ ನೀಡಿದರೆ, ಆಫ್ ಸ್ಪಿನ್ನರ್ ಮೊಹ್ಸಿನ್ 16.5 ಓವರುಗಳಲ್ಲಿ 50 ರನ್ನಿಗೆ 3 ವಿಕೆಟ್ ಪಡೆದು ಉತ್ತಮ ಬೆಂಬಲ ನೀಡಿದರು

ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿಗೆ ಆಯ್ಕೆಯಾದ ಸಂಭ್ರಮದಲ್ಲಿರುವ ವಿಜಯಕುಮಾರ್ ವೈಶಾಖ (29ಕ್ಕೆ1) ಜೊತೆಗೆ ಇನ್ನೊಬ್ಬ ವೇಗಿ ವಿ.ಕೌಶಿಕ್ (21ಕ್ಕೆ1) ಅವರು, ಬೌಲಿಂಗ್ ಮಾಡಲು ನಿರ್ಧರಿಸಿದ ಕರ್ನಾಟಕಕ್ಕೆ ಆರಂಭದಲ್ಲಿ ಯಶಸ್ಸು ಗಳಿಸಿಕೊಟ್ಟರು. ನಂತರ ಸ್ಪಿನ್ನರ್‌ಗಳು ಮೇಲುಗೈ ಸಾಧಿಸಿದರು.

ಆರಂಭ ಆಟಗಾರ ಶರ್ಮನ್ ನಿಗ್ರೋಧ್ 143 ಎಸೆತಗಳನ್ನು ಎದುರಿಸಿ 60 ರನ್ (4x6) ಗಳಿಸಿದರು. ಅವರನ್ನು ಬಿಟ್ಟರೆ ಹೆಚ್ಚಿನ ಕೊಡುಗೆ ನೀಡಿದವರು ಬಿಪಿನ್ ಸೌರಭ್. ಬಿರುಸಿನ ಆಟವಾಡಿದ ಅವರು 38 ಎಸೆತಗಳಲ್ಲಿ 31 ರನ್ ಗಳಿಸಿದರು.

ಮಂದ ಬೆಳಕಿನಿಂದ ಮೊದಲ ದಿನದಾಟ ಬೇಗನೇ ಕೊನೆಗೊಳಿಸಿದಾಗ ಕರ್ನಾಟಕ ಮೂರು ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 16 ರನ್ ಗಳಿಸಿದೆ.


ಶ್ರೇಯಸ್ ಗೋಪಾಲ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಬಿಹಾರ: 143 (55.5 ಓವರ್‌ಗಳಲ್ಲಿ)
ವೈಭವ್ ಎಲ್‌ಬಿಡಬ್ಲ್ಯು ಬಿ ಕೌಶಿಕ್ 4 (2ಎ, 4x1)
ಶರ್ಮನ್ ಸಿ ಮನೋಹರ್ ಬಿ ಗೋಪಾಲ್ 60 (143, 4x6, 6x2)
ಬಬುಲ್ ಸಿ ಮೊಹ್ಸಿನ್ ಬಿ ವೈಶಾಖ 4 (6ಎ, 4x1)
ಗನಿ ಸಿ ಸಬ್ (ಹಾರ್ದಿಕ್) ಬಿ ಪಾಟೀಲ 13 (51ಎ, 4x1)
ಬಿಪಿನ್ ಸಿ ಪಾಂಡೆ ಬಿ ಮೊಹ್ಸಿನ್ 31 (38ಎ, 4x6)
ರಾಘವೇಂದ್ರ ಸಿ ಪಾಟೀಲ ಬಿ ಗೋಪಾಲ್ 16 (45ಎ, 4x3)
ಜಿತಿನ್ ಎಲ್‌ಬಿಡಬ್ಲ್ಯು ಮೊಹ್ಸಿನ್ 1 (6ಎ)
ವೀರ್‌ಪ್ರತಾಪ್ ಬಿ ಗೋಪಾಲ್ 1 (8ಎ)
ಹಿಮಾಂಶು ಸಿಂಗ್ ಔಟಾಗದೇ 5 (31ಎ)
ಅನುಜ್ ಎಲ್‌ಬಿಡಬ್ಲ್ಯು ಬಿ ಗೋಪಾಲ್ 0 (5ಎ)
ಶಕೀಬ್ ಬಿ ಮೊಹ್ಸಿನ್ 0 (1ಎ)
ಇತರೆ: 8 (ಬೈ 4, ಲೆಗ್‌ಬೈ 1, ನೋಬಾಲ್ 1, ವೈಡ್ 2)
ವಿಕೆಟ್ ಪತನ: 1-4 (ವೈಭವ್ ಸೂರ್ಯವಂಶಿ, 0.2), 2-10 (ಬಬುಲ್ ಕುಮಾರ್, 1.3), 3-32 (ಶಕೀಬುಲ್ ಗನಿ, 15.6), 4-76 (ಬಿಪಿನ್ ಸೌರಭ್, 29.6), 5-121 (ರಾಘವೇಂದ್ರ ಪ್ರತಾಪ್‌ಸಿಂಗ್, 44.3), 6-122 (ಜಿತಿನ್ ಯಾದವ್, 45.3), 7-125 (ವೀರ್ ಪ್ರತಾಪ್ ಸಿಂಗ್, 48.1), 8-136 (ಶರ್ಮನ್ ನಿಗ್ರೋಧ್, 52.1), 9-136 (ಅನುಜ್ ರಾಜ್, 52.6), 10-143 (ಶಕೀಬ್ ಹುಸೇನ್, 55.5)
ಬೌಲಿಂಗ್: ವಾಸುಕಿ ಕೌಶಿಕ್ 10–4–21–1, ವಿಜಯಕುಮಾರ್ ವೈಶಾಖ 8–1–29–1, ವಿದ್ಯಾಧರ ಪಾಟೀಲ 7–2–10–1, ಮೊಹ್ಸಿನ್ ಖಾನ್ 16.5–5–50–3, ಶ್ರೇಯಸ್ ಗೋಪಾಲ್ 14–2–28–4
ಕರ್ನಾಟಕ: ವಿಕೆಟ್ ನಷ್ಟವಿಲ್ಲದೆ 16 (3 ಓವರ್‌ಗಳಲ್ಲಿ)
ನಿಕಿನ್ ಜೋಸ್ ಔಟಾಗದೇ 11 (11ಎ, 4x2)
ಸುಜಯ್ ಸತೇರಿ ಔಟಾಗದೇ 4 (7ಎ)
ಇತರೆ: 1 (ವೈಡ್ 1)
ಬೌಲಿಂಗ್: ವೀರ್‌ಪ್ರತಾಪ್ ಸಿಂಗ್ 2–0–6–0, ಅನುಜ್‌ರಾಜ್ 1–0–10–0

'ಸರಣಿ ಸೋಲಿನ ಕುರಿತು ಅತಿಯಾಗಿ ಪ್ರತಿಕ್ರಿಯಿಸುವುದಿಲ್ಲ'

ಪುಣೆ (ಪಿಟಿಐ): '12 ವರ್ಷಗಳ ನಂತರ ತವರಿನಲ್ಲಿ ಟೆಸ್ಟ್ ಸರಣಿ ಸೋತಿರಬಹುದು. ಆದರೆ, ಆತಂಕ ಪಡುವ ಅಗತ್ಯವಿಲ್ಲ. ನಾವು ನಮ್ಮ ಆಟ ಸುಧಾರಿಸಿಕೊಳ್ಳುವ ಕಡೆಗೆ ಗಮನ ಹರಿಸುತ್ತೇವೆ' ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದರು.

'ಈ ಸೋಲಿನ ಕುರಿತು ಅತಿಯಾಗಿ ಪ್ರತಿಕ್ರಿಯಿಸುವುದಿಲ್ಲ. ನಾವು ನಿರ್ದಿಷ್ಟ ಆಟಗಾರರೊಂದಿಗೆ ಚರ್ಚಿಸಬೇಕಿದೆ. ತಂಡವಾಗಿ ನಾವು ಅವರಿಂದ ಏನನ್ನು ನಿರೀಕ್ಷಿಸುತ್ತಿದ್ದೇವೆ ಎಂಬುದನ್ನು ಅವರಿಗೆ ಮನವರಿಕೆ ಮಾಡುತ್ತೇವೆ' ಎಂದು ಪಂದ್ಯ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'12 ವರ್ಷಗಳಿಂದ ನಾವು ಗೆಲುವಿನ ಓಟದಲ್ಲಿದ್ದೆವು. ಆ ಅವಧಿಯಲ್ಲಿ ನಾವು ಉತ್ತಮ ಪ್ರದರ್ಶನ ನೀಡಿದ್ದೇವೆ. ನಾವು ವಿಭಿನ್ನವಾಗಿ ಮಾತನಾಡುವ, ಭಿನ್ನವಾಗಿ ಏನಾದರೂ ಮಾಡುವ ಅಗತ್ಯವಿಲ್ಲ. ಇದೇ ತಂಡವು ಈ ಹಿಂದೆ ಸಾಕಷ್ಟು ಉತ್ತಮ ಫಲಿತಾಂಶ ನೀಡಿದೆ' ಎಂದರು.

'ಇಂದಿನ ಸೋಲಿಗೆ ಯಾರೊಬ್ಬರನ್ನು ಹೊಣೆ ಮಾಡುವುದಿಲ್ಲ. ಇದು ತಂಡದ ಸೋಲು. ಇಲ್ಲಿ ಬ್ಯಾಟಿಂಗ್ ವೈಫಲ್ಯ ಅಥವಾ ಬೌಲಿಂಗ್ ವೈಫಲ್ಯ ಎಂದು ಹೇಳಲು ಸಾಧ್ಯವಿಲ್ಲ. ವಾಂಖೆಡೆಯಲ್ಲಿ ನಡೆಯುವ ಮುಂದಿನ ಟೆಸ್ಟ್ ಪಂದ್ಯ ಗೆಲ್ಲಲು ನಾವು ಯೋಜನೆ ರೂಪಿಸುತ್ತೇವೆ' ಎಂದರು.

ನೊಮಾನ್, ಸಾಜಿದ್ ದಾಳಿಗೆ ಇಂಗ್ಲೆಂಡ್ ತತ್ತರ

ಟೆಸ್ಟ್ ಸರಣಿ ಗೆದ್ದ ಪಾಕಿಸ್ತಾನ

ರಾವಲ್ಪಿಂಡಿ (ಎಎಫ್‌ಪಿ): ಸ್ಪಿನ್ನರ್‌ಗಳಾದ ನೊಮಾನ್ ಅಲಿ ಮತ್ತು ಸಾಜಿದ್ ಖಾನ್ ದಾಳಿಗೆ ಇಂಗ್ಲೆಂಡ್ ತಂಡ ಕುಸಿಯಿತು. ಪಾಕಿಸ್ತಾನ ತಂಡ ಮೂರನೇ ಹಾಗೂ ಅಂತಿಮ ಟೆಸ್ಟ್ ಪಂದ್ಯವನ್ನು ಮೂರನೇ ದಿನವಾದ ಶನಿವಾರ ಭೋಜನ ವಿರಾಮಕ್ಕೆ ಮೊದಲೇ 9 ವಿಕೆಟ್‌ಗಳಿಂದ ಗೆದ್ದುಕೊಂಡಿತು.

ಎಡಗೈ ಸ್ಪಿನ್ನರ್ ನೊಮಾನ್ ಅಲಿ 42 ರನ್ನಿಗೆ 6 ವಿಕೆಟ್ ಪಡೆದರೆ, ಆಫ್ ಬ್ರೇಕ್ ಬೌಲರ್ ಸಾಜಿದ್ ಖಾನ್ 69 ರನ್ನಿಗೆ 4 ವಿಕೆಟ್ ಪಡೆದು ಇಂಗ್ಲೆಂಡ್‌ನ ಎಲ್ಲ ವಿಕೆಟ್‌ಗಳನ್ನು ತಮ್ಮೊಳಗೆ ಹಂಚಿಕೊಂಡರು. 3 ವಿಕೆಟ್‌ಗೆ 24 ರನ್‌ಗಳೊಡನೆ ದಿನದಾಟ ಮುಂದುವರಿಸಿದ ಇಂಗ್ಲೆಂಡ್ 37.2 ಓವರುಗಳಲ್ಲಿ 112 ರನ್‌ಗಳಿಗೆ ಕುಸಿಯಿತು. ಶುಕ್ರವಾರ ಅಜೇಯರಾಗಿದ್ದ ಜೋ ರೂಟ್ (33, 52ಎ) ಮತ್ತು ಹ್ಯಾರಿ ಬ್ರೂಕ್ (26, 40ಎ) ನಾಲ್ಕನೇ ವಿಕೆಟ್‌ಗೆ 46 ರನ್ ಸೇರಿದರು. ನಂತರ ಇಂಗ್ಲೆಂಡ್ ಕುಸಿಯಿತು.

ಮೊದಲ ಇನಿಂಗ್ಸ್‌ನಲ್ಲಿ 77 ರನ್ ಮುನ್ನಡೆ ಸಂಪಾದಿಸಿದ್ದ ಪಾಕಿಸ್ತಾನ ಗೆಲುವಿಗೆ ಬೇಕಿದ್ದ 36 ರನ್‌ಗಳನ್ನು 3.1 ಓವರುಗಳಲ್ಲಿ 1 ವಿಕೆಟ್ ನಷ್ಟದಲ್ಲಿ ತಲುಪಿತು. ನಾಯಕ ಶಾನ್ ಮಸೂದ್ ಲಗುಬಗನೇ ಆಡಿ ನಾಲ್ಕು ಬೌಂಡರಿ, ಒಂದು ಸಿಕ್ಸರ್ ಇದ್ದ ಅಜೇಯ 23 ರನ್ ಗಳಿಸಿದರು.

ಪಾಕಿಸ್ತಾನ ಸರಣಿಯನ್ನು 2–1 ರಿಂದ ಗೆದ್ದುಕೊಂಡಿತು.

ಮುಲ್ತಾನ್‌ನಲ್ಲಿ ಮೊದಲ ಟೆಸ್ಟ್ ಪಂದ್ಯವನ್ನು ಇನಿಂಗ್ಸ್ ಅಂತರದಲ್ಲಿ ಸೋತ ಬಳಿಕ ಹಿರಿಯ ಕ್ರಿಕೆಟಿಗರ ಆಕ್ರೋಶಕ್ಕೆ ಒಳಗಾದ ಪಾಕಿಸ್ತಾನ ಆಯ್ಕೆ ಮಂಡಳಿ, ಶಾಹಿನ್ ಶಾ ಅಫ್ರೀದಿ ಮತ್ತು ನಸೀಮ್ ಶಾ ಅವರನ್ನು ಕೈಬಿಟ್ಟಿತು. ಅವರ ಬದಲು ತಂಡ ಸೇರಿಕೊಂಡ ನೊಮಾನ್ ಮತ್ತು ಸಾಜಿದ್ 2 ಟೆಸ್ಟ್‌ಗಳಲ್ಲಿ 39 ವಿಕೆಟ್‌ಗಳನ್ನು ತಮ್ಮೊಳಗೆ ಬಾಚಿಕೊಂಡಿದ್ದಾರೆ.

ಸ್ಕೋರುಗಳು: ಇಂಗ್ಲೆಂಡ್: 267 ಮತ್ತು 37.2 ಓವರುಗಳಲ್ಲಿ 112 (ಜೋ ರೂಟ್ 33, ಹ್ಯಾರಿ ಬ್ರೂಕ್ 26; ನೊಮಾನ್ ಅಲಿ 42ಕ್ಕೆ6, ಸಾಜಿದ್ ಖಾನ್ 69ಕ್ಕೆ4); ಪಾಕಿಸ್ತಾನ: 344 ಮತ್ತು 3.1 ಓವರುಗಳಲ್ಲಿ 1 ವಿಕೆಟ್‌ಗೆ 37 (ಶಾನ್ ಮಸೂದ್ ಔಟಾಗದೇ 23). ಪಂದ್ಯದ ಆಟಗಾರ: ಸಾದ್ ಶಕೀಲ್ (134).


ಪಾಕಿಸ್ತಾನ ಸ್ಪಿನ್ ಜೋಡಿಗಳಾದ ಸಾಜಿದ್ ಖಾನ್ (ಬಲಗಡೆ) ಮತ್ತು ನೊಮಾನ್ ಅಲಿ ಎಎಫ್‌ಪಿ ಚಿತ್ರ

ಹಾಕಿ: ಭಾರತ ತಂಡಕ್ಕೆ ಕಂಚು

ಜೊಹೊರ್ ಬಹ್ರು (ಮಲೇಷ್ಯಾ), (ಪಿಟಿಐ): ಗೋಲ್‌ಕೀಪರ್ ವಿಕ್ರಮ್‌ಜಿತ್ ಸಿಂಗ್ ಅವರ ಅಮೋಘ ಆಟದ ಬಲದಿಂದ ಭಾರತ ತಂಡವು ಇಲ್ಲಿ ನಡೆದ ಸುಲ್ತಾನ್ ಆಫ್ ಜೊಹೊರ್ ಕಪ್ ಜೂನಿಯರ್ ಹಾಕಿ ಟೂರ್ನಿಯ ರೋಚಕ ಹಣಾಹಣಿಯಲ್ಲಿ ನ್ಯೂಜಿಲೆಂಡ್ ತಂಡವನ್ನು ಶನಿವಾರ ಮಣಿಸಿ ಕಂಚಿನ ಪದಕ ಗೆದ್ದುಕೊಂಡಿತು.

ಮೂರನೇ ಸ್ಥಾನದ ನಿರ್ಣಯಕ್ಕಾಗಿ ನಡೆದ ಪಂದ್ಯವು ನಿಗದಿತ ಅವಧಿಯಲ್ಲಿ 2–2 ಗೋಲುಗಳಿಂದ ಸಮಬಲಗೊಂಡಿತು. ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತ 3–2ರಿಂದ ಗೆಲುವು ಸಾಧಿಸಿತು. ಶೂಟೌಟ್‌ನಲ್ಲಿ ಭಾರತದ ಸ್ಟ್ರೈಕರ್‌ಗಳಾದ ಗುರ್ಜೋತ್ ಸಿಂಗ್, ಮನ್‌ಮೀತ್ ಸಿಂಗ್ ಮತ್ತು ಸೌರಭ್ ಆನಂದ್ ಕುಶ್ವಾಹ ಅವರು ಚೆಂಡನ್ನು ಗುರಿ ಸೇರಿಸಿದರು. ವಿಕ್ರಮ್‌ಜಿತ್ ಅವರು ಎದುರಾಳಿ ತಂಡದ ಮೂರು ಸ್ಕೋರ್ ತಡೆದು, ಭಾರತದ ಗೆಲುವಿಗೆ ಮಹತ್ವದ ಕೊಡುಗೆ ನೀಡಿದರು.

ಇದಕ್ಕೂ ಮುನ್ನ ಭಾರತ ಪರ ದಿಲ್‌ರಾಜ್ ಸಿಂಗ್ (11ನೇ ನಿಮಿಷ) ಮತ್ತು ಮನ್‌ಮೀತ್ ಸಿಂಗ್ (20ನೇ ನಿ) ಅವರು ಕ್ರಮವಾಗಿ ಮೊದಲೆರಡು ಕ್ವಾರ್ಟರ್‌ನಲ್ಲಿ ಗೋಲು ಗಳಿಸಿದ್ದರು. ನ್ಯೂಜಿಲೆಂಡ್‌ನ ಓವನ್ ಬ್ರೌನ್ (51ನೇ) ಮತ್ತು ಜಾಂಟಿ ಎಲ್ಮ್ಸ್ (57ನೇ) ಅವರು ಅಂತಿಮ ಕ್ವಾರ್ಟರ್ ನಲ್ಲಿ ಚೆಂಡನ್ನು ಗುರಿ ಸೇರಿಸಿದ್ದರು.


ರೌಂಡ್ ರಾಬಿನ್ ಲೀಗ್‌ನ ಕೊನೆಯ ಪಂದ್ಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಶುಕ್ರವಾರ ಮುಖಾಮುಖಿಯಾಗಿದ್ದವು. ಆ ಪಂದ್ಯವು 3–3 ಗೋಲುಗಳಿಂದ ಡ್ರಾ ಗೊಂಡಿತ್ತು. ಪಾಯಿಂಟ್ ಪಟ್ಟಿಯಲ್ಲಿ ಭಾರತ ಮೂರನೇ ಮತ್ತು ನ್ಯೂಜಿಲೆಂಡ್ ತಂಡ ನಾಲ್ಕನೇ ಸ್ಥಾನ ಪಡೆದಿತ್ತು.

ಫೈನಲ್ ಹಣಾಹಣಿಯಲ್ಲಿ ಬ್ರಿಟನ್ 3–2 ಗೋಲುಗಳಿಂದ ಆಸ್ಟ್ರೇಲಿಯಾ ತಂಡವನ್ನು ಮಣಿಸಿ ಪ್ರಶಸ್ತಿ ಜಯಿಸಿತು.


ಭಾರತದ ಮನ್‌ಮೀತ್ ಸಿಂಗ್ –ಹಾಕಿ ಇಂಡಿಯಾ ಚಿತ್ರ

ಸಂಕ್ಷಿಪ್ತ ಸುದ್ದಿ

2800 ಲೈವ್ ರೇಟಿಂಗ್ ದಾಟಿದ ಅರ್ಜುನ್ ಇರಿಗೇಶಿ



ಬೆಂಗಳೂರು: ಭಾರತದ ಯುವ ಚೆಸ್ ತಾರೆ ಅರ್ಜುನ್ ಇರಿಗೇಶಿ ಅವರು ಲೈವ್ ರೇಟಿಂಗ್‌ನಲ್ಲಿ 2800ರ ಮೈಲಿಗಲ್ಲು ದಾಟಿದ್ದಾರೆ. ಸರ್ಬಿಯಾದಲ್ಲಿ ನಡೆಯುತ್ತಿರುವ ಯುರೋಪಿಯನ್ ಚೆಸ್ ಕ್ಲಬ್ ಕಪ್ ಟೂರ್ನಿಯ ಐದನೇ ಸುತ್ತಿನಲ್ಲಿ ರಷ್ಯದ ಡಿಮಿಟ್ರಿ ಆ್ಯಂಡ್ರಿಕಿನ್ ಅವರನ್ನು ಗುರುವಾರ ಸೋಲಿಸುವ ಹಾದಿಯಲ್ಲಿ ಅವರು ಈ ರೇಟಿಂಗ್ ದಾಟಿದರು.

2800 ರೇಟಿಂಗ್ ದಾಟಿದ ಭಾರತದ ಎರಡನೇ ಆಟಗಾರ ಎಂಬ ಹೆಗ್ಗಳಿಕೆ 21 ವರ್ಷ ವಯಸ್ಸಿನ ತೆಲಂಗಾಣ ಆಟಗಾರನದ್ದು. ಈ ಮೊದಲು ಮಾಜಿ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಈ ಮೈಲಿಗಲ್ಲು ದಾಟಿದ ಭಾರತದ ಮೊದಲ ಆಟಗಾರ ಎನಿಸಿದ್ದರು. ವಿಶ್ವದಲ್ಲಿ ಇದುವರೆಗೆ 15 ಮಂದಿ ಮಾತ್ರ 2800 ರೇಟಿಂಗ್ ದಾಟಿದ್ದಾರೆ.

ಅರ್ಜುನ್ ಯುರೋಪಿಯನ್ ಟೂರ್ನಿಯಲ್ಲಿ ಟೀಮ್ ಅಲ್ಕಾಲಾಯ್ಡ್ ಪರ ಆಡುತ್ತಿದ್ದಾರೆ.

ಕುಸ್ತಿ: ಅಂಜಲಿಗೆ ಬೆಳ್ಳಿ ಪದಕ

ಟಿರಾನಾ, ಅಲ್ಬೇನಿಯಾ (ಪಿಟಿಐ): ಭಾರತದ ಕುಸ್ತಿಪಟು ಅಂಜಲಿ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನ (23 ವರ್ಷದೊಳಗಿನವರ) ಮಹಿಳೆಯರ 59 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದರು. ಪುರುಷರ 55 ಕೆಜಿ ಫ್ರೀ ಸ್ಟೈಲ್‌ನಲ್ಲಿ ಭಾರತದ ಚಿರಾಗ್ ಫೈನಲ್ ಪ್ರವೇಶಿಸಿದ್ದು, ಇದರೊಂದಿಗೆ ಕನಿಷ್ಠ ಬೆಳ್ಳಿ ಪದಕವನ್ನು ಖಚಿತಪಡಿಸಿಕೊಂಡಿದ್ದಾರೆ.

ರಾಮಚಂದ್ರ ಮೋರೆ (55 ಕೆಜಿ ಗ್ರೀಕೋ-ರೋಮನ್), ನೇಹಾ ಶರ್ಮಾ (57 ಕೆಜಿ), ಶಿಕ್ಷಾ (65 ಕೆಜಿ) ಮತ್ತು ಮೋನಿಕಾ (68 ಕೆಜಿ) ಅವರು ಕಂಚಿನ ಪದಕ ಜಯಿಸಿದರು. ಒಟ್ಟಾರೆ ಭಾರತ ಐದು ಪದಕಗಳನ್ನು ಗೆದ್ದುಕೊಂಡಿದೆ.

ಸೆಮಿಫೈನಲ್‌ನಲ್ಲಿ ಇಟಲಿಯ ಅರೋರಾ ರುಸ್ಸೋ ವಿರುದ್ಧ ಜಯ ಸಾಧಿಸಿದ್ದ ಅಂಜಲಿ, ಪ್ರಶಸ್ತಿಯ ಹಣಾಹಣಿಯಲ್ಲಿ ಉಕ್ರೇನ್‌ನ ಸೊಲೊಮಿಯಾ ವಿನ್ನಿಕ್ ವಿರುದ್ಧ ಸೋತರು. ಚಿರಾಗ್ ಚಿನ್ನದ ಪದಕದ ಹಣಾಹಣಿಯಲ್ಲಿ ಕಿರ್ಗಿಸ್ತಾನದ ಅಬ್ದಿಮಾಲಿಕ್ ಕರಾಚೋವ್ ಅವರನ್ನು ಎದುರಿಸಲಿದ್ದಾರೆ.

ಸ್ಯಾಫ್ ಫುಟ್‌ಬಾಲ್: ಇಂದು ಭಾರತಕ್ಕೆ ನೇಪಾಳ ಸವಾಲು

ಕಠ್ಮಂಡು (ಪಿಟಿಐ): ಆಶಾಲತಾ ದೇವಿ ನಾಯಕತ್ವದ ಭಾರತ ತಂಡವು ಭಾನುವಾರ ಸ್ಯಾಫ್ ಮಹಿಳಾ ಫುಟ್‌ಬಾಲ್ ಚಾಂಪಿಯನ್ ಷಿಪ್‌ನ ಸೆಮಿಫೈನಲ್‌ನಲ್ಲಿ ನೇಪಾಳ ತಂಡವನ್ನು ಎದುರಿಸಲಿದೆ.

ಇಲ್ಲಿನ ದಶರಥ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಉಭಯ ತಂಡಗಳು ಆರನೇ ಬಾರಿ ಫೈನಲ್ ಪ್ರವೇಶಿಸುವ ಪ್ರಯತ್ನದಲ್ಲಿವೆ. ಭಾರತ ಐದು ಬಾರಿ ಚಾಂಪಿಯನ್ ಆಗಿದ್ದರೆ, ನೇಪಾಳ ಐದು ಬಾರಿ ರನ್ನರ್ ಅಪ್ ಆಗಿದೆ. 2022ರಲ್ಲಿ ಭಾರತ ತಂಡವು ಸೆಮಿಫೈನಲ್‌ನಲ್ಲಿ ನೇಪಾಳ ವಿರುದ್ಧ 0–1ರಿಂದ ಸೋತಿತ್ತು. ಈ ಬಾರಿ ಮುಯ್ಯಿ ತೀರಿಸಿಕೊಳ್ಳುವ ತವಕದಲ್ಲಿದೆ.

ಗುಂಪು ಹಂತದಲ್ಲಿ ಭಾರತ 5–2ರಿಂದ ಪಾಕಿಸ್ತಾನವನ್ನು ಸೋಲಿಸಿದ್ದರೆ, ಮತ್ತೊಂದು ಪಂದ್ಯದಲ್ಲಿ ಹಾಲಿ ಚಾಂಪಿಯನ್ ಬಾಂಗ್ಲಾದೇಶ ವಿರುದ್ಧ 1–3ರಿಂದ ಪರಾಭವಗೊಂಡಿತ್ತು.

ಮತ್ತೊಂದು ಸೆಮಿಫೈನಲ್‌ನಲ್ಲಿ ನೇಪಾಳ ಮತ್ತು ಭೂತಾನ್ ತಂಡಗಳು ಮುಖಾಮುಖಿಯಾಗುತ್ತಿವೆ.

ಮಹಿಳಾ ಕ್ರಿಕೆಟ್: ನ್ಯೂಜಿಲೆಂಡ್ ತಂಡಕ್ಕೆ ಅಮೇಲಿಯಾ ಅಲಭ್ಯ

ಅಹಮದಾಬಾದ್ (ಪಿಟಿಐ): ಭಾರತ, ಭಾನುವಾರ ಇಲ್ಲಿ ನಡೆಯಲಿರುವ ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ಆತಿಥೇಯ ತಂಡ ಬ್ಯಾಟರ್‌ಗಳಿಂದ ಸುಧಾರಿತ ಪ್ರದರ್ಶನ ಎದುರು ನೋಡುತ್ತಿದೆ.

ಭಾರತ ಮೊದಲ ಪಂದ್ಯವನ್ನು 59 ರನ್‌ಗಳಿಂದ ಗೆದ್ದಿದೆ ನಿಜ, ಆದರೆ ಹೆಚ್ಚಿನ ಆಟಗಾರ್ತಿಯರು ಉತ್ತಮ ಆರಂಭವನ್ನು ದೊಡ್ಡ ಮೊತ್ತವನ್ನಾಗಿ ಪರಿವರ್ತಿಸಲು ವಿಫಲರಾಗಿದ್ದರು. ಹರ್ಮನ್‌ಪ್ರೀತ್ ಮೊದಲ ಪಂದ್ಯದಲ್ಲಿ ಆಡಿರಲಿಲ್ಲ. ಬೌಲಿಂಗ್‌ನಲ್ಲಿ ಸೈಮಾ ಠಾಕೂರ್ ಪದಾರ್ಪಣೆ ಪಂದ್ಯದಲ್ಲೇ ಎರಡು ವಿಕೆಟ್‌ಗಳನ್ನು ಗಳಿಸಿ ಗಮನ ಸೆಳೆದಿದ್ದರು.

ನ್ಯೂಜಿಲೆಂಡ್ ತಂಡವು ಸರಣಿಯ ಉಳಿದೆರಡು ಪಂದ್ಯಗಳನ್ನು ಅನುಭವಿ ಆಲ್‌ರೌಂಡರ್ ಅಮೇಲಿಯಾ ಕೆರ್ ಇಲ್ಲದೇ ಆಡಬೇಕಾಗಿದೆ. ಅಮೇಲಿಯಾ ಅವರು ತೊಡೆಯ ಸ್ನಾಯುನೋವಿನಿಂದ ಬಳಲುತ್ತಿದ್ದಾರೆ. ಮೊದಲ ಪಂದ್ಯದ ವೇಳೆ ಅವರಿಗೆ ನೋವು ಕಾಣಿಸಿಕೊಂಡಿತ್ತು. ಆ ಪಂದ್ಯದಲ್ಲಿ ಅವರು ನಾಲ್ಕು ವಿಕೆಟ್ ಪಡೆದು ಯಶಸ್ವಿಯೆನಿಸಿದ್ದರು.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ


Preethi
Mega Festive Offer
LIFELONG# FREE SERVICE
ASIA BOOK OF RECORDS PREETHI ZODIAC
Preethi ಕಿಚನ್ ಉಪಕರಣಗಳೊಂದಿಗೆ ಆಚರಿಸಿ ಮತ್ತು ಭರವಸೆಯ ಉಡುಗೊರೆಗಳನ್ನು ಪಡೆಯಿರಿ
Milton 3pcs ಕ್ಯಾಸರೋಲ್
ಮೌಲ್ಯ ₹1,525
Milton ಗಿಫ್ಟ್ ಸೆಟ್
ಮೌಲ್ಯ ₹1,950
www.shop.preethi.in/
@PreethiKitchenAppliances
@preethikitchenappliances
One Call Assitance : +91-99400 00005
*T&C apply on all offer details/ Offer period: 1st Oct'24 - 15th Nov'24/ Offer applicable till stocks lasts and on select models only.
#Lifelong free service-Charges apply for replacement of spares/accessories | ^Awarded by Asia Book of Records for Preethi Zodiac on 01Aug2024


HONDA
Scooter ಅಂದ್ರೆ ACTIVA
With H-Smart Technology
5% ಕ್ಯಾಶ್‌ಬ್ಯಾಕ್ ₹5000# ವರೆಗೆ
ಕಡಿಮೆ ಬಡ್ಡಿ ದರ @ 7.99%**
Scan for Instant Booking^
ACTIVA OVER 3.25 CRORE* HAPPY CUSTOMERS
ಹೆಚ್ಚಿನ ಮಾಹಿತಿಗಾಗಿ 7230032200 ಮಿಸ್ ಕಾಲ್ ನೀಡಿ
IDFC FIRST Bank Bank**/Credit Card#
HDFC BANK Credit Card#
TATA CAPITAL Two Wheeler Loans**
SHRIRAM Finance**
L&T Finance**
ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ
ವೀಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.